# INDEX

1. ರೈತರ ಆತ್ಮಹತ್ಯೆ
2. ಕಾವೇರಿ ನದಿ ವಿವಾದ
3. ಇಸ್ರೋ ಸಾಧನೆಗಳು
4. ಚುನಾವಣಾ ಸುಧಾರಣೆಗಳು
5. ಏಕರೂಪ ನಾಗರಿಕ ಸಂಹಿತೆ
6. ಸರಕು ಮತ್ತು ಸೇವಾ ತೆರಿಗೆ
7. ಕರ್ನಾಟಕದಲ್ಲಿ ಪ್ರತ್ಯೇಕ ರಾಜ್ಯದ ಕೂಗು
8. ತ್ರಿವಳಿ ತಲಾಖ್
9. ಅತ್ಯಾಚಾರಿಗಳಿಗೆ ಗಲ್ಲು ಶಿಕ್ಷೆಯೇ ?
10. ಪರಿಸರ ಮಾಲಿನ್ಯ
11. ನಿರುದ್ಯೋಗ ಮತ್ತು ಸ್ವಯಂ ಉದ್ಯೋಗ
12. ಕೋಮು ಸೌಹಾರ್ದತೆ
13. ಮಹಿಳಾ ಸಬಲೀಕರಣ
14. ಅಂತರರಾಜ್ಯ ಜಲ ವಿವಾದಗಳು
15. ಏಡ್ಸ್–ಮಾರಕ ಕಾಯಿಲೆ
16. ಸಮಾಜದಲ್ಲಿ ಪೊಲೀಸರ ಪಾತ್ರ
17. ಇ–ಆಡಳಿತ: ಸಮಯದ ಉಳಿತಾಯ
18. ಪ್ಲಾಸ್ಟಿಕ್ ತ್ಯಾಜ್ಯ
19. 2017ರ ನಾಲ್ಕು ಮಹತ್ತರ ಸಂಶೋಧನೆಗಳು
20. ಕರ್ನಾಟಕಕ್ಕೊಂದು ಪ್ರತ್ಯೇಕ ನಾಡ ಧ್ವಜ
21. ಡಿಜಿಟಲ್ ಇಂಡಿಯಾ
22. ಸೈಬರ್ ಅಪರಾಧಗಳು
23. ಅಣುಶಕ್ತಿ - ದೇಶದ ಅಭಿವೃದ್ಧಿಗೆ ಪೂರಕವೋ ಇಲ್ಲ ಮಾರಕವೋ
24. ಜಾಗತಿಕ ತಾಪದ ಏರಿಕೆ
25. ಜೈವಿಕ ತಂತ್ರಜ್ಞಾನ ವರವೂ ಹೌದು, ಶಾಪವೂ ಹೌದು
26. ಪ್ರತ್ಯೇಕ ಲಿಂಗಾಯಿತ ಧರ್ಮ



downloaded from: www.kpscvaani.com

27. ಗೋಹತ್ಯೆ
28. ಮಹದಾಯಿ ವಿವಾದ
29. ಪ್ರಾಕೃತಿಕ ವಿಕೋಪ ಮತ್ತು ನಿರ್ವಹಣೆ
30. ಒಂದು ದೇಶ ಒಂದು ಚುನಾವಣೆ
31. ಏಷ್ಯಾ ಗೇಮ್ಸ್‌ನಲ್ಲಿ ಭಾರತೀಯರ ಸಾಧನೆ
32. ಅಂತರರಾಷ್ಟ್ರೀಯ ಗಡಿ ಸಮಸ್ಯೆ
33. ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವ
34. ಮಾದಕ ವ್ಯಸನ & ಆಹಾರ ದುಷ್ಪರಿಣಾಮ
35. ಮೇಕ್ ಇನ್ ಇಂಡಿಯಾ
36. ಸ್ವಚ್ಛ ಭಾರತ

UJWALA ACADEMY



downloaded from: www.kpscvaani.com

# ಪ್ರಬಂಧ 1 : ರೈತರ ಆತ್ಮಹತ್ಯೆ

**"ರೈತರು ದೇಶದ ಬೆನ್ನೆಲುಬು"**

**ರೈತರು ಸಾಲದಲ್ಲಿ ಹುಟ್ಟಿ, ಸಾಲದಲ್ಲಿಯೇ ಬೆಳೆದು, ಸಾಲದಲ್ಲಿಯೇ ಸತ್ತು, ಸಾಲವನ್ನೇ ತಮ್ಮ ಮುಂದಿನ ಪೀಳಿಗೆಗೆ ಬಳುವಳಿಯಾಗಿ ನೀಡುವರು,**

**–ರಾಯಲ್ ಕಮಿಷನ್ ವರದಿ**

**ಭಾರತದ ಆತ್ಮ ಹಳ್ಳಿಗಳಲ್ಲಿ ನೆಲೆಸಿದೆ**

**–ಮೋಹನ್ ದಾಸ್ ಕರಮಚಂದ್ರ ಗಾಂಧೀ.**

ಮಳೆ, ಗಾಳಿ, ಚಳಿ, ಬಿಸಿಲೆನ್ನದೆ, ಇರುಳು ಹಗಲೆನ್ನದೆ, ಬೆವರು ಹರಿಸಿ, ಹುತ್ತಿ ಬಿತ್ತಿ ಬೆಳೆದು ಜಗದೆಲ್ಲಾ ಮಕ್ಕಳಿಗೆ ಉಣಬಡಿಸುವ ರೈತ ಇಂದು ತನ್ನ ಕೂಸಿಗೆ ಕನಿಷ್ಠ ಅವಶ್ಯಕತೆಯನ್ನು ಪೂರೈಸಲಾಗದ ಅಸಹಾಯಕ ಸ್ಥಿತಿಯಲ್ಲಿ ಇರುವಂತಾಗಿರುವುದು ತುಂಬಾ ಸೋಜಿಗದ ಸಂಗತಿ, ಇಂದು ಕೃಷಿಯನ್ನೇ ಅವಲಂಬಿಸಿ ಬದುಕುತ್ತಿರುವ ಎಷ್ಟೋ ಕುಟುಂಬಗಳು ತಮ್ಮ ಕೃಷಿಯ ಅಗತ್ಯತೆಗಾಗಿ ಮಾಡಿದ ಸಾಲಬಾದೆಯನ್ನು ತಾಳಲಾರದೆ ಅಸಹಾಯಕರಾಗಿ ಸಾಯುವ ಮಾರ್ಗವನ್ನು ಕಂಡು ಕೊಳ್ಳುತ್ತಿದ್ದಾರೆ. ದೇಶದ ಬೆನ್ನಲುಬಾಗಿರುವ ರೈತನ ಬಲವನ್ಮರಣದ ದುಸ್ಥಿತಿಯು ಸ್ವಾತಂತ್ರ್ಯಾನಂತರ ನಮ್ಮ ವ್ಯವಸ್ಥೆಯು ಅನ್ನದಾತನನ್ನು ನಡೆಸಿಕೊಂಡ ರೀತಿಗೆ ಹಿಡಿದ ಕನ್ನಡಿಯಾಗಿದೆ.

ಕೃಷಿಯನ್ನೇ ಅವಲಂಭಿಸಿರುವ ದೇಶದ ಬಹುತೇಕ ಗ್ರಾಮೀಣಿಗರಿಗೆ ಕೃಷಿಕಾಯಕ ಹೊರತು ಪಡಿಸಿ ಬೇರಾವ ಕೌಶಲ್ಯಗಳು ಗೊತ್ತಿರುವುದಿಲ್ಲ ಹೀಗಾಗಿ ಕೃಷಿಯೊಂದೆ ಅವರಿಗೆ ಜೀವಾನಾಧಾರವಾಗಿರುತ್ತದೆ, ಅನಾಧಿಕಾಲದಿಂದಲೂ ನಮ್ಮ ಕೃಷಿಯು ನಿಸರ್ಗದ ವಿದ್ಯಮಾನಗಳನ್ನು ಅವಲಂಬಿಸಿದೆ, ಅಕಾಲಿಕ ಮಳೆ, ಅತಿವೃಷ್ಟಿ, ಅನಾವೃಷ್ಟಿ, ವೈಜ್ಞಾನಿಕ ಪದ್ಧತಿಯ ಜ್ಞಾನದ ಕೊರತೆ, ಜೊತೆಗೆ ಬೆಳೆಗೆ ಬರುವ ರೋಗ ಹೀಗೆ ಒಂದಿಲ್ಲೊಂದು ಸಂಕಟ ಇದ್ದೇ ಇರುತ್ತದೆ. ಇವೆಲ್ಲದರ ನಡುವೆಯು ಒಮ್ಮೊಮ್ಮೆ ಉತ್ತಮ ಇಳುವರಿಯೊಂದಿಗೆ ಒಳ್ಳೆ ಬೆಳೆ ಕೈಗೆ ಸಿಕ್ಕಾಗ ಬೆಲೆ ಮಾತ್ರ ಪಾತಾಳಕ್ಕೆ ಕುಸಿದಿರುತ್ತದೆ, ಬೆಲೆ ಕುಸಿತದ ಪರಿಣಾಮದಿಂದ ಹೊರಬರಲು ಸರಿಯಾದ ವೈಜ್ಞಾನಿಕ ಪದ್ಧತಿಯ ಶೇಖರಣಾ ವ್ಯವಸ್ಥೆಯ ಕೊರತೆ. ಇದರ ಜೊತೆಗೆ ರೈತರ ಕೈ ಹಿಡಿಯಬೇಕಾದ ಆಡಳಿತಯಂತ್ರ ದಲ್ಲಾಳಿಗಳ ಮತ್ತು ವ್ಯಾಪಾರಿಗಳ ಜೊತೆ ಅಕ್ರಮ ಸ್ನೇಹ ಮಾಡುತ್ತದೆ. ಹೀಗೆ ರೈತನ ಸಮಸ್ಯೆಗಳು ಒಂದಕ್ಕೊಂದು ಅಂಟಿಕೊಂಡ ಬೋಗಿಯಂತೆ ಇಂದು ದೊಡ್ಡ ರೈಲಿನ ಉದ್ದವಾಗಿದೆ.

## ಆತ್ಮಹತ್ಯೆ ಕುರಿತು ಅಂಕಿ ಸಂಖ್ಯೆಗಳು :

ದೇಶದಲ್ಲಿ 1995ರಿಂದ 2013ರ ವರೆಗೆ ಸರಿಸುಮಾರು 300000 ರೈತರು ಆತ್ಮಹತ್ಯೆ ಮಾಡಿಕೊಂಡಿರುತ್ತಾರೆ. ಇತ್ತೀಚೆಗೆ ಕೇಂದ್ರ ಸರ್ಕಾರ ಸುಪ್ರೀಂ ಕೋರ್ಟಿಗೆ ನೀಡಿರುವ ಅಫಿಡೆವಿಟ್ ಪ್ರಕಾರ 2013ರಿಂದ ಪ್ರತಿವರ್ಷ ಸರಾಸರಿ 12 ಸಾವಿರ ರೈತರು ಆತ್ಮ ಹತ್ಯೆ ಮಾಡಿಕೊಂಡಿರುತ್ತಾರೆ. ರೈತರು ಆದಾಯವನ್ನು



downloaded from: www.kpscvaani.com

ದ್ವಿಗುಣಗೊಳಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಹಲವು ವಿಶೇಷ ಯೋಜನೆಗಳನ್ನು ಜಾರಿ ಮಾಡಿದ ಮೇಲು 2015ರಲ್ಲಿ ಒಟ್ಟು 12602 ಮಂದಿ ರೈತರು ಬಲವನ್ಮರಣಕ್ಕೆ ಶರಣಾಗಿದ್ದಾರೆ, ಆ ಪೈಕಿ 4291 ಜನ ರೈತರು ಮಹಾರಾಷ್ಟ್ರದವರಾದರೆ 1569 ರೈತರು ನಮ್ಮ ರಾಜ್ಯದವರು ಎನ್ನುವುದು ಬಹಳ ನೋವಿನ ಸಂಗತಿ.

**ಆತ್ಮಹತ್ಯೆಗೆ ಕಾರಣಗಳು : ರೈತರ ಆತ್ಮಹತ್ಯೆಗೆ ಸಂಶೋಧಕರು ನೀಡಿರುವ ಹಲವು ಕಾರಣಗಳು ಹೀಗಿವೆ –**

1. ಜಗತ್ತಿನಲ್ಲೆ 2ನೇ ಅತಿದೊಡ್ಡ ಕೃಷಿ ಉತ್ಪಾದಕ ದೇಶವಾಗಿರುವ ನಮ್ಮ ರಾಷ್ಟ್ರದಲ್ಲಿ ಒಟ್ಟು ಕೃಷಿ ಭೂಮಿಯ ಪೈಕಿ 2/3ರಷ್ಟು ಪ್ರದೇಶದಲ್ಲಿ ರೈತರು ಮಳೆಯನ್ನು ನೆಚ್ಚಿಕೊಂಡು ವ್ಯವಸಾಯ ಮಾಡುತ್ತಾರೆ. ಹಾಗಾಗಿ ರೈತರು ಮಾಡುವ ವ್ಯವಸಾಯ ಮಳೆಯೊಡನೆ ಆಡುವ ಜೂಜಾಟವಿದ್ದಂತೆ. ಸಕಾಲಕ್ಕೆ ಮಳೆ ಬಾರದ ಕಾರಣ ಸರಿಯಾದ ಬೆಳೆ ತೆಗೆಯಲು ಸಾಧ್ಯವಾಗುವುದಿಲ್ಲ, ಒಮ್ಮೊಮ್ಮೆ ಅಗತ್ಯಕ್ಕಿಂತಲು ಹೆಚ್ಚು ಮಳೆ ಬರುವ ಕಾರಣ ಹಾಗೂ ಅಕಾಲಿಕ ಮಳೆಯಿಂದಾಗಿ ರೈತರು ದೊಡ್ಡ ಮಟ್ಟದಲ್ಲಿ ನಷ್ಟಕ್ಕೊಳಗಾಗುತ್ತಾರೆ.

2. ನೀರಾವರಿ ಬೇಸಾಯಲ್ಲಿ ಕಾಲುವೆ ಮತ್ತು ಕೆರೆ ನೀರಿನ ಬೇಸಾಯ ಹೊರತುಪಡಿಸಿ ಶೇಕಡ 60ರಷ್ಟು ವ್ಯವಸಾಯ ಬಾವಿ ಮತ್ತು ಕೊಳವೆ ಬಾವಿ ನೀರನ್ನು ಅವಲಂಭಿಸಿದೆ. ಕೊಳವೆ ಬಾವಿ ವೈಫಲ್ಯದಿಂದ ಹೆಚ್ಚಾದ ಸಾಲದ ಹೊರೆ ರೈತರನ್ನು ಸಾವಿನ ಕಡೆಗೆ ಮುಖ ಮಾಡಿಸುತ್ತದೆ.

3.ವಾಣಿಜ್ಯ ಬೆಳೆಗಳನ್ನು ನಿರಂತರವಾಗಿ ಬೆಳೆದು ಇಳುವರಿ ಕಡಿಮೆಯಾಗಿ ಉಂಟಾಗುವ ನಷ್ಟ, ನಕಲಿ ಬೀಜ, ನಕಲಿ ಗೊಬ್ಬರ & ನಕಲಿ ಕ್ರಿಮಿನಾಶಕ ಕಂಪನಿಗಳ ಮೋಸ ಜಾಲದಿಂದ ಉಂಟಾಗುವ ನಷ್ಟ ರೈತರನ್ನು ಚೇತರಿಸಿಕೊಳ್ಳಲು ಬಿಡುತ್ತಿಲ್ಲ.

4.ಬಹುತೇಕ ರೈತರು ಇನ್ನೂ ಸಹ ಹಳೆಯ ಸಾಂಪ್ರದಾಯಿಕ ಪದ್ಧತಿಯಿಂದ ವೈಜ್ಞಾನಿಕ ಪದ್ಧತಿಗೆ ಪರಿವರ್ತನೆಯಾಗಿಲ್ಲ. ಸಂಕಷ್ಟದಲ್ಲಿರುವ ಸಣ್ಣ ಇಡುವಳಿದಾರರು ಅತ್ಯಾಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಲು ಸಾಧ್ಯವಾಗದೇ ಇರುವುದು & ಅವುಗಳ ಬಗ್ಗೆ ಮಾಹಿತಿ ಇಲ್ಲದೆ ಇರುವುದು ರೈತರು ಆರ್ಥಿಕವಾಗಿ ಸಬಲರಾಗಲು ಸಾಧ್ಯವಾಗುತ್ತಿಲ್ಲ.

5.ಸಾಂಪ್ರದಾಯಿಕ ಬೆಳೆಗಳಿಂದ ವಾಣಿಜ್ಯ ಬೆಳೆಗಳತ್ತ ಮುಖ ಮಾಡಿಕೊಂಡಿದ್ದರಿಂದ ಹೆಚ್ಚಾದ ಉತ್ಪಾದನಾ ವೆಚ್ಚ, ದುಬಾರಿ ಬಿತ್ತನೆ ಬೀಜ & ರಸಗೊಬ್ಬರಗಳ ಖರೀದಿಗಾಗಿ ಬಂಡವಾಳಕ್ಕೆ ಸಾಂಸ್ಥಿಕ ಸಾಲವನ್ನು ಬಿಟ್ಟು ಖಾಸಗಿ ಲೇವಾದೇವಿಗಾರರಿಂದ ಹೆಚ್ಚಿನ ಬಡ್ಡಿಗೆ ಸಾಲ ತರುವುದು ಮತು ಸಾಲ ಮರುಪಾವತಿ ಮಾಡಲು ಸಾಧ್ಯವಾಗದೇ ಇದ್ದಾಗ ಸಾಲ ನೀಡಿದವರು ಮಾಡುವ ಅಪಮಾನಗಳು ರೈತರಿಗೆ ಆತ್ಮಹತ್ಯೆಯ ಮಾರ್ಗ ಪರಿಚಯಿಸುತ್ತದೆ.

6.ರೈತರ ಆದಾಯ ಕಡಿಮೆ ಖರ್ಚು ಜಾಸ್ತಿ, ನಿಧಾನ ಗತಿಯ ಯೋಜನೆಗಳು & ನೀತಿಗಳು, ಹಾಗೂ ವಿವಿಧ ರೀತಿಯಾಗಿ ವರ್ಷಪೂರ್ತಿಯಾಗಿ ಬರುವ ಹಬ್ಬಹರಿದಿನಗಳು ರೈತರ ಸಾಲವನ್ನು ಹೆಚ್ಚಿಸುತ್ತದೆ.



downloaded from: www.kpscvaani.com

ನ್ಯಾಷನಲ್ ಕ್ರೈಮ್ ರೆಕಾರ್ಡ್ ಬ್ಯೂರೋ ಪ್ರಕಾರ 2015ರಲ್ಲಿ ಒಟ್ಟು 2474 ಜನ ರೈತರು ಸಾಲ ಮರುಪಾವತಿ ಮಾಡಲಾಗದೆ ಬ್ಯಾಂಕ್ ಅಧಿಕಾರಿಗಳ ಬಾಧೆ ತಾಳಲಾರದೆ ಆತ್ಮಹತ್ಯೆ ಮಾಡಿಕೊಂಡಿರುತ್ತಾರೆ.

ಈ ಮೇಲಿನ ಎಲ್ಲಾ ಅಂಶಗಳಿಂದ ಇಂದಿನ ದಿನದೊಂದು ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದು, ರಾಜ್ಯದಲ್ಲಿ ದಿನನಿತ್ಯದ ವರದಿಯಾಗತ್ತಿದೆ, ಆದ್ದರಿಂದ ಇದನ್ನು ಪರಿಹರಿಸಲು 2 ವಿಧದಲ್ಲಿ ಪರಿಹಾರವನ್ನು ಸೂಚಿಸಬಹುದು

**1.ಅಲ್ಪಾವಧಿ ಪರಿಹಾರಗಳು–** ತಕ್ಷಣದ ಬಾಕಿ ಹಣ, ಸಬ್ಸಿಡಿ ಹಣ ಪಾವತಿಸಿ ಪರಿಸ್ಥಿತಿಯನ್ನು ಸುಧಾರಿಸುವುದು

- ಬೆಳೆ ಪರಿಹಾರ
- ಸಾಲಮನ್ನಾ & ಬಡ್ಡಿಮನ್ನಾ
- ಮೋಡಬಿತ್ತನೆ
- ಕೊಳವೆ ಬಾವಿ ಕೊರೆಸಲು ಸಬ್ಸಿಡಿ ನೀಡುವುದು, ಬೆಂಬಲ ಬೆಲೆ ಘೋಷಿಸಿ ಪ್ರತಿ ತಾಲ್ಲೂಕಿನಲ್ಲಿ ಖರೀದಿ ಕೇಂದ್ರಗಳನ್ನು ಸ್ಥಾಪಿಸುವುದು
- ರೈತರಲ್ಲಿ ವಿಶ್ವಾಸ ಮೂಡಿಸುವ ಯಾತ್ರ ಸಂವಾದ ಕಾರ್ಯಕ್ರಮವನ್ನು ಆಯೋಜಿಸುವುದು.

**2.ದೀರ್ಘಾವಧಿಯ ಪರಿಹಾರಗಳು–**

- ಸಮಗ್ರಸಾಲ ನೀತಿಯನ್ನು ರೂಪಿಸಿ ರೈತರು ಸಾಂಸ್ಥಿಕ ಸಾಲವನ್ನು ಪಡೆಯಲು ನೆರವಾಗುವ ನಿಟ್ಟಿನಲ್ಲಿ ಅವರನ್ನು ಜಾಗೃತರಾಗಿಸಿ, ಬ್ಯಾಂಕ್‌ಗಳಲ್ಲಿ ರೈತರಿಗೆ ಸಾಲ ನೀಡುವ ಪ್ರಕ್ರಿಯೆಯನ್ನು ಸರಳೀಕರಿಸಬೇಕು,
- ಕೃಷಿ ಅವಶ್ಯಕತೆಗಾಗಿ ಮತ್ತು ಯಂತ್ರೋಪಕರಣಗಳಿಗೆ ಸಾಲ ಮಾಡುವ ರೈತರಿಗೆ ಬಡ್ಡಿ ರಹಿತ ಸಾಲವನ್ನು ನೀಡುವಂತೆ ಸರ್ಕಾರ ನಿಯಮ ರೂಪಿಸಬೇಕು
- ಸಮಗ್ರ ಬೆಳೆ ನೀತಿಯನ್ನು ಜಾರಿಗೆ ತಂದು ಕ್ರಿಮಿನಾಶಕ ಮತ್ತು ರಸಗೊಬ್ಬರ, ಹಾಗೂ ಬಿತ್ತನೆ ಬೀಜಗಳು ದುಬಾರಿಯಾಗದಂತೆ ಕ್ರಮ ಕೈಗೊಳ್ಳಬೇಕು
- ರೈತರ ಉತ್ಪಾದನಾ ವೆಚ್ಚದ ಕನಿಷ್ಠ 2ರಷ್ಟು ಖಾತರಿ ಬೆಂಬಲ ಬೆಲೆಯನ್ನು ನಿಗಧಿಮಾಡಬೇಕು, ಹಾಗೂ ಎಲ್ಲಾ ಕಡೆ  ಖರೀದಿ ಕೇಂದ್ರವನ್ನು ತೆರೆದು ಬೆಲೆ ಕುಸಿತದ ಸಂದರ್ಭದಲ್ಲಿ ಸರ್ಕಾರವು ರೈತರ ಬೆಳೆಯನ್ನು ನಿಗಧಿ ಮಾಡಿದ ಬೆಲೆಗೆ ಪಾರದರ್ಶಕವಾಗಿ ಖರೀದಿ ಮಾಡಬೇಕು.
- ಕೇಂದ್ರ ಮತ್ತು ರಾಜ್ಯ ಸರ್ಕಾರದ ವಿವಿಧ  ಬೆಳೆ ವಿಮೆ ಯೋಜನೆಗಳನ್ನು(ಉದಾ:ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆ) ಸಮರ್ಪಕವಾಗಿ ಜಾರಿ ಮಾಡಬೇಕು ಮತ್ತು ಈ ಯೋಜನೆಗಳ ಸದುಪಯೋಗ ಕಟ್ಟಕಡೆಯ ರೈತನವರೆಗೆ ತಲುಪಬೇಕು.


downloaded from: www.kpscvaani.com

- ದಲ್ಲಾಳಿಗಳಿಂದ ರೈತರನ್ನು ಮುಕ್ತಗೊಳಿಸಲು ಮಾರುಕಟ್ಟೆ ವ್ಯವಸ್ಥೆಯ ಬಲವರ್ಧನೆಗೆ ಕೇಂದ್ರ ಸರ್ಕಾರ ಜಾರಿಗೆ ತಂದಿರುವ ನಾಮ್, ಇ–ರಕ್ಷಕ್ ನಂತಹ ಮತ್ತಷ್ಟು ಯೋಜನೆಗಳನ್ನು ಬೇರು ಮಟ್ಟದಲ್ಲಿ ಬಲ ಪಡಿಸುವುದು ಮತ್ತು ಆ ಬಗ್ಗೆ ರೈತರಿಗೆ ಅರಿವು ಮೂಡಿಸುವುದು.
- ರೈತರ ಮಕ್ಕಳಿಗೆ ಕೌಶಲ್ಯ ತರಬೇತಿ ನೀಡುವುದು
- 20ಕಿ.ಮೀ ವ್ಯಾಪ್ತಿಯಲ್ಲಿ ಸರ್ಕಾರಿ ಖಾಸಗಿ ಸಹಭಾಗಿತ್ವದಲ್ಲಿ ಶೈತ್ಯಾಗಾರ ನಿರ್ಮಾಣ
- ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ(ಕಾರ್ಪೋರೇಟ್ ಸೋಷಿಯಲ್ ರೆಸ್ಪಾನ್ಸಿಬಿಲಿಟಿ)ಯನ್ನು ಕೃಷಿ ಕ್ಷೇತ್ರಕ್ಕೆ ಉತ್ತೇಜಿಸುವುದು ಮತ್ತು ಸಹಕಾರ ಕೃಷಿಗೆ ರೈತರನ್ನು ಪ್ರೋತ್ಸಾಹಿಸುವುದರ ಜೊತೆಗೆ ದುಂದು ವೆಚ್ಚದ ಹಬ್ಬಹರಿದಿನಗಳ ಆಚರಣೆ, ಜೂಜು, ಕುಡಿತ ಮತ್ತಿತರ ಚಟಗಳ ದುಷ್ಪರಿಣಾಮಗಳ ಕುರಿತು ಜಾಗೃತಿ ಮೂಡಿಸುವುದು.

**ಸರ್ಕಾರದ ಪ್ರಮುಖ ಯೋಜನೆಗಳು :**

1.ಕೃಷಿ ಯಂತ್ರಧಾರೆ ಯೋಜನೆ

2.ಸಾಯಿಲ್ ಹೆಲ್ತ್ ಕಾರ್ಡ್(soil health card)

3.ರೈತ ಸಂಪರ್ಕ ಕೇಂದ್ರಗಳು

4.ರಾಷ್ಟ್ರೀಯ ತೋಟಗಾರಿಕ ಮಿಶನ್

5.ಸಾವಯವ ಭಾಗ್ಯ

6.ಕೃಷಿ ಭಾಗ್ಯ

7.ಸೂರ್ಯ ಜ್ಯೋತಿ ಯೋಜನೆ

8.ಕೃಷಿ ಸಿಂಚಾಯಿ ಯೋಜನೆ

9.ಭೂ ಚೇತನ ಯೋಜನೆ

10.ಫುಡ್ ಪಾರ್ಕ್

11.ರೈಸ್ ಪಾರ್ಕ್

12.ಪ್ರಧಾನ ಮಂತ್ರಿ ಫಸಲ್ ಭೀಮಾ ಯೋಜನೆ

ಈ ಮೇಲ್ಕಂಡವುಗಳು ಸರ್ಕಾರದಿಂದ ಜಾರಿಗೆ ತಂದ ಯೋಜನೆಗಳಾಗಿವೆ



downloaded from: www.kpscvaani.com

**ಉಪಸಂಹಾರ :** ಅನ್ನ ನೀಡುವ ರೈತ ಸಂಕಷ್ಟದಲ್ಲಿರುವನು, ಅವನನ್ನು ಸಂಕಷ್ಟದಿಂದ ಪಾರು ಮಾಡಲು ಪಕ್ಷ ಭೇದವನ್ನು ಮರೆತು, ಆಡಳಿತ & ವಿರೋಧ ಪಕ್ಷಗಳು ನಿಸ್ವಾರ್ಥಿಗಳಾಗಿ ರೈತರಿಗೆ ಸಹಾಯ ಮಾಡಬೇಕು, ಬರೀ ಸಮಿತಿಗಳನ್ನು ರಚಿಸುವುದರಿಂದ ಹಾಗೂ ಕಾಟಾಚಾರದ ಯೋಜನೆಗಳನ್ನು ಜಾರಿಗೆ ತರುವುದರಿಂದ ಸಮಸ್ಯೆ ಬಗೆಹರಿಯುವುದಿಲ್ಲ ಎಂಬುದನ್ನು ಮನಗಾಣಬೇಕು, ಸಮಿತಿಗಳ ಶಿಫಾರಸ್ಸುಗಳನ್ನು ಯತಾವತ್ತಾಗಿ ಜಾರಿಗೊಳಿಸಿ ಅನ್ನದಾತರ ಆತ್ಮ ಸಾಲಕ್ಕೆ ಹೆದರಿ ಹಾರಿಹೋಗದಂತೆ ಸರ್ಕಾರ ನೋಡಿಕೊಳ್ಳಬೇಕಿದೆ.

**FUTURE BELONGS TO NATION WHO PRODUCE FOOD GRAINS,NOT A GUNS**

**- ಎಂ.ಎಸ್.ಸ್ವಾಮಿನಾಥನ್**

## ಪ್ರಬಂಧ 2 : ಕಾವೇರಿ ನದಿ ವಿವಾದ

**"ಮಾನವನ ಆಸೆಗಳನ್ನು ಪೂರೈಸುವಷ್ಟು ನೈಸರ್ಗಿಕ ಸಂಪತ್ತನ್ನು ಪ್ರಕೃತಿ ನೀಡಿದೆ ಆದರೆ ದುರಾಸೆಗಲ್ಲ"**

**–M.K.ಗಾಂಧಿ**

ನೀರು ಸಕಲ ಜೀವಿಗಳ ಜೀವನಾಧಾರ, ನೀರಿನ ಬಳಕೆಯ ಹಕ್ಕು ಭೂಮಿ ಮೇಲಿನ ಆಸ್ತಿಯ ಹಕ್ಕಿಗೆ ಸಮ. ವೈವಿಧ್ಯತೆಯ ನಾಡಾದ ನಮ್ಮ ದೇಶದಲ್ಲಿ ಪುರಾಣದಿಂದಲೂ ನೀರಿನ ಮೂಲಗಳು ಪೂಜನೀಯ. ಈ ದಕ್ಷಿಣ ಗಂಗೆ ಎಂದೇ ಖ್ಯಾತವಾದ, ಕನ್ನಡಿಗರ ಅದರಲ್ಲೂ ವಿಶೇಷವಾಗಿ ಕೊಡಗು ಮತ್ತು ಹಳೆ ಮೈಸೂರು ಪ್ರಾಂತ್ಯದ ಜನರಿಗೆ ಭಾವನಾತ್ಮಕವಾಗಿಯೂ ಮತ್ತೂ ದೈವ ಸ್ವರೂಪವಾಗಿಯೂ ಜನರ ನಾಡಿ ಮಿಡಿತದ ಜೊತೆ ಸೇರಿರುವ 'ಕಾವೇರಿ' ಕರ್ನಾಟಕದಲ್ಲಿ ಉಗಮವಾದರೂ , 4 ರಾಜ್ಯಗಳ ಜನತೆಗೆ ನೀರುಣಿಸುತ್ತಿದೆ. ಈ ಪವಿತ್ರ ನದಿ ನೀರಿನ ಹಂಚಿಕೆಯ ಬಗ್ಗೆ ಶತಮಾನದಿಂದಲೂ ಗೊಂದಲಗಳಿದ್ದು, ರಾಜಕೀಯ ಮೇಲ್ನೋಟಕ್ಕಾಗಿ ಪದೇ ಪದೇ ರಾಜಕೀಯ ಪಕ್ಷಗಳು ಕಾವೇರಿ ನೀರಿನಲ್ಲಿ ತಮ್ಮ ಬೇಳೆ ಬೇಯಿಸಿಕೊಳ್ಳುತ್ತಿರುವ ಪರಿಣಾಮ ಕಾವೇರಿಯ ವಿವಾದದ ಕಾವಾರುತ್ತಲೇ ಇಲ್ಲ. ಮುಖ್ಯವಾಗಿ ಕರ್ನಾಟಕ ಮತ್ತು ತಮಿಳುನಾಡು ನಡುವೆ ಕಾವೇರಿ "ಯಾರವಳು" ಎಂಬುದೇ ಅಂತ್ಯವಾಗದ ವಿಷಯವಾಗಿದೆ. ಈ ನಿಟ್ಟಿನಲ್ಲಿ ಕಾವೇರಿ ನದಿಯ ಉಗಮ. ಹಂಚಿಕೆ, ಕಾಯ್ದೆ ಒಪ್ಪಂದಗಳು, ವಿವಾದಿತ ಅಂಶಗಳು ಮತ್ತು ಪರಿಹಾರ ಮಾರ್ಗ ನೋಡುವುದಾದರೆ.........

ಕಾವೇರಿ ನದಿಯು ಕರ್ನಾಟಕದ ಕೊಡಗು ಜಿಲ್ಲೆಯಲ್ಲಿ ಉಗಮ ಹೊಂದಿ ತಮಿಳುನಾಡಿನ ಮೂಲಕ ಸುಮಾರು 800 ಕಿಲೋಮೀಟರ್ ದೂರ ಹರಿದು ಬಂಗಾಳ ಕೊಲ್ಲಿ ಸೇರುತ್ತದೆ. ಈ ಕಾವೇರಿ ಜಲಾನಯನ ಪ್ರದೇಶ ಕರ್ನಾಟಕ, ತಮಿಳು ನಾಡು, ಕೇರಳ, ಪಾಂಡಿಚೇರಿ 3 ರಾಜ್ಯ ಮತ್ತು 1 ಕೇಂದ್ರಾಡಳಿತ ಪ್ರದೇಶ ವ್ಯಾಪ್ತಿಯಲ್ಲಿದ್ದು. ಈ ಪ್ರದೇಶದಲ್ಲಿ ಕೃಷಿಗೆ ನೀರುಣಿಸುತ್ತ ಜನರಿಗೆ ಅನ್ನ ನೀಡಿದರೆ, ವಿದ್ಯುತ್ ಉತ್ಪಾದನೆ, ಪ್ರವಾಸೋದ್ಯಮ, ಕೈಗಾರಿಕೆಗಳಿಗೆ ನೀರು ಒದಗಿಸುತ್ತಾ ಸಾವಿರಾರು ಕುಟುಂಬಗಳಿಗೆ ಆಧಾರ ಸ್ಥಂಭವಾಗಿದೆ. ಆದರೆ ಕಾಲಘಟ್ಟ ಉರುಳಿದಂತೆ ಈ ನೀರು ಹಂಚಿಕೆಯೇ ಕಗ್ಗಂಟಾಗಿ ಪರಿಣಮಿಸಲಾರಂಭಿಸಿದೆ.



downloaded from: www.kpscvaani.com

ನದಿ ಉಗಮ ನಮ್ಮದು ನಮಗೆ ಬೇಕಾಗುವಷ್ಟು ನೀರನ್ನು ಬಳಸಿಕೊಳ್ಳುವ ಹಕ್ಕು ನಮಗಿದೆ ಎಂದು ಒಂದು ರಾಜ್ಯದ ವಾದವಾದರೆ, ನಮ್ಮನ್ನು ಸಮಾನವಾದ ಹಂಚಿಕೆದಾರನಂತೆ ನೋಡಿ ಬದಲಿಗೆ ಹೆಚ್ಚಾದ ಪ್ರವಾಹದ ನೀರನ್ನು ಬಿಡುವ ಅಥವಾ ಬಿಸಾಡುವ ರಾಜ್ಯವನ್ನಾಗಿ ನೋಡಬೇಡಿ ಎಂದು ಮತ್ತೊಂದು ರಾಜ್ಯದ ವಾದ.

**ಕಾವೇರಿ ವಿವಾದದ ಐತಿಹಾಸಿಕ ಕಾರಣಗಳೆಂದರೆ :**

ಕಾವೇರಿ ಸ್ವತಂತ್ರ ಪೂರ್ವ ಇತಿಹಾಸದಲ್ಲಿ 'ಕೂರ್ಗ್' ಪ್ರಾಂತ್ಯಕ್ಕೆ ಸೇರಿದ್ದ ನದಿಯಾಗಿತ್ತು. ಇದು ಮೈಸೂರು ಮತ್ತು ಮದ್ರಾಸ್ ಪ್ರಾಂತ್ಯದಲ್ಲಿ ಹರಿಯುತ್ತಿದ್ದರಿಂದ ಇದರ ನೀರಿನ ಹಂಚಿಕೆಯ ಬಗ್ಗೆ ಇವೆರಡೂ ಬ್ರಿಟೀಷ್ ರಾಜ್ ವ್ಯವಸ್ಥೆಯ ಮೊರೆ ಹೋದವು.

1892ರಲ್ಲಿ 'ಮೋಡಸ ವಿವೆಂಡಿ' ತತ್ವದಡಿ ಮದ್ರಾಸ್ & ಮೈಸೂರು ಪ್ರಾಂತ್ಯದ ನಡುವೆ ಒಂದು ಒಪ್ಪಂದವಾಯಿತು. 1892ರ ಒಪ್ಪಂದದ ನಂತರ "ನಾಲ್ವಡಿ ಕೃಷ್ಣರಾಜ್ ಒಡೆಯರ್" ಒಂದು ಜಲಾಶಯ ನಿರ್ಮಾಣ ಮಾಡುವ ಯೋಜನೆಯಿತ್ತರು. ಪ್ರಾರಂಭದಲ್ಲಿ ವಿರೋಧಿಸಿದ ಮದ್ರಾಸ್ ನಂತರ ತನ್ನ ಒಪ್ಪಿಗೆಯನ್ನು ಸೂಚಿಸಿತು. ಇದಕ್ಕಾಗಿ 1924ರಲ್ಲಿ ಮತ್ತೊಂದು ಕಾಯ್ದೆ ಜಾರಿಗೆ ತರಲಾಯಿತು. ಕೆ.ಆರ್.ಎಸ್. ನೀರನ್ನು ಕರ್ನಾಟಕ ಮತ್ತು ತಮಿಳುನಾಡು ಎರಡೂ ಬಳಕೆ ಮಾಡಲು ಅವಕಾಶ ನೀಡಿ ಮೆಟ್ಟೂರು ಅಣೆಕಟ್ಟು ನಿರ್ಮಾಣಕ್ಕೆ ಅನುಮತಿ ನೀಡಿತು. ಬಲಾಢ್ಯ ಬ್ರಿಟಿಷ್ ಆಳ್ವಿಕೆಯಲ್ಲಿದ್ದ ಮದ್ರಾಸ್ ಸರ್ಕಾರದ ಒತ್ತಡಗಳ ಪ್ರಭಾವದಿಂದಾಗಿ ಒಪ್ಪಂದವು ನ್ಯಾಯ ಸಮ್ಮತವಾಗಿರಲಿಲ್ಲ ಎಂಬ ಮಾತು ಹಿಂದಿನಿಂದಲೂ ಕೇಳಿ ಬರುತಿತ್ತು. 1924ರ ಒಪ್ಪಂದದ Section 11ರ ಪ್ರಕಾರ ಇದು 50ವರ್ಷಗಳ ನಂತರ ಮತ್ತೆ ಪರಿಶೀಲನೆಗೆ ಒಳಪಡಿಸಲು ಅವಕಾಶ ಕಲ್ಪಿಸಿತು.

**ಸ್ವಾತಂತ್ರ್ಯ & ರಾಜ್ಯ ಪುನರ್ವಿಂಗಡಣಾ ನಂತರ :**

ಸ್ವಾತಂತ್ರ್ಯ ನಂತರ ನಡೆದ ರಾಜ್ಯಗಳ ಪುನರ್ವಿಂಗಡಣೆಯಿಂದಾಗಿ "ಕೂರ್ಗ್" ಪ್ರಾಂತ್ಯ ಕರ್ನಾಟಕಕ್ಕೆ ಸೇರ್ಪಡೆಯಾಯಿತು. ತಮಿಳುನಾಡಿನ ಮಲಬಾರ್ ಪ್ರಾಂತ್ಯ ಕೇರಳ ಸೇರಿದ್ದರ ಪರಿಣಾಮ, ಕೇರಳ ಕಾವೇರಿಯ ಪಾಲುದಾರ ರಾಜ್ಯವಾಯಿತು. ಪಾಂಡಿಚೇರಿ ಕೇಂದ್ರಾಡಳಿತ ಪ್ರದೇಶವಾಯಿತು, ಇದರ ಕರೈಕಲ ಪ್ರಾಂತ್ಯ ನೀರಿಗಾಗಿ ಕಾವೇರಿಯನ್ನೇ ಅವಲಂಬಿಸಿದ್ದರ ಪರಿಣಾಮ ತಾಂತ್ರಿಕ ಬಿಕ್ಕಟ್ಟು ಸೃಷ್ಟಿಯಾಯಿತು.

1974ರಲ್ಲಿ ಕರ್ನಾಟಕ ರಾಜ್ಯ 50 ವರ್ಷದ ಹಿಂದಿನ ಒಪ್ಪಂದದಂತೆ ನೀರನ್ನು ಬಿಡಲು ನಿರಾಕರಿಸಿತು. 1924ರ ಕಾಯ್ದೆ ಬ್ರಿಟಿಷ್‌ರಿಂದ ರಚಿತವಾಗಿದ್ದು ಇದು ಪಕ್ಷಪಾತದಿಂದ ಕೂಡಿದೆ. ಹಾಗಾಗಿ ಅಂತರಾಷ್ಟ್ರೀಯ ನದಿ ನೀರಿನ ಹಂಚಿಕೆಯಂತೆಯೇ ವಿವಾದ ಬಗೆ ಹರಿಸಿ ಎಂಬುದು ಕರ್ನಾಟಕದ ವಾದವಾಗಿತ್ತು. ಈ ಎಲ್ಲಾ ಗೊಂದಲಗಳಿಗೆ ತೆರೆ ಎಳೆಯಲು ಕೇಂದ್ರ ಸರ್ಕಾರವು ಸುಪ್ರೀಂ ಕೋರ್ಟ್ ಆದೇಶದ ಮೇರೆಗೆ ಸಂವಿಧಾನದ 262ನೇ ವಿಧಿಯನ್ವಯ 1990 ಜೂನ್ 2 ರಂದು ನ್ಯಾಯಮಂಡಳಿ ರಚಿಸಿತು.

1991ರ ಜೂನ್ 25 ರಂದು ಮಧ್ಯಂತರ ಆದೇಶ ನೀಡಿದ ನ್ಯಾಯ ಮಂಡಳಿಯು ಜೂನ್–ಮೇ ನಡುವಿನ ಅವಧಿಯಲ್ಲಿ ಮೆಟ್ಟೂರು ಜಲಾಶಯದಲ್ಲಿ 205tmc ನೀರಿರುವಂತೆ ನೋಡಿಕೊಳ್ಳಬೇಕಾದ್ದು


downloaded from: www.kpscvaani.com

ಕರ್ನಾಟಕದ ಕರ್ತವ್ಯವೆಂದಿತು. ತಮಿಳು ನಾಡು 6tmc ನೀರನ್ನು ಪಾಂಡಿಚೇರಿಗೆ ನೀಡಬೇಕಾಯಿತು. ನ್ಯಾಯಮಂಡಳಿಯು ಕರ್ನಾಟಕಕ್ಕೆ 11.20ಲಕ್ಷ ಎಕರೆಗಿಂತ ನೀರಾವರಿ ಪ್ರದೇಶವನ್ನು ಹೆಚ್ಚು ಮಾಡಬಾರದೆಂದು ಸೂಚಿಸಿತು.

1990ರಲ್ಲಿ ರಚಿತವಾದ ಕಾವೇರಿ ಜಲ ಮಂಡಳಿಯು 2007ರಲ್ಲಿ ಸುದೀರ್ಘ 16 ವರ್ಷಗಳ ನಂತರ ಐತಿಹಾಸಿಕ ತೀರ್ಪು ಪ್ರಕಟಿಸಿತು. ತೀರ್ಪಿನಲ್ಲಿ ಕಾವೇರಿ ನದಿ ವ್ಯವಸ್ಥೆಯಲ್ಲಿ ಸಾಮಾನ್ಯ ವರ್ಷದಲ್ಲಿ ಲಭ್ಯವಿರುವ ಒಟ್ಟು 740tmc ನೀರಿನಲ್ಲಿ ತಮಿಳುನಾಡಿಗೆ 419tmc, ಕರ್ನಾಟಕಕ್ಕೆ 270tmc ಉಳಿದ ನೀರನ್ನು ಕೇರಳ ಮತ್ತು ಪುದುಚೆರಿಗೆ ಹಂಚಿಕೆ ಮಾಡಿತು. ಈ ತೀರ್ಪಿನ ಅನ್ವಯ ಕರ್ನಾಟಕ ತಮಿಳುನಾಡಿಗೆ ಪ್ರತಿ ವರ್ಷ 192tmc ನೀರು ಹರಿಸಬೇಕಿತ್ತು. ಇದರಿಂದ ತೃಪ್ತಿ ಪಡದ ಕರ್ನಾಟಕ ಸರ್ಕಾರ ಪುನರ್ ಪರಿಶೀಲನಾ ಅರ್ಜಿ ಸಲ್ಲಿಸಿದರೂ ಯಾವುದೇ ಪ್ರಯೋಜನವಾಗಲಿಲ್ಲ. ಇದನ್ನು ಪ್ರಶ್ನಿಸಿ ಕರ್ನಾಟಕ ಸರ್ಕಾರ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿತ್ತು.

ಮಾನ್ಸೂನ್ ವೈಫಲ್ಯದಿಂದ ತೀವ್ರ ಬರಗಾಲ ಎದುರಿಸುತ್ತಿದ್ದ ಸಂದರ್ಭದಲ್ಲಿ 2012ರಲ್ಲಿ ಮನಮೋಹನ್ ಸಿಂಗ್ ನೇತೃತ್ವದ ಕಾವೇರಿ ನದಿ ಪ್ರಾಧಿಕಾರ ದಿನನಿತ್ಯ 9000 ಕ್ಯೂಸೆಕ್ಸ್ ನೀರು ಹರಿಸುವಂತೆ ಕರ್ನಾಟಕಕ್ಕೆ ತಾಕೀತು ಮಾಡಿತ್ತು, ಇದನ್ನು ನಿರಾಕರಿಸಿದ ರಾಜ್ಯದ ಮೇಲೆ ಸುಪ್ರೀಂ ಕೋರ್ಟ್ ಚಾಟಿ ಬೀಸಿದ್ದು ವಿಪರ್ಯಾಸವೇ ಸರಿ.

**ನದಿ ನೀರಿನ ಹಂಚಿಕೆಗೆ ಸಂಬಂಧಿಸಿದಂತೆ ಕರ್ನಾಟಕದ ವಾದ :**

- ತಮಿಳು ನಾಡು ಕೃಷಿಗೆ ನೀರನ್ನು ಕೇಳುತ್ತದೆ. ಆದರೆ ನಾವು ಕುಡಿಯಲು ಬೇಡುತ್ತಿದ್ದೇವೆ.(ಸಂವಿಧಾನದ 21ನೇ ವಿಧಿಯಂತೆ ಜೀವಿಸುವ ಹಕ್ಕು ಎಲ್ಲರಿಗೂ ಇದೆ ಎಂಬ ವಾದ)
- ಕೃಷಿ ಭೂಮಿ ವಿಸ್ತರಣೆಗೆ ನಮಗೆ ಅವಕಾಶವಿಲ್ಲ ಆದರೆ ತಮಿಳು ನಾಡು ಕಾವೇರಿ ಜಲಾನಯನ ಪ್ರದೇಶದಲ್ಲಿ ಕೃಷಿ ಭೂಮಿಯ ಗಾತ್ರ 30ಲಕ್ಷ ಎಕರೆ ಪ್ರದೇಶಕ್ಕೆ ಹೆಚ್ಚಿಸಿಕೊಂಡಿದೆ.
- ತಮಿಳುನಾಡು ಕೃಷಿ ಪದ್ಧತಿ ಸರಿಯಿಲ್ಲ. ಹಾಗಾಗಿ ನೀರು ವ್ಯರ್ಥವಾಗಿ ಸಮುದ್ರ ಸೇರುತ್ತದೆ.
- ಪ್ರಸ್ತುತ ಕೈಗಾರಿಕರಣ ಹೆಚ್ಚಾಗಿದ್ದು ಇವುಗಳಿಗೂ ನಾವು ನೀರು ಪೂರೈಸಬೇಕಿದೆ.
- ನ್ಯಾಯಮಂಡಳಿಯು ಮಳೆಯಾಗದಿದ್ದ ಸಂದರ್ಭದಲ್ಲಿ ಏನು ಮಾಡಬೇಕು ಎಂಬುದನ್ನು ತಿಳಿಸಿಲ್ಲ.... ಜೊತೆಗೆ ಕರ್ನಾಟಕ "ನೈಋತ್ಯ ಮಾನ್ಸೂನ್" ಮೇಲೆ ಮಾತ್ರವೇ ಅವಲಂಬಿತವಾಗಿದ್ದು ತಮಿಳು ನಾಡು ನೈಋತ್ಯ & ಈಶಾನ್ಯ ಎರಡೂ ಮಾನ್ಸೂನ್‌ಗಳಿಂದಲೂ ಮಳೆ ಪಡೆಯುತ್ತದೆ.
- ಜೊತೆಗೆ 1924ರ ಕಾಯ್ದೆ ಪಕ್ಷಪಾತಿ ಎಂಬುದು ರಾಜ್ಯದ ವಾದವಾಗಿದೆ.
- ಕಾವೇರಿ ನದಿ ನಿರ್ವಹಣ ಮಂಡಳಿ ರಚನೆಯಾದಲ್ಲಿ ನಮ್ಮ ಅಣೆಕಟ್ಟುಗಳ ಮೇಲಿನ ನಮ್ಮ ಅಧಿಕಾರ ಇಲ್ಲದಾಗುತ್ತದೆ.

**ತಮಿಳುನಾಡಿನ ವಾದ :**

- ಇತಿಹಾಸದಿಂದಲೂ ಚೋಳರ ಕಾಲದಿಂದಲೂ ಕಾವೇರಿ ಮೇಲೆ ನಮಗೆ ಪ್ರಾಬಲ್ಯವಿದೆ.


downloaded from: www.kpscvaani.com

- ಕಾವೇರಿ ಮುಖಜ ಭೂಮಿ ನಮ್ಮಲ್ಲಿದೆ ಎಂಬ ವಾದ.
- 10 ವರ್ಷದಿಂದ 2 ಬೆಳೆ ಬೆಳೆಯಲು ನಮಗೆ ನೀರಿಲ್ಲ.
- ಕರ್ನಾಟಕ ನೀರಿನ ತಡೆಗೋಡೆಗಳನ್ನು(check dam) ನಿರ್ಮಾಣ ಮಾಡಿಕೊಳ್ಳುತ್ತಿದೆ.
- ಕಾವೇರಿ ಒಂದೇ ಕರ್ನಾಟಕದ ಮುಖ್ಯನದಿಯಲ್ಲ, ಆದರೆ ನಮಗೆ ಇದೊಂದೇ ಮುಖ್ಯ ನದಿ.
- ಅಂತರಾಷ್ಟ್ರೀಯ ನದಿ ತೀರ್ಪು ಇತಿಹಾಸದಿಂದಲೂ ಬಳಸುವವರ ಪರವಾಗಿದೆ.
- ಹಾಗಾಗಿ 419tmc ಬದಲಿಗೆ 487tmc ಗೆ ಬೇಡಿಕೆ.

ಹೀಗೆ ಹಲವಾರು ವಾದವಿವಾದಗಳಿದ್ದರೂ ಕಳೆದ ಫೆಬ್ರವರಿ 16ರಂದು ಅಂತಿಮ ತೀರ್ಪು ನೀಡಿದ ಸುಪ್ರೀಂ ಕೋರ್ಟ್ ನ್ಯಾಯಮಂಡಳಿಯ ಆದೇಶದಲ್ಲಿ ಸ್ವಲ್ಪ ಬದಲಾವಣೆ ಮಾಡಿ ತಮಿಳುನಾಡಿಗೆ ಹರಿಸಬೇಕಾಗಿದ್ದ 192tmc ಬದಲಿಗೆ 14tmc ಕಡಿಮೆ ಮಾಡಿ ಆದೇಶ ನೀಡಿತು. ಇದರ ಜೊತೆಗೆ ಕಡ್ಡಾಯವಾಗಿ ಕಾವೇರಿ ನದಿ ನಿರ್ವಹಣಾ ಮಂಡಳಿ ರಚಿಸುವಂತೆ ಕೇಂದ್ರ ಸರ್ಕಾರಕ್ಕೆ ತಾಕೀತು ಮಾಡಿದೆ. ತನ್ನ ಪಾಲಿನ ನೀರಿನಲ್ಲಿ 14tmc ಕಡಿಮೆಯಾದ ಕಾರಣ ತಮಿಳುನಾಡು ಅಸಮಧಾನ ಹೊರಹಾಕಿದರೆ **ಕಾವೇರಿ ನದಿ ನಿರ್ವಹಣ ಮಂಡಳಿ** ರಚನೆಗೆ ಕರ್ನಾಟಕ ಮತ್ತೆ ಅಸಮಧಾನ ವ್ಯಕ್ತ ಪಡಿಸಿರುವುದು ಇದು ಸದ್ಯಕ್ಕೆ ಬಗೆಹರಿಯದ ವಿಷಯವಾಗಿದೆ.

ಹಾಗಾದರೆ ಇದಕ್ಕೆ ಪರಿಹಾರವೇನು?

- 1924ರ ಕಾಯ್ದೆಯ ಮರು ಪರಿಶೀಲನೆಯಾಗಬೇಕು.
- ಎರಡು ರಾಜ್ಯಗಳು ಸರ್ವೋಚ್ಚ ನ್ಯಾಯಾಲಯದ ತೀರ್ಪಿಗೆ ಅನುಗುಣವಾಗಿ ನಡೆದುಕೊಳ್ಳಬೇಕು ಹಾಗೂ ಎರಡು ರಾಜ್ಯಗಳ ರಾಜಕೀಯ ಪಕ್ಷಗಳು ಈ ವಿಚಾರದಲ್ಲಿ ರಾಜಕೀಯ ಮಾಡುವುದನ್ನು ಬಿಟ್ಟು ರೈತರು ಸೌಹಾರ್ದಯುತವಾಗಿರಲು ಸಹಕರಿಸಬೇಕು.
- ಸುಸ್ಥಿರ ಕೃಷಿ ವಿಧಾನಗಳ ಬಳಕೆಯಾಗಬೇಕು.
- ಕಾವೇರಿ ಕೊಳ್ಳದ ರೈತರು(ಕರ್ನಾಟಕ & ತಮಿಳುನಾಡು) ಕಾವೇರಿ ರೈತ ಕುಟುಂಬ ರಚಿಸಿಕೊಳ್ಳಬೇಕು.
- ನೀರಿನ ಮಿತ ಬಳಕೆಯ ಮತ್ತು ಕಡಿಮೆ ನೀರಿನಲ್ಲಿ ಹೆಚ್ಚು ಬೆಳೆ ಬೆಳೆಯುವ ನಿಟ್ಟಿನಲ್ಲಿ ಜಾಗೃತರಾಗಬೇಕು.
- ಕೇಂದ್ರ ಸರ್ಕಾರವು ಉನ್ನತಾಧಿಕಾರ ಆಯೋಗದ ರಚನೆಗೆ ಒತ್ತು ನೀಡಬೇಕು. ಇದರಲ್ಲಿ ನ್ಯಾಯಾಂಗ, ಪರಿಸರ, ತಾಂತ್ರಿಕ, ನೀರಾವರಿ, ಸಾಮಾಜಿಕ ಕಾರ್ಯಕರ್ತ, ಭೂವಿಜ್ಞಾನಿ ಇರಬೇಕು.
- ಕರ್ನಾಟಕದ ಪಶ್ಚಿಮ ಘಟ್ಟದಲ್ಲಿ ಬೀಳುವ ಮಳೆಯ 2000tmc ಅಡಿಯಷ್ಟು ನೀರು ಸಮುದ್ರ ಸೇರುವುದನ್ನು ಬಳಕೆಗೆ ಬರುವಂತೆ ನಿಖರ ಯೋಜನೆ ರೂಪಿಸಬೇಕು.
- ಕೆರೆಗಳನ್ನು ಮುಚ್ಚದೇ ಚೆಕ್ ಡ್ಯಾಂ, ಬಂದರು ನಿರ್ಮಿಸುವ ಕೆಲಸ ಆಗಬೇಕು. ಕಡಿಮೆ ಅವಧಿಯಲ್ಲಿ ಬೆಳೆಯುವ ಬೆಳೆ ಬೆಳೆಯುವುದು.
- ವಾಣಿಜ್ಯ ಬೆಳೆಗಳನ್ನು ಕಡಿಮೆ ಮಾಡಿ ಆಹಾರಧಾನ್ಯಕ್ಕೆ ಒತ್ತು.
- ನೀರಿನ ಕುಂದುಕೊರತೆ ಸಂದರ್ಭದಲ್ಲಿ ನೀರಿನ ಹಂಚಿಕೆಯ ಮರು ಚರ್ಚೆಯಾಗಬೇಕು.


downloaded from: www.kpscvaani.com

**ರೈತ ಸಮುದಾಯ ಮಾಡಬೇಕಾದದ್ದು :**

- ❖ ಬೆಳೆ ಪದ್ಧತಿಯನ್ನು ಮಳೆ ಪದ್ಧತಿಯೊಂದಿಗೆ ಜೋಡಿಸಬೇಕು.
- ❖ ನೀರು ಬಳಕೆಗೆ ಚಲಾಯಿಸುವ ಹಕ್ಕನ್ನು ನೀರು ಉಳಿಸುವ ಜವಾಬ್ದಾರಿಯಲ್ಲೂ ಪ್ರತಿಪಾದಿಸಬೇಕು.
- ❖ ಸುಸ್ಥಿರ ಕೃಷಿ ವಿಧಾನದ ಬಳಕೆ ಮಾಡಬೇಕು.
- ❖ ಇತ್ತೀಚಿನ ದಿನಗಳಲ್ಲಿ ಕಾವೇರಿ ವಿವಾದವು ತೀವ್ರವಾಗಿ ಉಲ್ಬಣಿಸಿದ್ದು. ಇದಕ್ಕೆ ಮಾನ್ಸೂನ್ ವೈಫಲ್ಯವೇ ನೇರವಾದ ಕಾರಣವಾಗಿದೆ. ಇದರ ಮಧ್ಯೆ ಘನವತ್ತ ನ್ಯಾಯಾಲಯವು "ನೀವೂ ಬದುಕಿ, ಬೇರೆಯವರನ್ನೂ ಬದುಕಲು ಬಿಡಿ" ಎಂಬ ತತ್ವದಡಿ ತಮಿಳುನಾಡಿಗೆ ನೀರು ಬಿಡಲು ಆದೇಶಿಸಿ, ನೀರು ನಿರ್ವಹಣಾ ಮಂಡಳಿ ರಚನೆಗೆ ಆದೇಶ ನೀಡಿರುವುದು. ವಿವಾದ ಇನ್ನೂ ಬೂದಿಮುಚ್ಚಿದ ಕೆಂಡದ ವಾತಾವರಣ ನಿರ್ಮಿಸಿದ ಸರ್ಕಾರ & ಜನರ ಮನೋಭಾವದಲ್ಲಿ ಬದಲಾವಣೆಯಾಗದ ಹೊರತು ಇದಕ್ಕೆ ಪರಿಹಾರವಿಲ್ಲ.

ಒಟ್ಟಾರೆಯಾಗಿ ಪೂರ್ವಗ್ರಹ ಪೀಡನೆಗಳನ್ನು ವ್ಯಾಖ್ಯಾನಿಸಲು ಸಾಧ್ಯವಿಲ್ಲ ಹಾಗಾಗಿ ಸಂದರ್ಭಕ್ಕೆ ತಕ್ಕಂತೆ ಕಾವೇರಿಗೆ ಸಂಬಂಧಿಸಿದ ಕಾಯ್ದೆಗಳ ಮರು ಪರಿಶೀಲನೆ & ಸರ್ಕಾರದ ಮುಕ್ತ ನಿರ್ವಹಣೆಯು ಈ ವಿವಾದಕ್ಕೆ ಪರಿಹಾರವಾಗಬಲ್ಲದು. ಈ ಸಂದರ್ಭದಲ್ಲಿ ಜಲಸುರಕ್ಷಕ "ರಾಜೇಂದ್ರ ಸಿಂಗ್" ಅವರ ಮಾತು ಪ್ರಸ್ತುತವೆನಿಸುತ್ತದೆ..... "ನೀರಿನ ವಿಷಯದಲ್ಲಿ ಮೆದುಳು & ಹೃದಯ ಜೋಡಣೆ ಮಾಡುವ ಕೆಲಸ ಮಾಡಬೇಕಿದೆ. ಆಗ ಎಲ್ಲರಿಗೂ ನೀರು ಸಿಗುತ್ತದೆ.

## ಪ್ರಬಂಧ 3 : ಇಸ್ರೋ ಸಾಧನೆಗಳು

**"ವಿಜ್ಞಾನಿಗಳು ಸಮಾಜಕ್ಕೆ ತಂತ್ರಜ್ಞಾನವನ್ನು ನೀಡಿದರು,**
**ತಂತ್ರಜ್ಞಾನ ಮನುಷ್ಯನಿಗೆ ಎಲ್ಲವನ್ನು ನೀಡಿದೆ, ಮುಂದೆಯೂ ನೀಡಲಿದೆ"**

- **ಭಾರತರತ್ನ ಸಿ.ಎನ್.ಆರ್ ರಾವ್**

ಅಂದು ನಮ್ಮ ದೇಶವನ್ನು ಹಾವಾಡಿಗರ ದೇಶ ಎಂದು ಬ್ರಿಟನ್ ಪ್ರಧಾನಿ ವಿನ್ಸಟನ್ ಚರ್ಚಿಲ್ ಹಿಯಾಳಿಸಿದ್ದರು, ನಾವು ಹಾವುಗಳ ಜೊತೆ ಮಾತ್ರ ಅಲ್ಲ, ರಾಕೆಟ್‌ಗಳ ಜೊತೆಯು ಸಹ ಆಟ ಆಡಬಲ್ಲೆವು ಎಂಬುದನ್ನು ಏಕ ಕಾಲದಲ್ಲಿ ಒಂದೇ ರಾಕೆಟ್‌ನ ಮೂಲಕ 104 ಉಪಗ್ರಹಗಳನ್ನು ಕಕ್ಷೆಗೆ ಸೇರಿಸುವ ಮೂಲಕ ಕೇವಲ ಬ್ರಿಟನ್‌ಗೆ ಮಾತ್ರವಲ್ಲದೆ ಇಡೀ ಜಗತ್ತಿಗೇ ತೋರಿಸಿದ ಹೆಮ್ಮೆಯ ಸಂಸ್ಥೆ ಇಸ್ರೋ.

ಇಸ್ರೋ ಎಂದರೆ ಕೇವಲ ಇಂಡಿಯನ್ ಸ್ಪೇಸ್ ರೀಸರ್ಚ್ ಆರ್ಗನೈಜೇಷನ್ ಅಲ್ಲ ಇಸ್ರೋ ಎಂದರೆ ಅದು ಭಾರತದ ಹೆಮ್ಮೆಯ ಪ್ರತೀಕ, ಅದು ಭಾರತೀಯ ತಂತ್ರಜ್ಞಾನದ ಸಾಧನೆಯ ಕೀರ್ತಿ ಪತಾಕೆ. ಪ್ರಥಮ ಪ್ರಯತ್ನದಲ್ಲೆ ಅತಿ ಕಡಿಮೆ ವೆಚ್ಚದಲ್ಲಿ ಚಂದ್ರಯಾನ ಮತ್ತು ಮಂಗಳಯಾನ ಮಾಡಿದ ಜಗತ್ತಿನ ಏಕೈಕ ಸಂಸ್ಥೆ.

ಬಾಹ್ಯಾಕಾಶ ಸಂಸ್ಥೆಯನ್ನು ಹೊಂದಿರುವ ಜಗತ್ತಿನ 72 ದೇಶಗಳ ಪೈಕಿ ಉಡಾವಣಾ ವ್ಯವಸ್ಥೆಯನ್ನು ಹೊಂದಿರುವುದು ಕೇವಲ 14 ದೇಶಗಳು ಮಾತ್ರ. ಇವುಗಳ ಪೈಕಿ ಅಗ್ಗದ ಉಡಾವಣೆ


downloaded from: www.kpscvaani.com

ವ್ಯವಸ್ಥೆಯನ್ನು ಹೊಂದಿರುವುದು ಇಸ್ರೋ ಮಾತ್ರ. ಇದರ ಮೂಲ ಇಂಡಿಯನ್ ನ್ಯಾಷನಲ್ ಕಮಿಟಿ ಫಾರ್ ಸ್ಪೇಸ್ ರೀಸರ್ಚ್ ಸಂಸ್ಥೆಗೆ 1962ರಲ್ಲಿ ಬೀಜ ಬಿತ್ತಿದ್ದು ವಿಕ್ರಮ್ ಸಾರಾಭಾಯಿಯವರು, ಅದಕ್ಕೆ ಗೊಬ್ಬರ ನೀಡಿ ಪೋಷಿಸಿದ್ದು ಅಂದಿನ ಪ್ರಧಾನಿ ಜವಹರ್‌ಲಾಲ್ ನೆಹ್ರೂ. ಇದು ನಂತರ 1969 ರಲ್ಲಿ ಭಾರತೀಯ ಬಾಹ್ಯಾಕಾಶ ಸಂಶೋಧನ ಸಂಸ್ಥೆ(ಇಸ್ರೋ)ಯಾಗಿ ಹೊಸ ಅವತಾರ ಪಡೆಯಿತು.

ಬೆಂಗಳೂರಿನಲ್ಲಿ ಕೇಂದ್ರ ಕಛೇರಿಯನ್ನು ಹೊಂದಿರುವ ಇಸ್ರೋ 1969ಲ್ಲಿ ಕಾರ್ಯಾರಂಭ ಮಾಡಿದರೂ ಸಹ ತನ್ನ ಮೊದಲ ಉಪಗ್ರಹ ಆರ್ಯಭಟವನ್ನು ಕಕ್ಷೆಗೆ ಸೇರಿಸಿದ್ದು ಮಾತ್ರ 1975ರ ಏಪ್ರಿಲ್ 19ರಂದು. ಮೊದಲ ಉಪಗ್ರಹ ಉಡಾವಣೆಯ ವೇಳೆಗೆ ಉಡಾವಣೆ ವ್ಯವಸ್ಥೆ ಅಭಿವೃದ್ಧಿಯಾಗಿರದ ಕಾರಣ ರಷ್ಯಾದ ಸಹಕಾರ ಪಡೆಯಲಾಗಿತ್ತು. ತದನಂತರ 1980ರಲ್ಲಿ ಇಸ್ರೋ ತನ್ನದೇ ಆದ ಉಡಾವಣಾ ವಾಹನ ಎಸ್‌ಎಲ್‌ವಿ–3ಯನ್ನು ಅಭಿವೃದ್ಧಿ ಪಡಿಸುವ ಮೂಲಕ ಭಾರತದ 2ನೇ ಉಪಗ್ರಹ ರೋಹಿಣಿಯನ್ನು ಕಕ್ಷೆಗೆ ಸೇರಿಸಿತು. ಎಸ್‌ಎಲ್‌ವಿ ಉಡಾವಣಾ ವಾಹನದ ತರುವಾಯ ಪಿಎಸ್‌ಎಲ್‌ವಿ & ಜಿಎಸ್‌ಎಲ್‌ವಿ ಎಂಬೆರಡು ಉಡಾವಣಾ ವಾಹನಗಳನ್ನು ಅಭಿವೃದ್ಧಿ ಪಡಿಸಿತು. ಪಿಎಸ್‌ಎಲ್‌ವಿ ಅತ್ಯಂತ ವಿಶ್ವಾಸಾರ್ಹ & ದಕ್ಷ ಉಡಾವಣಾ ವಾಹನ ಎಂದು ಹೆಸರುವಾಸಿಯಾಗಿದೆ, ಇಲ್ಲಿಯವರೆಗೆ ಉಡಾವಣೆ ಮಾಡಿದ 41ರಲ್ಲಿ ಕೇವಲ ಎರಡು ಬಾರಿ ಮಾತ್ರ ವಿಫಲವಾಗಿದ್ದು, 39 ಭಾರಿ ಯಶಸ್ವಿಯಾಗಿ ಉಪಗ್ರಹಗಳನ್ನು ಕಕ್ಷೆಗೆ ಸೇರಿಸಿದ್ದು ಒಂದು ದೊಡ್ಡ ಸಾಧನೆ.

**ಇಸ್ರೋದ ಕೆಲವು ಸಾಧನೆಗಳು :**

**ಚಂದ್ರಯಾನ–1** : ಇಸ್ರೋ 22–10–2000ರಂದು ತನ್ನ ಪಿಎಸ್‌ಎಲ್‌ವಿ–ಎಕ್ಸ್‌ಎಲ್‌ಸಿ ಎಂಬ ಉಡಾವಣಾ ವಾಹನದ ಮೂಲಕ ಚಂದ್ರನ ಅಧ್ಯಯನಕ್ಕಾಗಿ ಉಡಾವಣೆ ಮಾಡಿದ ಮೊಟ್ಟಮೊದಲ ಮಾನವ ರಹಿತ ಉಪಗ್ರಹ. ಇದು ಆಗಸ್ಟ್ 2009 ರವೆಗೆ ಕಾರ್ಯನಿರ್ವಹಿಸಿತು. ಇಲ್ಲಿಯವರೆಗೆ ಜಗತ್ತಿನ ಕೇವಲ 4 ರಾಷ್ಟ್ರಗಳು ಮಾತ್ರ ಚಂದ್ರಯಾನ ಕೈಗೊಂಡಿದ್ದು ಅದರಲ್ಲಿ ಭಾರತವೂ ಒಂದು ಎಂಬುದು ಹೆಮ್ಮೆಯ ಸಂಗತಿಯಾಗಿದೆ.

**ಮಂಗಳಯಾನ:** ಇಸ್ರೋದ ಮುಕುಟಕ್ಕೆ ಮತ್ತೊಂದು ಮುತ್ತು ಮಂಗಳಯಾನ. ದಿನಾಂಕ 05–11–2013 ರಂದು ಪಿಎಸ್‌ಎಲ್‌ವಿ–ಎಕ್ಸ್–2 ಸಿ25 ಎಂಬ ಉಡಾವಣಾ ವಾಹನದ ಮೂಲಕ ನಭಕ್ಕೆ ಹಾರಿದ ಮಾಮ್(MOM) ಸುದೀರ್ಘ ಪ್ರಯಾಣ ಮಾಡಿ ದಿನಾಂಕ 24–9–2014ರಂದು ಮಂಗಳ ಕಕ್ಷೆಯನ್ನು ಪ್ರವೇಶಿಸುವ ಮೂಲಕ ಪ್ರಥಮ ಪ್ರಯತ್ನದಲ್ಲೆ ಮಂಗಳಯಾನ ಯಶಸ್ವಿಯಾಯಿತು. ಮಂಗಳ ಗ್ರಹದಲ್ಲಿರುವ ಮೀಥೇನ್ ಕುರಿತು ಅಧ್ಯಯನ ಮಾಡುವ ಸಲುವಾಗಿ ಅಲ್ಪಾವಧಿಗೆ ಅಭಿವೃದ್ಧಿ ಪಡಿಸಿದ್ದ ಮಾಮ್ ಇಂದಿಗೂ ಸಹ ಆರೋಗ್ಯವಾಗಿ ಕಾರ್ಯ ನಿರ್ವಹಿಸುತ್ತಿರುವುದು ಸ್ವತಃ ಇಸ್ರೋ ವಿಜ್ಞಾನಿಗಳಿಗೆ ಆಶ್ಚರ್ಯ ಮೂಡಿಸಿದೆ. ಈ ಯೋಜನೆಯ ವೆಚ್ಚ ಕೇವಲ ರೂ.450 ಕೋಟಿ ರೂಪಾಯಿ. ಅಮೇರಿಕಾದ ನಾಸಾ ಮಂಗಳಯಾನ ಅಧ್ಯಯನಕ್ಕಾಗಿ ಉಡಾವಣೆ ಮಾಡಿದ ಮಾವೆನ್ ಯೋಜನೆಗೆ 4500/– ಕೋಟಿ ರೂ. ಖರ್ಚು ಮಾಡಿತ್ತು. ಭಾರತ ವಿಜ್ಞಾನ & ತಂತ್ರಜ್ಞಾನ ಪ್ರಯೋಗದಲ್ಲಿ ಎಷ್ಟೋಂದು ಆರ್ಥಿಕ ಮಿತವ್ಯಯ ಸಾಧಿಸುತ್ತಿದೆ ಎಂಬುದಕ್ಕೆ ಇದು ಜೀವಂತ ಸಾಕ್ಷಿ.

**ನಾವಿಕ್:** 1999ರಲ್ಲಿ ಕಾರ್ಗಿಲ್ ಯುದ್ಧದ ಸಮಯದಲ್ಲಿ ಅಮೇರಿಕಾ ಭಾರತದ ಸೈನಿಕರಿಗೆ ದಿಕ್ಸೂಚಿ (ಜಿ.ಪಿ.ಎಸ್) ಬಳಕೆಗೆ ಸಹಕಾರ ನೀಡದ ಕಾರಣ ಇಸ್ರೋ ವಿಜ್ಞಾನಿಗಳು ತಮ್ಮದೇ ಆದ ದಿಕ್ಸೂಚಿ(ನ್ಯಾವಿಗೇಶನ್)ಗೆ ಸಂಬಂಧಿಸಿದ ಉಪಗ್ರಹ ಸರಣಿಯನ್ನು ಹೊಂದುವ ಕನಸು ಕಂಡರು. ಅದರ ಪ್ರತಿರೂಪವೇ IRNSS(INDIAN REGIONAL NAVIGATION SATTELITELITE SYSTEM). IRNSS-



downloaded from: www.kpscvaani.com

1 ಸರಣಿಯ ಮೊದಲ ಉಪಗ್ರಹ IRNSS-1A ಉಪಗ್ರಹವನ್ನು 1 ಜುಲೈ 2013ರಂದು ಮೊದಲ ಪ್ರಯತ್ನದಲ್ಲಿ ಕಕ್ಷೆಗೆ ಸೇರಿಸುವಲ್ಲಿ ಇಸ್ರೋ ಯಶಸ್ವಿಯಾಯಿತು. ನಂತರ ಕ್ರಮವಾಗಿ 6 ಉಪಗ್ರಹಗಳನ್ನು ಕಕ್ಷೆಗೆ ಸೇರಿಸುವಲ್ಲಿ ಯಶಸ್ವಿಯಾದ ಇಸ್ರೋ 8ನೇ ಉಪಗ್ರಹ IRNSS-1H ಉಡಾವಣೆ ಮಾಡುವಲ್ಲಿ ವಿಫಲವಾಯಿತು. 9ನೇ ಉಪಗ್ರಹ IRNSS-1I ಉಡಾವಣೆ ಯಶಸ್ವಿಯಾಗಿದೆ.

**ಅವತಾರ:** ಇಸ್ರೋದ ಮರುಬಳಕೆ ಉಡಾವಣಾ ವಾಹನದ ಕಲ್ಪನೆಯೇ "ಅವತಾರ" ಪ್ರಸ್ತುತ ಇಸ್ರೋ ಬಳಿ ಇರುವ ರಾಕೆಟ್ ತಂತ್ರಜ್ಞಾನ ಮರುಬಳಕೆಗೆ ಸಾಧ್ಯವಿಲ್ಲ. ಸಾಮಾನ್ಯವಾಗಿ ಒಮ್ಮೆ ಉಡಾಯಿಸಿದ ರಾಕೆಟ್‌ಗಳು ಮತ್ತೆ ವಾಪಾಸ್ ಬರುವುದಿಲ್ಲ, ಇದರಿಂದ ದುಬಾರಿ ವೆಚ್ಚವಾಗುತ್ತಿದೆ ಇದನ್ನು ತಡೆಯುವ ಸಲುವಾಗಿ ಅವತಾರ್ ಯೋಜನೆಗೆ ಇಸ್ರೋ ಕೈಹಾಕಿದೆ. ಇದರ ಮೊದಲ ಪರೀಕ್ಷೆಯನ್ನು ಮೇ 23, 2016ರಲ್ಲಿ ಯಶಸ್ವಿಯಾಗಿ ನಡೆಸಿದ್ದು ಈ ಯೋಜನೆ 2025ರಲ್ಲಿ ಪೂರ್ಣಗೊಳ್ಳಲಿದೆ.

**ಇಸ್ರೋದ ಬಾಹುಬಲಿ:** ಇಸ್ರೋದ ಸಾಧನೆಯ ರೆಕ್ಕೆಗೆ ಮತ್ತೊಂದು ಪುಕ್ಕವೆಂದರೆ ಅದು GSLV MK-III. ಇದಕ್ಕೂ ಮುನ್ನ 2.2ಟನ್ ಅಧಿಕ ತೂಕದ ಉಪಗ್ರಹಗಳ ಉಡಾವಣೆಗೆ ಇಸ್ರೋ ಬೇರೆ ದೇಶವನ್ನು ಅವಲಂಬಿಸಿತ್ತು. ಬೇರೆ ದೇಶದ ಅವಲಂಬನೆಯನ್ನು ತಪ್ಪಿಸಲು ಇಸ್ರೋ ದೇಶೀಯವಾಗಿ ಅಭಿವೃದ್ಧಿ ಪಡಿಸಿರುವ 4 ಟನ್‌ಗಿಂತಲೂ ಅಧಿಕ ತೂಕದ ಉಪಗ್ರಹಗಳನ್ನು ಭೂಸ್ಥಿರ ಕಕ್ಷೆಗೆ ಸೇರಿಸುವ ಸಾಮರ್ಥ್ಯ ಹೊಂದಿರುವ 3 ಹಂತದ ಕ್ರಯೋಜೆನಿಕ್ ಇಂಜಿನ್ ಹೊಂದಿರುವ ರಾಕೆಟ್ ಈ GSLV MK-III. ಇದು ಸುಮಾರು 640 ಟನ್ ತೂಕವಿರುವ ಕಾರಣ ಇದನ್ನು ಇಸ್ರೋದ ಬಾಹುಬಲಿ ಎಂದು ಕರೆಯುತ್ತಾರೆ. ಇದರ ಅಭಿವೃದ್ಧಿಯು ಬಾಹ್ಯಾಕಾಶಕ್ಕೆ ಮಾನವನನ್ನು ಕಳುಹಿಸುವ ಇಸ್ರೋದ ಕನಸಿನ ಯೋಜನೆ ಮತ್ತಷ್ಟು ಸುಲಭವಾಯಿತು.

**ಒಂದೇ ರಾಕೆಟ್‌ನಿಂದ 104 ಉಪಗ್ರಹಗಳ ಉಡಾವಣೆ :** 2017, ಫೆ–15 ಇಸ್ರೋ ಆಂಧ್ರ ಪ್ರದೇಶದ ಶ್ರೀಹರಿಕೋಟಾದಲ್ಲಿರುವ ಸತೀಶ್ ಧವನ್ ಉಪಗ್ರಹ ಉಡಾವಣಾ ಕೇಂದ್ರದಿಂದ PSLV-C37 ಉಡಾವಣಾ ವಾಹನದ ಮೂಲಕ ಏಕಕಾಲದಲ್ಲಿ 104 ಉಪಗ್ರಹಗಳನ್ನು ಯಶಸ್ವಿಯಾಗಿ ಕಕ್ಷೆಗೆ ಸೇರಿಸಿತು. ಆ ಮೂಲಕ ಜಗತ್ತಿನ ಯಾವ ದೇಶವೂ ಸಹ ಸಾಧಿಸದ ಸರ್ವಕಾಲಿಕ ದಾಖಲೆ ನಿರ್ಮಿಸಿತು. ಉಡಾವಣೆ ಮಾಡಿದ 104 ಉಪಗ್ರಹಗಳಲ್ಲಿ 101 ಉಪಗ್ರಹಗಳು ವಿದೇಶಿ ಉಪಗ್ರಹಗಳಾಗಿದ್ದು, ಇದು ಉಪಗ್ರಹ ಉಡಾವಣೆಗಾಗಿ ಜಗತ್ತಿನ ಅತ್ಯಂತ ವಿಶ್ವಾಸಾರ್ಹ ಸಂಸ್ಥೆಯೆಂಬುದನ್ನು ಸಾಬೀತು ಪಡಿಸಿದೆ.

**ದಕ್ಷಿಣ SAARC ಉಪಗ್ರಹ(ಜಿ–ಸ್ಯಾಟ್ 9):** SAARC ಸದಸ್ಯ ರಾಷ್ಟ್ರಗಳಿಗೆ ಉಡುಗೊರೆ ರೂಪದಲ್ಲಿ ನೀಡಲು ಅಭಿವೃದ್ಧಿ ಪಡಿಸಿರುವ ಸೌತ್‌ಏಷ್ಯಾನ್ ಉಪಗ್ರಹವನ್ನು ಇಸ್ರೋ ಯಶಸ್ವಿಯಾಗಿ ಕಕ್ಷೆಗೆ ಸೇರಿಸಿದ್ದು, ಇದನ್ನು ದೂರ ಸಂವಹನ, ದೂರ ಶಿಕ್ಷಣ, ಟೆಲಿ ಮೆಡಿಸಿನ್ ಹಾಗೂ ವಿಪತ್ತು ನಿರ್ವಹಣಾ ನೆರವು, ಭೂಕಂಪ, ಪ್ರವಾಹ ಮುಂತಾದ ಪ್ರಾಕೃತಿಕ ವಿಕೋಪಗಳ ಸಂದರ್ಭಗಳಲ್ಲಿ ಪರಸ್ಪರ ಮಾಹಿತಿ ಮತ್ತು ತಂತ್ರಜ್ಞಾನದ ಸಹಾಯಕ್ಕಾಗಿ ಉಪಯೋಗಿಸಬಹುದು. ಪಾಕಿಸ್ಥಾನ ಹೊರತು ಪಡಿಸಿ ಉಳಿದ ಸಾರ್ಕ್ ರಾಷ್ಟ್ರಗಳು ಇದರ ಸದುಪಯೋಗವನ್ನು ಪಡೆದುಕೊಳ್ಳಲಿವೆ. ಭಾರತದ ದೂರ ಸಂಪರ್ಕ ಕ್ಷೇತ್ರದಲ್ಲಿ ಕ್ರಾಂತಿಯನ್ನುಂಟುಮಾಡಿದ ಇನ್ಸಾಟ್ ಸರಣಿಯ ಉಪಗ್ರಹಗಳು–ಐ.ಆರ್.ಎಸ್ ಸರಣಿ, ರಿಸ್ಯಾಟ್, ಕಾರ್ಟೋಸ್ಯಾಟ್, ಎಜುಸ್ಯಾಟ್ ಈ ರೀತಿಯ ಹಲವು ಯಶಸ್ಸುಗಳು ಇಸ್ರೋ ಖಾತೆಯಲ್ಲಿವೆ.

**ಇಸ್ರೋದ ಮುಂದಿನ ಕೆಲವು ಯೋಜನೆಗಳು :**



downloaded from: www.kpscvaani.com

- ಚಂದ್ರಯಾನ–2
- ಸೂರ್ಯನ ಅಧ್ಯಯನಕ್ಕೆ ಮಿಶನ್ ಆದಿತ್ಯ
- ನಾಸಾದ ಜೊತೆ ಸೇರಿ ನಿಸಾರ್
- ಮಾನವ ರಹಿತ ಬಾಹ್ಯಾಕಾಶ ಯಾನ
- ಮರುಬಳಕೆ ವಾಹನ ಅಭಿವೃದ್ಧಿ
- ಸ್ಕ್ರಾಮ್‌ಜೆಟ್‌ಗಳ ಬಳಕೆ

**ಉಪಸಂಹಾರ:** ಬಾಹ್ಯಾಕಾಶ ಸಂಶೋಧನೆ ಮಾನವ ಕುಲದ ಸೇವೆಗಾಗಿ ಎಂಬ ಧ್ಯೇಯದೊಂದಿಗೆ ಪ್ರಾರಂಭವಾದ ಈ ಸಂಸ್ಥೆ ದೇಶದ ಸರ್ವತೋಮುಖ ಅಭಿವೃದ್ಧಿಯ ಭಾಗವಾದ ಶೈಕ್ಷಣಿಕ, ಆರ್ಥಿಕ, ಸಾಮಾಜಿಕ, ರಾಜಕೀಯ, ರಕ್ಷಣಾತ್ಮಕ ಕೇತ್ರಗಳ ಅಭಿವೃದ್ಧಿಗೆ ಸಾಕಷ್ಟು ನೆರವಾಗಿದೆ. ಸದಾ ರಾಜಕೀಯ ಮತ್ತು ಕಚ್ಚಾಟದಿಂದ ದೂರವಿದ್ದ ಇಸ್ರೋ, ಜಗತ್ತಿನ ಇತರ ದೇಶಗಳು ಬಾಹ್ಯಾಕಾಶ ಕ್ಷೇತ್ರದಲ್ಲಿ ತಮ್ಮ ಕಡೆ ಮುಖಮಾಡುವಂತೆ ಮಾಡಿ ವಿಜ್ಞಾನಿಗಳ ಗೌರವಕ್ಕೆ ಪಾತ್ರವಾಗಿದೆ. ಇಸ್ರೋದ ಮುಂದಿನ ಎಲ್ಲಾ ಯೋಜನೆಗಳು ಯಶಸ್ಸು ಗಳಿಸಲಿ.

## ಪ್ರಬಂಧ 4 : ಚುನಾವಣಾ ಸುಧಾರಣೆಗಳು

**ಚುನಾವಣೆಯೆಂಬುವುದು ಕೇವಲ ನಾಯಕನ ಆಯ್ಕೆಯನ್ನು ಸೂಚಿಸುವಂತಾಗಬಾರದು, ಬದಲಿಗೆ ಹೊಸ ಆಶಯ ಮತ್ತು ತಾಜಾ ಭರವಸೆಗಳೊಂದಿಗೆ ದೇಶದ ಅಭಿವೃದ್ಧಿಗೆ ದಿಕ್ಸೂಚಿಯಾಗಬೇಕು.**

- ಪ್ರೊ; ಎಂ.ಆರ್.ಎನ್

**"ಜನರಿಂದ ಜನರಿಗಾಗಿ ಜನರಿಗೋಸ್ಕರ ನಡೆಯುವುದೇ ಪ್ರಜಾಪ್ರಭುತ್ವ".**

- ಅಬ್ರಾಹಂ ಲಿಂಕನ್

ಸುಮಾರು ಎರಡು ಶತಮಾನಗಳಿಗೂ ಅಧಿಕ ಕಾಲ ಬ್ರಿಟೀಷರ ದಾಸ್ಯದ ಸಂಕೋಲೆಯಲ್ಲಿ ಬಂಧಿಯಾಗಿದ್ದ ಭಾರತ ಮಾತೆ, ಸಾವಿರಾರು ವೀರ ಪುತ್ರರ ತ್ಯಾಗ, ಬಲಿಧಾನ ಮತ್ತು ಹೋರಾಟದ ಫಲವಾಗಿ ಬಂಧಮುಕ್ತವಾದಳು, ಬಂಧನದಿಂದ ವಿಮುಕ್ತಿ ಪಡೆದ ಭಾರತ ಮಾತೆಯನ್ನು ಕೈ ಹಿಡಿದು ಮುನ್ನೆಡಸಬೇಕಾದ ನಾಯಕ/ಕಿ ಯಾವುದೋ ಒಂದು ಕುಟುಂಬಕ್ಕೆ ಸೀಮಿತವಾಗಿರದೆ, ಮತ್ತು ಆಯ್ಕೆ ಕೇವಲ ಕೆಲವರಿಂದಾಗಿರದೆ, ಹಲವರಿಂದಾಗಲಿ ಎನ್ನುವ ಆಶಯದೊಂದಿಗೆ ಒಪ್ಪಿಕೊಂಡ ವ್ಯವಸ್ಥೆಯೇ ಪ್ರಜಾಪ್ರಭುತ್ವ, ಪ್ರಜಾ ಪ್ರಭುತ್ವದ ತಳಹದಿಯೇ ಚುನಾವಣೆ.

ಚುನಾವಣೆ ಎಂಬುದು ಒಬ್ಬ ಜವಾಬ್ದಾರಿಯುತ ವ್ಯಕ್ತಿ ಅಥವಾ ಒಂದು ಗುಂಪನ್ನು ದೇಶದ ಆಡಳಿತವನ್ನು ನಡೆಸಲು ಆಯ್ಕೆಮಾಡುವ ಪ್ರಕ್ರಿಯೆ. ರಾಜಕೀಯ ವ್ಯವಸ್ಥೆಯನ್ನು ನಿಯಂತ್ರಿಸಲು ಪ್ರಜೆಗಳ


downloaded from: www.kpscvaani.com

ಕೈಗೆ ಸಂವಿಧಾನ ನೀಡಿರುವ ಶಕ್ತಿಶಾಲಿ ಅಸ್ತ್ರ. ಮುಕ್ತ & ನಿರ್ಭೀತ ಚುನಾವಣೆಗಳು ಆರೋಗ್ಯವಂತ ಪ್ರಜಾಪ್ರಭುತ್ವದ ಲಕ್ಷಣ. "ನಿನ್ನೆಯ ಮೃಷ್ಟಾನ್ನ ಇಂದು ತಂಗಳು" ಎನ್ನುವ ಹಾಗೆ ಹಿಂದಿನ ನಿಯಮಗಳು ಇಂದು ನ್ಯೂನತೆಯಿಂದ ಕೂಡಿರುತ್ತವೆ. ಹೀಗೆ ಕಾಲಕ್ಕನುಗುಣವಾಗಿ ಇರುವ ನ್ಯೂನತೆಗಳನ್ನು ಸರಿಪಡಿಸಿಕೊಂಡು ಚುನಾವಣಾ ಪ್ರಕ್ರಿಯೆಯಲ್ಲಿ ಸುಧಾರಣೆಯನ್ನು ತಂದು ಪ್ರಜಾಪ್ರಭುತ್ವದ ಪ್ರತಿಷ್ಠೆ ಹಾಗೂ ಮೌಲ್ಯಗಳನ್ನು ಹೆಚ್ಚಿಸಬೇಕಾಗುತ್ತದೆ.

**ಸಂವಿಧಾನದಲ್ಲಿ ಚುನಾವಣೆಯ ಉಲ್ಲೇಖ –**

ಸಂವಿಧಾನದ 15ನೇ ಭಾಗದಲ್ಲಿರುವ 324 ರಿಂದ 329ರ ವರೆಗಿನ ವಿಧಿಗಳು ಚುನಾವಣಾ ಆಯೋಗ ಹಾಗೂ ಚುನಾವಣೆಗಳ ನಿಯಮಗಳನ್ನು ಒಳಗೊಂಡಿವೆ.

ಭಾರತದಲ್ಲಿ ಪ್ರಜಾಪ್ರಭುತ್ವದಲ್ಲಿ ಪ್ರಭುಗಳ ಆಯ್ಕೆಯ ಪ್ರಕ್ರಿಯೆಯಾದ ಚುನಾವಣೆಯನ್ನು ಮುಕ್ತ, ನಿರ್ಭೀತ ಮತ್ತು ಪಾರದರ್ಶಕವಾಗಿ ನಡೆಸಲು ಒಂದು ಸ್ವಾಯತ್ತ ಮತ್ತು ಸಂವಿಧಾನಿಕ ಕಾಯ್ದೆ ಅಸ್ತಿತ್ವದ ಬಗ್ಗೆ ಭಾರತೀಯ ಸಂವಿಧಾನದ ವಿಧಿ 324ರಲ್ಲಿ ಉಲ್ಲೇಖಿಸಲಾಗಿದ್ದು, ಅದರ ಅನ್ವಯ ಜನವರಿ 25-1950 ರಂದು ಭಾರತದ ಚುನಾವಣಾ ಆಯೋಗವು ರಚನೆಯಾಯಿತು, ಆಯೋಗವು ಸಂಸತ್ತು ಅಂಗೀಕರಿಸಿದ ಕಾನೂನಿಗೆ ಅನುಗುಣವಾಗಿ ಮುಖ್ಯ ಹಾಗೂ ಇತರ ಚುನಾವಣಾಧಿಕಾರಿಗಳು (1+2=3) 6 ವರ್ಷ ಅವಧಿಗೆ ನೇಮಕವಾಗುತ್ತಾರೆ ಅಥವಾ 65 ವರ್ಷಕ್ಕೆ ನಿವೃತ್ತಿಯಾಗುತ್ತಾರೆ.

**ಭಾರತದಲ್ಲಿ ಚುನಾವಣೆ ಸಂಬಂಧ ಅನುಮೋದಿಸಿರುವ ಪ್ರಮುಖ ಕಾಯ್ದೆಗಳು :**

- 1950ರ ಜನಪ್ರತಿನಿಧಿ ಕಾಯ್ದೆ :- ಈ ಕಾಯ್ದೆಯು ಮತದಾರರ ಅರ್ಹತೆಗಳು, ಮತದಾರರ ಪಟ್ಟಿಯ ಸಿದ್ಧತೆ, ಕ್ಷೇತ್ರಗಳ ಪುನರ್ವಿಂಗಡಣೆ , ಸಂಸತ್ತು & ರಾಜ್ಯ ಶಾಸಕಾಂಗಗಳಿಗೆ ಸ್ಥಾನಗಳ ಹಂಚಿಕೆ ಮುಂತಾದ ವಿಷಯಗಳಿಗೆ ಸಂಬಂಧಿಸಿದಂತೆ ವಿವರಣೆಗಳನ್ನು ಒಳಗೊಂಡಿದೆ.
- 1951ರ ಜನಪ್ರತಿನಿಧಿ ಕಾಯ್ದೆ :- ಈ ಕಾಯ್ದೆಯು ಚುನಾವಣೆಗಳನ್ನು ನಡೆಸುವ ಬಗ್ಗೆ, ಚುನಾವಣೆಗಳನ್ನು ನಡೆಸುವ ಆಡಳಿತ ಯಂತ್ರ, ಚುನಾವಣಾ ಅಪರಾಧಗಳಿಗೆ ಶಿಕ್ಷೆ, ಚುನಾವಣಾ ವಿವಾದಗಳು, ಉಪ ಚುನಾವಣೆಗಳು ಹಾಗೂ ರಾಜಕೀಯ ಪಕ್ಷಗಳ ನೊಂದಣಿ ಮುಂತಾದವುಗಳಿಗೆ ಸಂಬಂಧಿಸಿದ ನಿಯಮಗಳನ್ನು ಒಳಗೊಂಡಿದೆ.

**ಚುನಾವಣೆ ಸುಧಾರಣೆಗೆ ಸಂಬಂಧಿಸಿದಂತೆ ಸಮಿತಿಗಳು/ಆಯೋಗಗಳು :**

1. ವಿ.ಎಮ್ ತಾರ್ಕುಂಡೆ ಸಮಿತಿ( 1974-75)
2. ದಿನೇಶ್ ಗೋಸ್ವಾಮಿ ಸಮಿತಿ (1990)
3. ವೋಹ್ರ ಸಮಿತಿ (1993)
4. ಇಂದ್ರಜಿತ್ ಗುಪ್ತಾ ಸಮಿತಿ (1998)
5. ಕಾನೂನು ಆಯೋಗ ಸಮಿತಿ( 1999)
6. ಸಂವಿಧಾನ ಪ್ರಗತಿ ಪರಿಶೀಲನಾ ಸಮಿತಿಯ ವರದಿ=2000-2002 (ಎಮ್.ಎನ್ ವೆಂಕಟಾಚಲಯ್ಯ)


downloaded from: www.kpscvaani.com

7. ಭಾರತ ಚುನಾವಣಾ ಆಯೋಗದ ವರದಿ (2004)
8. ಎರಡನೇ ಆಡಳಿತ ಸುಧಾರಣಾ ಆಯೋಗ ವರದಿ–2007
9. ನ್ಯಾ: ಕುಲದೀಪ್ ಸಿಂಗ್ ಸಮಿತಿ
10. IAR ಕಮಿಟಿ 2010

ಹೀಗೆ ಕಾಲ ಕಾಲಕ್ಕೆ ತಜ್ಞರನ್ನೊಳಗೊಂಡ ಆಯೋಗಗಳು ಮತ್ತು ಸಮಿತಿಗಳು ಮಾಡಿರುವ ಶಿಫಾರಸ್ಸುಗಳನ್ನು ಅಳವಡಿಸಿಕೊಂಡು 1951ರ ಪ್ರಜಾಪ್ರತಿನಿಧಿ ಕಾಯ್ದೆಗೆ ತಿದ್ದುಪಡಿ ತಂದು ಚುನಾವಣಾ ಪ್ರಕ್ರಿಯೆಯಲ್ಲಿ ಸಾಕಷ್ಟು ಸುಧಾರಣೆಗಳನ್ನು ತರಲಾಗಿದೆ.

**ಮಹತ್ವದ ಸುಧಾರಣೆಗಳು :**

- **ಮತದಾನಕ್ಕೆ ಕನಿಷ್ಠ ವಯಸ್ಸಿನ ಮಿತಿಯಲ್ಲಿ ಇಳಿಕೆ :** ಮತದಾನ ಮಾಡಲು ಈ ಹಿಂದೆ ಇದ್ದ ಕನಿಷ್ಠ ವಯೋಮಾನವನ್ನು 21ರಿಂದ 18ಕ್ಕೆ ಇಳಿಸಲಾಯಿತು.
- **ಮತದಾರರ ಗುರುತಿನ ಚೀಟಿಯ ಬಳಕೆ :** ಅನಧಿಕೃತ ಮತ್ತು ಅಕ್ರಮ ಮತದಾನ ತಡೆಯಲು ಭಾವಚಿತ್ರವಿರುವ ಗುರುತಿನ ಕಾರ್ಡ್ (ELECTRORAL PHOTO IDENTITY CARD) ಪರಿಚಯಿಸಲಾಯಿತು. ಅದು ಈಗ ಎಲ್ಲ ನಾಗರಿಕರ ಅಸ್ತಿತ್ವದ ಕುರುಹಾಗಿದೆ. ಮತದಾರರ ಗುರುತಿನ ಚೀಟಿಗಳನ್ನು 1993ರಲ್ಲಿ ಟಿ.ಎನ್.ಶೇಷನ್‌ರವರು ಚುನಾವಣಾ ಆಯೋಗದ ಮುಖ್ಯಸ್ಥರಾಗಿದ್ದಾಗ ಜಾರಿಗೆ ತರಲಾಯಿತು.
- **ಇ.ವಿ.ಎಂ.ಗಳ ಬಳಕೆ:** ಮತದಾನದ ಪ್ರಕ್ರಿಯೆಯಲ್ಲಿ ಬ್ಯಾಲೆಟ್ ಪೇಪರ್ ತನ್ನ ಅಸ್ತಿತ್ವವನ್ನು ಕಳೆದು ಕೊಂಡಿದ್ದು ಅದರ ಜಾಗದಲ್ಲಿ ವಿದ್ಯುನ್ಮಾನ ಮತ ಯಂತ್ರ ಬಂದು ಕುಳಿತಿದೆ. ಇವಿಎಮ್‌ಗಳನ್ನು 1998 ರಲ್ಲಿ ಪ್ರಥಮ ಬಾರಿಗೆ ಬಳಸಲಾಯಿತು
- ಅಭ್ಯರ್ಥಿಗಳ ಪೂರ್ವ ಚರಿತ್ರೆಯನ್ನು ಬಹಿರಂಗಗೊಳಿಸಲು ಕಡ್ಡಾಯ ಆದೇಶ
- ಮತ ತಿರಸ್ಕಾರ ಹಕ್ಕು ಜಾರಿಗೆ (ನೋಟಾ)
- NOTA-NONE OF THE ABOVE-2013 ರಿಂದ ನಿರಾಕರಣೆಯ ಮತ ಎಂಬುವುದನ್ನು ಪರಿಚಯಿಸಲಾಯಿತು.
- ಅನಿವಾಸಿ ಭಾರತೀಯರಿಗೆ ಮತ ಹಾಕಲು ಅನುಮತಿ 2011–12ರಿಂದ ಜಾರಿಗೆ
- **ವಿವಿಪ್ಯಾಟ್ ಯಂತ್ರಗಳ ಪರಿಚಯ:** ಇ.ವಿ.ಎಂ.ಗಳ ಕಾರ್ಯವೈಖರಿಯ ಮತ್ತು ಅದರ ಸಾಚಾತನದ ಮೇಲೆ ರಾಜಕೀಯ ಮುಖಂಡರು ಸಂಶಯ ವ್ಯಕ್ತಪಡಿಸಿದಾಗ ಅದನ್ನು ಹೋಗಲಾಡಿಸುವ ಸಲುವಾಗಿ ಚುನಾವಣಾ ಆಯೋಗವು ಚಲಾಯಿಸಿದ ಮತ ಖಾತರಿಪಡಿಸಿಕೊಳ್ಳಲು ವಿವಿಪ್ಯಾಟ್ ಯಂತ್ರಗಳನ್ನು ಹೊಸದಾಗಿ ಪರಿಚಯಿಸಲಾಗಿದೆ.

**ಚುನಾವಣಾ ಪ್ರಕ್ರಿಯೆಯಲ್ಲಿ ಪ್ರಸ್ತುತ ಇರುವ ನ್ಯೂನ್ಯತೆಗಳು**


downloaded from: www.kpscvaani.com

ಚುನಾವಣಾ ಆಯೋಗ ಎಷ್ಟೇ ಮಹತ್ವವಾದ ಸುಧಾರಣೆಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತಂದರು ಕೂಡಾ ಕೆಲವು ನ್ಯೂನ್ಯತೆಗಳು ಎದ್ದು ಕಾಣುತ್ತವೆ.

ಅವುಗಳಲ್ಲಿ ಕೆಲವು...

- ಕ್ರಿಮಿನಲ್ ಹಿನ್ನೆಲೆಯ ಮತ್ತು ಸಮಾಜ ಬಾಹೀರ ಕೃತ್ಯಗಳಲ್ಲಿ ಭಾಗಿಯಾದ ವ್ಯಕ್ತಿಗಳ ರಾಜಕೀಯ ಪ್ರವೇಶ
- ಮತದಾನ ಆಗುತ್ತಿಲ್ಲ ಬದಲಿಗೆ ಮತ ಮಾರಾಟವಾಗುತ್ತಿದೆ
- ಚುನಾವಣೆಯ ಸಂದರ್ಭದಲ್ಲಿ ಸರ್ಕಾರಿ ನೌಕರರ ದುರ್ಬಳಕೆ.
- ಕಡಿಮೆ ಭದ್ರತಾ ಠೇವಣಿ
- ಒಬ್ಬ ಅಭ್ಯರ್ಥಿಯು ಒಂದಕ್ಕಿಂತ ಹೆಚ್ಚು ಕ್ಷೇತ್ರಗಳಿಂದ ಸ್ಪರ್ಧಿಸುವುದು.
- ರಾಜಕೀಯ ಪಕ್ಷಗಳ ದೇಣಿಗೆ ಸಂಗ್ರಹದಲ್ಲಿ ಪಾರದರ್ಶಕತೆ ಇಲ್ಲದೆ ಇರುವುದು.
- ವಿನಾಕಾರಣ ರಾಜೀನಾಮೆ ನೀಡಿ ಮರು ಚುನಾವಣೆಗೆ ಕಾರಣರಾಗುವವರಿಗೆ ಯಾವುದೇ ರೀತಿಯ ಶಿಕ್ಷೆ ಇಲ್ಲದಿರುವುದು.
- ಚುನಾವಣಾ ಪ್ರಚಾರದ ಅವಧಿಯು ಜಾಸ್ತಿ ಇದೆ.
- ಮತ ಏಣಿಕೆಯಲ್ಲಿ ಮತಗಟ್ಟೆವಾರು ಪಡೆದ ಮತಗಳ ವಿವರ ನೀಡುವುದು

**ಚುನಾವಣೆ ಸುಧಾರಣೆಗೆ ಶಿಫಾರಸ್ಸುಗಳು:**

- ಅಪರಾಧ ಹಿನ್ನಲೆಯ ವ್ಯಕ್ತಿಯನ್ನು ಸಂಪೂರ್ಣವಾಗಿ ಚುನಾವಣೆಗೆ ಸ್ಪರ್ಧಿಸದಂತೆ ನಿರ್ಬಂಧಿಸುವುದು.
- ರಾಜಕೀಯ ಪಕ್ಷಗಳ ದೇಣಿಗೆ ಸಂಗ್ರಹದಲ್ಲಿ ಪಾರದರ್ಶಕತೆ ಕಾಪಾಡಲು ಇತ್ತೀಚೆಗೆ ಕೇಂದ್ರ ಸರ್ಕಾರ ಪರಿಚಯಿಸುರುವ ಚುನಾವಣಾ ಬಾಂಡ್ ವ್ಯವಸ್ಥೆಯಲ್ಲಿ ಸ್ವಲ್ಪ ಬದಲಾವಣೆ ಮಾಡಿ, ನಗದು ರೂಪದ ದೇಣಿಗೆಯನ್ನು ಸಂಪೂರ್ಣ ನಿಷೇಧಿಸಬೇಕು.
- ಸೂಚಕರ ಸಂಖ್ಯೆಯಲ್ಲಿ ಹೆಚ್ಚಳ: ಸ್ಪರ್ಧಿಸಲು ಬಯಸುವ ಅಭ್ಯರ್ಥಿಗಳ ನಾಮಪತ್ರದಲ್ಲಿ ಸಹಿ ಮಾಡಬೇಕಾದ ಸೂಚಕರ ಸಂಖ್ಯೆಯನ್ನು ಸಂಬಂಧಿಸಿದ ಕ್ಷೇತ್ರದ ಶೇ.10ರಷ್ಟು ಮತದಾರರಿಗೆ ವಿಸ್ತರಿಸಬೇಕು.
- ಚುನಾವಣೆ ಘೋಷಣೆ ಮತ್ತು ಚುನಾವಣೆ ದಿನದ ನಡುವಿನ ಅಂತರವನ್ನು ಕಡಿಮೆ ಮಾಡಬೇಕು ಮತ್ತು ಅಷ್ಟು ದಿನ ಮಧ್ಯ ಮಾರಾಟವನ್ನು ಸಂಪೂರ್ಣವಾಗಿ ನಿಷೇಧಿಸಬೇಕು.
- ಚುನಾವಣೆ ಸಂದರ್ಭದಲ್ಲಿ ಮಾಧ್ಯಮಗಳ ಮೇಲೆ ಹದ್ದಿನ ಕಣ್ಣಿಡಬೇಕು, ಸತ್ಯವನ್ನು ಮರೆಮಾಚಿ ಹಣಕ್ಕಾಗಿ ಸುದ್ದಿಯನ್ನು ತಿರುಚಿ ಪ್ರಸಾರಮಾಡುವುದನ್ನು ಮತ್ತು ಸುಳ್ಳು ಸಮೀಕ್ಷೆಯನ್ನು ನಿಷೇಧಿಸಬೇಕು



downloaded from: www.kpscvaani.com

- ಆನ್‌ಲೈನ್ ಮೂಲಕ ಮತದಾನ ಮಾಡಲು ಅವಕಾಶ ಮಾಡಿಕೊಟ್ಟಲ್ಲಿ ಶೇಕಡವಾರು ಮತದಾನದಲ್ಲಿ ಹೆಚ್ಚಳವಾಗುತ್ತದೆ.
- ಲೋಕಸಭೆ, ರಾಜ್ಯಗಳ ವಿಧಾನ ಸಭೆ ಮತ್ತು ಎಲ್ಲಾ ಸ್ಥಳೀಯ ಸಂಸ್ಥೆಗಳಿಗೆ ಏಕಕಾಲದಲ್ಲಿ ಚುನಾವಣೆ ನಡೆಸಿ ಆ ಮೂಲಕ ಹಣ ಪೋಲಾಗುವುದನ್ನು ತಡೆಯಬಹುದು.
- ಮತಗಟ್ಟೆವಾರು ಏಣಿಕೆ ಮಾಡುವ ಬದಲು 10–15 ಮತ ಯಂತ್ರಗಳನ್ನು ಒಟ್ಟಿಗೆ ಸಂಪರ್ಕಿಸಿ ಒಟ್ಟು ಸಮೂಹದ ಮತಗಳಿಕೆಯ ವಿವರ ನೀಡಬೇಕು.
- ಅಭ್ಯರ್ಥಿಯ ಸ್ಥಾನಕ್ಕೆ ನೇಮಕವಾಗಲು ಕನಿಷ್ಠ ವಿದ್ಯಾರ್ಹತೆಯನ್ನು ನಿಗದಿ ಪಡಿಸುವುದು.
- ತಂತ್ರಜ್ಞಾನದ ಸಹಾಯದಿಂದ ಮತದಾನ ಮಾಡುವ ಹೊಸ ಉಪಕರಣವನ್ನು ಸೃಷ್ಟಿಸಬೇಕು.
- ಮತದಾರರಿಗೆ ಹಂಚುವ ಸೀರೆ, ಹೆಂಡ, ಸಾರಾಯಿ ಇತ್ಯಾದಿಗಳನ್ನು ಕಟ್ಟುನಿಟ್ಟಾಗಿ ನಿರ್ಬಂಧಿಸಬೇಕು.

**ಉಪಸಂಹಾರ** :ಜಗತ್ತಿನಲ್ಲಿಯೇ ದೊಡ್ಡ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಹೊಂದಿರುವ ನಾವು ಚುನಾವಣೆಯಲ್ಲಿ ಪಾಲ್ಗೊಳ್ಳುವಿಕೆಯ ಸರಾಸರಿಯಲ್ಲಿ ನಾವು ನಿರೀಕ್ಷಿತ ಮಟ್ಟದಲ್ಲಿಲ್ಲ ಎನ್ನುವುದು ಬೇಸರದ ಸಂಗತಿ. ಭಾರತಕ್ಕೆ ಚುನಾವಣಾ ವಿಧಾನದಲ್ಲಿ ಬದಲಾವಣೆಯು ಕಾಲ ಚಕ್ರದೊಂದಿಗೆ ಆಗುವುದು ಅನಿವಾರ್ಯ. ಚುನಾವಣಾ ಪ್ರಕ್ರಿಯೆಯಲ್ಲಿ ಮತ್ತಷ್ಟು ಬದಲಾವಣೆಗಳನ್ನು ತಂದು ಶೇ.100 ರಷ್ಟು ಮತದಾನ ನಡೆಯುವಂತಾದರೆ ಅದು ನಿಜವಾದ ಪ್ರಜಾಪ್ರಭುತ್ವ ಮತ್ತು ನಿಜವಾದ ಚುನಾವಣಾ ಸುಧಾರಣೆಯ ಎಂದೆನಿಸಿಕೊಳ್ಳುತ್ತದೆ.

## ಪ್ರಬಂಧ 5 : ಏಕರೂಪ ನಾಗರಿಕ ಸಂಹಿತೆ

**"ಕಾನೂನಿನ ಮುಂದೆ ಎಲ್ಲರೂ ಸಮಾನರು**

**ಸಮಾನ ಕಾನೂನಿನ ಸಂರಕ್ಷಣೆ ಎಲ್ಲರಿಗೂ"**

- **ಸಂವಿಧಾನ ರಚನಾ ಸಭೆಯಲ್ಲಿ ಅಂಬೇಡ್ಕರ್‌ರವರ ನುಡಿಗಳು.**

ಸಾವಿರಾರು ವರ್ಷಗಳ ನೂರಾರು ಸ್ವದೇಶಿ ಅಸಮರ್ಥ ರಾಜರ ದುರಾಡಳಿತದಿಂದ ಮತ್ತು ನಂತರದ ವಿದೇಶಿ ಆಕ್ರಮಣಕಾರ ಅರಾಜಕತೆಯಿಂದ ನೊಂದು ಬೆಂದಿದ್ದ ಈ ನಮ್ಮ ದೇಶ, ನಂತರ ಬ್ರಿಟೀಷರ ದಾಸ್ಯದ ಸಂಕೋಲೆಯಲ್ಲಿ ಬಂಧಿಯಾಗಿತ್ತು. ಆಂಗ್ಲರ ಕಪಿಮುಷ್ಠಿಯಲ್ಲಿ ನಲುಗಿಹೋಗಿದ್ದ ನಮ್ಮ ದೇಶವನ್ನು ಅಸಂಖ್ಯಾತ ವೀರ ಪುತ್ರರ ಹೋರಾಟದ ಫಲವಾಗಿ ಆಗಸ್ಟ್ 15, 1947ರಂದು ಬಂಧಮುಕ್ತಗೊಳಿಸಲಾಯಿತು. ನಮ್ಮನ್ನು ನಾವು ಆಳಲು ಪ್ರಾರಂಭಿಸಿದಾಗ ನಮ್ಮ ಆಡಳಿತ ರೂಪುರೇಶೆಗಳನ್ನು ನಿರ್ಧರಿಸುವ ಕಾನೂನುಗಳ ಸಮೂಹ "ಸಂವಿಧಾನ" ರಚಿಸಬೇಕಾದ ಅನಿವಾರ್ಯತೆ ಉಂಟಾಯಿತು. ಈ ಸಂದರ್ಭದಲ್ಲಿ ದೇಶದಲ್ಲಿದ್ದ ಹಲವು ಜಾತಿ, ಧರ್ಮ, ಭಾಷೆ, ಆಚಾರ, ವಿಚಾರ , ಸಂಸ್ಕೃತಿಗಳನ್ನು ಗಮನದಲ್ಲಿಟ್ಟುಕೊಂಡು ಯಾರ ಭಾವನೆಗೆ ಧಕ್ಕೆಯಾಗದಂತ ಸಂವಿಧಾನವನ್ನು ರಚಿಸಲಾಯಿತು. ಅದನ್ನು ಭಾರತದಲ್ಲಿ 1950 ಜನವರಿ 26 ರಂದು ಅಂಗೀಕರಿಸಲಾಯಿತು.



downloaded from: www.kpscvaani.com

ಹಿಂದೆ ಯಾರ ಭಾವನೆಗೂ ಧಕ್ಕೆಯಾಗದಂತೆ ರಚಿಸಿದ್ದ ಹಲವು ಕಾನೂನುಗಳೆ ಇಂದು ಬಹುದೊಡ್ಡ ಸಮಸ್ಯೆಯಾಗಿ ಪರಿಣಮಿಸುವುದರ ಜೊತೆಗೆ ಭಾರತದ ಏಕತೆಯನ್ನೆ ಪ್ರಶ್ನೆ ಮಾಡುವಂತಾಗಿದೆ. ವಿವಾದಕ್ಕೆ ಕಾರಣವಾದ ವೈಯಕ್ತಿಕ ಕಾನೂನುಗಳಾದ ವಿವಾಹ, ವಿಚ್ಛೇದನ, ಆಸ್ತಿ ಹಂಚಿಕೆ ಇತ್ಯಾದಿ ಕಾನೂನುಗಳು ಒಂದೊಂದು ಧರ್ಮಕ್ಕೆ ಒಂದೊಂದು ರೀತಿಯಲ್ಲಿದ್ದು ಅವುಗಳನ್ನು ಎಲ್ಲಾ ಧರ್ಮದವರಿಗೆ ಸಮಾನವಾಗಿ ಅನ್ವಯಿಸುವ ಏಕ ರೂಪದ ಕಾನೂನು ತರುವುದೇ ಈ ಸಮಾನವಾದ ನಾಗರೀಕ ಸಂಹಿತೆಯ ಅರ್ಥವಾಗಿದೆ. ಪ್ರಸ್ತುತ ಕೇಂದ್ರ ಸರ್ಕಾರವು ಇದರ ಬಗ್ಗೆ ಕಾನೂನು ಆಯೋಗಕ್ಕೆ ಪರಾಮರ್ಶಿಸಲು ಸೂಚಿಸಿದ್ದು. ಇದರ ಸಾಧಕ-ಭಾದಕಗಳನ್ನು ನೋಡುವುದಾದರೆ ಈ ಕೆಳಗಿನಂತೆ ಇವೆ.

ಭಾರತೀಯ ಸಂವಿಧಾನದ ರಾಜ್ಯ ನಿರ್ದೇಶಕ ತತ್ವಗಳ ಅಡಿಯಲ್ಲಿ 44ನೇ ವಿಧಿಯು ಏಕರೂಪ ನಾಗರಿಕ ಸಂಹಿತೆ ಜಾರಿಗೆ ತರುವುದು. ರಾಜ್ಯದ ಆದ್ಯ ಕರ್ತವ್ಯವೆಂಬುದಾಗಿ ತಿಳಿಸುತ್ತದೆ. ಆದರೆ ರಾಜ್ಯ ನಿರ್ದೇಶಕ ತತ್ವಗಳಿಗೆ ಕಾನೂನಿನ ಬೆಂಬಲವಿಲ್ಲದಿದ್ದರಿಂದ, ಇವುಗಳನ್ನು ನ್ಯಾಯಾಲಯದ ಮೂಲಕ ಜಾರಿಗೊಳಿಸಲು ಸಾಧ್ಯವಿಲ್ಲ.

**ಸಂವಿಧಾನ ಹೇಳುವುದಿಷ್ಟು :**

ಭಾರತದ ಎಲ್ಲಾ ಪ್ರದೇಶಗಳಲ್ಲಿ ತನ್ನೆಲ್ಲಾ ಜನರಿಗೆ ಸಮಾನ ನಾಗರಿಕ ಸಂಹಿತೆಯನ್ನು ರೂಪಿಸಲು ಸರ್ಕಾರವು ಪ್ರಯತ್ನಿಸಬೇಕು. 31 ನೇ ವಿಧಿಯಂತೆ ಕೋರ್ಟ್ ಮೂಲಕ ಜಾರಿ ಮಾಡಲು ಸಾಧ್ಯವಿಲ್ಲದ್ದರಿಂದ ಈ ವಿಷಯದಲ್ಲಿ ಸಂಸತ್ತೇ ಒಮ್ಮತ ನಿರ್ಣಯಕ್ಕೆ ಬಂದು ನಾಗರಿಕ ಸಂಹಿತೆಯನ್ನು ಜಾರಿಗೊಳಿಸಬೇಕಾದ ಅಗತ್ಯವಿದೆ.

**ಬೇಡಿಕೆಗಳು ಶುರುವಾಗಿದ್ದೆಲ್ಲಿಂದ :**

ದೇಶದ ಏಕರೂಪ ನಾಗರಿಕ ಸಂಹಿತೆ ಕುರಿತಾದ ಚರ್ಚೆ ಇಂದು ನಿನ್ನೆಯದಲ್ಲ, ಬ್ರಿಟಿಷರ ಕಾಲದಿಂದಲೂ ಇದು ಚರ್ಚೆಯಲ್ಲಿದೆ. 1840ರ "ಲೆಕ್ಸ್‌ಲೋಸಿ" ವರದಿಯು ಇದಕ್ಕೆ ಸಂಬಂಧಿಸಿತ್ತು. ಆದರೆ ಆಯಾ ಧಾರ್ಮಿಕ ಆಚರಣೆಗಳಿಂದ ಪ್ರೇರೇಪಿತನಾಗಿರುವ ಕಾನೂನುಗಳನ್ನು ಬದಲಿಸುವ ದುಸ್ಸಾಹಸವನ್ನು ಬ್ರಿಟಿಷರು ಮಾಡಲಿಲ್ಲ. 1956ರಲ್ಲಿ ಭಾರೀ ವಿರೋಧದ ಮಧ್ಯೆಯು ಸಂಸತ್ತಿನಲ್ಲಿ ಹಿಂದೂ ಕೋಡ್ ವಿಧೇಯಕವನ್ನು ಪಾಸು ಮಾಡಲಾಯಿತು. 1985ರ ಷಾ ಬಾನು ಪ್ರಕರಣದ ಬಳಿ ಏಕರೂಪ ನಾಗರಿಕ ಸಂಹಿತೆ ಕುರಿತಾದ ಚರ್ಚೆ ತೀವ್ರಗೊಂಡವು; 2014ರ ಚುನಾವಣೆ ವೇಳೆ ಆರ್.ಎಸ್.ಎಸ್. ಮತ್ತು ಬಿ.ಜೆ.ಪಿ ಒಕ್ಕೂಟವು 44ನೇ ವಿಧಿ ಜಾರಿ ತರುವುದಾಗಿ ಘೋಷಣೆ ಮಾಡಿತು.

1985ರ ಷಾ ಬಾನು ಪ್ರಕರಣವು 44 ನೇ ವಿಧಿಯ ಚರ್ಚೆಗೆ ನಾಂದಿ ಹಾಡಿತು. ಸುಪ್ರೀಂ ಕೋರ್ಟ್ ಮೊದಲ ಬಾರಿಗೆ ಏಕ ರೂಪ ನಾಗರಿಕ ಸಂಹಿತೆ ಬಗ್ಗೆ ಹೇಳಿದ ಪ್ರಕರಣ ಇದು. 5 ಮಕ್ಕಳ ತಾಯಿಯಾಗಿ 1978 ರಲ್ಲಿ ವಿಚ್ಛೇದನ ಪಡೆದ ಷಾ ಬಾನು ಸುಪ್ರೀಂ ಕೋರ್ಟ್‌ನಿಂದ ಜೀವನಾಂಶ ಪಡೆಯಲು ಅರ್ಹಳು ಎಂದು ಆದೇಶವನ್ನು ಪಡೆದಿದ್ದಳು. ಆದರೆ ರಾಜೀವ ಗಾಂಧಿ ನೇತೃತ್ವದ ಸರ್ಕಾರ ಮುಸ್ಲಿಂ ಮುಖಂಡರ ಒತ್ತಡಕ್ಕೆ ಮಣಿದು ಇದಕ್ಕೆ ವಿರುದ್ಧವಾದ ಮುಸ್ಲಿಂ ಮಹಿಳೆಯರ ವಿಚ್ಛೇದನಾ ಕಾಯ್ದೆ-1986 ರನ್ನು ಜಾರಿಗೆ ತಂದು ನ್ಯಾಯಾಲಯದ ಆದೇಶವನ್ನೇ ಅಣಕಿಸುವಂತೆ ಮಾಡಿದ್ದು ಮಾತ್ರ ವಿಪರ್ಯಾಸ.



downloaded from: www.kpscvaani.com

**ಇತ್ತೀಚೆಗೆ ಯಾಕೆ ಸುದ್ದಿಯಲ್ಲಿದೆ :**

ಇತ್ತೀಚೆಗೆ ಮುಸಲ್ಮಾನ ಸಮುದಾಯದಲ್ಲಿರುವ ತ್ರಿವಳಿ ತಲಾಖ್ ಮತ್ತು ಬಹು ಪತ್ನಿತ್ವದ ವಿರುದ್ಧ ಹಲವಾರು ಮಹಿಳೆಯರು ಸರ್ವೋಚ್ಚ ನ್ಯಾಯಾಲಯದ ಮೆಟ್ಟಿಲೇರಿದ್ದು, ಈ ನಿಟ್ಟಿನಲ್ಲಿ ಈ ವಿಶಿಷ್ಟ ಪದ್ಧತಿಯನ್ನು ಸಂವಿಧಾನದ ಚೌಕಟ್ಟಿನ ಒರೆಗೆ ಹಚ್ಚಿ ನೋಡಬೇಕೆಂದು ನ್ಯಾಯಾ ಪೀಠವು ಅಭಿಪ್ರಾಯ ಪಟ್ಟರು. ಹಾಗಾಗಿ ಎನ್.ಡಿ.ಎ ಸರ್ಕಾರವು ಇದರ ಬಗ್ಗೆ ಅಧ್ಯಾಯನ ಮಾಡುವಂತೆ ಕಾನೂನು ಆಯೋಗಕ್ಕೆ ಕೇಳಿಕೊಂಡಿದೆ. ಸಮಾನ ನಾಗರಿಕ ಸಂಹಿತೆ ಜಾರಿಯಾದಲ್ಲಿ ದೇಶದ ಎಲ್ಲಾ ಪ್ರಜೆಗಳಿಗೆ ಸಮಾನ ವೈಯಕ್ತಿಕ ಕಾನೂನು ಅನ್ವಯವಾಗಲಿದೆ. ವೈಯಕ್ತಿಕ ಕಾನೂನು ರದ್ದಾಗಲಿವೆ.

ಪಿತ್ರಾರ್ಜಿತ ಆಸ್ತಿಯಲ್ಲಿ ಹೆಣ್ಣು ಮಕ್ಕಳಿಗೂ ಹಕ್ಕಿರಬೇಕು ಎಂಬ ವಿಚಾರದಲ್ಲಿ ಹಿಂದೂ ಸಮುದಾಯಕ್ಕಿಂತ ಮುಸ್ಲಿಂ ಸಮುದಾಯದವರು ಮೊದಲಿಗಿಂತಲೂ ಹೆಚ್ಚು ಪ್ರಗತಿಪರವಾಗಿದ್ದರು. ಸ್ವಾತಂತ್ರ್ಯ ನಂತರ ಹಿಂದೂಗಳಲ್ಲಿ ಈ ಹಕ್ಕು ಬಂತು. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಹಿಂದೂಗಳು ಇನ್ನೊಂದು ಸಮುದಾಯದಿಂದ ಪ್ರಗತಿಪರ ಮೌಲ್ಯವೊಂದನ್ನು ಕಲಿತಂತೆ ಇತರರೂ ಕೂಡ ಸುಧಾರಣೆಗೆ ಒಳಪಡಬೇಕು.

ಸರ್ವೋಚ್ಚ ನ್ಯಾಯಾಲಯದ ಅಭಿಪ್ರಾಯದಂತೆ ವೈಯಕ್ತಿಕ ಕಾನೂನುಗಳು ಎಲ್ಲಾ ಧರ್ಮದಲ್ಲೂ ಇದ್ದು ಇವುಗಳಿಂದ ಸಂವಿಧಾನದ ಆಶಯಕ್ಕೆ ಧಕ್ಕೆ ಬರದಿದ್ದರೆ ಇವುಗಳನ್ನು ಹಾಗೇ ಉಳಿಸಿಕೊಳ್ಳಬಹುದು. ಭಾರತೀಯ ಧಾರ್ಮಿಕ ವಿಚಾರದಲ್ಲಿ ಮೂಗು ತೂರಿಸುವ ಅಧಿಕಾರ ಸಂಸತ್ತಿಗಿಲ್ಲಾ ಆದರೆ ಜ್ಯಾತ್ಯಾತೀತ ಚಟುವಟಿಕೆ ಬಗ್ಗೆ ಕಾನೂನು ರೂಪಿಸುವ ಅಧಿಕಾರ ಸಂಸತ್ತಿಗಿದೆ. ಮದುವೆ, ಉತ್ತರಾಧಿಕಾರ, ಜೀವನಾಂಶ ಇವೆಲ್ಲವನ್ನೂ ಧಾರ್ಮಿಕ ಸ್ವಾತಂತ್ರ್ಯದಡಿ ಸರ್ವೋಚ್ಚ ನ್ಯಾಯಾಲಯವು 2003 ರಲ್ಲಿ "ಜಾನ್ ವಳ್ಳಮಟ್ಟಂ ಮತ್ತು ಕೇಂದ್ರ ಸರ್ಕಾರದ ನಡುವಿನ" ಪ್ರಕರಣದ ತೀರ್ಪಿನಲ್ಲಿ ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿ ವಿ.ವಿ. ಬರೆ ಆದೇಶಿಸಿದ್ದಾರೆ.

**ಸಮಾನ ನಾಗರಿಕ ಸಂಹಿತೆ ಏಕೆ ಬೇಕು :**

ಇದು ಪ್ರತಿಯೊಬ್ಬರನ್ನೂ ಸಮಾನವಾಗಿ ಕಾಣುತ್ತದೆ. ಪ್ರಮುಖವಾಗಿ ವೈಯಕ್ತಿಕ ಕಾನೂನುಗಳು ಮಹಿಳೆಯರ ಹಕ್ಕನ್ನು ಸಂರಕ್ಷಣೆ ಮಾಡುವುದಿಲ್ಲ.

ಉದಾ:- ಮುಸ್ಲಿಂರ ಏಕ ಪಕ್ಷೀಯ ತಲಾಖ್ ಪದ್ಧತಿ, ಕ್ರೈಸ್ತರ ಆಸ್ತಿ ಹಕ್ಕಿನಲ್ಲಿ ಅಸಮಾನತೆ.

- ✓ ಲಿಂಗ ಅಸಮಾನತೆ ಮತ್ತು ತಾರತಮ್ಯವನ್ನು ಇದು ಪ್ರಮುಖವಾಗಿ ಹೋಗಲಾಡಿಸುತ್ತದೆ.
- ✓ ಮತ ಬ್ಯಾಂಕ್ ರಾಜಕಾರಣದಿಂದ ಮುಕ್ತಿ ಸಿಗುತ್ತದೆ.
- ✓ ಜ್ಯಾತ್ಯಾತೀತ ರಾಷ್ಟ್ರವೆಂಬ ತತ್ವದ ಘೋಷಣೆಯಾಗುತ್ತದೆ.
- ✓ ಕಾನೂನಿಗೆ ಶ್ರಮದಾಯಕತೆ ಕಡಿಮೆಯಾಗುತ್ತದೆ. ಏಕೆಂದರೆ ವಿವಿಧ ಧರ್ಮದ ವಿವಿಧ ಕಾನೂನುಗಳು ಕಾನೂನಿಗೆ ತಲೆ ನೋವಾಗಿ ಪರಿಣಮಿಸಿದೆ.
- ✓ ರಾಷ್ಟ್ರದ ಏಕತೆಯನ್ನು ಇದು ಪ್ರಚೋದಿಸುತ್ತದೆ.
- ✓ ಉತ್ತಮವಾದ ಕಾನೂನುಗಳನ್ನು ರೂಪುಗೊಳಿಸುತ್ತಿವೆ.



downloaded from: www.kpscvaani.com

- ✓ ಮುಸ್ಲಿಂ ಮಹಿಳೆಗೆ ಸಂಬಂಧಿಸಿದಂತೆ ಇದು ಉತ್ತಮ ರಕ್ಷಣಾ ಹೆಜ್ಜೆ.

ಪ್ರಸ್ತುತ ಆಚರಣೆಯಲ್ಲಿರುವ ವೈಯಕ್ತಿಕ ಕಾನೂನುಗಳಾವುವು.

ಹಿಂದೂ, ಸಿಖ್, ಜೈನರು ಮತ್ತು ಬೌದ್ದರು– 1956ರ ಹಿಂದೂ ವೈಯಕ್ತಿಕ ಕಾನೂನಿನ ಅಡಿಯಲ್ಲಿ ಬಂದರೆ, ಮುಸ್ಲಿಂ ಮತ್ತು ಕ್ರೈಸ್ತರು ತಮ್ಮದೇ ಆದಂತಹ ಪ್ರತ್ಯೇಕವಾದ ಕಾನೂನು ಹೊಂದಿದ್ದಾರೆ. ಇದರಲ್ಲಿ ಮುಸ್ಲಿಂ ಕಾನೂನು "ಷರಿಯತ್" ಆಧಾರಿತವಾಗಿದೆ. ಇದರಲ್ಲಿ ಪ್ರಮುಖವಾಗಿ 1866ರ " ದಿ ಕನವರ್ಟ ಮ್ಯಾರೇಜ್ ರೆಸಲ್ಯೂಷನ್ ಕಾಯ್ದೆ–1869"ರ ದಿ ಇಂಡಿಯನ್ ಡಿವೋರ್ಸ್ ಆ್ಯಕ್ಟ್ 1909ರ ಆನಂದ ವಿವಾಹ ಕಾಯ್ದೆ, 1929ರ ಶಾರದಾ ಕಾಯ್ದೆ, 1936ರ ಪಾರ್ಸಿ ವಿವಾಹ ಮತ್ತು ವಿಚ್ಚೇದನಾ ಕಾಯ್ದೆ, 1969 ವಿದೇಶಿಗರ ವಿವಾಹ ಕಾಯ್ದೆ, 1986ರ ಮುಸ್ಲಿಂ ಮಹಿಳಾ ಕಾಯ್ದೆ, 2001ರ ಭಾರತೀಯ ವಿಚ್ಛೇದನ ತಿದ್ದುಪಡಿ ಕಾಯ್ದೆ, 1991ರ ಭಾರತೀಯ ಉತ್ತರಾಧಿಕಾರ ಕಾಯ್ದೆ, ಹೀಗೆ ಹಲವಾರು ಕಾಯ್ದೆ ಕಾನೂನುಗಳು ಅಸ್ತಿತ್ವದಲ್ಲಿದ್ದು ಕಾನೂನಿಗೆ ಗೊಂದಲದ ಗೂಡಾಗಿ ಮಾರ್ಪಾಡಾಗಿದೆ.

ಸ್ವಾತಂತ್ರ್ಯ ಬಂದು 70 ವರ್ಷಗಳಾದರೂ ಏಕರೂಪ ನಾಗರಿಕ ಸಂಹಿತೆ ಜಾರಿ ಬಗ್ಗೆ ಇದುವರೆಗೂ ಒಮ್ಮತ ಮೂಡಿಸಲು ಸಾಧ್ಯವಾಗಿಲ್ಲ. ಹಾಗಾಗಿ ಜಾರಿಯಾಗಲು ಅಡ್ಡಿಗಳೇನು ಎಂದು ನೋಡಿದರೆ---

- ✓ ಬಿ.ಜೆ.ಪಿ ಮತ್ತು ಆರ್. ಎಸ್.ಎಸ್ ಸಂಸ್ಥೆಗಳು ಇದರ ಪರವಾಗಿ ಪ್ರಬಲವಾಗಿ ಪ್ರತಿಪಾದಿಸಿದರೆ ಕಾಂಗ್ರೇಸ್ ಮತ್ತು ಕೆಲವು ಮುಸ್ಲಿಂ ಸಂಘಟನೆಗಳು ವಿರೋಧಿಸುತ್ತಿವೆ.
- ✓ 44ನೇ ವಿಧಿ ಜಾರಿಯಾದರೆ 25ನೇ ವಿಧಿಯು ಧಾರ್ಮಿಕ ಹಕ್ಕಿಗೆ ಪೆಟ್ಟು ಬೀಳುವುದೆಂಬ ವಿರೋಧಿಗಳ ಭಾವ.
- ✓ ಪ್ರಬಲವಾಗಿರುವ ವೈಯಕ್ತಿಕ ಕಾನೂನುಗಳು ಇಲ್ಲಿ ಅಡ್ಡಿಯಾಗಿವೆ.

ಸರ್ವೋಚ್ಚ ನ್ಯಾಯಾಲಯದ ಪ್ರಕಾರ ಧಾರ್ಮಿಕ ಸ್ವಾತಂತ್ರ್ಯವು ಜಾತ್ಯಾತೀತ ಬೇಡಿಕೆಯಾದ ಏಕರೂಪ ನಾಗರಿಕ ಸಂಹಿತೆ ಜಾರಿಗೆ ಅಡ್ಡಿಯಾಗದು.

ಏಕರೂಪ ನಾಗರಿಕ ಸಂಹಿತೆ ಕಾಲ ಪಕ್ವವಾಗಿಲ್ಲಾ ಎಂದು ನೆಹರೂ ಹೇಳಿ ಅರ್ಧ ಶತಮಾನವೇ ಕಳೆದಿದೆ. ಹಾಗಾದರೆ ಕಾಲ ಇನ್ನೂ ಪಕ್ವವಾಗಿಲ್ಲವೇ? ಇಲ್ಲಾ ಎಂದರೆ ಪಕ್ವಗೊಳಿಸುವ ಕಾರ್ಯವಾಗಬೇಕು ಎಂದು ಕಾನೂನು ಆಯೋಗ ಜನಾಭಿಪ್ರಾಯ ಸಂಗ್ರಹಿಸುತ್ತಿದೆ.

ಒಟ್ಟಾರೆಯಾಗಿ ಸಮಾನ ನಾಗರಿಕ ಸಂಹಿತೆ ದೇಶದ ಏಕತಾ ದೃಷ್ಟಿಯಿಂದ ಅತ್ಯಾವಶ್ಯ ಸಾಧನವಾಗಿದ್ದು, ಇದನ್ನು ಸಾಧ್ಯವಾದಷ್ಟು ಬೇಗ ಜನಾಭಿಪ್ರಾಯ ಪಡೆದು ಜಾರಿ ಮಾಡಬೇಕಾದ ಅಗತ್ಯವಿದೆ. ಇಲ್ಲಿ ಯಾವುದೋ ನಿರ್ದಿಷ್ಟ ಸಮುದಾಯದ ವಿರುದ್ಧ ಮತ್ತು ಸಾಂಸ್ಕೃತಿಕ ಹೆಗ್ಗುರುತು ರಕ್ಷಿಸುವ ಕಾರ್ಯವಾಗದಿರಲಿ.

## ಪ್ರಬಂಧ 6 : ಸರಕು ಮತ್ತು ಸೇವಾ ತೆರಿಗೆ



downloaded from: www.kpscvaani.com

**"ಹೂವಿನ ಮೇಲೆ ಕುಳಿತ ದುಂಬಿ ಮಕರಂದವನ್ನು ಹೀರುವಂತೆ, ಹೂವು ಎಂಬ ಜನರ ಮೇಲೆ, ಸರ್ಕಾರ ಎಂಬ ದುಂಬಿ, ಮಕರಂದ ಎಂಬ ತೆರಿಗೆ ಹೀರಿ, ಜೇನು ಎಂಬ ಅಭಿವೃದ್ಧಿ, ಕಾರ್ಯ ಮಾಡಬೇಕು."**

ತೆರಿಗೆ ಎಂದರೆ ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ಜನರು ಸರ್ಕಾರಕ್ಕೆ ಪಾವತಿ ಮಾಡಬೇಕಾದ ನಿರ್ದಿಷ್ಟ ವಂತಿಕೆಯನ್ನು ತೆರಿಗೆ ಎಂದು ಕರೆಯುತ್ತಾರೆ. ತೆರಿಗೆಯಲ್ಲಿ ಎರಡು ವಿಧಗಳು, ನೇರ ತೆರಿಗೆ ಮತ್ತು ಪರೋಕ್ಷ ತೆರಿಗೆಗಳಾಗಿವೆ.

ಸರಕು ಮತ್ತು ಸೇವಾ ತೆರಿಗೆಯು ಒಂದು ದೇಶ ಒಂದು ತೆರಿಗೆ ಎಂಬ ಪರಿಕಲ್ಪನೆಯಲ್ಲಿ ದೇಶದಾದ್ಯಂತ ಏಕರೂಪ ತೆರಿಗೆ ವ್ಯವಸ್ಥೆ ಜಾರಿಗೆ ತರಲಾಗಿದೆ. ಜಿ.ಎಸ್.ಟಿ.ಯು ಒಂದು ಪರೋಕ್ಷ ತೆರಿಗೆಯಾಗಿದೆ. ನಮ್ಮ ದೇಶದಲ್ಲಿ ಸಂಯುಕ್ತ ಸರ್ಕಾರ ವ್ಯವಸ್ಥೆ ಅಸ್ತಿತ್ವದಲ್ಲಿದೆ, ಇಲ್ಲಿ ಪ್ರಬಲ ಕೇಂದ್ರ ಸರ್ಕಾರವಿದ್ದು ಹಲವು ರಾಜ್ಯ ಸರ್ಕಾರಗಳು ಇವೆ. ತೆರಿಗೆ ವಿಷಯದಲ್ಲಿ ಸಂವಿಧಾನದ 7ನೇ ಶೆಡ್ಯೂಲ್‌ನಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ತೆರಿಗೆಗಳ ಬಗ್ಗೆ ವಿವರಣೆ ದೊರೆಯುತ್ತದೆ. ಅಂದರೆ ಇಲ್ಲಿ ಕೆಲವು ತೆರಿಗೆಗಳನ್ನು ಕೇಂದ್ರ ಸರ್ಕಾರ ವಿಧಿಸಿ ರಾಜ್ಯ ಸರ್ಕಾರಗಳೇ ಬಳಸಿಕೊಳ್ಳುವ ತೆರಿಗೆಗಳು ಇವೆ. ಭೂ–ಕಂದಾಯ, ಕೃಷಿ ಆದಾಯ, ಅಬಾಕಾರಿ, ಮಾರಾಟ ತೆರಿಗೆ ಇತ್ಯಾದಿ.

ಮೇಲಿನ ರಾಜ್ಯ ತೆರಿಗೆ(ದರಗಳು) ರಾಜ್ಯದಿಂದ ರಾಜ್ಯಕ್ಕೆ ವ್ಯತ್ಯಾಸವಿತ್ತು. ಮತ್ತು ಇದರಿಂದ ರಾಜ್ಯಗಳಿಂದ ರಾಜ್ಯಗಳ ಅಭಿವೃದ್ಧಿ ದರದಲ್ಲಿ ವ್ಯತ್ಯಾಸವಿತ್ತು ಮತ್ತು ವ್ಯಾಪಾರಕ್ಕೆ ಉತ್ತಮವಾಗಲಿಲ್ಲ. ಇದರಿಂದ ರಾಷ್ಟ್ರದಲ್ಲಿ ಏಕರೂಪ ತೆರಿಗೆ ವ್ಯವಸ್ಥೆ ಕಂಡುಬಂದು ಒಂದೇ ರೀತಿಯ ತೆರಿಗೆ ವ್ಯವಸ್ತೇ ಸ್ಥಾಪನೆಗೆ ಅವಕಾಶವಿರಲಿಲ್ಲ.

ಸೇವಾ ತೆರಿಗೆ ಎಂಬ ಏಕರೂಪ ತೆರಿಗೆ ವ್ಯವಸ್ಥೆ ಜಾರಿಗೆ ತಂದು ಸುಗಮ ಮಾರಾಟ ಮತ್ತು ಆರ್ಥಿಕ ಅಭಿವೃದ್ಧಿ ಹೆಚ್ಚಿಸುವ ಉದ್ದೇಶ ಹೊಂದಲಾಗಿದೆ.

❖ **ಭಾರತದಲ್ಲಿ ಜಿ.ಎಸ್.ಟಿ.ಯ ಇತಿಹಾಸ :**

ಭಾರತದಲ್ಲಿ ಪರೋಕ್ಷ ತೆರಿಗೆ ಸುಧಾರಣೆ ಮಾಡುವ ಪ್ರಕ್ರಿಯೆ 1986ರಲ್ಲಿ ರಾಜೀವ್ ಗಾಂಧಿ ಸರ್ಕಾರದಲ್ಲಿ ಹಣಕಾಸು ಮಂತ್ರಿಯಾದ ವಿ.ಪಿ.ಸಿಂಗ್‌ರವರು MODVAT(Modified Value Added Tax)ನ್ನ ಪರಿಚಯಿಸಿದರು ಮತ್ತು ಪಿ.ವಿ.ನರಸಿಂಹರಾವ್ ಸರ್ಕಾರದಲ್ಲಿ ಹಣಕಾಸು ಮಂತ್ರಯಾದ ಮನಮೋಹನ್ ಸಿಂಗ್‌ರವರು ನ್ನು ರಾಜ್ಯ ಮಟ್ಟದಲ್ಲಿ ಜಾರಿಗೆ ತರಲು ಚಿಂತನೆಗಳನ್ನು ನಡೆಸಿದರು.

1999ರಲ್ಲಿ ವಾಜಪೇಯಿ ಸರ್ಕಾರದಲ್ಲಿ ಆರ್ಥಿಕ ಸಲಹಾ ಮಂಡಲಿಯಲ್ಲಿ ಸರಕು ಮತ್ತು ಸೇವಾ ತೆರಿಗೆ ರಚನೆ ಬಗ್ಗೆ ಚಿಂತನಗಳು ನಡೆದವು. ಇದೇ ಸಂದರ್ಭದಲ್ಲಿ ಪ್ರಧಾನ ಮಂತ್ರಿ ವಾಜಪೇಯ್‌ರವರು ಮುಂದು ಜನ ಮಾಜಿ ಗೌರ್ನರ್‌ಗಳಿಂದ ಐ.ಜಿ.ಪಟೇಲ್, ಬಿಮಲ್ ಮತ್ತು ಸಿ.ರಂಗರಾಜನ್‌ರವರ


downloaded from: www.kpscvaani.com

ನೇತೃತ್ವದಲ್ಲಿ ಆರ್ಥಿಕ ಸಲಹಾ ಸಮಿತಿಯನ್ನು ರಚಿಸಿತು, ಈ ಸಮಿತಿಯು ಭಾರತದಲ್ಲಿ ಸರಕು ಮತ್ತು ಸೇವಾ ತೆರಿಗೆ ವ್ಯವಸ್ತೇ ಜಾರಿಗೆ ತರಲು ಶಿಫಾರಸ್ಸು ನೀಡಿತು.

ನಂತರ 1999ರಲ್ಲಿ ವಾಜಪೇಯಿಯವರು ಜಿ.ಎಸ್.ಟಿ. ಮಾದರಿ ರಚನೆಯ ಬಗ್ಗೆ ಅಧ್ಯಯನ ಮಾಡಿ ವರದಿ ನೀಡಲು ಪಶ್ಚಿಮ ಬಂಗಾಳದ ಹಣಕಾಸು ಮಂತ್ರಿ ಹಳಿಮದಾಸ್ ಗುಪ್ತಾ ಸಮಿತಿಯನ್ನು ರಚಿಸಲಾಯಿತು. ಈ ಸಮಿತಿಯು 2009ರವರೆಗೂ ಜಿ.ಎಸ್.ಟಿ.ಮಾದರಿ ರಚನೆಯ ಬಗ್ಗೆ ಅಧ್ಯಯನ ಮಾಡಿ ವರದಿ ನೀಡಿತು. ನಂತರ ಜಿ.ಎಸ್.ಟಿ. ನೆಟ್‌ವರ್ಕ್ಸ್(ಜಿ.ಎಸ್.ಟಿ.ಎನ್) ಜಾರಿಗೆ ಬಗ್ಗೆ ಅಧ್ಯಯನ ಮಾಡಲು ರವಿದಾಸ್ ಗುಪ್ತಾ ಸಮಿತಿಯನ್ನು ರಚಿಸಲಾಗಿದೆ.

ನಂತರ ವಿಜಯ್ ಕಲ್ಕರ್ ನೇತೃತ್ವದಲ್ಲಿ ರಚನೆಯಾದ 13ನೆ ಹಣಕಾಸು ಆಯೋಗವು ಸದಾ ಜಿ.ಎಸ್.ಟಿ ಜಾರಿಗೆ ತರಲು ಶಿಫಾರಸ್ಸು ನೀಡಿತು.

2011ರಲ್ಲಿ ಜಿ.ಎಸ್.ಟಿ. ಕುರಿತು ಲೋಕ ಸಭೆಯಲ್ಲಿ 115ನೇ ಮಸೂದೆ ಮಂಡನೆಯಾಯಿತು. ಆದರೆ 2014ರಲ್ಲಿ ಉತ್ತರಪ್ರದೇಶ ಸರ್ಕಾರ ವಿಭಜನೆಯಾಗಿದ್ದರಿಂದ ಮಸೂದೆಯು ರದ್ದಾಯಿತು.

2014ರ ಡಿಸೆಂಬರ್ 18ರಂದು ಕೇಂದ್ರ ಸಚಿವ ಸಂಪುಟ ಸಂವಿಧಾನದ 122ನೇ ತಿದ್ದುಪಡಿ ಮಸೂದೆಗೆ ಅನುಮೋದನೆ ನೀಡಿತು. 2016ರಲ್ಲಿ ಈ ಮಸೂದೆಗೆ ಲೋಕಸಭೆ ಮತ್ತು ರಾಜ್ಯ ಸಭೆ ಅನುಮೋದನೆ ದೊರೆಯಿತು. ಅಸ್ಸಾಮ ರಾಜ್ಯ ಮೊಟ್ಟ ಮೊದಲ ಬಾರಿಗೆ ಮಸೂದೆಯನ್ನು ಅಂಗಿಕಾರ ಮಾಡಿತು. ಈ ಮಸೂದೆಯು ರಾಷ್ಟ್ರಪತಿಯವರ ಅಂಗಿಕಾರ ಪಡೆದು ಸಂವಿಧಾನಕ್ಕೆ 101ನೇ ತಿದ್ದುಪಡಿಯಲ್ಲಿ ಜಾರಿಗೆ ತಂದು ಸಂವಿಧಾನದ 246/ಎ ವಿಧಿಯಲ್ಲಿ ಜಿ.ಎಸ್.ಟಿಯನ್ನು ಮತ್ತು 279/ಎ ವಿಧಿಯಲ್ಲಿ ಜಿ.ಎಸ್.ಟಿ ಮಂಡಲಿಯನ್ನು ಸೇರಿಸಲಾಗಿದೆ.

ಭಾರತದಲ್ಲಿ ಜಿ.ಎಸ್.ಟಿಯನ್ನು ಜುಲೈ 1, 2017ರಂದು ಜಾರಿಗೆ ತರಲಾಯಿತು.

## ❖ಜಿ.ಎಸ್.ಟಿಯಲ್ಲಿ ಅಂತರ್ಗತವಾದ ತೆರಿಗೆಗಳು :

- **ಕೇಂದ್ರ ತೆರಿಗೆಗಳು :**

  * ಕೇಂದ್ರ ಅಬಕಾರಿ ತೆರಿಗೆ
  * ಹೆಚ್ಚುವರಿ ಅಬಕಾರಿ ತೆರಿಗೆ
  * ಸೇವಾ ತೆರಿಗೆ
  * ಹೆಚ್ಚುವರಿ ಕಸ್ಟಮ್ ಸುಂಕ

- **ರಾಜ್ಯ ತೆರಿಗೆ :**

  * ಮಾರಾಟ ತೆರಿಗೆ



downloaded from: www.kpscvaani.com

* ಮನರಂಜನಾ ತೆರಿಗೆ
* ರಾಜ್ಯ ಸೇವಾ ತೆರಿಗೆ
* ಅಕ್ಟ್ರಾಮ್
* ಐಷಾರಾಮಿ ತೆರಿಗೆ
* ರಾಜ್ಯ ಸೆಸ್, ಸರ್ ಚಾರ್ಜ್
* ಲಾಟರಿ ಬೆಟ್ಟಿಂಗ್, ಜೂಜು ತೆರಿಗೆ

## ❖ಜಿ.ಎಸ್.ಟಿ.ದರಗಳು

* **0% GST ತೆರಿಗೆ(No Tax) :** ಹಾಲು, ತರಕಾರಿಗಳು, ಬ್ರೆಡ್, ಉಪ್ಪು, ಮೊಸರು, ಮೊಟ್ಟೆ, Printed Books etc........
* **05% GST ತೆರಿಗೆ :** ಮಿಲ್ಕ್ ಪೌಡರ್, ಕಾಫಿ, ಕಲ್ಲಿದ್ದಲು, ಟೀ, ಸೀಮೆ ಎಣ್ಣೆ, Insulin, Cashew Nuts
* **12% GST ತೆರಿಗೆ :** ಉಪ್ಪಿನಕಾಯಿ, ಕಾಬೆಜ್, ಹಣ್ಣಿನ ಜೂಸ್, ಹಲ್ಲಿನ ಪುಡಿ, ಮೊಬೈಲ್ ಫೋನ್, ಮೆಡಿಸನ್ etc(Business, Class Tickets)
* **18% GST ತೆರಿಗೆ :** Detergents, ಕನ್ನಡಿ, ಸೆಫ್ಟಿ ಗ್ಲಾಸ್, ಫಾನ್ಸ್, ಪಂಪ್, ಐಸ್‌ಕ್ರೀಮ್, ಸೋಪ್ etc...
* **28% GST ತೆರಿಗೆ :** ಸಿಮೆಂಟ್, ಪೇಂಟ್ಸ್, ಡಿಷ್‌ವಾಷರ್, ವಾಕ್ಯೂಮ್ ಕ್ಲಿನರ್, ಪಾನ್ ಮಸಾಲ, ಮೋಟಾರ್ ಸೈಕಲ್ etc...

## ❖ಸರಕು ಮತ್ತು ಸೇವಾ ತೆರಿಗೆಯ ಅನುಕೂಲಗಳು :

* ಎಲ್ಲಾ ಪರೋಕ್ಷ ತೆರಿಗೆಗಳು ಜಿ.ಎಸ್.ಟಿಯಲ್ಲಿ ಅಂತರ್ಗತವಾಗಿರುವುದರಿಂದ ವಿವಿದ ರಾಜ್ಯಗಳಲ್ಲಿದ್ದ ವಿವಿಧ ರೀತಿಯ ತೆರಿಗೆಯ ಏಕರೂಪ ತೆರಿಗೆಯುಗ ವ್ಯಾಪಾರಕ್ಕೆ ಅನುಕೂಲವಾಗಿದೆ.
* ತೆರಿಗೆ ಸೋರಿಕೆಯನ್ನು ತಡೆಗಟ್ಟಲು ಏಕ ಸೇವಾ ಸರಕು ತೆರಿಗೆ ಉತ್ತಮ ತೆರಿಗೆ ವ್ಯವಸ್ಥೆಯಾಗದು ಜಿ.ಎಸ್.ಟಿ. ಜಾರಿಯಿಂದ ದೇಶದ ಜಿ.ಡಿ.ಪಿಯು ಶೇ.2 ರಿಂದ 3ರಷ್ಟು ಹೆಚ್ಚಾಗಲು ಸಹಾಯವಾಗಿದೆ.
* ಜಿ.ಎಸ್.ಟಿ ತೆರಿಗೆ ವಿಧಾನವು ಕಪ್ಪು ಹಣವನ್ನು ನಿಯಂತ್ರಿಸಲು ತುಂಬ ಸೂಕ್ತ ಮಾರ್ಗವಾಗದ್ದು ದೇಶದ ಸಮಸ್ಯೆಯಾಗಿರುವ ಕಪ್ಪು ಹಣವನ್ನು ನಿಯಂತ್ರಣಕ್ಕೆ ಗೊಂದಲಗಳನ್ನು ತಪ್ಪಿಸುತ್ತದೆ.


downloaded from: www.kpscvaani.com

* ತೆರಿಗೆ ಸಂಗ್ರಹಣ ವೆಚ್ಚವು ಪ್ರಸ್ತುತ ಹೆಚ್ಚಾಗಿದ್ದು ಜಿ.ಎಸ್.ಟಿಯಿಂದ ತೆರಿಗೆ ಸಂಗ್ರಹಣ ವ್ಯವಸ್ಥೆ ಸುಲಭವಾಗಿದೆ. ಇದರಿಂದ ತೆರಿಗೆ ಸಂಗ್ರಹಣಾ ವೆಚ್ಚವು ಕಡಿಮೆಯಾಗಿದೆ.
* ಕೇಂದ್ರ ಮತ್ತು ರಾಷ್ಟ್ರದ ನಡುವಿನ ಆದಾಯಗಳನ್ನು ಗುರುತಿಸುವುದು, ರಾಜ್ಯಗಳಿಗೆ ನೀಡಬೇಕಾದ ಪರಿಹಾರದ ಭಾಗವನ್ನು ನಿಖರವಾಗಿ ಗುರುತಿಸುವುದು ಮತ್ತು ರಾಜ್ಯಗಳಿಗೆ ಅನ್ಯಾಯವಾಗದಂತೆ ನೋಡಿಕೊಳ್ಳುವುದು.
* ತೆರಿಗೆ ಸಂಬಂಧ ರಾಜ್ಯಗಳೊಂದಿಗೆ ಉತ್ತಮ ಬಾಂಧವ್ಯ ಹೊಂದುವುದು, ರಾಜ್ಯಗಳಿಗೆ ಹೆಚ್ಚುವರಿ ಸೆಸ್ ನೀಡುವುದರ ಮೂಲಕ ಸಮಾನತೆ ಕಾಪಾಡುವುದು.

## ❖ ಸರಕು ಮತ್ತು ಸೇವಾ ತೆರಿಗೆಯ ಸಮಸ್ಯೆ ಮತ್ತು ಸವಾಲುಗಳು

* ಕೇಂದ್ರ ಮತ್ತು ರಾಜ್ಯದ ನಡುವಿನ ಕೆಲವು ತೆರಿಗೆಗಳನ್ನು ಸೇರಿಸುವುದು ಹಾಗೂ ಈ ಪಟ್ಟಿಯಿಂದ ಕೆಲವುಗಳನ್ನು ಕೈಬಿಡುವುದು ಅತಿ ಸೂಕ್ಷ್ಮವಾಗಿರುವುದರಿಂದ ಒಂದು ಸಮಸ್ಯೆ ಸವಾಲಾಗಿದೆ.
* ಕೇಂದ್ರ ಮತ್ತು ರಾಜ್ಯದ ನಡುವಿನ ಆದಾಯಗಳನ್ನು ಗುರುತಿಸುವುದು ಅಂದರೆ ರಾಜ್ಯಗಳಿಗೆ ನೀಡಬೇಕಾದ ಪರಿಹಾರದ ಭಾಗವನ್ನು ನಿಖರವಾಗಿ ಗುರುತಿಸುವುದು. ರಾಜ್ಯಗಳಿಗೆ ಅನ್ಯಾಯವಾಗದಂತೆ ನೋಡಿಕೊಳ್ಳುವುದು.
* ತೆರಿಗೆ ಸಂಗ್ರಹಣಾದ ಸಮಸ್ಯೆಗಳು
* ಜಿ.ಎಸ್.ಟಿ ಸಂಬಂಧ ರಾಜ್ಯಗಳೊಂದಿಗೆ ಉತ್ತಮ ಬಾಂಧವ್ಯ ಹೊಂದಿರುವುದು.
* ರಾಜ್ಯ ಸರ್ಕಾರದ ತೆರಿಗೆಗಳು ಜಿ.ಎಸ್.ಟಿಗೆ ಒಳಪಡುವುದರಿಂದ ರಾಜ್ಯ ಸರ್ಕಾರದ ಆದಾಯಕ್ಕೆ ತೊಂದರೆ ಉಂಟಾಗುತ್ತದೆ.
* ಬೃಹತ್ ಹೊಸ ಏಕರೂಪ ತೆರಿಗೆ ವ್ಯವಸ್ಥೆಯಾಗಿರುವುದರಿಂದ ಇದರ ನಿರ್ವಹಣೆ ಸಮಸ್ಯೆ ಸಲ್ಪ ಕಷ್ಟದ ಕೆಲಸವಾಗಿದೆ.

**ಉಪಸಂಹಾರ :** ಭಾರತ ಅತಿದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವಾಗಿರುವುದರಿಂದ ಇಲ್ಲಿ ಸುಧಾರಿತ ತೆರಿಗೆ ವ್ಯವಸ್ಥೆ ಅತ್ಯವಶ್ಯಕವಾಗಿದೆ. ಅದ್ದರಿಂದ ಭಾರತದಲ್ಲಿ ಏಕರೂಪ ತೆರಿಗೆ ವ್ಯವಸ್ತೆಯಿಂದ ಜಿ.ಎಸ್.ಟಿಯನ್ನು 2017 ಜುಲೈ 1ರಂದು ಜಾರಿಗೆ ತಂದು ಭಾರತದ ತೆರಿಗೆಯ ವ್ಯವಸ್ಥೆಯಲ್ಲಿಯೇ ಅತಿ ದೊಡ್ಡ ಸುಧಾರಣಾ ತೆರಿಗೆಯಲ್ಲಿ ಜಿ.ಎಸ್.ಟಿ ಕಂಡುಬಂದಿದೆ. ಜಿ.ಎಸ್.ಟಿ ಜಾರಿಗೆ ಬಂದಂತಹ ಸಂದರ್ಭದಲ್ಲಿ ವ್ಯಾಪಾರ ವಲಯದಲ್ಲಿ ಕೊಂಚ ನಷ್ಟವಾದರು ತದನಂತರ ಇದು ಚೇತರಿಕೆಯಾಗಿರುವುದು ಕಂಡು ಬಂದಿದೆ ಮತ್ತು ಜಿ.ಎಸ್.ಟಿಯಿಂದ ಸರ್ಕಾರದ ವರಮಾನವು ಹೆಚ್ಚಾಗಿದ್ದು ಆರ್ಥಿಕ ಅಭಿವೃದ್ಧಿಗೆ ಪೂರಕವಾಗಿ ಕಂಡು ಬಂದಿದೆ. ಒಟ್ಟಾರೆಯಾಗಿ ಜಿ.ಎಸ್.ಟಿಯು ಭಾರತದ ಆರ್ಥಿಕ ಪ್ರಗತಿಗೆ ಪೂರಕವಾಗಿರುವುದು ನಾವು ನೋಡಬಹುದು.


downloaded from: www.kpscvaani.com

# ಪ್ರಬಂಧ 7 : ಕರ್ನಾಟಕದಲ್ಲಿ ಪ್ರತ್ಯೇಕ ರಾಜ್ಯದ ಕೂಗು

**ಕರ್ನಾಟಕ ಎಂಬುದೇನು ?**

**ಹೆಸರೆ ಬರಿಯ ಮಣ್ಣಿಗೆ?**

**ಮಂತ್ರ ಕಣಾ ! ಶಕ್ತಿ ಕಣಾ! ತಾಯಿ ಕಣಾ ! ದೇವಿ ಕಣಾ !**

**ಬೆಂಕಿ ಕಣಾ ! ಸಿಡಿಲು ಕಣಾ! ಕಾವ ಕೊಲುವ ಒಲವ**

**ಬಲವ ಪಡೆದ ಚಲದ ಚಂಡಿ ಕಣಾ ಅಖಂಡ ಕರ್ನಾಟಕ**

- **<u>ಕುವೆಂಪು</u>**

ಇತ್ತೀಚಿನ ದಿನಗಳಲ್ಲಿ ರಾಷ್ಟ್ರದಲ್ಲಿ ನಡೆಯುತ್ತಿರುವ ರಾಷ್ಟ್ರದ ಗಮನ ಸೆಳೆಯುತ್ತಿದ್ದವು ಹಲವಾರು ಹೋರಾಟಗಳಲ್ಲಿ ಪ್ರತ್ಯೇಕ ರಾಜ್ಯಕ್ಕಾಗಿ ನಡೆಯುತ್ತಿರುವ ಹೋರಾಟಗಳು ಅತ್ಯಂತ ಪ್ರಮುಖವಾದದು. 1947 ಆಗಸ್ಟ್ 15ರಂದು ಭಾರತಕ್ಕೆ ಸ್ವಾತಂತ್ರ್ಯ ಬಂದಾಗಿನಿಂದ ಹಲವಾರು ಪ್ರದೇಶಗಳಲ್ಲಿ ಪ್ರತ್ಯೇಕ ರಾಜ್ಯ ರಚನೆಗೆಗಾಗಿ ನಿರಂತರವಾಗಿ ಹೋರಾಟಗಳು ನಡೆದಿದ್ದು ಈಗಲೂ ನಡೆಯುತ್ತಲೇ ಇವೆ. ಇದರ ಪರಿಣಾಮದಿಂದಾಗಿ ಭಾರತಕ್ಕೆ ಸ್ವಾತಂತ್ರ್ಯ ಬಂದಾಗ ಭಾರತದಲ್ಲಿ ಕೇವಲ 14 ರಾಜ್ಯಗಳಿದ್ದು ಈಗ ಅವುಗಳ ಸಂಖ್ಯೆ 29ಕ್ಕೆ ಮುಟ್ಟಿದೆ. ತೀರಾ ಇತ್ತೀಚೆಗೆ ಪ್ರತ್ಯೇಕ ತೆಲಂಗಾಣ ರಾಜ್ಯ ರಚನೆಗಾಗಿ ದೊಡ್ಡಮಟ್ಟದ ಹೋರಾಟಗಳು ನಡೆದು ಪ್ರತ್ಯೇಕ ತೆಲಂಗಾಣ ರಾಜ್ಯ ಅಸ್ತಿತ್ವಕ್ಕೆ ಬಂದಿರುವುದು ನಮ್ಮ ಕಣ್ಣ ಮುಂದೆಯೇ ಇದೆ. ಅದರಂತೆ ಇತ್ತೀಚೆಗೆ ಕರ್ನಾಟಕದಲ್ಲಿಯೂ ಪ್ರತ್ಯೇಕ ರಾಜ್ಯದ ಕೂಗು ಕೇಳಿಬರುತ್ತಿದ್ದು ಅದರ ಬಗ್ಗೆ ಈ ಕೆಳಗೆ ವಿವರಿಸಲಾಗಿದೆ.

1947 ಆಗಸ್ಟ್ 15ರಂದು ಭಾರತದಾದ್ಯಂತ ಸಂಭ್ರಮದ ವಾತಾವರಣ. ಆದರೆ ಹರಿದು ಹಂಚಿ ಹೋಗಿದ್ದ ಕನ್ನಡದ ನೆಲದಲ್ಲಿ ಸ್ವಾತಂತ್ರ್ಯದ ಸಂಭ್ರಮ ಮನೆಮಾಡಿದ್ದರೂ ಅಸಮಾಧಾನ ಮತ್ತು ಅತೃಪ್ತಿಗೇನೂ ಕೊರತೆ ಇರಲಿಲ್ಲ. ಇದಕ್ಕೆ ಪ್ರಮುಖ ಕಾರಣ ಕನ್ನಡ ನೆಲದ ಸಮಗ್ರತೆ.

ವೈಸರಾಯ್ ಲಾರ್ಡ್ ಮೌಂಟ್ ಬ್ಯಾಟನ್ ಭಾರತಕ್ಕೆ ಅಧಿಕಾರ ಹಸ್ತಾಂತರಿಸುವ ಒಪ್ಪಂದಕ್ಕೆ ಸಹಿ ಹಾಕುತ್ತಿರುವಾಗಲೇ ಹೈದರಾಬಾದ್ ನಿಜಾಮ ಮತ್ತು ಮೈಸೂರಿನ ಮಹಾರಾಜ ಜಯಚಾಮರಾಜ ಒಡೆಯರ್‌ರವರು ಭಾರತದ ಒಕ್ಕೂಟವನ್ನು ಸೇರಲು ಹಿಂದೇಟು ಹಾಕಿದ್ದರು. ಆ ಸಂದರ್ಭದಲ್ಲಿ ಕೇಂದ್ರ ಗೃಹ ಸಚಿವರಾಗಿದ್ದ ಗಟ್ಟಿ ಮನುಷ್ಯ ಸರ್ದಾರ್ ವಲ್ಲಭಭಾಯ್ ಪಟೇಲ್‌ರವರ ಬಿಗಿ ನಿಲುವಿನಿಂದ ಈ ಎರಡೂ ಸಂಸ್ಥಾನಗಳು ಭಾರತದ ಒಕ್ಕೂಟವನ್ನು ಸೇರಿದವು. ಆದರೆ ಹೈದರಾಬಾರ್, ಮುಂಬಯಿ, ಮದ್ರಾಸ್ ರಾಜ್ಯಗಳಲ್ಲಿ ಹರಿದು ಹಂಚಿ ಹೋಗಿದ್ದ ಹಲವು ಕನ್ನಡ ಪ್ರದೇಶಗಳು ಆ ರಾಜ್ಯಗಳಲ್ಲಿಯೇ



downloaded from: www.kpscvaani.com

ಉಳಿದು ಕನ್ನಡಿಗರು ಎರಡನೇಯ ದರ್ಜೆಯ ನಾಗರಿಕರಂತೆ ಬದುಕಬೇಕಾದ ಪರಿಸ್ಥಿತಿ ನಿರ್ಮಾಣವಾಯಿತು. ಈ ರಾಜ್ಯಗಳಲ್ಲಿ ವಾಸಿಸುತ್ತಿದ್ದ ಜನರಲ್ಲಿ ಅನಾಥ ಪ್ರಜ್ಞೆ ಕಾಡಲಾರಂಭಿಸಿತು. ಇದರಿಂದಾಗಿಯೇ ಕರ್ನಾಟಕ ಏಕೀಕರಣಕ್ಕೆ ಪೂರಕವಾಗುವ ಸ್ವಾತಂತ್ರ್ಯದ ಬಗ್ಗೆ ಕನ್ನಡಿಗರಲ್ಲಿ ನಿರಾಸೆಯ ಭಾವನೆ ಮನೆಮಾಡಿತ್ತು.

ವಿವಿಧ ರಾಜ್ಯಗಳಲ್ಲಿ ಹರಿದು ಹಂಚಿಹೋಗಿದ್ದ ಕನ್ನಡ ಪ್ರದೇಶಗಳನ್ನು ಒಂದುಗೂಡಿಸಲು ಕ್ರಮೇಣ ಹೋರಾಟ ಆರಂಭವಾಯಿತು ಮತ್ತು ದಿನದಿಂದ ದಿನಕ್ಕೆ ಹೋರಾಟ ತೀವ್ರಗೊಳ್ಳಲಾರಂಭಿಸಿತು. ಸ್ವಾತಂತ್ರ ಹೋರಾಟದಲ್ಲಿ ಪಾಲ್ಗೊಂಡಿದ್ದ ಕನ್ನಡಿಗರು ಏಕೀಕರಣ ಚಳುವಳಿಗೆ ಧುಮುಕಿದರು. ಇದರಿಂದಾಗಿ ಕನ್ನಡನಾಡಿನಲ್ಲಿ ಏಕೀಕರಣ ಚಳುವಳಿ ಸ್ವಾತಂತ್ರ್ಯ ಆಂದೋಲನ ರೂಪ ಪಡೆಯಿತು. ಭಾಷಾವಾರು ನೆಲೆಗಟ್ಟಿನಲ್ಲಿ ಆಂಧ್ರಪ್ರದೇಶ ರಚನೆಗೆ ಮಿಶ್ರಾ ಆಯೋಗವನ್ನು ರಚಿಸಿದ ಕೇಂದ್ರ ಸರ್ಕಾರ ಕರ್ನಾಟಕ ರಚನೆಯ ಬೇಡಿಕೆಯ ಬಗ್ಗೆ ಉದಾಸೀನತೆ ಪ್ರದರ್ಶಿಸಿತು. ಕೇಂದ್ರ ಸರ್ಕಾರದ ಈ ಧೋರಣೆಯನನು ಖಂಡಿಸಿ ಶಂಕರಗೌಡ ಪಾಟೀಲರು 23 ದಿವಸಗಳ ಕಾಲ ಉಪವಾಸ ಸತ್ಯಾಗ್ರಹ ಕೈಗೊಂಡರು. ಇಲ್ಲಿಂದ ಕರ್ನಾಟಕ ಏಕೀಕರಣ ಚಳುವಳಿ ಮಹತ್ವದ ತಿರುವು ಪಡೆದುಕೊಂಡಿತು. ಮಿಶ್ರಾ ಆಯೋಗವು ಬಳ್ಳಾರಿಯು ಮೈಸೂರು ರಾಜ್ಯಕ್ಕೆ ಸೇರಬೇಕೆಂದು ತೀರ್ಪು ನೀಡಿತು. ಬಳ್ಳಾರಿ, ಮೈಸೂರು ವಿಲೀನದ ಸಂಭ್ರಮಾಚರಣೆಗಾಗಿ ನಿರ್ಮಿಸಿದ್ದ ಸಭಾಮಂಟಪವನ್ನು ಸುಟ್ಟು ಹಾಕುವಂತಹ ಪ್ರಯತ್ನಗಳು ನಡೆದಿದ್ದವು.

ಅಖಂಡ ಕರ್ನಾಟಕ ರಾಜ್ಯ ರಚನೆಗಾಗಿ ಇಂತಹ ಹಲವಾರು ಹೋರಾಟಗಳು ಹೈದರಾಬಾದ್ ಕರ್ನಾಟಕ ಹಾಗೂ ಮುಂಬಯಿ ಕರ್ನಾಟಕ ಪ್ರಾಂತ್ಯಗಳಲ್ಲಿ ನಡೆದವು. ರಾಷ್ಟ್ರಕವಿ ಕುವೆಂಪು, ಸಮಾಜವೇದಿ ನೇತಾರ ಶಾಂತವೇರಿ ಗೋಪಾಲಗೌಡ, ಅಂದಿನ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯನವರು ಸಹ ಏಕೀಕರಣದ ಪರ ದನಿ ಎತ್ತಿದರು. ಆ ಸಮಯದಲ್ಲಿ ಮೈಸೂರು ಪ್ರಾಂತ್ಯದಲ್ಲಿ ಏಕೀಕರಣಕ್ಕೆ ವಿರೋಧಿಸಿದ್ದ ಸಂದರ್ಭದಲ್ಲಿಯೂ ಕೂಡ ಏಕೀಕರಣದ ಪರ ಬಿಗಿ ನಿಲುವನ್ನು ಕೆಂಗಲ್ ಹನುಮಂತಯ್ಯನವರು ಪ್ರದರ್ಶಿಸಿದರು. ಆದರೆ ಇದಕ್ಕಾಗಿ ಅವರು ತಮ್ಮ ಮುಖ್ಯಮಂತ್ರಿ ಗಾದಿಯನ್ನೇ ಕಳೆದುಕೊಳ್ಳಬೇಕಾಯಿತು. ಇಂತಹ ಹಲವಾರು ಜನ ಹೋರಾಟಗಾರ ತ್ಯಾಗ, ಬಲಿದಾನದ ಫಲವಾಗಿ 1956 ನವೆಂಬರ್ 1ರಂದು ಅಖಂಡ ಕರ್ನಾಟಕ 'ಮೈಸೂರು ರಾಜ್ಯ' ಎಂಬ ಹೆಸರಿನಲ್ಲಿ ಅಸ್ತಿತ್ವಕ್ಕೆ ಬಂತು. 1973 ನವೆಂಬರ್ 1ರಂದು 'ಮೈಸೂರು' ಕರ್ನಾಟಕ ಎಂಬ ಹೆಸರಿನಲ್ಲಿ ಮರುನಾಮಕರಣವಾಯಿತು.

ಆದರೆ ಇತ್ತೀಚೆಗೆ ಅಖಂಡ ಕರ್ನಾಟಕ ರಾಜ್ಯ ವಿಭಜನೆ ಆಗಬೇಕೆಂಬ ಕೂಗು ಆಗಾಗ ಕೇಳಿಬರುತ್ತಿದೆ. ಭಾರತೀಯ ಜನತಾಪಕ್ಷದ ಶಾಸಕ ಉಮೇಶ್ ಕತ್ತಿಯೆದರು ಪತ್ರ್ಯೇಕ ರಾಜ್ಯ ರಚನೆಯ ಬೇಡಿಕೆಯನ್ನು ಆಗಾಗ ಮುಂದಿಡುತ್ತಿದ್ದಾರೆ. ಒಂದು ವೇಳೆ ಕರ್ನಾಟಕ ವಿಭಜನೆ ಆಗಬೇಕು ಎನ್ನುವ ಬೇಡಿಕೆಗೆ ದಕ್ಷಿಣ ಕರ್ನಾಟಕದ ಜನತೆ 'ನಾವು ಸಿದ್ಧರಿದ್ದೇವೆ, ವಿಭಜನೆ ಆಗಲಿ' ಅಂದುಬಿಟ್ಟರೆ ಅಂಥ ಸಂದರ್ಭದಲ್ಲಿ ಉತ್ತರ ಕರ್ನಾಟಕಕ್ಕೆ ಭಾರಿ ಪ್ರಮಾಣದ ನಷ್ಟವಾಗಲಿದೆ. 1956ರಲ್ಲಿ ಕರ್ನಾಟಕ ಏಕೀಕರಣವಾದ ನಂತರ ಉತ್ತರ ಕರ್ನಾಟಕದ ಜನತೆಗಾಗಿ ಹಲವು ಪ್ರಮುಖ ನೀರಾವರಿ


downloaded from: www.kpscvaani.com

ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸಲಾಯಿತು. ನಿಜಲಿಂಗಪ್ಪನವರ ಅಧಿಕಾರಾವಧಿಯಲ್ಲಿ ಮಲಪ್ರಭಾ, ಘಟಪ್ರಭಾ, ಆಲಮಟ್ಟಿ, ನಾರಾಯಣಪುರ ಅಧಿಕಾರಾವಧಿಯಲ್ಲಿ ಮಲಪ್ರಭಾ, ಘಟಪ್ರಭಾ, ಆಲಮಟ್ಟಿ, ನಾರಾಯಣಪುರ ಜಲಾಶಯಗಳ ನಿರ್ಮಾಣ ಕಾರ್ಯ ಆರಂಭಗೊಂಡು ಇತ್ತೀಚೆಗೆ ಪೂರ್ಣಗೊಂಡಿವೆ. ಈ ನೀರಾವರಿ ಯೊಜನೆಗಳಿಂದ ಉತ್ತರ ಕರ್ನಾಟಕದ ಲಕ್ಷಾಂತರ ಹೆಕ್ಟೇರ್ ಭೂಮಿ ನೀರಾವರಿಗೆ ಒಳಪಟ್ಟಿದೆ. ಅಂದರೆ ದಕ್ಷಿಣ ಕನಾಟಕದಲ್ಲಿ ನೀರಾವರಿಗೊಳಪಟ್ಟ ಎರಡೂವರೆ ಪಟ್ಟಿಗೂ ಹೆಚ್ಚು ಭೂಪ್ರದೇಶಕ್ಕೆ ಉತ್ತರ ಕರ್ನಾಟಕದಲ್ಲಿ ನೀರಾವರಿ ಸೌಲಭ್ಯ ದೊರೆತಿದೆ.

ಕಳೆದ ಒಂದೆರಡು ದಶಕಗಳಲ್ಲಿ ಹಂಪಿಯಲ್ಲಿ ಕನ್ನಡ ವಿಶ್ವವಿದ್ಯಾಲಯ ಬೆಳಗಾವಿಯಲ್ಲಿ ತಾಂತ್ರಿಕ ವಿಶ್ವವಿದ್ಯಾಲಯ, ಬಿಜಾಪುರದಲ್ಲಿ ಮಹಿಳಾ ವಿಶ್ವವಿದ್ಯಾಲಯ, ಹಾವೇರಿಯಲ್ಲಿ ಜಾನಪದ ವಿಶ್ವವಿದ್ಯಾಲಯ, ಬಾಗಲಕೋಟೆಯಲ್ಲಿ ತೋಟಗಾರಿಕಾ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಲಾಗಿದೆ. ಉತ್ತರ ಕರ್ನಾಟಕದ ಜನರ ಅನುಕೂಲಕ್ಕಾಗಿ ಧಾರವಾಡ ಹಾಗೂ ಗುಲ್ಬರ್ಗಾದಲ್ಲಿ ಹೈಕೋರ್ಟ್ ಸಂಚಾರಿ ಪೀಠಗಳನ್ನು ಸ್ಥಾಪಿಸಲಾಗಿದೆ. ಹೈದರಾಬಾದ್ ಕರ್ನಾಟಕದ ಆರು ಜಿಲ್ಲೆಗಳಿಗೆ 371(ಜೆ) ವಿಧಿಯನ್ವಯ ವಿಶೇಷ ಸ್ಥಾನಮಾನ ನೀಡಲಾಗಿದೆ.

ಇವೆಲ್ಲವುಗಳಿಗೆ ಕಳಶವಿಟ್ಟಂತೆ ಬೆಳಗಾವಿಯಲ್ಲಿ ಸುವರ್ಣಸೌಧ ಸ್ಥಾಪಿಸಲಾಗಿದೆ. ರಾಜಕೀಯವಾಗಿಯೂ ಉತ್ತರ ಕರ್ನಾಟಕಕ್ಕೆ ಸಾಕಷ್ಟು ಪ್ರಾತಿನಿಧ್ಯ ನೀಡಲಾಗಿದೆ. ಈ ಭಾಗದ ಎಸ್.ನಿಜಲಿಂಗಪ್ಪ, ಬಿ.ಡಿ. ಜತ್ತಿ, ವೀರೇಂದ್ರ ಪಾಟೀಲ್ ರಾಮಕೃಷ್ಣ ಹೆಗ್ಗಡೆ, ಎಸ್.ಆರ್.ಕಂಠಿ, ಧರ್ಮಸಿಂಗ್, ಜಗದೀಶ್ ಶೆಟ್ಟರ್, ಎಸ್.ಆರ್.ಬೊಮ್ಮಾಯಿ ಅವರು ಈ ರಾಜ್ಯದ ಮುಖ್ಯಮಂತ್ರಿಗಳಾಗಿದ್ದಾರೆ. ಕರ್ನಾಟಕವನ್ನು ಆಳಿದ ಯಾವುದೇ ಮುಖ್ಯಮಂತ್ರಿಗಳ ಅವಧಿಯಲ್ಲಿ ಉತ್ತರ ಕರ್ನಾಟಕವನ್ನು ಉದಾಸೀನದಿಂದ ಕಂಡಿಲ್ಲ. ಆದರೂ ಪ್ರಾದೇಶಿಕ ಅಸಮತೋಲನ ನಿವಾರಣೆಯ ಬಗ್ಗೆ ಅಧ್ಯಯನ ನಡೆಸಿ ವರದಿ ಸಲ್ಲಿಸಲು ಡಾ॥ಡಿ.ಎಂ.ನಂಜುಂಡಪ್ಪನವರ ಅಧ್ಯಕ್ಷತೆಯಲ್ಲಿ ಪ್ರಾದೇಶಿಕ ಅಸಮತೋಲನ ನಿವಾರಣಾ ಸಮಿತಿಯನ್ನು ನೇಮಕ ಮಾಡಲಾಯಿತು. ಈ ಸಮಿತಿಯ ವರದಿಯ ಮೇರೆಗೆ ಉತ್ತರ ಕರ್ನಾಟಕದ ಅಭಿವೃದ್ಧಿಗೆ ಪ್ರತಿ ವರ್ಷ ಸಾವಿರಾರು ಕೋಟಿ ರೂ.ಗಳ ಹಣವನ್ನು ವ್ಯಯಿಸಲಾಗುತ್ತಿದೆ. ಇನ್ನು ರಾಜ್ಯ ಸರ್ಕಾರದ ಬೊಕ್ಕಸಕ್ಕೆ ಬರುವ ಒಟ್ಟು ಆದಾಯದ ಶೇ.50ರಷ್ಟು ಪಾಲು ದಕ್ಷಿಣ ಕರ್ನಾಟಕದ ಬೆಂಗಳೂರು ನಗರವೊಂದರಿಂದಲೇ ಸಂಗ್ರಹವಾಗುತ್ತಿದೆ. ಹಾಗಾಗಿ ಉತರ ಕರ್ನಾಟಕಕ್ಕೆ ಅನ್ಯಾಯವಾಗುತ್ತಿದೆ. ವಿಭಜನೆಯೇ ಇದಕ್ಕೆ ಉತ್ತರ ಎನ್ನುವ ವಾದ ಅಸಮಂಜಸವಾದುದು.

ಉಪಸಂಹಾರ : ಒಟ್ಟಾರೆಯಾಗಿ ಹೇಳುವುದಾದರೆ ಆಗಾಗ ಕೇಳಿಬರುವ ಕರ್ನಾಟಕ ವಿಭಜನೆಯ ಕೂಗು ಕನ್ನಡ ನೆಲದ ಏಕತೆ, ಸಮಗ್ರತೆ ನಾವೆಲ್ಲರೂ ಒಂದು ಎಂಬ ಭಾವನೆಗೆ ಧಕ್ಕೆಯುಂಟು ಮಾಡುತ್ತಿದೆ. ಇಂದು ಸಣ್ಣ ಧ್ವನಿಯಲ್ಲಿ ಕೇಳಿಬರುತ್ತಿರುವ ಪ್ರತ್ಯೇಕ ರಾಜ್ಯ ರಚನೆಯ ಕೂಗು ಮುಂದೆ ತೆಲಂಗಾಣದ ಮಾದರಿಯಲ್ಲಿ ಬೃಹತ್ ಚಳುವಳಿಯಾಗಿ ಹೊರಹೊಮ್ಮಬಹುದು. ಆದ್ದರಿಂದ ಪ್ರಾದೇಶಿಕ ಅಸಮಾನತೆ ನಿವಾರಣೆ, ಉತ್ತರ ಕರ್ನಾಟಕದ ಅಭಿವೃದ್ಧಿಗೆ ಬದ್ಧರಾಗಿರಬೇಕು. ಇಂತಹ ಪ್ರತ್ಯೇಕ ರಾಜ್ಯ ರಚನೆಯ ಕೂಗಿಗೆ ಅಭಿವೃದ್ಧಿ ಮೂಲಕವೇ ಉತ್ತರಿಸಬೇಕು. ಆಗ ಪ್ರತ್ಯೇಕ ರಾಜ್ಯ ರಚನೆಯ ಕೂಗು



downloaded from: www.kpscvaani.com

ತಾನಾಗಿಯೇ ಕಣ್ಮರೆಯಾಗುತ್ತದೆ. ಒಟ್ಟಿನಲ್ಲಿ ಅಖಂಡ ಕರ್ನಾಟಕ ರಚನೆಯಾಗಬೇಕು ಎಂದು ಸಂಕಲ್ಪ ಮಾಡಿ ಹೋರಾಟ ನಡೆಸಿದ ನೆಲದಿಂದಲೇ ಕರ್ನಾಟಕ ವಿಭಜನೆಯ ಅಪಸ್ವರ ಕೇಳಿ ಬರುತ್ತಿರುವುದು ವಿಷಾದದ ಸಂಗತಿಯಾಗಿದೆ.

## ಪ್ರಬಂಧ 8 : ತ್ರಿವಳಿ ತಲಾಖ್

"ಜಗವೆಂಬ ಹಣತೆಯಲ್ಲಿ ಬದುಕೆಂಬ ಎಣ್ಣೆ ಹಾಕಿ

ಗಂಡೆಂಬ ಬತ್ತಿಯಲ್ಲಿ ಹೆಣ್ಣೆಂಬ ಜ್ಯೋತಿ ಹಚ್ಚಿದರೆ

ಜಗವೆಲ್ಲಾ ಬೆಳಗುವುದಿಲ್ಲವೇ?"

**– ಸಾ.ರಾ.ಅಬೂಬಕ್ಕರ್**

"ಭಾರತದ ಚರಿತ್ರೆಯನ್ನು ತೆಗೆದು ನೋಡಿದಾಗ ಗಂಡನಿಗಾಗಿ ಪ್ರಾಣತೆತ್ತ ಲಕ್ಷ ಲಕ್ಷ ಹೆಂಗಸರು ಸಿಗುತ್ತಾರೆ. ಗಂಡನಿಗಾಗಿ ಉರಿಯುವ ಚಿತೆಗೆ ಪ್ರಾಣ ಸಮರ್ಪಣೆ ಮಾಡಿದ ಅಸಂಖ್ಯಾತ ಮಹಿಳೆಯರಿದ್ದಾರೆ. ಗಂಡನಿಗಾಗಿ ತನ್ನನ್ನೇ ಉರಿಯುವ ಚಿತೆಗೆ ಅರ್ಪಿಸಿಕೊಳ್ಳಲು ಅದೆಂಥ ಮಾನಸಿಕ ಶಕ್ತಿ, ಪರಮ ಧೈರ್ಯ ಬೇಕು?"

ಗಂಡ ಹೊರಗಡೆ ದುಡಿದರೆ ಹೆಂಡತಿ ಹೊರಗೆ ಮತ್ತು ಮನೆಯೊಳಗೆ ದುಡಿಯುತ್ತ, ಆರ್ಥಿಕ ವ್ಯವಹಾರವನ್ನು ಗಂಡನಿಗೆ ಬಿಟ್ಟು ತನ್ನ ಇಡೀ ಜೀವನವನ್ನು ಕುಟುಂಬಕ್ಕಾಗಿ ತ್ಯಾಗ ಮಾಡುವ ಮಹಿಳೆಯರಿರುವ ಈ ಸಮಾಜದಲ್ಲಿ ಗಂಡನೆನಿಸಿಕೊಂಡವನು ಹೆಂಡತಿಯನ್ನು ಬಟ್ಟೆಯ ರೀತಿಯಲ್ಲಿ ಬದಲಾಯಿಸುವುದು ಎಷ್ಟರ ಮಟ್ಟಿಗೆ ಸರಿ ಎಂಬುದು ನನ್ನ ಮನಸ್ಸಿನಲ್ಲಿ ಕಾಡುತ್ತಿರುವ ಪ್ರಶ್ನೆ.

ಸರಿಯಾದ ನ್ಯಾಯ ಹೊದಗಿಸಿ ಕೊಡದೆ ಹೆಂಡತಿಗೆ ಏಕಾಏಕಿ ವಿಚ್ಛೇಧನ ನೀಡುವುದು ಸಂವಿಧಾನ ಬಾಹಿರ ಎಂದು ಇತ್ತೀಚೆಗೆ ಸುಪ್ರೀಂ ಕೋರ್ಟ್ 'ತ್ರಿವಳಿ ತಲಾಖ್' ಪ್ರಕರಣಕ್ಕೆ ಸಂಬಂಧಿಸಿದ ತೀರ್ಪಿನಲ್ಲಿ ಹೇಳಿದೆ. ತ್ರಿವಳಿ ತಲಾಖ್ ಎನ್ನುವುದು ಮುಸ್ಲೀಂ ಸಮುದಾಯದಲ್ಲಿ ಚಾಲ್ತಿಯಲ್ಲಿರುವ ವಿವಾಹ ವಿಚ್ಛೇದನಕ್ಕೆ ಸಂಬಂಧಿಸಿದ ಒಂದು ಪದ್ಧತಿಯಾಗಿದ್ದು ಇದರಿಂದ ನಮಗೆ ಅನ್ಯಾಯವಾಗುತ್ತಿದೆ ಎನ್ನುವುದು ಕೆಲವು ಮುಸ್ಲೀಂ ಮಹಿಳೆಯರ ವಾದವಾದರೆ ಇದೊಂದು ಧಾರ್ಮಿಕ ಪದ್ಧತಿ ಎನ್ನುವುದು ಹಲವರ ವಾದ.

**ತ್ರಿವಳಿ ತಲಾಖ್ :** ತ್ರಿವಳಿ–ಮೂರು, ತಲಾಖ್–ದಾಂಪತ್ಯ ಜೀವನದ ಅಂತ್ಯ ಎಂದರ್ಥ. ಇದು ಮುಸ್ಲೀಂ ಸಮುದಾಯದಲ್ಲಿ ಪತಿ ತನ್ನ ಪತ್ನಿಗೆ ವಿಚ್ಛೇದನ ನೀಡುವ ಒಂದು ಪದ್ಧತಿಯಾಗಿದೆ. ಇದನ್ನು ಮೂರು ವಿಭಾಗಗಳನ್ನಾಗಿ ಮಾಡಲಾಗಿದೆ. ಅವುಗಳೆಂದರೆ

1. **ತಲಾಖ್–ಎ–ಆಹಸನ್ :** ಇದು ಪತಿಯು ಪತ್ನಿ ಶುದ್ಧವಾಗಿದ್ದಾಗ ಅಂದರೆ ಋತುಸ್ರಾವವಿಲ್ಲದಿದ್ದಾಗ 3 ಬಾರಿ ಹೇಳುವ ಒಂದು ಪದ್ಧತಿಯ ತಲಾಖ್, ಇದನ್ನು ಹೇಳಿದ ನಂತರ ಇದ್ದಾತ್ ಅವಧಿಯ ತನಕ ಕಾಯಬೇಕಾಗುತ್ತದೆ, ಇದ್ದಾತ್ ಅವಧಿಯೊಳಗೆ ತಲಾಖ್



downloaded from: www.kpscvaani.com

ಅನ್ನು ಹಿಂತೆಗೆದುಕೊಳ್ಳಲು ಅವಕಾಶವಿದ್ದು, ಇದ್ದಾತ್ ಅವಧಿಯ ನಂತರ ಅದನ್ನು ಹಿಂತೆಗೆದುಕೊಳ್ಳಲು ಸಾಧ್ಯವಿಲ್ಲ

2. **ತಲಾಖ್–ಎ–ಹಸ್ನಾನ್ :** ಇದು ಇಸ್ಲಾಂ ಧರ್ಮದಲ್ಲಿ ಚಾಲ್ತಿಯಲ್ಲಿರುವ ಮತ್ತೊಂದು ರೀತಿಯ ತಲಾಖ್ ಆಗಿದ್ದು, 3 ಬಾರಿ ಅನುಕ್ರಮವಾಗಿ 3 ಋತುಸ್ರಾವ ಮುಗಿದಮೇಲೆ ಅಥವಾ ಪ್ರತಿ 30 ದಿನಗಳ ಅಂತರದಲ್ಲಿ 3 ಬಾರಿ ತಲಾಖ್ ಹೇಳಬಹುದು. 3ನೇ ಬಾರಿ ಹೇಳುವುದಕ್ಕೆ ಮುಂಚೆ ಹಿಂತೆಗೆದುಕೊಳ್ಳಲು ಅವಕಾಶವಿದೆ.
3. **ತಲಾಖ್–ಎ–ಬಿದ್ದತ್ :** 'ತಲಾಖ್–ಎ–ಬಿದ್ದತ್' ಮತ್ತೊಂದು ಪ್ರಕಾರದ ವಿಚ್ಛೇಧನವಾಗಿದ್ದು, ಇದು ತತ್‌ಕ್ಷಣದಿಂದಲೇ ಜಾರಿಗೆ ಬರುತ್ತದೆ. ಪತಿಯು ಪತ್ನಿಗೆ ಮೌಖಿಕವಾಗಿ ಅಥವಾ ಲಿಖಿತ ರೂಪದಲ್ಲಿ ಅಥವಾ ಅಂತರ್ಜಾಲ ಮಾಧ್ಯಮದ ಮುಖಾಂತರ ಎಂದರೆ ವಾಟ್ಸ್‌ಆಪ್, ಫೇಸ್‌ಬುಕ್, ಎಸ್.ಎಂ.ಎಸ್, ಇ–ಮೇಲ್ ಮೂಲಕ ಮೂರು ಬಾರಿ ತಲಾಖ್ ಎಂದು ಕಳಿಸುವ ಮೂಲಕ ಕೂಡ ತಲಾಖ್ ನೀಡಬಹುದು. ಇದಕ್ಕೆ ಯಾವುದೇ ರೀತಿಯ ಕಾರಣಗಳನ್ನು ನೀಡಲೇ ಬೇಕೆಂಬ ಅಗತ್ಯವಿಲ್ಲ. ಅದೇ ರೀತಿ ವಿಚ್ಛೇದನ ನೀಡುವ ಸಂದರ್ಭದಲ್ಲಿ ವಿಚ್ಛೇದನ ನೀಡುವ ವ್ಯಕ್ತಿಯು ಹಾಜರಿರಬೇಕೆಂದೆನಿಲ್ಲ. ಈ ಪದ್ಧತಿಯನ್ನು ಹೆಚ್ಚಾಗಿ 'ಹನ್ನಾಫಿ' ಕಾನೂನು ಅನುಯಾಯಿಗಳು ಪಾಲಿಸುತ್ತಾರೆ.

**ಹಿನ್ನೆಲೆ :** ಶರಿಯತ್ ಅಪ್ಲಿಕೇಶನ್ ಆ್ಯಕ್ಟ್ ಅಥವಾ ಶರಿಯತ್ ಕಾನೂನು 1947ರಕ್ಕಿಂತ ಹಿಂದೆಯೆ ಅಂದರೆ 1937ರಲ್ಲಿ ಜಾರಿಗೆ ತರಲಾಯಿತು. ಒಂದು ವೈಯಕ್ತಿಕ ಕಾನೂನು, ಇದು ಮುಸ್ಲೀಂರ ಮೇಲೆ ಆದಿಪತ್ಯ ನಡೆಸುತ್ತಿದೆ. ತ್ರಿವಳಿ ತಲಾಖ್‌ನಂತಹ ಆಚರಣೆಗಳು ಮುಸ್ಲೀಂ ಮಹಿಳೆಯರ ಮೂಲಭೂತ ಹಕ್ಕುಗಳನ್ನು ಉಲ್ಲಂಘಿಸುತ್ತದೆ ಎಂದು ಸರ್ಕಾರ ಬಹಳ ಕಾಲದಿಂದಲೂ ವಾದಿಸಿಕೊಂಡು ಬಂದಿತು.

ಇದಕ್ಕೆ ಪೂರಕವೆಂಬಂತೆ ಸರ್ಕಾರಕ್ಕೆ ಪರವಾಗಿ ಹಾಗೂ ತನ್ನ ಮೂಲಭೂತ ಹಕ್ಕಿಗಾಗಿ ಹೋರಾಡಲು ಮುಸ್ಲೀಂ ಮಹಿಳೆಯರು ದನಿ ಎತ್ತಿದ್ದರು ಅಂತವರಲ್ಲಿ ಶಾಯರಾ ಬಾನು, ಅತಿಯಾ ಸಾಬ್ರಿ, ಗುಲ್ಶನ್ ಪರ್ವೀನ್, ಇಶ್ರಾತ್ ಜಹಾನ್ ಅತಿಯಾ ಸಬ್ರಿ ಮತ್ತು ಆಫ್ರಿನ್ ರೆಹ್ಮಾನ್ ಪ್ರಮುಖರು. ಇವರ ಈ ಧೈರ್ಯ ಮತ್ತು ಸಾಹಸದಿಂದ ಇಂದು ತ್ರಿವಳಿ ತಲಾಖ್ ಎಂಬ ಕಾನೂನು ರಹಿತ ಪದ್ಧತಿ ಅಸಿಂಧುವಾಯಿತು.

**ಏನಿದು ಪ್ರಕರಣ :**

'ತ್ರಿವಳಿ ತಲಾಖ್'ನ ಸಂತ್ರಸ್ತೆಯಾದ 36 ವರ್ಷದ ಶಾಯರ ಬಾನು ಕಳೆದ ವರ್ಷ 2016ರ ಫೆಬ್ರವರಿಯಲ್ಲಿ ಇಂತಹ ಪದ್ಧತಿಯನ್ನು ಪ್ರಶ್ನಿಸಿ ಸುಪ್ರೀಂಕೋರ್ಟ್ ಮೆಟ್ಟಿಲೇರಿದ್ದರು ಅಲ್ಲಿಂದಾಚೆಗೆ ತ್ರಿವಳಿ ತಲಾಖ್, ಬಹುಪತ್ನಿತ್ವ, ನಿರಾಹ್, ಹಲಾಲ ಪದ್ಧತಿ ನಿಷೇಧಿಸುವಂತೆ ಕೋರಿ ಹಲವಾರು ದೂರು ಅರ್ಜಿಗಳು ದಾಖಲಾದವು. ಹಾಗೆ ಇವರಿಗೆ ಹಲವು ಮುಸ್ಲೀಂ ಸಂಘಟನೆಗಳು ಕೂಡಾ ಬೆಂಬಲವಾಗಿ ನಿಂತವು.

**ತಲಾಖ್ ವಿಚಾರಣೆ :**

ಸುಪ್ರೀಂಕೋರ್ಟ್ 2016 ಜೂನ್ 29ರಂದು 'ತ್ರಿವಳಿ ತಲಾಖ್' ಮುಸ್ಲೀಂ ಸಮುದಾಯದಲ್ಲಿ ಸಾಂವಿಧಾನಿಕ ಚೌಕಟ್ಟಿನಲ್ಲಿ ಇದೆಯೇ ಎಂದು ಪರಿಶೀಲಿಸಲಾಗುವುದು ಎಂದು ಸುಪ್ರೀಂಕೋರ್ಟ್


downloaded from: www.kpscvaani.com

ಹೇಳಿತು. ಅದೇ ರೀತಿ ತ್ರಿವಳಿ ತಲಾಖ್, ನಿರಾಹ್, ಹಲಾಲ ಮತ್ತು ಬಹುಪತ್ನಿತ್ವದ ವಿಚಾರಣೆ ಮಾಡಲು 2017 ಫೆಬ್ರವರಿ 16ರಂದು ಪಂಚ ಸದಸ್ಯರ ಪೀಠ ಸ್ಥಾಪಿಸುವುದಾಗಿ ಸುಪ್ರೀಂಕೋರ್ಟ್ ಹೇಳಿತು. ನಂತರ ಪೀಠ ಸ್ಥಾಪಿಸಿ ಪ್ರಕರಣವನ್ನು ಪೀಠಕ್ಕೆ ವರ್ಗಾಯಿಸಿತು.

**ಕೇಂದ್ರ ಸರ್ಕಾರದ ನಿಲುವು :**

ತ್ರಿವಳಿ ತಲಾಖ್ ಅಸಾಂವಿಧಾನಿಕ ಎಂದು ಘೋಷಿಸಬೇಕು. ಭಾರತದಂತಹ ಜಾತ್ಯತೀತ ರಾಷ್ಟ್ರದಲ್ಲಿ ಇಂತಹ ಸಂಪ್ರದಾಯ ಸಲ್ಲದು ಎಂದು ಹೇಳಿದೆ. ಅದೇ ರೀತಿ ಕೇಂದ್ರ ಸರ್ಕಾರ ಇದರ ವಿರುದ್ಧ ಅಫಿಡೇವಿಟ್ ಕೂಡ ಸಲ್ಲಿಸಿತು.

**ನಿಷೇಧಕ್ಕೆ ಕಾರಣಗಳು :**

- ತ್ರಿವಳಿ ತಲಾಖ್ ಒಂದು ಅಸಾಂವಿಧಾನಿಕ ಪದ್ಧತಿ.
- ಶೇ.2ರಷ್ಟು ಅಂತರ್ಜಾಲದ ಮುಖಾಂತರ ತಲಾಖ್.
- ಶೇ.11ರಷ್ಟು ಇ-ಮೇಲ್ ಮೂಲಕ ತಲಾಖ್.
- ಶೇ.89ರಷ್ಟು ಸಂತ್ರಸ್ತರಿಗೆ ತಲಾಖ್ ನಂತರ ಪರಿಹಾರ ಸಿಕ್ಕಿಲ್ಲ.
- ಶೇ.80ರಷ್ಟು ಮುಸ್ಲೀಂ ಮಹಿಳೆಯರಿಂದ ತ್ರಿವಳಿ ತಲಾಖ್‌ಗೆ ವಿರೋಧ.

ತ್ರಿವಳಿ ತಲಾಖ್ ನಿಷೇಧದ ಅರ್ಜಿಗೆ 1ಮಿಲಿಯನ್ ಮುಸ್ಲೀಂಮರೇ ಸಹಿ ಹಾಕಿದ್ದಾರೆ ಹಾಗೂ ಮುಸ್ಲೀಂ ರಾಷ್ಟ್ರಗಳಲ್ಲಿಯೇ ನಿಷೇಧ ಇರುವಾಗ ಭಾರತದಲ್ಲಿ ಏಕೆ ಸಾಧ್ಯವಿಲ್ಲ ಎನ್ನುವುದು ಕೇಂದ್ರದ ವಾದ.

**ಸುಪ್ರೀಂ ಕೋರ್ಟ್‌ನ ಐತಿಹಾಸಿಕ ತೀರ್ಪು :**

2017 ಆಗಸ್ಟ್ 22ರಂದು ಸುಪ್ರೀಂಕೋರ್ಟ್ ಸ್ಥಾಪಿಸಿದ ಪಂಚ ಸದಸ್ಯರ ಪೀಠ ಎಲ್ಲಾ ರೀತಿಯ ವಾದ ವಿವಾದಗಳನ್ನು ಪರಿಶೀಲಿಸಿದ ನಂತರ ಮತ್ತು ತ್ರಿವಳಿ ತಲಾಖ್‌ಗೆ ಸಂಬಂಧಿಸಿದ 10 ವಿಭಾಗಗಳು ಮತ್ತು 10 ಉಪವಿಭಾಗಗಳಲ್ಲಿನ ವಿಷಯವಾರು ಉಲ್ಲೇಖಿಸಿ ಸುಪ್ರೀಂಕೋರ್ಟ್ ತೀರ್ಪು ಪರಿಗಣನೆಗೆ ತೆಗೆದುಕೊಂಡು. 3:2ರ ಬಹುಮತದೊಂದಿಗೆ 'ತಲಾಖ್-ಎ-ಬಿದ್ದತ್' ಅಂದರೆ 'ತ್ರಿವಳಿ ತಲಾಖ್' ರದ್ದು ಮಾಡಲಾಗಿದೆ ಎಂದಿತು.

**ಸಂವಿಧಾನಿಕ ಬಲ :**

ತ್ರಿವಳಿ ತಲಾಖ್ ಸಂವಿಧಾನದ ವಿಧಿ 14ಅನ್ನು ಉಲ್ಲಂಘಿಸುತ್ತದೆ ಮತ್ತು ಸಂವಿಧಾನದ ಅನುಚ್ಛೇದ 44ರ ಪ್ರಕಾರ, ದೇಶದ ಎಲ್ಲಾ ರಾಜ್ಯಗಳಲ್ಲಿರುವ ಪೌರರನ್ನು ಒಂದೇ ನೆಲೆಯಲ್ಲಿ ನೋಡುವಂತಹ ಸಮಾನ ನಾಗರಿಕ ಸಂಹಿತೆ ಜಾರಿಗೊಳಿಸುವುದು ಸರ್ಕಾರದ ಹೊಣೆಗಾರಿಕೆ.

**ಸರ್ವಧರ್ಮಪೀಠ/ಪಂಚಸದಸ್ಯರ ಪೀಠ :**

ಇದರಲ್ಲಿ ವಿವಿಧ ಧರ್ಮಗಳ ಐವರು ನ್ಯಾಯಧೀಶರು ಸೇರಿದ್ದರು.



downloaded from: www.kpscvaani.com

- ಮುಖ್ಯ.ನ್ಯಾ.ಜೆ.ಎಸ್.ಖೇಹರ್(ಪರ)– ಅಂದಿನ ಸುಪ್ರೀಂ ಕೋರ್ಟಿನ ಮುಖ್ಯ ನ್ಯಾಯ ಮೂರ್ತಿ. ಇವರು ಸಿಖ್ ಧರ್ಮದವರು.
- ನ್ಯಾ.ಯು.ಲಲಿತ.– ಇವರು ಹಿಂದೂ ಧರ್ಮದವರು.
- ನ್ಯಾ.ಕುರಿಯನ್ ಜೊಸೆಫ್– ಇವರು ಕ್ರಿಶ್ಚಿಯನ್ ಧರ್ಮದವರು.
- ನ್ಯಾ.ರೋಹಿಂಗ್ಟನ್ ನಾರಿಮನ್–ಇವರು ಪಾರ್ಸಿ ಧರ್ಮದವರು.
- ನ್ಯಾ.ಅಬ್ದುಲ್ ನಜೀರ್– ಇವರು ಇಸ್ಲಾಂ ಧರ್ಮದವರು.

ಇದರಲ್ಲಿ ನ್ಯಾ.ಕುರಿಯನ್ ಜೋಸೆಫ್, ರೋಹಿಂಗ್ಟನ್ ನಾರಿಮನ್, ಯು.ಯು.ಲಲಿತ ಇವರೆಲ್ಲರು ತ್ರಿವಳಿ ತಲಾಖ್ ಎಂಬುದು ಒಂದು ಅಜ್ಞಾನರ್ಹವಾದ ಪರಿಪಾಠವೇ ಇರಬಹುದು. ಇದು ಮಹಿಳೆಯ ಹಕ್ಕಿಗೆ ಹಾನಿಕಾರಕವಾಗಿದೆ ಎಂಬ ಅಭಿಪ್ರಾಯ ಪಟ್ಟಿದ್ದಾರೆ.

ತ್ರಿವಳಿ ತಲಾಖ್ ಎಂಬುದು ನಿಂತನಿಲುವಿಗೆ ಹೊಮ್ಮುವ ಆಚರಣೆಯಾದ್ದರಿಂದ. ಇದು ಸಮಾನತೆಯ ಹಕ್ಕಿಗೆ ಸಂಬಂಧಿಸಿದ 14ನೇ ವಿಧಿಯ ಉಲ್ಲಂಘನೆ ಎಂದು ತೀರ್ಪಿನಲ್ಲಿ ತಿಳಿಸಿದ್ದಾರೆ.

ನ್ಯಾ.ಖೇಹರ್ ಮತ್ತು ನ್ಯಾ.ಅಬ್ದುಲ್ ನಜೀರ್ ತ್ರಿವಳಿ ತಲಾಖ್ ದೋಷಪೂರಿತವಾಗಿದ್ದರು. ಸಂವಿಧಾನ ಅಡಿ ಮೂಲಭೂತ ಹಕ್ಕಿನ ಸ್ಥಾನಮಾನ ಹೊಂದಿರುವ ವೈಯಕ್ತಿಕ ಕಾನೂನುಗಳ ವಿಷಯದಲ್ಲಿ ಹಸ್ತಕ್ಷೇಪ ಮಾಡಲಾಗದು. ಇಂಥದೊಂದು ಪರಿಪಾಠವನ್ನು ಅಂತ್ಯಗೊಳಿಸಲು ಸಂಸತ್ತು ಕಾನೂನು ಜಾರಿಗೆ ತರಬೇಕಾಗುತ್ತದೆ ಎಂದರು. ಇದಕ್ಕಾಗಿ 6ತಿಂಗಳ ವರೆಗೆ ಆಚರಣೆಯನ್ನು ನಿಷೇಧಿಸಬೇಕು ಎಂದು ಹೇಳಿದರು.

### ವಿಶ್ವದ ಮುಸ್ಲೀಂ ರಾಷ್ಟ್ರಗಳಲ್ಲಿ ತ್ರಿವಳಿ ತಲಾಖ್ :

ತ್ರಿವಳಿ ತಲಾಖ್ ಪದ್ಧತಿ ಹಲವು ಮುಸ್ಲೀಂ ರಾಷ್ಟ್ರಗಳು ಈಗಾಗಲೇ ನಿಷೇಧಿಸಿವೆ. ಪಾಕಿಸ್ತಾನ, ಸೌದಿ ಅರೆಬೀಯಾ, ಟರ್ಕಿ, ಟ್ಯುನಿಷಿಯಾ, ಅಲ್ಜೀರಿಯಾ, ಇರಾಕ್, ಇರಾನ್, ಇಂಡೋನೇಷಿಯಾ ಮತ್ತು ಬಾಂಗ್ಲಾದೇಶ ಈ ಸಾಲಿಗೆ ಸೇರಿವೆ. ವಿಶ್ವದಲ್ಲಿ ತ್ರಿವಳಿ ತಲಾಖ್ ನಿಷೇಧಿಸಿದ ಮೊದಲ ದೇಶ– ಈಜಿಪ್ಟ್(1929)

- ಮೊರಾಕ್ಕೊ–ಇದರ ವಿಚಾರಣೆ ಜಾತ್ಯಾತೀತ ನ್ಯಾಯಾಲಯದಲ್ಲಿ ನಡೆಯುತ್ತದೆ.
- ಅಫ್ಘಾನಿಸಾನ ವಿಚ್ಛೇದನಕ್ಕೆ ಒಂದೇ ಬಾರಿ ತ್ರಿವಳಿ ತಲಾಖ್ ಮಾನ್ಯವಲ್ಲ(1958)
- ಟರ್ಕಿ–ಇದರ ವಿಚಾರಣೆ ನಡೆಸುವ ಹೊಣೆಗಾರಿಕೆ ನ್ಯಾಯಲಯದ್ದು ಪತಿ/ಪತ್ನಿಯ ಸಾವು ಸಂಭವಿಸಿದರಷ್ಟೆ ವಿವಾಹ ಜೀವನ ಅಂತ್ಯ. ಬಹುಪತ್ನಿತ್ವ ನಿಷೇಧಿಸಿದೆ. ಇದಕ್ಕೆ 2 ವರ್ಷ ಸೆರೆವಾಸ ಶಿಕ್ಷೆ ಇದೆ.
- ಟ್ಯುನಿಷಿಯಾ(1956) ತಲಾಖ್ ಪದ್ಧತಿಗೆ ಮಾನ್ಯತೆಯಿಲ್ಲ. ಬಹುಪತ್ನಿತ್ವಕ್ಕೆ ಒಂದು ವರ್ಷ ಸೆರೆವಾಸ ಅಥವಾ 2.4ಲಕ್ಷ ಪ್ರಾಂಕ್(500 ಡಾಲರ್) ದಂಡ.
- ಇಂಡೋನೆಷಿಯಾ–ಬಹುಪತ್ನಿತ್ವಕ್ಕೆ ಮಾನ್ಯತೆಯಿದೆ ಆದರೆ ವಿಚ್ಛೇದನ ಪ್ರಕ್ರಿಯೆ ನ್ಯಾಯಲಯದ ಉಸ್ತುವಾರಿಯಲ್ಲಿ ನಡೆಯುತ್ತದೆ.(1974)


downloaded from: www.kpscvaani.com

- ಲಿಬಿಯಾ–1959, ಕುವೈತ್–1976, ಯಮನ್–1977, ಪಾಕಿಸ್ತಾನ–1961ರಲ್ಲಿ ತ್ರಿವಳಿ ತಲಾಖ್ ರದ್ದು ಪಡಿಸಿತು.

ಒಟ್ಟಾರೆಯಾಗಿ ಸಾವಿರ ಅಪರಾಧಿಗಳು ಶಿಕ್ಷೆಯಿಂದ ಪಾರಾದರು ಒಬ್ಬ ನಿರಪರಾಧಿಗೆ ಶಿಕ್ಷೆಯಾಗಬಾರದೆಂಬ ನಾಣ್ಣುಡಿಯಂತೆ ತ್ರಿವಳಿ ತಲಾಖ್ ನಿಷೇಧದಿಂದ ಅಮಾಯಕ ಮುಸ್ಲೀಂ ಮಹಿಳೆಯರಿಗೆ ಆಗುವ ಅನ್ಯಾಯವನ್ನು ಸರಿಪಡಿಸಿದಂತಾಗಿದೆ. ಕೆಲವೊಂದು ಧಾರ್ಮಿಕ ಭಾವನೆಗಳು ಮತ್ತೊಬ್ಬರಿಗೆ ಅನ್ಯಾಯ ಅಥವಾ ನೋವುಂಟು ಮಾಡುತ್ತದೆ ಎನ್ನುವುದಾದರೆ ಅವುಗಳ ಅನುಸರಣೆಯನ್ನು ಬದಲಾಯಿಸುವುದೆ ನಿಜವಾದ ಭಕ್ತಿ.

## ಪ್ರಬಂಧ 9 : ಅತ್ಯಾಚಾರಿಗಳಿಗೆ ಗಲ್ಲು ಶಿಕ್ಷೆಯೇ ?

**ಹೆಣ್ಣು – ಹೆಣ್ಣು ಎಂದೇಕೆ ಬಡೆದಾಡುವೆ ಅಯ್ಯ**

**ಹೆಣ್ಣಿಂದಲೇ ಹುಟ್ಟಿ, ಜಗವೆಲ್ಲ ಕಂಡೆ ಅಯ್ಯ**

**---ಸರ್ವಜ್ಞ**

ಭಾರತ ದೇಶದ ಸಂಸ್ಕೃತಿ ಅನಾದಿ ಕಾಲದಿಂದಲೂ ಹೆಣ್ಣನ್ನು ಪೂಜಿಸುತ್ತ ಬಂದಿದೆ. ಹೆಣ್ಣನ್ನು ಆದಿಶಕ್ತಿ, ಪರಾಶಕ್ತಿ ಎಂದು ವರ್ಣಿಸುತ್ತಾ ಪ್ರಕೃತಿ, ಭೂಮಿ, ನದಿಗಳನ್ನು ತಾಯಿಗೆ ಹೋಲಿಸಿ ಆರಾಧಿಸುತ್ತಾ ಬಂದಿರುವ ನಮ್ಮ ನಾಡಿನಲ್ಲಿ ಕೆಲವು ಕಾಮಾಂಧರ ದುರ್ವರ್ತನೆಯು ನಮ್ಮ ಸಂಸ್ಕೃತಿಗೆ ಕಪ್ಪು ಚುಕ್ಕೆಯಾಗುತ್ತಿದೆ.

"ಹೇಳುವುದು ಆಚಾರ, ಮಾಡುವುದು ಅನಾಚಾರ" ಎಂಬಂತೆ ಹೆಣ್ಣು ಹುಟ್ಟಿದರೆ ಅದೊಂದು ಹುಣ್ಣು ಎನ್ನುವ ಮನಸುಗಳು ಅದೆಷ್ಟೋ. ಇನ್ನು ಒಂದು ಹೆಣ್ಣು ಬೆಳೆದರೆ ಅದೆಷ್ಟೋ ಕಾಮುಕರ ಕಣ್ಣಿಗೆ ನೈವೇದ್ಯವಾಗುವಳೋ?. ಅಂದು ರಾಷ್ಟ್ರಪಿತ ಮಹಾತ್ಮ ಗಾಂಧೀಜಿ "ಹೆಣ್ಣು ಮಧ್ಯ ರಾತ್ರಿ ಒಂಟಿಯಾಗಿ ಓಡಾಡುವಂತಾದರೆ ಅಂದು ನಮಗೆ ನಿಜವಾದ ಸ್ವಾತಂತ್ರ್ಯ ಸಿಕ್ಕಂತೆ" ಎಂದು ಹೇಳಿದ್ದರು, ಆದರೆ ಇಂದು ನಿರ್ಭಯ ಕಾಯ್ದೆ ಜಾರಿಯಾದ ಮೇಲೂ ರಾತ್ರಿ ಅಲ್ಲ ಹಗಲಲ್ಲೇ ಹೆಣ್ಣು ಒಂಟಿಯಾಗಿ ನಿರ್ಭಯಳಾಗಿ ಓಡಾಡಲು ಸಾಧ್ಯವಾಗುತ್ತಿಲ್ಲ ಎನ್ನುವ ಸತ್ಯ ತಿಳಿಯಲು ವರದಿಯಾಗುತ್ತಿರುವ ಅತ್ಯಾಚಾರ, ಲೈಂಗಿಕ ದೌರ್ಜನ್ಯ ಪ್ರಕರಣಗಳೇ ಸಾಕು. ಎಷ್ಟೇ ಬಿಗಿ ಕಾನೂನು ಇದ್ದಾಗ್ಯೂ ಅತ್ಯಾಚಾರ ಅದರಲ್ಲೂ ಮಕ್ಕಳ ಮೇಲಿನ ಅತ್ಯಾಚಾರ ಕಡಿಮೆಯಾಗದ ಕಾರಣ ಅದನ್ನು ನಿಯಂತ್ರಣಕ್ಕೆ ತರಲು ಗಲ್ಲು ಸೇರಿದಂತೆ ಬಹಳ ಉಗ್ರ ರೂಪದ ಶಿಕ್ಷೆಯೊಂದೇ ಪರಿಹಾರ ಎಂಬ ಕೂಗು ಕೇಳಿ ಬರುತ್ತಿದೆ.

ನ್ಯಾಷನಲ್ ಕ್ರೈಮ್ ರೆಕಾರ್ಡ್ ಬ್ಯೂರೋ ಪ್ರಕಾರ 2016ರಲ್ಲಿ ಭಾರತದಲ್ಲಿ ಅತ್ಯಾಚಾರಕ್ಕೆ ಸಂಬಂಧಿಸಿದಂತೆ ದಾಖಲಾದ ಪ್ರಕರಣಗಳು 38947. ಇದರಲ್ಲಿ ಶೇಕಡ 94.6 ಅಂದರೆ 36859 ಪ್ರಕರಣಗಳಲ್ಲಿ ಅತ್ಯಾಚಾರ ಮಾಡಿದ ವ್ಯಕ್ತಿಯು ಅತ್ಯಾಚಾರಕ್ಕೊಳಗಾದ ಹೆಣ್ಣಿನ ಪರಿಚಯಸ್ಥರೋ, ಸಂಬಂಧಿಗಳೋ ಆಗಿದ್ದಾರೆ. ಈ ಪೈಕಿ 2116 ಜನ 12 ವರ್ಷದೊಳಗಿನ ಹೆಣ್ಣು ಮಕ್ಕಳು



downloaded from: www.kpscvaani.com

ಅತ್ಯಾಚಾರಕ್ಕೊಳಗಾಗಿವೆ ಎನ್ನುವ ವಿಷಯ ನಿಜಕ್ಕೂ ನೋವಿನ ಸಂಗತಿ. ಭಾರತದಲ್ಲಿ ಪ್ರತಿ ದಿನ ಸರಿ ಸುಮಾರು 106 ಅತ್ಯಾಚಾರ ಪ್ರಕರಣಗಳು ದಾಖಲಾಗುತ್ತಿವೆ ಅದರಲ್ಲಿ ಪ್ರತಿ ದಿನ 5ಕ್ಕೂ ಹೆಚ್ಚು ಪ್ರಕರಣಗಳು ರಾಷ್ಟ್ರ ರಾಜಧಾನಿ ವಲಯದಲ್ಲೇ ನಡೆಯುತ್ತಿವೆ ಎನ್ನುವ ಸಂಗತಿ ಬೆಚ್ಚಿ ಬೀಳಿಸುತ್ತಿದೆ. 2016 ರಲ್ಲಿ ಅತಿ ಹೆಚ್ಚು ಅತ್ಯಾಚಾರ ಪ್ರಕರಣಗಳು ದಾಖಲಾಗಿರುವುದು ಉತ್ತರ ಪ್ರದೇಶರಾಜ್ಯದಲ್ಲಿ. ಮ್ಯಾಪ್ಲೇಕ್ರಾಫ್ಟ್ ಸೆಕ್ಸ್ ಟ್ರಾಫಿಕಿಂಗ್ ಅಂಡ್ ಕ್ರೈಮ್ ಅಗೇನ್ಸ್ಟ್ ಮೈನರ್ ವರದಿಯ ಪ್ರಕಾರ ಅತ್ಯಾಚಾರ ಪ್ರಕರಣದಲ್ಲಿ ಭಾರತವು 7ನೇ ಸ್ಥಾನದಲ್ಲಿದೆ.

16 ಡಿಸೆಂಬರ್ 2012 ದೆಹಲಿಯಲ್ಲಿ ಸಾರ್ವಜನಿಕ ಬಸ್ಸಿನಲ್ಲಿ ಅರೆ ವೈದ್ಯಕೀಯ ವಿದ್ಯಾರ್ಥಿನಿ ಮೇಲೆ ನಡೆದ ಸಾಮೂಹಿಕ ಅತ್ಯಾಚಾರ ಮತ್ತು ಬರ್ಬರ ಕೊಲೆ ಭಾರತದ ಇತಿಹಾಸದಲ್ಲೆ ಒಂದು ಕಪ್ಪು ಚುಕ್ಕಿ ಎಂದರೆ ತಪ್ಪಾಗಲಾರದು. ಈ ಪ್ರಕರಣ ಅಂತರರಾಷ್ಟ್ರೀಯ ಮಟ್ಟದಲ್ಲಿ ದೇಶದ ಮಾನ ಹರಾಜು ಹಾಕಿತು. ಆದರೆ ಅತ್ಯಾಚಾರದ ವಿರುದ್ದದ ದೊಡ್ಡ ಮಟ್ಟದ ಹೋರಾಟಕ್ಕೆ ಇದು ಮುನ್ನುಡಿ ಬರೆಯಿತು ಮತ್ತು ನಿರ್ಭಯ ಕಾಯ್ದೆ ಜಾರಿಗೆ ತರಲು ಕಾರಣವಾಯಿತು. ಆ ಸಂದರ್ಭದಲ್ಲಿ ವಿರೋಧ ಪಕ್ಷದಲ್ಲಿದ್ದ ಪ್ರಸ್ತುತ ಕೇಂದ್ರ ಸಚಿವೆ ಶ್ರೀಮತಿ ಸುಷ್ಮಾ ಸ್ವರಾಜ್ ಬಹಳ ದೊಡ್ಡ ಮಟ್ಟದಲ್ಲಿ ನಡೆದ ಪ್ರತಿಭಟನೆಯಲ್ಲಿ ಭಾಗವಹಿಸಿದ್ದ ಅವರು "ಅತ್ಯಾಚಾರಿಗಳಿಗೆ ಗಲ್ಲು ಶಿಕ್ಷೆ ಜಾರಿಗೊಳಿಸಬೇಕೆಂದು" ಎಂದು ಒತ್ತಾಯಿಸಿದ್ದರು.

ದೆಹಲಿಯ ನಿರ್ಭಯ ಪ್ರಕರಣ ಪೂರ್ವದಲ್ಲಿ ಅತ್ಯಾಚಾರ ಪ್ರಕರಣಗಳು ಬೆಳಕಿಗೆ ಬಾರದೆ ಅದೆಷ್ಟೋ ಹೆಣ್ಣು ಮಕ್ಕಳು ಅನ್ಯಾಯದಲ್ಲೆ ಅಸುನೀಗಿದ್ದಾರೆ. ಕಾಮಾಂಧರು ರಾಜಾರೋಷವಾಗಿ ತಿರುಗಾಡಿದ್ದರು. ಈ ಪ್ರಕರಣ ದೇಶದಲ್ಲಿ ಒಂದು ಜಾಗೃತಿಯನ್ನು ಮೂಡಿಸಿತು ಮತ್ತು ಅತ್ಯಾಚಾರಕ್ಕೊಳಗಾದ ಮಹಿಳೆಯರು ಧೈರ್ಯವಾಗಿ ಪೊಲೀಸ್ ಠಾಣೆಯ ಕದ ತಟ್ಟವುಂತೆ ಪ್ರೇರೇಪಿಸಿತು. ಅಲ್ಲಿಂದೀಚೆಗೆ ಆರಂಭವಾದ ಚರ್ಚೆಯಲ್ಲಿ ಬಹಳ ದೊಡ್ಡ ಮಟ್ಟದಲ್ಲಿ ಕೇಳಿ ಬರುತ್ತಿರುವುದು ನಮ್ಮ ನ್ಯಾಯಾಂಗ ವ್ಯವಸ್ಥೆಯ ದೋಷ ಮತ್ತು ನಿಧಾನಗತಿಯಲ್ಲಿ ಸಾಗುವ ವಿಚಾರಣೆಗಳು ಹಾಗೂ ಶಿಕ್ಷೆಯ ಪ್ರಮಾಣ. ಈ ಕಾರಣಗಳಿಂದಾಗಿ ಅತ್ಯಾಚಾರ ಪ್ರಕರಣಗಳಲ್ಲಿ ಇಳಿಮುಖ ಕಾಣುತ್ತಿಲ್ಲ. ಇದರ ನಿಯಂತ್ರಣಕ್ಕೆ ಗಲ್ಲು ಶಿಕ್ಷೆಯೊಂದೆ ಕಾರಣ ಎಂದು ಕೆಲವರು ವಾದಿಸುತ್ತಿದ್ದರೆ ಮತ್ತು ಕೆಲವರು ಗಲ್ಲು ಶಿಕ್ಷೆ ಮಾತ್ರ ಪರಿಹಾರವಲ್ಲ ಎಂದು ವಾದಿಸುತ್ತಿದ್ದಾರೆ.

2012 ದೆಹಲಿ ಪ್ರಕರಣದ ನಂತರ ಇತ್ತೀಚೆಗೆ ಜಮ್ಮು ಕಾಶ್ಮೀರದ ಖತ್ವಾ ಎಂಬಲ್ಲಿ 8 ವರ್ಷದ ಬಾಲಕಿಯನ್ನು ಅಪಹರಿಸಿ ಅತ್ಯಾಚಾರ ಮಾಡಿ ಕೊಲೆ ಮಾಡಿದ ಪ್ರಕರಣ ಮತ್ತು ಉತ್ತರ ಪ್ರದೇಶದ ಉನ್ನಾವೋದಲ್ಲಿ 17 ವರ್ಷದ ಹುಡುಗಿಯನ್ನು ಅತ್ಯಾಚಾರ ಮಾಡಿ ನಂತರ ಆಕೆಯ ತಂದೆಯನ್ನು ಪೊಲೀಸ್ ಠಾಣೆಯಲ್ಲಿ ಥಳಿಸಿ ಸಾಯಿಸಿದ ಪ್ರಕರಣ ಬಹಳ ದೊಡ್ಡಮಟ್ಟದಲ್ಲಿ ಸುದ್ದಿಯಾಯಿತು ಮತ್ತು ದೇಶದಾದ್ಯಂತ ಪ್ರತಿಭಟನೆ ನಡೆದವು. ಇದರಿಂದ ಎಚ್ಚೆತ್ತ ಕೇಂದ್ರ ಸರ್ಕಾರ ಮಕ್ಕಳ ಮೇಲಿನ ಅತ್ಯಾಚಾರ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಿ 2018 ಏಪ್ರಿಲ್‌ನಲ್ಲಿ ನಡೆದ ಕೇಂದ್ರ ಕ್ಯಾಬಿನೇಟ್ ಸಮಾವೇಶದಲ್ಲಿ 12 ವರ್ಷದೊಳಗಿನ ಹೆಣ್ಣು ಮಕ್ಕಳ ಮೇಲೆ ಅತ್ಯಾಚಾರ ಮಾಡುವವರಿಗೆ ಮರಣದಂಡನೆ



downloaded from: www.kpscvaani.com

ವಿಧಿಸುವ ಮತ್ತು ಅತ್ಯಾಚಾರ ಪ್ರಕರಣಗಳ ತನಿಖೆಯನ್ನು ಪೊಲೀಸರು 2 ತಿಂಗಳಲ್ಲಿ ಮುಗಿಸಬೇಕು ಎನ್ನುವ ಸುಗ್ರೀವಾಜ್ಞೆ ಜಾರಿ ಮಾಡಲು ಅನುಮೋದಿಸಿತು.

**ಭಾರತೀಯ ಕಾನೂನು:**

ಭಾರತದಲ್ಲಿ ಅತ್ಯಾಚಾರದ ವ್ಯಾಖ್ಯಾನ ಮತ್ತು ಅದಕ್ಕೆ ಸಂಬಂಧ ಪಟ್ಟ ದೂರುಗಳನ್ನು ದಾಖಲಿಸುವುದರ ಬಗ್ಗೆ ಭಾರತೀಯ ದಂಡ ಸಂಹಿತೆ 377ರಲ್ಲಿ ವಿವರಿಸಲಾಗಿದೆ. ದೆಹಲಿ ನಿರ್ಭಯ ಪ್ರಕರಣದ ನಂತರ ಹಿಂದಿನ ಕಾಯ್ದೆಯಲ್ಲಿದ್ದ ಲೋಪಗಳನ್ನು ಸರಿಪಡಿಸಲು 2013ರಲ್ಲಿ ಕ್ರಿಮಿನಲ್ ಲಾ (ತಿದ್ದುಪಡಿ) ಕಾಯ್ದೆ 2013(ನಿರ್ಭಯಾ ಕಾಯ್ದೆ) ಜಾರಿಗೆ ತರಲಾಯಿತು. ಹೊಸ ಕಾಯ್ದೆಯ ಪ್ರಕಾರ ಪುರುಷನ ಜನನಾಂಗವಲ್ಲದೆ ಆತನ ದೇಹದ ಯಾವುದೇ ಭಾಗವು ಮಹಿಳೆಯ ಖಾಸಗಿ ಅಥವಾ ಗುಪ್ತಾಂಗಗಳ ಸ್ಪರ್ಶ ಮಾಡಿದರೆ ಅದನ್ನು ಅತ್ಯಾಚಾರ ಎಂದು ಪರಿಗಣನೆಗೆ ತೆಗೆದುಕೊಳ್ಳಲಾಗುತ್ತದೆ, ಮತ್ತು 7 ವರ್ಷಕ್ಕಿಂತ ಕಡಿಮೆ ಇಲ್ಲದೆ ಜೈಲು ಶಿಕ್ಷೆ ಅಥವಾ ಅದನ್ನು ಜೀವಿತಾವಧಿ ಜೈಲು ಶಿಕ್ಷೆಯ ವರೆಗೆ ವಿಸ್ತರಿಸಬಹುದು ಎಂದು ವಿವರಿಸುತ್ತದೆ.

ಕ್ರಿಮಿನಲ್ ಲಾ(ತಿದ್ದುಪಡಿ) ಕಾಯ್ದೆ 2013ರ ಭಾರತೀಯ ದಂಡ ಸಂಹಿತೆ 376(ಎ) ಪ್ರಕಾರ ಅತ್ಯಾಚಾರ ಮತ್ತು ಪ್ರಾಣಹಾನಿಯಾದಲ್ಲಿ ಅಪರಾಧಿಗೆ ಕನಿಷ್ಟ 20 ವರ್ಷ ಕಠಿಣ ಸೆರಮನೆವಾಸ ಅಥವಾ ಸಂಪೂರ್ಣ ಜೀವಿತಾವಧಿ ಶಿಕ್ಷೆ ಅಥವಾ ಮರಣ ದಂಡನೆಯನ್ನು ವಿಧಿಸಲು ಅವಕಾಶ ನೀಡಿದೆ.

ಭಾರತೀಯ ದಂಡ ಸಂಹಿತೆ 376(ಬಿ) ಪ್ರಕಾರ ಗಂಡನಿಂದ ಪ್ರತ್ಯೇಕವಾಗಿ ವಾಸಿರುವ ಹೆಂಡತಿಯೊಂದಿಗೆ ಬಲವಂತದ ಲೈಂಗಿಕ ಕ್ರಿಯೆಯನ್ನು ನಡೆಸುವುದು ಸಹ ಅತ್ಯಾಚಾರವಾಗಿದ್ದು ಇದಕ್ಕೆ 2 ವರ್ಷಗಳ ವರೆಗೆ ಜೈಲು ಶಿಕ್ಷೆಯನ್ನು ವಿಧಿಸಲು ಅವಕಾಶ ನೀಡಿದೆ.

ಭಾರತೀಯ ದಂಡ ಸಂಹಿತೆ 498ಎ ಪ್ರಕಾರ ಗಂಡ ಹೆಂಡತಿಯೊಡನೆ ಬಲವಂತದ ಲೈಂಗಿಕ ಕ್ರಿಯೆ ನಡೆಸಿದ್ದಲ್ಲಿ ಅಪರಾಧವೆಂದು ಪರಿಗಣಿಸಿ ವಿಚಾರಣೆ ನಡೆಸಲು ಅನುವು ಮಾಡಿಕೊಟ್ಟಿದೆ.

**ಪೋಕ್ಸೋ ಕಾಯ್ದೆ–2012(Protection Of Children from Sexual Offences Act 2012):** ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯವನ್ನು ತಡೆಯಲು ಅಂದಿನ ಕೇಂದ್ರ ಈ ಕಾಯ್ದೆಯನ್ನು ಜಾರಿಗೆ ತರಲಾಯಿತು.

2012 ದೆಹಲಿ ಗ್ಯಾಂಗ್ ರೇಪ್ ಪ್ರಕರಣದ ನಂತರ ಕೇಂದ್ರ ಸರ್ಕಾರ ಅತ್ಯಾಚಾರ ಪ್ರಕರಣಗಳ ವಿಚಾರಣೆಗೆ ಫಾಸ್ಟ್ರ್ಯಾಕ್ ಕೋರ್ಟ್ ವ್ಯವಸ್ಥೆಯನ್ನು ಜಾರಿಗೆ ತಂದಿದೆ.

**ಅತ್ಯಾಚಾರ ನಡೆಯಲು ಪ್ರಮುಖ ಕಾರಣಗಳು:**



downloaded from: www.kpscvaani.com

**1. ಉಡುಗೆ–ತೊಡುಗೆಯಲ್ಲಿ ವ್ಯತ್ಯಾಸ:** ಭಾರತ ದೇಶವು ಸಂಸ್ಕೃತಿಯಲ್ಲಿ ಬಹು ಎತ್ತರಕ್ಕೆ ಬೆಳೆದುನಿಂತ ದೇಶವಾಗಿದೆ. ಆದರೆ ಪಾಶ್ಚಿಮಾತ್ಯ ಸಂಸ್ಕೃತಿಯು ಭಾರತದ ಮೇಲೆ ತನ್ನ ಛಾಪು ಮೂಡಿಸುತ್ತಿರುವುದರಿಂದ ಇಂದು ಹೆಣ್ಣು ಸೀರೆ ಬಿಟ್ಟು ಜೀನ್ಸ್, ಟೀ–ಶರ್ಟ್, ಸ್ಕರ್ಟ್‌ಗಳು ಮತ್ತು ಮುಚ್ಚಿರುವ ಹೆಣ್ಣಿನ ದೇಹದ ಭಾಗಗಳು ಬೇರೆಯವರಿಗೆ ಕಣ್ಣು ಕುಕ್ಕುವಂತೆ ವಸ್ತ್ರಗಳನ್ನು ಧರಿಸುತ್ತಿರುವುದು ಅತ್ಯಾಚಾರಕ್ಕೆ ಕಾರಣವಿರಬಹುದು ಎಂಬುದು ಕೆಲವರ ವಾದ.

**2. ಡ್ರಗ್ ಮತ್ತು ಮಧ್ಯ ಸೇವಿಸುವುದು:** ಹಿಂದಿನ ಕಾಲದಿಂದಲೂ ಜನ ಮದ್ಯವನ್ನು ಕುಡಿಯುತ್ತಿದ್ದರು. ಅದು ಇಂದು ಒಂದು ರೀತಿಯ ಟ್ರೆಂಡ್ ಆಗಿಬಿಟ್ಟಿದೆ. ಮದ್ಯ ಸೇವನೆ ಮಾಡುವುದು, ಧೂಮಪಾನ ಮಾಡುವುದು, ಡ್ರಗ್ ಬಳಸುವುದು ಹೆಚ್ಚಾಗಿದ್ದರಿಂದ ಅಮಲಿನಲ್ಲಿ ಕಾಮಕೇಳಿ ಒಂದು ಮೋಜಾಗಿರುತ್ತದೆ ಎಂದು ನಂಬಿರುವ ಯುವ ಜನತೆ ಅತ್ಯಾಚಾರ ಮಾಡಲು ಮುಂದಾಗುತ್ತಿದ್ದಾರೆ ಎಂದು ಇತ್ತೀಚೆಗೆ ಅಮೇರಿಕಾ ಮೂಲದ ಪತ್ರಿಕೆಯೊಂದು ವರದಿ ಮಾಡಿತ್ತು.

**3. ಸಿನಿಮಾಗಳ ಪ್ರಭಾವ:** ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವಕ್ಕೊಳಗಾಗಿರುವ ಚಿತ್ರಗಳೆ ಹೆಚ್ಚು ನಿರ್ಮಾಣವಾಗುತ್ತಿರುವ ಕಾರಣ ಸಿನಿಮಾಗಳಲ್ಲಿ ಹಸಿಬಿಸಿ ಸನ್ನಿವೇಶಗಳಿಗೆ ಹೆಚ್ಚು ಮಹತ್ವ. ಇಂತಹ ಚಿತ್ರಗಳಿಗೆ ಯಾವುದೇ ಕತ್ತರಿ ಬೀಳದ ಕಾರಣ ಮತ್ತು ಅತ್ಯಾಚಾರ ಮಾಡಿದವರು ಕಾನೂನು ಕ್ರಮಗಳಿಂದ ತಪ್ಪಿಸಿಕೊಳ್ಳುವಂತಹ ಸನ್ನಿವೇಶಗಳನ್ನು ಸಿನಿಮಾದಲ್ಲಿ ವೈಭವೀಕರಿಸುತ್ತಿರುವುದು ಅತ್ಯಾಚಾರ ಪ್ರಕರಣಗಳು ಹೆಚ್ಚಾಗುವಲ್ಲಿ ಕಾರಣವಾಗುತ್ತಿದೆ. ಇತ್ತೀಚೆಗೆ ಆಂಧ್ರ ಪ್ರದೇಶದ ವಿಜಯನಗರ ಜಿಲ್ಲೆಯಲ್ಲಿ ಸಿನಿಮಾದಿಂದ ಪ್ರೇರೇಪಣೆಗೊಂಡು ಅತ್ಯಾಚಾರ ಮಾಡಿ ಕಾನೂನುನಿಂದ ತಪ್ಪಿಸಿಕೊಳ್ಳಲು ಅತ್ಯಚಾರಕ್ಕೊಳಗಾದ ಹುಡುಗಿಯನ್ನು ಕೊಲೆ ಮಾಡಿ ಆಕೆಯನ್ನು ಸುಟ್ಟು ಬೂದಿಯನ್ನು ನೀರಿಗೆ ಬಿಟ್ಟಿದ ಪ್ರಕರಣ ಬೆಳಕಿಗೆ ಬಂದಿದೆ. ಈ ಉದಾಹರಣೆ ಸಾಕು ಸಿನಿಮಾ ಸಹ ಅತ್ಯಾಚಾರಕ್ಕೆ ಪ್ರೇರೇಪಣೆ ನೀಡುತ್ತೆ ಎಂದು ಹೇಳಲು.

**4. ಪೋರ್ನೊಗ್ರಾಫಿ:** ಯುವಕರಲ್ಲಿ ಕಾಮೋದ್ರೇಕಗೊಳ್ಳುವಂತೆ ಮಾಡುತ್ತಿರುವುದರಲ್ಲಿ ಡ್ರಗ್ಸ್ ಮತ್ತಿತರ ಮಾದಕ ವಸ್ತುಗಳ ಜೊತೆ ಈ ಪೋರ್ನ್ ವೆಬ್‌ಸೈಟ್ಗಳ ಪಾತ್ರನೂ ಇದೆ. ಇಂದಿನ ಬಹುತೇಕ ಯುವಕರು ಪೋರ್ನ್ ವೆಬ್‌ಗಳ ವ್ಯಸನಿಗಳಾಗಿದ್ದಾರೆ. ಸದಾ ಇವುಗಳಲ್ಲಿನ ರತಿ ಕ್ರೀಡೆಯ ವಿಡಿಯೋಗಳನ್ನು ನೋಡಿ ನೋಡಿ ಅವರ ಮನಸ್ಥಿತಿ ಲೈಂಗಿಕ ಕ್ರಿಯೆ ನಡೆಸಲೇಬೇಕು ಎನ್ನುವ ಮಟ್ಟಕ್ಕೆ ಬಂದು ಬಿಡುತ್ತದೆ. ಆ ಭಾವನೆಯನ್ನು ನಿಯಂತ್ರಣದಲ್ಲಿಡಲು ಸಾಧ್ಯವಾಗದವರು ಅತ್ಯಚಾರಗಳಲ್ಲಿ ಭಾಗಿಯಾಗುತ್ತಾರೆ.

**5. ಪಾಶ್ಚಿಮಾತ್ಯ ಸಂಸ್ಕೃತಿಗೆ ಮೊರೆ ಹೋಗುತ್ತಿರುವುದು:** ಭಾರತ ದೇಶವು ಹಿಂದಿನಿಂದಲೂ ಯಾರಾದರೂ ಎದುರಿಗೆ ಬಂದರೆ ಕೈ ಮುಗಿದು ನಮಸ್ಕರಿಸುವುದು ಸಂಸ್ಕೃತಿಯಾಗಿದೆ, ಪಾಶ್ಚಿಮಾತ್ಯರಲ್ಲಿ ನಮಸ್ಕರಿಸುವ ರೀತಿ ಚುಂಬನದಿಂದ. ಅಂದು ಥಾಮಸ್ ಮೆಕಾಲೆ ಹೇಳಿದಂತೆ ಇಂಗ್ಲೀಷ್ ಶಿಕ್ಷಣಕ್ಕೆ ಒತ್ತು ಕೊಡಬೇಕೆಂದು ಆದರೆ ಇಂದು ಇಂಗ್ಲೀಷ್ ಶಿಕ್ಷಣದೊಂದಿಗೆ ಪಾಶ್ಚಿಮಾತ್ಯ ಸಂಸ್ಕೃತಿಯನ್ನೂ ಅನುಕರಣೆ ಮಾಡುತ್ತಿರುವುದರಿಂದ ಅತ್ಯಚಾರಗಳು ಹೆಚ್ಚಾಗುತ್ತಿವೆ ಎಂದು ಕೆಲವರು ವಾದಿಸುತ್ತಿದ್ದರೆ, ಅದು ಸುಳ್ಳು


downloaded from: www.kpscvaani.com

ಒಂದು ವೇಳೆ ಪಾಶ್ಚಿಮಾತ್ಯ ಸಂಸ್ಕೃತಿಯೆ ಅತ್ಯಾಚಾರಕ್ಕೆ ಕಾರಣವಾಗುವುದಿದ್ದರೆ ಯುರೋಪಿನಲ್ಲಿ ಅತಿ ಹೆಚ್ಚು ಅತ್ಯಚಾರಗಳು ನಡೆಯಬೇಕಲ್ಲವೆ ಎಂದು ವಾದಿಸುತ್ತಾರೆ.

**6. ಭಾರತೀಯ ಕಾನೂನು ಮತ್ತು ನ್ಯಾಯಾಂಗ ವ್ಯವಸ್ಥೆ:** ಭಾರತದಲ್ಲಿ ಅತ್ಯಾಚಾರ ಪ್ರಕರಣಗಳು ನಿಯಂತ್ರಣದಲ್ಲಿಲ್ಲದಂತೆ ಬೆಳೆಯಲು ಕಾರಣ ನಮ್ಮ ಕಾನೂನಿನಲ್ಲಿರುವ ದೋಷಗಳು ಮತ್ತು ನಿಧಾನ ಗತಿಯ ವಿಚಾರಣೆ ಎಂದು ಇತ್ತೀಚಿನ ಕಾರ್ಯಕ್ರಮವೊಂದರಲ್ಲಿ ಬಚ್‌ಪಾನ್ ಬಚಾವೋ ಅಂದೋಲನದ ರುವಾರಿ ಮತ್ತು ನೋಬಲ್ ಪ್ರಶಸ್ತಿ ಪುರಸ್ಕೃತ ಸತ್ಯಾರ್ಥ ಕೈಲಾಸ್ ಹೇಳಿಕೆ ನೀಡಿದ್ದರು ಮತ್ತು ಅದೇ ಕಾರ್ಯಕ್ರಮದಲ್ಲಿ ಮಾತನಾಡುತ್ತಾ ಅವರು 15ನೇ ವಯಸ್ಸಿನಲ್ಲಿ ಅತ್ಯಾಚಾರಕ್ಕೊಳಗಾದ ಹುಡುಗಿ ದಾಖಲಿಸಿದ್ದ ದೂರಿನ ವಿಚಾರಣೆ ನಡೆಸಿ ನಮ್ಮ ನ್ಯಾಯಾಲಯಗಳು ಅಂತಿಮ ತೀರ್ಪು ನೀಡುವಾಗ ಆಕೆ ತನ್ನ ಮೊಮ್ಮಗ ಅಥವಾ ಮೊಮ್ಮಗಳ ಜೊತೆ ನ್ಯಾಯಾಲಯದಲ್ಲಿ ಹಾಜರಿರುತ್ತಾಳೆ ಎಂದು ನುಡಿದ್ದರು. ಈ ಮಾತು ನೂರಕ್ಕೆ ನೂರು ಸತ್ಯವಲ್ಲದೆ ಹೋದರು ಸಹ ಇದು ನಮ್ಮ ನ್ಯಾಯಾಲಗಳ ಕಾರ್ಯವೈಖರಿಯ ವೇಗವನ್ನು ಸೂಚಿಸುತ್ತದೆ. ಎನ್‌ಸಿಆರ್‌ಬಿ ಪ್ರಕಾರ 1973ರಲ್ಲಿ ನಮ್ಮ ದೇಶದಲ್ಲಿ ಅತ್ಯಾಚಾರ ಪ್ರಕರಣಗಳು ಸಾಬೀತಾಗುವ ದರ ಶೇಕಡ 44.3ರಷ್ಟಿದ್ದರೆ 2016ರಲ್ಲಿ ಅದರ ಪ್ರಮಾಣ 20.3 ರಷ್ಟಿದೆ. ಇದು ನಮ್ಮ ನ್ಯಾಯ ವ್ಯವಸ್ಥೆಯನ್ನು ಪ್ರಶ್ನಿಸುವಂತಿದೆ.

**ಪರಿಹಾರ:**

- ಇಡೀ ಜಗತ್ತಿಗೆ ಸಂಸ್ಕಾರದ ಪಾಠ ಹೇಳಿಕೊಡುವ ನಮ್ಮ ಸಂಸ್ಕೃತಿಯ ಮೌಲ್ಯವನ್ನು ಮತ್ತೊಷ್ಟು ಹೆಚ್ಚಿಸಲು ಅತ್ಯಾಚಾರವೆನ್ನುವಂತಹ ಹೀನಾಯ ಕೃತ್ಯಗಳನ್ನು ಬಹಳ ತುರ್ತಾಗಿ ನಿಯಂತ್ರಣದಲ್ಲಿಡಬೇಕಾಗಿದೆ. ಇದರ ನಿಯಂತ್ರಣಕ್ಕೆ ಕೇವಲ ಗಲ್ಲು ಶಿಕ್ಷೆಯೆಂಬುದು ಮಾತ್ರ ಪರಿಹಾರವಲ್ಲ. ಮಹಿಳೆಯರ ರಕ್ಷಣೆಯ ಬಗ್ಗೆ ಹೆಚ್ಚು ಒತ್ತು ನೀಡಬೇಕಾಗಿದೆ.
- ನ್ಯಾಯಾಂಗ ವ್ಯವಸ್ಥೆಯಲ್ಲಿ ಸಾಕಷ್ಟು ಬದಲಾವಣೆ ಮಾಡಬೇಕಾಗುತ್ತದೆ ಮತ್ತು ಅತ್ಯಾಚಾರದಂತಹ ಹೀನಾಯ ಕೃತ್ಯಗಳಲ್ಲಿ ಭಾಗಿಯಾದವರಿಗೆ ಕಾನೂನಿನ ರಕ್ಷಣೆ ಕೊಡುವಂತಹ ಸಂವಿಧಾನದ ಕೆಲವು ವಿಧಿಗಳನ್ನು ತಿದ್ದುಪಡಿ ಮಾಡುವ ಅನಿವಾರ್ಯತೆ ಇದೆ.
- ಪುರುಷರೆ ಹೆಚ್ಚು ಇರುವ ಪೊಲೀಸ್ ಠಾಣೆಯಲ್ಲಿ ಅತ್ಯಾಚಾರಕ್ಕೆ ಒಳಗಾದ ಹೆಣ್ಣುಮಕ್ಕಳು ಹೇಳಿಕೆ ನೀಡಲು ಮುಜುಗರ ಪಡುತ್ತಿದ್ದಾರೆ ಹಾಗಾಗಿ ಇದಕ್ಕಾಗಿ ಪ್ರತ್ಯೇಕ ಠಾಣೆಯನ್ನು ತೆರೆದು ಕಡ್ಡಾಯವಾಗಿ ಮಹಿಳಾ ಅಧಿಕಾರಿಗಳನ್ನು ನೇಮಕ ಮಾಡಬೇಕಾಗುತ್ತದೆ.
- ಶಾಲಾ ಕಾಲೇಜು ಮಟ್ಟದಲ್ಲಿ ನೈತಿಕ ಮತ್ತ ಮೌಲ್ಯಾಧಾರಿತ ಶಿಕ್ಷಣಕ್ಕೆ ಹೆಚ್ಚು ಒತ್ತು ಕೊಡಬೇಕಾಗುತ್ತದೆ.

UJWALA ACADEMY



downloaded from: www.kpscvaani.com

- ಲೈಂಗಿಕ ಕ್ರಿಯೆಯ ಬಗ್ಗೆ ಸಮಾಜದಲ್ಲಿ ಇರುವ ಮಡಿವಂತಿಕೆಯ ಪೊರೆಯನ್ನು ಕಳಚಲು ಶಾಲಾ ಕಾಲೇಜುಗಳಲ್ಲಿ ಲೈಂಗಿಕ ಶಿಕ್ಷಣದ ಜಾಗೃತಿ ಮೂಡಿಸುವುದರಿಂದ ಇದನ್ನು ಸ್ವಲ್ಪ ಮಟ್ಟಿಗೆ ನಿಯಂತ್ರಣದಲ್ಲಿಡಬಹುದು.
- ಇನ್ನೂ ಅತ್ಯಾಚಾರ ಪ್ರಕರಣದಲ್ಲಿ ಆರೋಪಿಗಳು ತಪ್ಪಿಸಿಕೊಳ್ಳಲು ವೈದ್ಯಕೀಯ ಪರೀಕ್ಷೆಯ ಮೂಲಕ ಸಹಾಯ ಮಾಡುತ್ತಿರುವ ವೈದ್ಯರ ಮೇಲೆ ಅತ್ಯಾಚಾರದ ಅರೋಪದಡಿಯಲ್ಲೆ ಪ್ರಕರಣ ದಾಖಲಿಸಬೇಕು.
- ಹಣದ ಆಸೆಗೆ ಬಲಿಯಾಗಿ ಅತ್ಯಾಚಾರ ಪ್ರಕರಣಗಳ ತನಿಖೆಯಲ್ಲಿ ನಿರ್ಲಕ್ಷ್ಯ ವಹಿಸುವ ಪೊಲೀಸ್ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು.
- ಅತ್ಯಾಚಾರ ಪ್ರಕರಣಗಳ ತನಿಖೆಯ ದಾರಿ ತಪ್ಪಿಸಿ ಅಪರಾಧಿಯನ್ನು ರಕ್ಷಿಸುವ ಪ್ರಜಾ ಪ್ರತಿನಿಧಿಗಳು ಮತ್ತು ಹಿರಿಯ ಅಧಿಕಾರಗಳನ್ನು ಅತ್ಯಾಚಾರ ಪ್ರಕರಣದಡಿಯಲ್ಲೆ ದೂರು ದಾಖಲಿಸಬೇಕು
- ಪೊಲೀಸ್ ತನಿಖೆ ಮತ್ತು ನ್ಯಾಯಾಲಯದ ವಿಚಾರಣೆಗಳು ಶೀಘ್ರಗತಿಯಲ್ಲಿ ಮುಗಿಸಲು ಹೊಸ ಕಾನೂನನ್ನು ಜಾರಿಗೆ ತರಬೇಕು.
- ಶಾಲಾ ಕಾಲೇಜು ಮತ್ತು ಖಾಸಗಿ ಕಂಪನಿಗಳಲ್ಲಿ ಕಡ್ಡಾಯವಾಗಿ ಸಿಸಿಟಿವಿ ಅಳವಡಿಸಲು ಕ್ರಮ ತೆಗೆದುಕೊಳ್ಳಬೇಕು.
- ಭದ್ರತೆಗೆ ತೊಡಕಾಗುವ ವಸ್ತ್ರ ಹಾಗೂ ಮತ್ತಿತರ ನಡುವಳಿಕೆಗಳ ಬಗ್ಗೆ ಮಹಿಳೆಯರಿಗೂ ಜಾಗೃತಿಮೂಡಿಸಬೇಕು.

ಅತ್ಯಾಚಾರವನ್ನು ತಡೆಗಟ್ಟುವುದು ಮತ್ತು ಅಪರಾಧಿಗಳಿಗೆ ಶಿಕ್ಷೆ ಕೊಡುವುದು ಅಷ್ಟೇ ನಮ್ಮ ಗುರಿಯಾಗಿರಬಾರದು. ಅತ್ಯಾಚಾರ ನಡೆಯದೇ ಇರುವಂತೆ ಜನ ಸಾಮಾನ್ಯರಲ್ಲಿ ತಿಳುವಳಿಕೆ ಮೂಡಿಸುವಂತಾಗಬೇಕು. ನ್ಯಾಯಾಲಯವು ಅತ್ಯಾಚಾರಿಗೆ ಕಠಿಣವಾದ ಶಿಕ್ಷೆ ನೀಡುವುದರಿಂದ ಅತ್ಯಾಚಾರಿಗೆ ಜೈಲು ವಾಸ ನೀಡುವುದು ಇಲ್ಲ ಗಲ್ಲು ಶಿಕ್ಷೆಗೆ ಗುರಿ ಪಡಿಸಬಹುದು. ಆದರೆ ಅತ್ಯಾಚಾರಕ್ಕೊಳಗಾದ ಮಹಿಳೆ ಬದುಕುಳಿದಷ್ಟು ದಿನ ಸಮಾಜದಲ್ಲಿ ಸ್ಥಾನ ಮಾನ ಸಿಗದೆ ಅನಾಮಧೇಯವಾಗಿ ಬದುಕುವಳು. ಆರೋಪಿಗೆ ಆರೋಪ ಎಸಗುವ ಮುನ್ನ ನಮ್ಮ ಕಾನೂನು ವ್ಯವಸ್ಥೆಯನ್ನು ಕಂಡು ಹೃದಯದಲ್ಲಿ ನಡುಕವಾಗುವಂತಾಗಬೇಕು.

ಈ ಅತ್ಯಾಚಾರಕ್ಕೊಂದು ಪೂರ್ಣ ವಿರಾಮ ಹಾಕಬೇಕೆಂದರೆ ಪ್ರಾಥಮಿಕವಾಗಿ ಜನರಲ್ಲಿ ಇರುವ ನಂಬಿಕೆಗಳನ್ನು ಬದಲಾಯಿಸಿ, ಶಾಲೆಗಳಲ್ಲಿ ಲೈಂಗಿಕ ಶಿಕ್ಷಣ, ನೀಡುವುದು, ಮತ್ತು ತ್ವರಿತ ಗತಿಯಲ್ಲಿ ನ್ಯಾಯಾಲಯವು ವಿಚಾರಣೆಯನ್ನು ಪೂರ್ಣಗೊಳಿಸಿ ಆರೋಪಿಗಳಿಗೆ ಶಿಕ್ಷೆಯನ್ನು ನೀಡಿ, ಆರೋಪಿಯನ್ನು ಅವನ ತಪ್ಪಿನ ಅರಿವು ಉಂಟು ಮಾಡಬೇಕು. ದೇಶದಲ್ಲಾಗುವ ಅವಹೇಳನಕಾರಿ ಕೃತ್ಯಗಳನ್ನು ತಡೆಗಟ್ಟಬೇಕು.


downloaded from: www.kpscvaani.com

**"ತಾವೂ ಘನತೆಯಿಂದ ಬದುಕಿ**

**ಬೇರೆಯವರಿಗೂ ಘನತೆಯಿಂದ ಬದುಕಲು ಬಿಡಿ"**

# ಪ್ರಬಂಧ 10 : ಪರಿಸರ ಮಾಲಿನ್ಯ

ಪ್ರಕೃತಿ ಮನುಷ್ಯನಿಗೆ ತಾಯಿ ಸ್ಥಾನದಲ್ಲಿದ್ದು ಎಲ್ಲವನ್ನು ನೀಡುತ್ತಿದೆ.

ಆದರೆ ಹೆತ್ತ ತಾಯಿಯನ್ನೇ ಬೀದಿಗೆ ತಳ್ಳುವ ಮನುಷ್ಯ ಪ್ರಕೃತಿಯನ್ನು

ತಾಯಿಯ ಸ್ಥಾನದಲ್ಲಿ ಪೂಜಿಸಲು ಹೇಗೆ ಸಾಧ್ಯ?

**- ಸುಂದರ್ ಲಾಲ್ ಬಹುಗುಣ**

**ಚಿಪ್ಕೋ ಚಳುವಳಿಯ ರೂವಾರಿಗಳು**

**ಪ್ರಸ್ತಾವನೆ :**

ಪರಿಸರದಲ್ಲಿ ಹಸ್ತಕ್ಷೇಪ ಮಾಡುವ ಮಾನವನ ಸಾಮರ್ಥ್ಯವು ಇಂದು ಅನೇಕ ಜಟಿಲ ಸಮಸ್ಯೆಗಳನ್ನು ತಂದೊಡ್ಡಿದೆ. ಒಂದೇ ಸಮನೆ ಏರುತ್ತಿರುವ ಜನಸಂಖ್ಯೆ ಮತ್ತು ಕೈಗಾರಿಕಾ ಕ್ರಾಂತಿಯ ಅವಶ್ಯಕತೆಗಳನ್ನು ಪೂರೈಸುವ ಸಲುವಾಗಿ ಮಾನವನು ಪ್ರಕೃತಿಯ ಸಂಪನ್ಮೂಲಗಳನ್ನು ಬಹುಮಟ್ಟಿಗೆ ಶೋಷಣೆಗೊಳಪಡಿಸಿದ್ದಾನೆ. ಇಂದು ಮಾನವನು ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಅದ್ಭುತ ಪ್ರಗತಿಯನ್ನು ಸಾಧಿಸಿದ್ದಾನೆ. ಜನಸಂಖ್ಯೆಯು ಅತಿ ವೇಗವಾಗಿ ಹೆಚ್ಚುತ್ತಿರುವುದರಿಂದ ಮಾನವನ ಮೂಲ ಅವಶ್ಯಕತೆಗಳಾದ ಆಹಾರ, ನೀರು, ವಸ್ತ್ರ ಮತ್ತು ವಸತಿಗಳ ಬೇಡಿಕೆ ಸಹ ಹೆಚ್ಚಾಗುತ್ತಿದೆ. ಈ ಅವಶ್ಯಕತೆಗಳನ್ನು ಪೂರೈಸಲು ಮಾನವನು ಪ್ರಕೃತಿಯ ಸಂಪನ್ಮೂಲಗಳಾದ ಖನಿಜಗಳು, ಕಾಡುಗಳು, ನೀರು ಮತ್ತು ಕೃಷಿಯನ್ನು ಸ್ವಂತಕ್ಕಾಗಿ ಉಪಯೋಗಿಸಿದ್ದಾನೆ. ಮಾನವನ ಆಸೆಯನ್ನು ಪೂರೈಸುವಷ್ಟು ಸಂಪನ್ಮೂಲಕ್ಕೇನು ಕೊರತೆಯಿಲ್ಲ. ಆದರೆ ಮನುಷ್ಯ ಮಹದಾಸೆಯಿಂದಾಗಿ ತಂತ್ರಜ್ಞಾನವನ್ನು ಅಭಿವೃದ್ಧಿ ಪಡಿಸುತ್ತಾ ಹೆಚ್ಚು ಐಶಾರಾಮಿ ವಸ್ತುಗಳನ್ನು ಉತ್ಪಾದಿಸುತ್ತಿದ್ದಾನೆ ಇದರ ಪರಿಣಾಮ ನಮ್ಮ ಪರಿಸರದ ಮೇಲೆ ಬಹಳ ದೊಡ್ಡ ಮಟ್ಟದಲ್ಲಿ ಪ್ರಭಾವ ಬೀರುತ್ತಿದೆ.

ಕಾರ್ಖಾನೆಗಳು, ಭಾರಿ ಕೈಗಾರಿಕೆ ಘಟಕಗಳು, ಥರ್ಮಲ್ ವಿದ್ಯುತ್ ಕೇಂದ್ರಗಳು ಮತ್ತು ಹೆಚ್ಚುತ್ತಿರುವ ವಾಹನಗಳು ಒಂದು ಕಡೆ ಆರ್ಥಿಕಾಭಿವೃದ್ಧಿಯ ಸೂಚನೆಗಳಾಗಿದ್ದರೆ, ಮತ್ತೊಂದೆಡೆ ಪರಿಸರದ ವಿನಾಶಕ್ಕೆ ಕಾರಣವಾಗಿದೆ. ಈ ರೀತಿಯ ಏಕ ಮುಖ ಅಭಿವೃದ್ಧಿಯು ಪ್ರಕೃತಿಯಲ್ಲಿನ ಸಮತೋಲನದಲ್ಲಿ ಏರುಪೇರು ಮಾಡಿ ಮಾಲಿನ್ಯಕ್ಕೆ ಎಡೆ ಮಾಡಿದೆ. ಅವುಗಳಿಂದ ಉಂಟಾದ ಮಾಲಿನ್ಯ ವಾತಾವರಣವನ್ನು ಕಲುಷಿತಗೊಳಿಸುತ್ತದೆ. ಭೂಮಿಯ ಮೇಲಿನ ಪರಿಸರದ ನಾಶದಿಂದ ಮನುಕುಲದ ಆಸ್ತಿತ್ವಕ್ಕೆ ಬಹಳ ದೊಡ್ಡ ಅಪಾಯ ಒದಗಿದೆ.

ಪರಿಸರದ ಭೌತಿಕ, ರಾಸಾಯನಿಕ ಹಾಗೂ ಜೈವಿಕ ಗುಣಲಕ್ಷಣಗಳಲ್ಲಿ ಉಂಟಾಗುವ ಯಾವುದೇ ಅನಪೇಕ್ಷಿತ ಬದಲಾವಣೆಯ'ನ್ನು ಪರಿಸರ ಮಾಲಿನ್ಯ ಎಂದು ನಿರೂಪಿಸಬಹುದು. ಈ ಬದಲಾವಣೆಗಳನ್ನು



downloaded from: www.kpscvaani.com

ಮಾನವನ ಚಟುವಟಿಕೆಗಳಿಂದ ಪರಿಸರಕ್ಕೆ ಸೇರುವ ವಿವಿಧ ಪದಾರ್ಥಗಳು ಉಂಟು ಮಾಡುತ್ತಿವೆ. ಅಂಥ ಪದಾರ್ಥಗಳು ಗಮನಾರ್ಹವಾದ ಹಾನಿ ಉಂಟುಮಾಡುತ್ತಿದ್ದಲ್ಲಿ ಅವುಗಳನ್ನು ಮಾಲಿನ್ಯಕಾರಕಗಳು ಎಂದು ಕರೆಯಲಾಗುತ್ತದೆ.

**ಮಾಲಿನ್ಯಕಾರಕಗಳನ್ನು ಪ್ರಮುಖವಾಗಿ ಎರಡು ಬಗೆಯಲ್ಲಿ ವರ್ಗೀಕರಿಸಲಾಗಿದೆ :**

- **ಜೈವಿಕ ವಿಘಟನೆಗೆ ಒಳಗಾಗುವ ಮಾಲಿನ್ಯಕಾರಕಗಳು** : ಇಂಥ ಮಾಲಿನ್ಯಕಾರಕಗಳನ್ನು ಶೀಘ್ರವಾಗಿ ದುರ್ಬಲಗೊಳಿಸುವ ಮೂಲಕ ಇಲ್ಲವೆ ಬ್ಯಾಕ್ಟೀರಿಯಾಗಳಿಂದ ವಿಘಟನೆಗೆ ಒಳಪಡಿಸುವ ಮೂಲಕ ಹಾನಿಕಾರಕವಲ್ಲದ ರೂಪಕ್ಕೆ ಪರಿವರ್ತಿಸಬಹುದು.
  - ✓ ಉದಾ : ಕಲ್ಲಿದ್ದಲ್ಲಿನ ದಹನ ಕ್ರಿಯೆಯಿಂದ ಉಂಟಾಗುವ ಸಲ್ಫರ್–ಡೈ–ಆಕ್ಸೈಡ್ ಅನ್ನು ನೀರಿನಲ್ಲಿ ಕರಗಿಸುವ ಮೂಲಕ ದುರ್ಬಲಗೊಳಿಸಬಹುದು. ಒಳಚರಂಡಿಯ ನೀರನ್ನು ಸೂಕ್ತ ಬ್ಯಾಕ್ಟೀರಿಯಾಗಳನ್ನು ಬಳಸಿ ವಿಘಟನೆಗೆ ಒಳಪಡಿಸಬಹುದು.
- **ಜೈವಿಕ ವಿಘಟನೆಗೆ ಒಳಗಾಗದ ಮಾಲಿನ್ಯಕಾರಕಗಳು** : ಇಂಥ ಮಾಲಿನ್ಯಕಾರಕಗಳನ್ನು ಯಾವುದೇ ಬಗೆಯ ಬ್ಯಾಕ್ಟೀರಿಯಾಗಳಿಂದ ವಿಘಟಿಸುವುದು ಸಾಧ್ಯವಿಲ್ಲ. ಈ ರೀತಿಯ ಮಾಲಿನ್ಯಕಾರಕಗಳು ಪರಿಸರದಲ್ಲಿ ಶೇಷರೂಪದಲ್ಲಿ ಉಳಿದು ಹೋಗಿ ಜೈವಿಕ ಸಂವರ್ಧನೆಯ ಫಲವಾಗಿ ಅವುಗಳ ಸಾಂದ್ರತೆ ಹೆಚ್ಚುತ್ತಾ ಹೋಗಬಹುದು.
  - ✓ ಉದಾ : ಪೆಟ್ರೋಲ್ ದಹಿಸುವಿಕೆಯಿಂದ ಉತ್ಪತ್ತಿಯಾಗುವ ಸೀಸದ ಆದಿ ಗಾಳಿಯಲ್ಲಿ ಬೆರತು ಕ್ರಮೇಣ ಶ್ವಾಸಕೋಶಗಳ ವಾಯು ಕೂಪಿಕೆಗಳಲ್ಲಿ ಸೇರಿ ಹೋಗಬಹುದು. ಡಿಡಿಟಿ ಮುಂತಾದ ಕೀಟನಾಶಕಗಳನ್ನು ಹಾನಿಕಾರಕವಲ್ಲದ ರೂಪಕ್ಕೆ ಪರಿವರ್ತಿಸುವುದು ಸಾಧ್ಯವಿಲ್ಲ.

**ಪರಿಸರ ಮಾಲಿನ್ಯದ ವಿಧಗಳು :**

ಇಂದು ನಾವು ಮಾಲಿನ್ಯವನ್ನು ಕುಡಿಯಬಹುದು, ಉಸಿರಾಡಬಹುದು, ವಾಸನೆ ಹಿಡಿಯಬಹುದು ಮತ್ತು ಕಣ್ಣಿನಿಂದ ನೋಡಬಹುದು. ಅದನ್ನು ನಾವು 5 ಭಾಗಗಳಾಗಿ ವಿಂಗಡಿಸಬಹುದು.

- ವಾಯುಮಾಲಿನ್ಯ
- ಶಬ್ದಮಾಲಿನ್ಯ
- ಜಲಮಾಲಿನ್ಯ
- ವಿಕಿರಣ ಮಾಲಿನ್ಯ
- ಪ್ಲಾಸ್ಟಿಕ್ ಮಾಲಿನ್ಯ

1. **ವಾಯು ಮಾಲಿನ್ಯ** : ಇತ್ತೀಚಿನ ದಿನಗಳಲ್ಲಿ ನಾವು ಆಮ್ಲ ಮಳೆ, ಭೂತಾಪದ ಏರಿಕೆ, ಓಝೋನ್ ಪದರದ ನಾಶ ಹಾಗೂ ಹವಮಾನ ಬದಲಾವಣೆ ಮುಂತಾದ ಜಾಗತಿಕ ಪರಿಸರ ಸಮಸ್ಯೆಗಳ ಬಗ್ಗೆ ಕೇಳುತ್ತಿದ್ದೇವೆ. ಇಂಥ ಎಲ್ಲಾ ಸಮಸ್ಯೆಗಳೂ ವಾಯುಮಾಲಿನ್ಯದ ದೂರಗಾಮಿ ಪರಿಣಾಮಗಳು. ವಾತಾವರಣದಲ್ಲಿ ಮಹತ್ವವಾದ ಬದಲಾವಣೆಗಳನ್ನು ತರಬಲ್ಲ ಮಾನವನ ಯಾವುದೇ ಚಟುವಟಿಕೆಯ ಪರಿಣಾಮಕ್ಕೆ ವಾಯುಮಾಲಿನ್ಯ ಎಂದು ಹೆಸರು.


downloaded from: www.kpscvaani.com

ವಿಶ್ವ ಆರೋಗ್ಯ ಸಂಸ್ಥೆಯ ದೃಷ್ಟಿಯಲ್ಲಿ ಜೀವಿಗಳಿಗೆ ಮತ್ತು ಅವುಗಳ ಪರಿಸರಕ್ಕೆ ಹಾನಿ ಉಂಟುಮಾಡುವ ರೀತಿಯಲ್ಲಿ ವಾತಾವರಣದ ಯಾವುದೇ ಘಟಕಗಳಲ್ಲಿ ಉಂಟಾಗುವ ಏರಿಕೆಯನ್ನು ವಾಯು ಮಾಲಿನ್ಯ ಎಂದು ನಿರೂಪಿಸಬಹುದಾಗಿದೆ.

**ವಾಯು ಮಾಲಿನ್ಯಕ್ಕೆ ಕಾರಣವಾಗುವ ಮಾನವ ಚಟುವಟಿಕೆಗಳು ಪ್ರಮುಖವಾಗಿ ಹೀಗಿವೆ.**

* **ಕಲ್ಲಿದ್ದಲಿನ ದಹನ** : ಅನೇಕ ಕೈಗಾರಿಕೆಗಳು , ತಮ್ಮ ಕುಲುಮೆಗಳಲ್ಲಿ ಪ್ರಮುಖ ಇಂಧನವಾಗಿ ಕಲ್ಲಿದ್ದಲನ್ನು ಬಳಸುತ್ತವೆ. ಕಲ್ಲಿದ್ದಲಿನ ದಹನದಿಂದ ಸಲ್ಫರ್-ಡೈ-ಆಕ್ಸೈಡ್, ಕಾರ್ಬನ್ ಮೊನಾಕ್ಸೈಡ್ ಹಾಗೂ ಅಲ್ಪ ಪ್ರಮಾಣದಲ್ಲಿ ಕಾರ್ಬನ್-ಡೈ-ಆಕ್ಸೈಡ್ ಬಿಡುಗಡೆಯಾಗುತ್ತದೆ.
* **ಡೀಸೆಲ್ ದಹನ** : ಭಾರಿ ವಾಹನಗಳು ಹಾಗೂ ಸಾರಿಗೆ ವಾಹನಗಳಲ್ಲಿ ಡೀಸೆಲ್‌ನ್ನು ಇಂಧನವಾಗಿ ಬಳಸಲಾಗುತ್ತದೆ. ಡೀಸೆಲ್ ದಹನದಿಂದ ಪ್ರಮುಖವಾಗಿ ಕಾರ್ಬನ್ ಮೊನಾಕ್ಸೈಡ್ ಮತ್ತು ಕಾರ್ಬನ್ ಧೂಳು ಮಾಲಿನ್ಯಕಾರಕಗಳಾಗಿ ಹೊರಬರುತ್ತವೆ.
* **ಪೆಟ್ರೋಲ್ ದಹನ** : ಕಾರುಗಳಲ್ಲಿ ಮತ್ತು ದ್ವಿಚಕ್ರ ವಾಹನಗಳಲ್ಲಿ ಇಂಧನವಾಗಿ ಬಳಸಲಾಗುವ ಪೆಟ್ರೋಲ್ ದಹನ ಕ್ರಿಯೆಗೆ ಒಳಗಾದಾಗ ನೈಟ್ರೋಜನ್ ಆಕ್ಸೈಡ್‌ಗಳು, ಕಾರ್ಬನ್-ಡೈ-ಆಕ್ಸೈಡ್ ಹಾಗೂ ಕೆಲವೊಮ್ಮೆ ಸೀಸದ ಆವಿ ಬಿಡುಗಡೆಯಾಗುತ್ತವೆ.
* **ತಂಬಾಕು ಸೇವನೆ** : ಬೇರೆ ಬೇರೆ ರೂಪಗಳಲ್ಲಿ ತಂಬಾಕನ್ನು ಸೇವಿಸುವುದು ಆರೋಗ್ಯಕ್ಕೆ ಹಾನಿಕಾರವಾಗುವುದರ ಜೊತೆಗೆ ವಾಯುಮಾಲಿನ್ಯಕ್ಕೂ ಕಾರಣವಾಗುತ್ತದೆ. ಸಿಗರೇಟಿನ ಹೊಗೆಯಲ್ಲಿ ಅತಿ ಹೆಚ್ಚು ಪ್ರಮಾಣದ ಕಾರ್ಬನ್ ಮೊನಾಕ್ಸೈಡ್ ಇರುತ್ತದೆ.
* **ನಗರ ತ್ಯಾಜ್ಯಗಳ ದಹನ** : ನಗರ ಹಾಗೂ ಪಟ್ಟಣ ಪ್ರದೇಶಗಳಲ್ಲಿ ಉತ್ಪತ್ತಿಯಾಗುವ ತ್ಯಾಜ್ಯಗಳ ನಿರ್ವಹಣೆಗಾಗಿ ಅವುಗಳನ್ನು ಸುಡುವ ಪ್ರಕ್ರಿಯೆಯು ಕಾರ್ಬನ್ ಮೊನಾಕ್ಸೈಡ್ ಬಿಡುಗಡೆಗೆ ಕಾರಣವಾಗುತ್ತದೆ.

**ವಾಯುಮಾಲಿನ್ಯ ಕಾರಕಗಳ ವಲಯವಾರು ಉತ್ಪತ್ತಿ :**




❖ **ವಾಯುಮಾಲಿನ್ಯ ಪರಿಣಾಮಗಳು :**



downloaded from: www.kpscvaani.com

1. ಜನರ ಆರೋಗ್ಯದ ಮೇಲೆ

- ಮಲಿನಗೊಂಡ ಗಾಳಿಯನ್ನು ಸೇವಿಸುವುದರಿಂದ ಬ್ರಾಂಕೈಟಿಸ್ ಅಲರ್ಜಿ ಮುಂತಾದ ಅಪಸಾಮಾನ್ಯತೆಗಳು ಉಂಟಾಗುತ್ತವೆ.
- ಸ್ಮಾಗ್ ಉಸಿರಾಟದ ತೊಂದರೆಯನ್ನುಂಟು ಮಾಡುವ ಮೂಲಕ ಸಾವಿಗೆ ಕಾರಣವಾಗಬಹುದು.
- ಕಾರ್ಬನ್ ಮೊನಾಕ್ಸೈಡ್ ಹಿಮೊಗ್ಲೋಬಿನ್ ಜೊತೆ ಗೂಡಿ ರಕ್ತದಲ್ಲಿ ಆಮ್ಲಜನಕದ ಸಾಗಣಿಕೆಗೆ ತೊಂದರೆ ಉಂಟು ಮಾಡಬಹುದು.

**2. ಸಸ್ಯ ಸಂಪತ್ತಿನ ಮೇಲೆ**

- ಮಣ್ಣಿನ ಆಮ್ಲೀಯತೆಯನ್ನು ಹೆಚ್ಚಿಸುವುದು
- ವಾಯು ಮಾಲಿನ್ಯಕಾರಕಗಳು ಮರಗಳ ಮೇಲೆ ಕಲ್ಲು ಹೂಗಳ ಬೆಳವಣಿಗೆಯನ್ನು ತಡೆಯುತ್ತವೆ.
- ಆಮ್ಲೀಯ ಮಳೆಯು ಗಿಡ ಮರಗಳಿಗೆ ಹಾನಿಕಾರಕ ಅಥವಾ ಮಾರಣಾಂತಿಕವಾಗಬಹುದು.

**3. ಕಟ್ಟಡಗಳ ಹಾಗೂ ಸ್ಮಾರಕಗಳ ಮೇಲೆ**

- ಆಮ್ಲೀಯ ಮಳೆ ಮತ್ತು ಸ್ಮಾಗ್ ಐತಿಹಾಸಿಕ ಸ್ಮಾರಕಗಳನ್ನು ಹಾನಿ ಮಾಡಬಹುದು.
- ಕ್ಲೋರೋಫ್ಲೋರೋ ಕಾರ್ಬನ್‌ಗಳು(CFC) ಎಂಬ ವಾಯುಮಾಲಿನ್ಯಕಾರಕ ರಬ್ಬರ್ ವಸ್ತುಗಳನ್ನು ಉತ್ಕರ್ಷಣಗೊಳಿಸಬಲ್ಲದು.
- ವಿಶ್ವ ವಿಖ್ಯಾತ ವಾಸ್ತು ಶಿಲ್ಪವಾದ ಸೇಂಟ್ ಪಾಲ್ ಕ್ಯಾಥೆಡ್ರಲ್‌ನ ಕಟ್ಟಡ ನೂರು ವರ್ಷಗಳಲ್ಲಿ ಒಂದು ಇಂಚಿನಷ್ಟು ನಾಶವಾಗುತ್ತಿದೆ.
- ಗ್ರೀಸ್ ಮತ್ತು ಇಟಲಿಗಳಲ್ಲಿರುವ ಖ್ಯಾತ ಶಿಲ್ಪಗಳು ಹಾಗೂ ವಿಶ್ವವಿಖ್ಯಾತ ಅಮೇರಿಕಾದ ಸ್ವಾತಂತ್ರ ಶಿಲ್ಪ ಮುಂತಾದವು ತಮ್ಮ ಹೊಳಪನ್ನು ಕಳೆದುಕೊಳ್ಳುತ್ತಿವೆ.
- ತಾಜ್‌ಮಹಲ್ ತನ್ನ ಮೂಲ ಬಣ್ಣವನ್ನು ಕಳೆದುಕೊಳ್ಳುತ್ತಿದೆ.

❖ **ಹವಾಗುಣದ ಮೇಲೆ ಪರಿಣಾಮಗಳು :**

* **<u>ಜಾಗತಿಕ ತಾಪದ ಏರಿಕೆ</u> :** ಭೂಮಿಯ ಮತ್ತು ಸಾಗರಗಳ ಸರಾಸರಿ ತಾಪದಲ್ಲಿ ಕಳೆದ 200 ವರ್ಷಗಳಲ್ಲಿ ಉಂಟಾಗಿರುವ ಏರಿಕೆಯನ್ನು ಜಾಗತಿಕ ತಾಪದ ಏರಿಕೆ ಎಂದು ಕರೆಯಲಾಗುತ್ತದೆ. ಈ ಶತಮಾನದ ಪ್ರಾರಂಭದಿಂದೀಚೆಗೆ ಭೂಮಿಯ ತಾಪಮಾನದಲ್ಲಿ ಸುಮಾರು 0.8ನಷ್ಟು ಏರಿಕೆಯಾಗಿದೆ ಎಂದು ಹೇಳಲಾಗುತ್ತಿದೆ. ಈ ಏರಿಕೆಯ ಮೂರನೆಯ ಎರಡರಷ್ಟು ಭಾಗ 1980ರ ದಶಕದಿಂದೀಚೆಗೆ ಉಂಟಾಗಿದೆ ಎಂದು ಹೇಳಲಾಗುತ್ತದೆ.

* **<u>ಹಸಿರುಮನೆ ಪರಿಣಾಮ</u> :** ಶಕ್ತಿಯ ಬೇರಾವುದೇ ಆಕಾರ ಅಥವಾ ಸಂಗ್ರಹಗಳಿಗಿಂತ ತಾಪದ ಏರಿಕೆಯ ಪ್ರಭಾವ ಸಾಗರಗಳ ಮೇಲೆಯೆ ಅತಿ ಹೆಚ್ಚು, ಭೂವ್ಯವಸ್ಥೆಯಲ್ಲಿ ಉಂಟಾಗಿರುವ ತಾಪದ ಹೆಚ್ಚಳದ 90ರಷ್ಟನ್ನು ಇದು ಪ್ರತಿನಿಧಿಸುತ್ತದೆ. ಈ ಏರಿಕೆಗೆ ಕಾರಣ, ನಿಸರ್ಗದಲ್ಲಿರುವ ಹಸಿರುಮನೆ ಪರಿಣಾಮ ಎಂಬ ವಿದ್ಯಮಾನ. ಸೂರ್ಯ ಕಿರಣಗಳು ಭೂಮಿಯನ್ನು ಬಿಸಿ ಮಾಡಿದ ಪರಿಣಾಮವಾಗಿ ಬಿಡುಗಡೆಯಾಗುವ ಅವಕೆಂಪು ಕಿರಣಗಳನ್ನು ಕೆಲವು ಅನಿಲಗಳು



downloaded from: www.kpscvaani.com

ಸೆರೆಹಿಡಿದ ಕಾರಣ ವಾಯುಮಂಡಲದ ತಾಪ ಏರಿಕೆ ಆಗುತ್ತದೆ. ಈ ಏರಿಕೆಯನ್ನು ಹಸಿರುಮನೆ ಪರಿಣಾಮ ಎಂದೂ ಈ ಏರಿಕೆಗೆ ಕಾರಣವಾದ ಅನಿಲಗಳನ್ನು ಹಸಿರುಮನೆ ಅನಿಲಗಳೆಂದೂ ಕರೆಯಲಾಗುತ್ತದೆ.

* **ಹಸಿರು ಮನೆ ಅನಿಲಗಳು** : ನೀರಿನ ಆವಿ, ಕಾರ್ಬನ್–ಡೈ–ಆಕ್ಸೈಡ್, ನೈಟ್ರೋಜನ್–ಡೈ–ಆಕ್ಸೈಡ್‌ಗಳು, ಮೀಥೇನ್ ಹಾಗೂ ಓಝೋನ್
* **ಆಮ್ಲ ಮಳೆ** : ಕೈಗಾರಿಕೆ ಮತ್ತು ವಾಹನಗಳಿಂದ ಬಿಡುಗಡೆಯಾಗುವ ಸಲ್ಫರ್‌ನ ಆಕ್ಸೈಡ್‌ಗಳು ಹಾಗೂ ನೈಟ್ರೋಜನ್‌ನ ಆಕ್ಸೈಡ್‌ಗಳು ಅನಿಲರೂಪದಲ್ಲಿ ವಾತಾವರಣವನ್ನು ಸೇರಿ, ನೀರಾವಿಯ ಜೊತೆ ಸೇರಿ ಕ್ರಮವಾಗಿ ಸಲ್ಫ್ಯೂರಿಕ್ ಆಮ್ಲ ಹಾಗೂ ನೈಟ್ರಿಕ್ ಆಮ್ಲವಾಗಿ ಪರಿವರ್ತನೆಗೊಳ್ಳುವುದರಿಂದ ಆಮ್ಲ ಮಳೆ ಉಂಟಾಗುತ್ತದೆ. ಇದು ಮಳೆಯ, ಮಂಜಿನ ಅಥವಾ ಇಬ್ಬನಿಯ ರೂಪದಲ್ಲಿ ಬೀಳತೊಡಗುತ್ತದೆ.

**ವಾಯು ಮಾಲಿನ್ಯದ ನಿಯಂತ್ರಣ :**

- ನಗರ ಪ್ರದೇಶಗಳಿಂದ ದೂರದಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸುವುದು.
- ಕೈಗಾರಿಕೆಗಳ ಚಿಮಣಿಯ (ಕುಲುಮೆಯ) ಎತ್ತರವನ್ನು ಹೆಚ್ಚಿಸುವುದು.
- ಹೆಚ್ಚು ಗಿಡಮರಗಳನ್ನು ಬೆಳೆಸುವುದು.
- ವಾಹನಗಳಲ್ಲಿ ಹೆಚ್ಚು ಸಾಮರ್ಥ್ಯದ ಯಂತ್ರಗಳನ್ನು ಅಳವಡಿಸುವುದು.
- ಹೊಗೆ ಬರದಂಥ ಒಲೆಗಳನ್ನು ಬಳಸುವುದು.
- ವಾಯುಮಾಲಿನ್ಯಕ್ಕೆ ಸಂಬಂಧಿಸಿದ ಕಾನೂನುಗಳನ್ನು ಜಾರಿಗೊಳಿಸುವುದು ಮತ್ತು ತಪ್ಪಿತಸ್ಥರಿಗೆ ಸೂಕ್ತ ಕಠಿಣ ಶಿಕ್ಷೆ ವಿಧಿಸುವುದು.
- ಖಾಸಗಿ ವಾಹನ ಬಳಸದಂತೆ ಹಾಗೂ ಸಾರ್ವಜನಿಕ ಸಾರಿಗೆ ಬಳಸುವಂತೆ ಜಾಗೃತಿ ಉಂಟು ಮಾಡುವುದು.
- ಜೈವಿಕ ಇಂಧನ ಬಳಸುವಂತೆ ಉತ್ತೇಜನ ನೀಡುವುದು.

ವಾಯು ಮಾಲಿನ್ಯ ನಿಯಂತ್ರಣಕ್ಕೆ ಕೇಂದ್ರ ಸರ್ಕಾರದ ಪ್ರಮುಖ ಕಾಯ್ದೆಗಳು:

Air(Prevention and Control of Pollution ) Act 1981

**ಉಪಸಂಹಾರ :**

ಪರಿಸರವನ್ನು ಅಭಿವೃದ್ಧಿಗೊಳಿಸಲು ಮತ್ತು ಪರಿಸರ ಮಾಲಿನ್ಯದಿಂದ ಆಗಬಹುದಾದ ವಿಷಮ ಪರಿಣಾಮಗಳಿಂದ ನಮ್ಮನ್ನು ರಕ್ಷಿಸಿಕೊಳ್ಳಲು ನಾವು ಜನಸಂಖ್ಯೆಯನ್ನು ನಿಯಂತ್ರಿಸಿಕೊಳ್ಳಬೇಕು ಮತ್ತು ಇದಕ್ಕೆ ಸಾಮಾಜಿಕ ಅರಿವು ಅತ್ಯವಶ್ಯಕ.

## ಪ್ರಬಂಧ 11 : ನಿರುದ್ಯೋಗ ಮತ್ತು ಸ್ವಯಂ ಉದ್ಯೋಗ


downloaded from: www.kpscvaani.com

ಉದ್ಯೋಗವುಳ್ಳವನ ! ಹೊದ್ದುವುದು ಸಿರಿ ಬಂದು !

ಉದ್ಯೋಗವಿಲ್ಲದಿರುವವನ ಕರದೊಳಗೆ!

ಇದ್ದದ್ದೂ ಪೋಕು ಸರ್ವಜ್ಞ

ಭಾರತದ ಆರ್ಥಿಕ, ಸಾಮಾಜಿಕ ವ್ಯವಸ್ಥೆಯನ್ನು ಕಾಡುತ್ತಿರುವ ಸಮಸ್ಯೆಗಳಲ್ಲಿ ನಿರುದ್ಯೋಗ ಸಮಸ್ಯೆಯೂ ಒಂದು. ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ನಿರುದ್ಯೋಗ ಸಮಸ್ಯೆಯು ಗಂಭೀರವಾಗಿದೆ. ನೀರುದ್ಯೋಗವು ಮಾನವ ಸಂಪತ್ತಿನ ಅಧ್ಯಕ್ಷ ಉಪಯೋಗದ, ಕಡಿಮೆ ಉತ್ಪಾದನೆ ಮತ್ತು ನಿಕೃಷ್ಟ ಜೀವನ ಮಟ್ಟದ ಕುರುಹು. ಭಾರತದಲ್ಲಿ ನಿರುದ್ಯೋಗ ಎಂಬುದು ಒಂದು ಜ್ವಲಂತ ಸಮಸ್ಯೆಯಾಗಿದ್ದು, ಅದು ಇತರೆ ಹಿಂದುಳಿದ ರಾಷ್ಟ್ರಗಳಂತೆ ಭಾರತವನ್ನು ಹತಾಶೆಯ ಪರಿಸ್ಥಿತಿಗೆ ತಳ್ಳಿದೆ. ಹಸಿವು, ನೋವು, ನರಳುವಿಕೆ, ಅಪೌಷ್ಟಿಕಾಂಶ, ಅನಕ್ಷರತೆ, ಬಡತನ. ಇವು ಭಾರತದಲ್ಲಿ ಸಾಮಾನ್ಯವಾಗಿದೆ.

ಭಾರತದಲ್ಲಿ ನಿರುದ್ಯೋಗಿಗಳು ಮತ್ತು ಉದ್ಯೋಗ ರಹಿತ ಜನರ ಸಂಖ್ಯೆ ಹೆಚ್ಚುತ್ತಿದೆ. ಅವರಲ್ಲಿ ವಿದ್ಯಾವಂತರು. ಕೌಶಲ್ಯ ಹೊಂದಿರುವವರು, ಗ್ರಾಮೀಣ ಮತ್ತು ನಗರದ ಜನರು ಸೇರಿದ್ದಾರೆ. 1951ರಲ್ಲಿ ಒಟ್ಟು ನಿರುದ್ಯೋಗಿಗಳ ಸಂಖ್ಯೆಯು ಸುಮಾರು 5ಮಿಲಿಯನ್‌ಗಳಷ್ಟಿತ್ತು. 2009–10ರಲ್ಲಿ ದೇಶದ ಒಟ್ಟು 468.8ಮಿಲಿಯನ್ ಶ್ರಮಶಕ್ತಿ ಇದ್ದು, ಇದರಲ್ಲಿ 9.2ಮಿಲಿಯನ್ (ಶೇ.2%)ಗಳಷ್ಟು ನಿರುದ್ಯೋಗಿಗಳಿದ್ದಾರೆ.[NSSO ಪ್ರಕಾರ]

- **ನಿರುದ್ಯೋಗ** : ದುಡಿಯುವ ವಯಸ್ಸು, ಸಾಮರ್ಥ್ಯ, ಆಸಕ್ತಿ, ಅರ್ಹತೆ ಇದ್ದರೂ ಉದ್ಯೋಗ ಸಿಗದ ಪರಿಸ್ಥಿತಿಯನ್ನು ನಿರುದ್ಯೋಗ ಎನ್ನುತ್ತೇವೆ.
- **ಸ್ವಯಂ ಉದ್ಯೋಗ** : ಸರ್ಕಾರಿ ಮತ್ತು ಖಾಸಗಿ ವಲಯಗಳನ್ನು ಅವಲಂಬಿಸದೆ(ವಿದ್ಯುತ್, ಹಣ, ಇತರೆ ಸೌಲಭ್ಯ ಹೊರತುಪಡಿಸಿ) ವೈಯಕ್ತಿಕವಾಗಿ ಅಥವಾ ಜಂಟಿಯಾಗಿ ಕೈಗೊಳ್ಳುವ/ನಿರ್ವಹಿಸುವ ವೃತ್ತಿಗಳನ್ನು ಸ್ವಯಂ ಉದ್ಯೋಗ ಎನ್ನಬಹುದು.
- **ನಿರುದ್ಯೋಗದ ಪ್ರಕಾರಗಳು** : ಕಾರ್ಯಾತ್ಮಕ ನಿರುದ್ಯೋಗ – ಒಬ್ಬ ವ್ಯಕ್ತಿಯು ಒಂದು ಉದ್ಯೋಗವನ್ನು ತೊರೆದು ಮತ್ತೊಂದು ಉದ್ಯೋಗವನ್ನು ಹುಡುಕುವಾಗ ಎದುರಿಸುವುದೇ ಕಾರ್ಯಾತ್ಮಕ ನಿರುದ್ಯೋಗ ಎನ್ನುವರು.
  - ✓ ರಚನಾತ್ಮಕ ನಿರುದ್ಯೋಗ – ಉದ್ಯೋಗ ಮಾಡುವವರ ಸಂಖ್ಯೆ ಹೆಚ್ಚು ಇದ್ದು, ಉದ್ಯೋಗ ಮತ್ತು ಉದ್ಯೋಗ ಮಾಡಲು ಬಯಸುವ ವ್ಯಕ್ತಿಗಳ ಕೌಶಲ್ಯ, ಅನುಭವ ಅರ್ಹತೆಯ ನಡುವೆ ಹೊಂದಾಣಿಕೆ ಇರದ ಸ್ಥಿತಿಯಾಗಿದೆ.
  - ✓ ಋತುಮಾನದ ನಿರುದ್ಯೋಗ – ನಿರ್ದಿಷ್ಟ ಋತುವಿನಲ್ಲಿ ಮಾತ್ರ ಉದ್ಯೋಗವಿದ್ದು, ಇತರ ಸಮಯದಲ್ಲಿ ಉದ್ಯೋಗ ಇಲ್ಲದೇ ಇರುವ ಸ್ಥಿತಿಯನ್ನು ಋತುಮಾನದ ನಿರುದ್ಯೋಗ ಎನ್ನುತ್ತಾರೆ.
  - ✓ ಮಾರುವೇಷದ ನಿರುದ್ಯೋಗ – ಒಂದು ಕೆಲಸವನ್ನು ಅಗತ್ಯಕ್ಕಿಂತ ಹೆಚ್ಚು ಜನರು ಮಾಡುವ ಸ್ಥಿತಿಯನ್ನು ಮಾರುವೇಷದ ನಿರುದ್ಯೋಗ ಎನ್ನುವರು.
  - ✓ ಘರ್ಷಣಾತ್ಮಕ ನಿರುದ್ಯೋಗ



downloaded from: www.kpscvaani.com

- ✓ ವಾರದಸ್ಥಿತಿ ನಿರುದ್ಯೋಗ
- ✓ ದಿನವಾಹಿ ನಿರುದ್ಯೋಗ
- ✓ ವಾಡಿಕೆಯ ಸ್ಥಿತಿ ನಿರುದ್ಯೋಗ
- ✓ ತೆರೆದ ನಿರುದ್ಯೋಗ
- ✓ ಜನಸಂಖ್ಯಾ ನಿರುದ್ಯೋಗ
- ✓ ತಂತ್ರಜ್ಞಾನ ನಿರುದ್ಯೋಗ
- ✓ ವರ್ಗಾವಣೆಯ ನಿರುದ್ಯೋಗ

ರಾಷ್ಟ್ರೀಯ ಮಾದರಿ ಸಮೀಕ್ಷಾ ಸಂಘಟನೆ(NSSO)ಯು ನಿರುದ್ಯೋಗವನ್ನು ಅಳೆಯುವುದಕ್ಕಾಗಿ ಪರಿಕಲ್ಪನೆಗಳನ್ನು ಅಭಿವೃದ್ಧಿ ಪಡಿಸಿದೆ. ಅವುಗಳೆಂದರೆ ನಿರುದ್ಯೋಗದ ಸಾಮಾನ್ಯ ಸ್ಥಿತಿ, ವಾರದ ಸ್ಥಿತಿ ಮತ್ತು ದೈನಂದಿನ ಸ್ಥಿತಿಯ ಪರಿಕಲ್ಪನೆ.

- **ನಿರುದ್ಯೋಗಕ್ಕೆ ಕಾರಣಗಳು :**
  - ✓ ಅತಿಯಾದ ಜನಸಂಖ್ಯೆ : ಏರುತ್ತಿರುವ ಜನಸಂಖ್ಯೆಗೆ ಉದ್ಯೋಗಗಳನ್ನು ಬದಲಿಸಲಾಗದೆ ನಿರುದ್ಯೋಗ ಸಮಸ್ಯೆಯುಂಟಾಗುತ್ತದೆ.
  - ✓ ಯಾಂತ್ರೀಕರಣ : ಇಂದಿನ ಎಲ್ಲಾ ಕ್ಷೇತ್ರಗಳಲ್ಲೂ ಯಾಂತ್ರೀಕರಣ ಯಥೇಚ್ಛವಾಗಿದ್ದು, ಸಣ್ಣ ಬಟ್ಟೆ ಹೊಲೆಯುವುದರಿಂದ ದೊಡ್ಡ ದೊಡ್ಡ ಕೈಗಾರಿಕೆಗಳವರೆಗೂ ಯಂತ್ರಗಳಿಂದಲೇ ಕೆಲಸ ನಡೆಯುತ್ತಿದೆ. ಇದರಿಂದ ಸಹಜವಾಗಿಯೇ ನಿರುದ್ಯೋಗ ಸಮಸ್ಯೆ ತಲೆಯೆತ್ತುವುದು.
  - ✓ ಅತಿಯಾದ ಕ್ರಮ ವಿಭಜನೆ : ಒಂದು ಕೆಲಸವನ್ನು ಜನರು ತಮ್ಮ ಆಸಕ್ತಿ, ಅಭಿರುಚಿ, ಸಾಮರ್ಥ್ಯ, ವಯಸ್ಸು, ವಿಶೇಷ ಪರಿಣಿತಿ, ಕೌಶಲ್ಯ ಹಾಗೂ ಲಿಂಗಭೇದಗಳ ಆಧಾರದ ಮೇಲೆ ಅತಿಯಾದ ಶ್ರಮವಿಭಜನೆಯಿಂದ ನಿರುದ್ಯೋಗ ಸಂಭವಿಸುತ್ತದೆ.
  - ✓ ಅನಕ್ಷರತೆ : ಅನಕ್ಷರತೆಯಿಂದಾಗಿ ಶಾಲೆ, ವೈದ್ಯಕೀಯ, ಸಾರಿಗೆ–ಸಂಪರ್ಕ, ರೈಲ್ವೆ, ಆಡಳಿತ, ಅಂಚೆ ಮುಂತಾದ ಕ್ಷೇತ್ರಗಳಲ್ಲಿ ಉದ್ಯೋಗದಿಂದ ವಂಚಿತರಾಗುತ್ತಾರೆ. ಇದರಿಂದ ನಿರುದ್ಯೋಗ.
  - ✓ ಕಂಪ್ಯೂಟರೀಕರಣ : ಇಂದು ಸಕಲ ಕ್ಷೇತ್ರಗಳಲ್ಲೂ ಕಂಪ್ಯೂಟರ್‌ನ ಬಳಕೆಯಿದೆ. ನೂರು ಜನ ಮಾಡುವ ಕೆಲಸವನ್ನು ಕಂಪ್ಯೂಟರ್ ನಿರ್ವಹಿಸಬಲ್ಲದು. ಕಂಪ್ಯೂಟರ್ ಆವಿಷ್ಕಾರದ ನಂತರ ನಿರುದ್ಯೋಗ ಸಮಸ್ಯೆ ಏರಿಕೆ ಕಂಡಿದೆ.
  - ✓ ಕೃಷಿಯ ನಿರ್ಲಕ್ಷ್ಯ : ನಮ್ಮ ದೇಶದ ಶೇ.60ರಷ್ಟು ಜನರಿಗೆ ಕೃಷಿ ಉದ್ಯೋಗ ನೀಡಿದ್ದು ಕೃಷಿ ಚಟುವಟಿಕೆಗಳು ಕಡಿಮೆಯಾಗುತ್ತಿರುವುದರಿಂದ, ದಿನೇ ದಿನೇ ನಿರುದ್ಯೋಗ ಸಮಸ್ಯೆ ಏರುತ್ತಿದೆ.
  - ✓ ಸಾಮಾಜಿಕ ಅಸಮಾನತೆ ಮತ್ತು ಬಂಡವಾಳ ಕೊರತೆ : ನಿರುದ್ಯೋಗ ಸಮಸ್ಯೆ ಅಲ್ಲ. ಉದ್ಯೋಗ ಮಾಡಲು ಅವಕಾಶವಿದ್ದರೂ ಉದ್ಯೋಗ ಮಾಡದೆ ನಿರುದ್ಯೋಗ ಸೃಷ್ಟಿಸುತ್ತೇವೆ.

**ನಿರುದ್ಯೋಗದಿಂದಾಗುವ ಪರಿಣಾಮಗಳು :** ಬಡತನ, ಮೋಸ, ಅನಾರೋಗ್ಯ, ವಂಚನೆ, ಭ್ರಷ್ಟಚಾರ, ಕಳ್ಳತನ, ಕೌಟುಂಬಿಕ, ವಿಘಟನೆ & ವ್ಯಭಿಚಾರ.



downloaded from: www.kpscvaani.com

- **ನಿರುದ್ಯೋಗ ಸಮಸ್ಯೆಗಳನ್ನು ಪರಿಹರಿಸಲು ಸರ್ಕಾರ ಕೈಗೊಂಡ ಕ್ರಮಗಳು :**
  - ✓ ಜನಸಂಖ್ಯಾ ನಿಯಂತ್ರಣ ಕ್ರಮ
  - ✓ ಶೈಕ್ಷಣಿಕ ಸುಧಾರಣಾ ಯೋಜನೆ
  - ✓ ಗುಡಿ ಕೈಗಾರಿಕೆಗಳಿಗೆ ಪ್ರೋತ್ಸಾಹ
  - ✓ ಪಂಚವಾರ್ಷಿಕ ಯೋಜನೆಗಳು
  - ✓ ಕೃಷಿ ಕ್ಷೇತ್ರದ ಅಭಿವೃದ್ಧಿ
  - ✓ ವೃತ್ತಿಪರ ಶಿಕ್ಷಣಕ್ಕೆ ಪ್ರೋತ್ಸಾಹ
  - ✓ ಕೈಗಾರಿಕಾ ಕ್ಷೇತ್ರದ ಅಭಿವೃದ್ಧಿ
  - ✓ ಗ್ರಾಮೀಣಾಭಿವೃದ್ಧಿ ಯೋಜನೆಗಳು
  - ✓ ಉದ್ಯೋಗ ಖಾತರಿ ಯೋಜನೆ
  - ✓ ಜವಹಾರ್ ರೋಜ್‌ಗಾರ್ ಯೋಜನೆ
  - ✓ ರಾಜೀವ್‌ಗಾಂಧಿ ಶ್ರಮಿಕ ಕಲ್ಯಾಣ ಯೋಜನೆ
  - ✓ ಸ್ವರ್ಣ ಜಯಂತಿ ಶಹರಿ ರೋಜ್‌ಗಾರ್ ಯೋಜನೆ
  - ✓ ಕೂಲಿಗಾಗಿ ಕಾಳು ಯೋಜನೆ
  - ✓ ಉದ್ಯೋಗ ಭರವಸೆ ಯೋಜನೆ
  - ✓ ಅತಿ ಸಣ್ಣ ರೈತರ ಅಭಿವೃದ್ಧಿ ನಿಗಮ

❖ **ಸ್ವಯಂ ಉದ್ಯೋಗ ಪರಿಕಲ್ಪನೆ** : ಸ್ವಯಂ ಉದ್ಯೋಗ ಎಂಬುದೇ ಒಂದು ಅದ್ಭುತ ಪರಿಕಲ್ಪನೆಯಾಗಿದೆ. ಸ್ವಂತ ಉದ್ಯೋಗಿಗಳು ಅಥವಾ ಸ್ವಉದ್ಯೋಗದಾರರು ದೇಶದ ಆಧಾರ ಸ್ತಂಭವಾಗಿದ್ದಾರೆ. ಒಂದು ರಸ್ತೆಯ ಮೂಲೆಯಲ್ಲಿನ ಚಹಾದ ಅಂಗಡಿಯಿಂದ ಹಿಡಿದು, ಮಾಮ್ ಅಂಡ್ ಪಾಪ್ ಕಿರಾಣಿ ಅಂಗಡಿ, ಗುಜರಿ ವ್ಯಾಪಾರಿ, ಅಂತರ್ಜಾಲ ಸೈಬರ್ ಅಂಗಡಿಗಳು ಮುಂತಾದವೆಲ್ಲ ಸ್ವ–ಉದ್ಯೋಗ ಸಂಸ್ಥೆಗಳಾಗಿವೆ. ಯಾರೇ ಒಬ್ಬ ಮನುಷ್ಯನಾಗಲಿ ಸ್ವ–ಉದ್ಯೋಗ ಉದ್ದಿಮೆಯನ್ನು ಸ್ಥಾಪಿಸಲು ಇಷ್ಟಪಟ್ಟಲ್ಲಿ ಯಾವುದಾದರೂ ಒಂದು ವ್ಯವಹಾರ ಸಂಸ್ಥೆಗಳನ್ನು ಆರಿಸಿಕೊಂಡು ಸ್ಥಾಪಿಸಲು ಅನುಕೂಲತೆಗಳಿವೆ. ಅವುಗಳಲ್ಲಿ ಮುಖ್ಯವಾದವುಗಳೆಂದರೆ

- ✓ ಜಾಹಿರಾತು ಸೇವಾ ಸಂಸ್ಥೆಗಳು
- ✓ ಮಾರುಕಟ್ಟೆ ಸಲಹಾ ಸಂಸ್ಥೆ
- ✓ ಕೈಗಾರಿಕಾ ಸಲಹಾ ಸಂಸ್ಥೆ
- ✓ ವಸ್ತುಗಳನ್ನು ಬಾಡಿಗೆಗೆ ಮತ್ತು ಗುತ್ತಿಗೆಗೆ ನೀಡುವ ಸಂಸ್ಥೆಗಳು
- ✓ ಛಾಯಾಪ್ರತಿ ತೆಗೆಯುವ ಕೇಂದ್ರಗಳು
- ✓ ಕೈಗಾರಿಕಾ ಸಂಶೋಧನೆ ಮತ್ತು ಅಭಿವೃದ್ಧಿ ಪ್ರಯೋಗಾಲಯಗಳು
- ✓ ಕೈಗಾರಿಕಾ ವಸ್ತುಗಳ ಗುಣಮಟ್ಟ ಪ್ರಯೋಗಾಲಯಗಳು
- ✓ ಅಂತರ್ಜಾಲ ಮತ್ತು ಸಂವಹನ ಅಂಗಡಿಗಳು

UJWALA ACADEMY



downloaded from: www.kpscvaani.com

- ✓ ದೂರದರ್ಶನ ಜಾಲ ಬಂಧದ ಸೇವಾ ಕ್ಷೇತ್ರಗಳು
- ✓ ಕ್ರೆಚ್ ಮತ್ತು ಬ್ಯೂಟಿ ಪಾರ್ಲರ್‌ಗಳು
- ✓ ಸ್ವಯಂ ಉದ್ಯೋಗದಲ್ಲಿ ಗಡಿ ಮತ್ತು ಸಣ್ಣ ಕೈಗಾರಿಕೆಗಳ ಪಾತ್ರ

ಗುಡಿ(ಗೃಹ) ಕೈಗಾರಿಕೆಗಳು ಪ್ರಧಾನವಾಗಿ ಹಳ್ಳಿಗಳಲ್ಲಿ ಕೇಂದ್ರೀಕೃತವಾಗಿರುತ್ತವೆ. ಕೆತ್ತನೆ ಕೆಲಸ, ಬುಟ್ಟಿ ಹೆಣೆಯುವುದು, ಬೊಂಬೆ ತಯಾರು ಮಾಡುವುದು, ಕೈ ಮಗ್ಗದಲ್ಲಿ ಬಟ್ಟೆ ಹಾಗೂ ಕಂಬಳಿ ನೇಯುವುದು, ಚಾಪೆ ತಯಾರಿಕೆ, ಹಗ್ಗ ತಯಾರಿಸುವುದು, ಬಡಗಿತನ, ಕಮ್ಮಾರಿಕೆ, ಕುಂಬಾರಿಕೆ ಮುಂತಾದವು ಉದಾಹರಣೆಗಳಾಗಿದ್ದು ಇವುಗಳ ಉತ್ಪನ್ನಗಳು ಹೆಚ್ಚಾಗಿ ಸ್ಥಳೀಯ ಮಾರುಕಟ್ಟೆಗೆ ವಸ್ತುಗಳನ್ನು ಉತ್ಪಾದಿಸುತ್ತವೆ.

ಸಣ್ಣ ಪ್ರಮಾಣದ ಕೈಗಾರಿಕೆಗಳಲ್ಲಿ ಆಧುನಿಕ ಕೌಶಲ್ಯಗಳನ್ನು ಬಳಸಿಕೊಳ್ಳುತ್ತಾರೆ. ರಾಸಾಯನಿಕ ವಸ್ತುಗಳು, ಇಂಜಿನಿಯರಿಂಗ್ ವಸ್ತುಗಳು, ಪಾದರಕ್ಷೆಗಳು, ಸೈಕಲ್, ರೇಡಿಯೋ, ವಿದ್ಯುತ್ ಕಂಬ, ಹೊಲಿಗೆ ಯಂತ್ರಗಳು, ಸಿದ್ಧಪಡಿಸಿದ ಉಡುಪುಗಳು, ಸಾಬೂನುಗಳು ಮುಂತಾದವು ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ಉದಾಹರಣೆಗಳಾಗಿವೆ. ಈ ಕೈಗಾರಿಕೆಗಳ ಅನೇಕ ಉತ್ಪನ್ನಗಳು ರಫ್ತಾಗುತ್ತಿವೆ.

ಒಟ್ಟಾರೆ ಗೃಹ ಮತ್ತು ಸಣ್ಣ ಪ್ರಮಾಣದ ಕೈಗಾರಿಕೆಗಳು ಅನೇಕ ಜನರಿಗೆ ಸ್ವಯಂ ಉದ್ಯೋಗ ಕಲ್ಪಿಸಿಕೊಡುತ್ತವೆ. ಹೆಚ್ಚು ಜನರಿಗೆ ಉದ್ಯೋಗ ನೀಡುವುದರಿಂದ ಜನರ ಜೀವನ ಮಟ್ಟ ಉತ್ತಮಗೊಳ್ಳುತ್ತದೆ. ಜನರ ಪರ್ಯಾಯ ಉದ್ಯೋಗಕ್ಕೂ ಅವಕಾಶ ಸಿಗುತ್ತದೆ ಅಲ್ಲದೆ ಕರಕುಶಲ ಕಲೆಗಳು ಜನರ ಸುಪ್ತ ಪ್ರತಿಭೆಯನ್ನು ಹೊರ ತರುತ್ತದೆ.

ಒಂದು ಕಾಲಕ್ಕೆ 'ಉದ್ಯೋಗಂ ಪುರುಷ ಲಕ್ಷಣಂ' ಎಂಬ ಉಕ್ತಿಯಿದ್ದುದನ್ನು ಗಮನಿಸಬಹುದು. ಈಗಿನ ಬದಲಾದ ಪರಿಸ್ಥಿತಿಯಲ್ಲಿ ಅದನ್ನು ಈಗ 'ಉದ್ಯೋಗಂ ಮಾನವ ಲಕ್ಷಣಂ' ಎಂದು ತಿದ್ದಿಕೊಳ್ಳಬೇಕಾಗಿದೆ.

ಒಂದು ರೀತಿ ಹೇಳುವುದಾದರೆ ನಿರುದ್ಯೋಗ ಒಂದು ಸಮಸ್ಯೆಯೇ ಅಲ್ಲ. ಬದುಕಲು ನೂರೆಂಟು ದಾರಿಗಳಿವೆ. ಸಹಸ್ರಾರು ಅವಕಾಶಗಳಿವೆ. ಸ್ವೀಕರಿಸಬೇಕು ಹೊಂದಿಕೊಳ್ಳಬೇಕಷ್ಟೇ.

'ಪಾಲಿಗೆ ಬಂದದ್ದು ಪಂಚಾಮೃತ' ಎಂದ ಹಾಗೆ ಸಣ್ಣ ವೃತ್ತಿಯನ್ನೇ ತೃಪ್ತಿಯಿಂದ, ಮನಸ್ಸು ಗೊಟ್ಟು ಮಾಡಿದರೆ ಯಶಸ್ಸು ತಾನಾಗಿಯೇ ಬರುವುದು ಏನಂತೀರಾ.....

## ಪ್ರಬಂಧ 12 : ಕೋಮು ಸೌಹಾರ್ದತೆ

ಓ ನನ್ನ ಚೇತನ, ಆಗು ನೀ ಅನಿಕೇತನ
ರೂಪರೂಪಗಳನು ದಾಟಿ, ನಾಮಕೋಟಿಗಳನು ಮೀಟಿ
ಎದೆಯ ಬಿರಿಯ ಭಾವದೀಟಿ


downloaded from: www.kpscvaani.com

ಓ ನನ್ನ ಚೇತನ ಆಗು ನೀ ಅನಿಕೇತನ
ನೂರು ಮತದ ಹೊಟ್ಟ ತೂರಿ, ಎಲ್ಲ ತತ್ವದಲ್ಲೆ ಮೀರಿ
ನಿರ್ದಿಗಂತವಾಗಿ ಏರಿ
ಓ ನನ್ನ ಚೇತನ ಆಗು ನೀ ಅನಿಕೇತನ

**--ರಸ ಋಷಿ ಕುವೆಂಪು**

ಮೇಲಿನ ಪದ್ಯದಲ್ಲಿ ರಸ ಋಷಿ ಕುವೆಂಪು ರವರು ಮನುಷ್ಯ ಜಾತಿ, ಧರ್ಮ, ತತ್ವಗಳ ಎಲ್ಲೆ ಮೀರಿ, ಯಾವುದಕ್ಕೂ ತನ್ನನ್ನು ಸೀಮಿತಗೊಳಿಸಿಕೊಳ್ಳದೆ, ವಿಶ್ವ ಮಾನವನಾಗಿ ಅನಂತ ಎತ್ತರಕ್ಕೆ ಬೆಳೆಯಬೇಕೆಂಬ ಆಶಯ ವ್ಯಕ್ತ ಪಡಿಸಿದ್ದಾರೆ. ಆದರೆ ಇದು ಭಾರತದ ಮಟ್ಟಿಗೆ ಆಚರಣೆ ರೂಪಕ್ಕೆ ಬರಲು ಬಹಳ ಮುಖ್ಯವಾದ ಅಂಶ ಕೋಮು ಸೌಹಾರ್ದತೆ.

ಭಾರತ ಒಂದು ಮಿನಿ ವಿಶ್ವ. ಇಲ್ಲಿ ಜಗತ್ತಿನ ಎಲ್ಲಾ ಧರ್ಮಗಳ, ಸಾವಿರಾರು ಜಾತಿಗಳ, ಹಲವಾರು ಜನಾಂಗಗಳ, ಬಹುವಿಧ ಭಾಷಿಕರು ಇಲ್ಲಿ ನೆಲೆಯನ್ನು ಕಂಡಿದ್ದಾರೆ. ವಿಭಿನ್ನ ಸಂಪ್ರದಾಯಗಳು, ಆಚಾರ ವಿಚಾರಗಳು, ನಂಬಿಕೆಗಳು ಮತ್ತು ಉಡುಗೆ ತೊಡುಗೆಗಳು ಇದ್ದಾಗ್ಯೂ, ವಿವಿಧತೆಯಲ್ಲಿ ಏಕತೆ ಎಂಬುದು ಈ ನಾಡಿನ ಶ್ರೇಷ್ಠತೆ. ಇಷ್ಟೊಂದು ವೈವಿಧ್ಯತೆ ಇದ್ದಲ್ಲಿ ಎಲ್ಲಾ ಕಾಲದಲ್ಲೂ ಏಕತೆ, ಸಹಿಷ್ಣುತೆ, ಶಾಂತತೆಯನ್ನು ನಿರೀಕ್ಷಿಸಲಾಗದು. ಇದರ ಪರಿಣಾಮವಾಗಿಯೇ ಆಗಾಗ ಸಂಘರ್ಷಗಳು ಸಂಭವಿಸುತ್ತಿರುತ್ತವೆ. ಈ ಸಂಘರ್ಷಗಳು ದೇಶದ ಏಕತೆ ಮತ್ತು ಸಮಗ್ರತೆಗೆ ಧಕ್ಕೆ ತರುವುದರ ಜೊತೆಗೆ ಸಾಮಾಜಿಕ ಸಾಮರಸ್ಯಕ್ಕೆ ಬೆದರಿಕೆ ಒಡ್ಡುತ್ತಿವೆ.

**ಅರ್ಥ :**

ಕೋಮುಗಲಭೆಯೆಂದರೆ ವಿವಿಧ ಕೋಮುಗಳಲ್ಲಿ ಉದ್ಭವಿಸುವ ವೈಷಮ್ಯವಾಗಿದೆ. ಪ್ರತಿಯೊಂದು ಕೋಮು ಅಥವಾ ಮತೀಯರು ತಾವೇ ಶ್ರೇಷ್ಠವೆಂದು ಬಗೆದು ಬೇರೆ ಮತೀಯರನ್ನು ಕನಿಷ್ಟವಾಗಿ ಭಾವಿಸಿ ವ್ಯಕ್ತಪಡಿಸಿದ ಕ್ರಿಯೆಯ ಪರಿಣಾಮವೇ ಕೋಮು ಗಲಭೆಯಾಗುತ್ತದೆ ಅಥವಾ "ಒಂದು ನಿರ್ದಿಷ್ಟ ಸಮುದಾಯ ಅಥವಾ ಧರ್ಮದೆಡೆಗೆ ಒಬ್ಬ ವ್ಯಕ್ತಿಗೆ ಇರುವ ಅತಿಯಾದ ವ್ಯಾಮೋಹ ಮತ್ತು ಅಂಧಶ್ರದ್ಧೆಯನ್ನು ಕೋಮುವಾದದ ಮೇಲೆ ನಡೆಸುವ ಕ್ರೌರ್ಯ, ಹಿಂಸೆ ಹಾಗೂ ದೌರ್ಜನ್ಯಗಳೇ ಕೋಮುಗಲಭೆಗಳು.

ಹಿಂದು, ಮುಸ್ಲೀಂ, ಸಿಖ್, ಕ್ರೈಸ್ತ ಧರ್ಮೀಯರ ನಡುವಣ ದ್ವೇಷ, ಘರ್ಷಣೆ, ಅಸಹನೆಗಳನ್ನು ಕೋಮುವಾದ ಎಂದು ಗುರುತಿಸಲಾಗುತ್ತದೆ.

## ವಿವರಣೆ :

ನಮ್ಮ ದೇಶದಲ್ಲಿ ಬಹಳ ಹಿಂದೆ ಆರ್ಯರು ಮತ್ತು ದ್ರಾವಿಡರ ನಡುವೆ ಕೋಮು ಸಂಘರ್ಷಗಳು ನಡೆಯುತ್ತಿದ್ದವು, ನಂತರ ಮುಸ್ಲಿಂರ ದಾಳಿ, ತದನಂತರ ಬ್ರಿಟೀಷರ ಆಗಮನದಿಂದ ಮುಸ್ಲೀಂ ಮತ್ತು ಕ್ರಿಶ್ಚಿಯನ್ನರು ಈ ದೇಶದಲ್ಲಿ ವಾಸಿಸಲು ಪ್ರಾರಂಭಿಸಿದರು. ಆರಂಭದಿಂದಲೂ ಹೊಸದಾಗಿ ಬಂದವರನ್ನು



downloaded from: www.kpscvaani.com

ಒಪ್ಪಿಕೊಳ್ಳದ ಮೂಲನಿವಾಸಿಗಳು, ಅವರ ಮೇಲೆ ವೈಷಮ್ಯ, ಅಪನಂಬಿಕೆ ಬೆಳೆಸಿಕೊಂಡಿದ್ದರು. ಇದರ ಪರಿಣಾಮವಾಗಿ ಆಗಾಗ ಕೋಮು ಸಂಘರ್ಷಗಳು ನಡೆಯುತ್ತಿದ್ದವು. ಇತ್ತೀಚೆಗೆ ಹಿಂದೂ ಸಿಖ್ ಹಾಗೂ ಹಿಂದೂಗಳಲ್ಲಿ ಸವರ್ಣಿಯರು ಮತ್ತು ದಲಿತರ ನಡುವೆ ಸಹ ಸಂಘರ್ಷಗಳು ನಡೆಯುತ್ತಿವೆ. ಭಾರತದ ಅಲ್ಪಸಂಖ್ಯಾತರಲ್ಲಿ ತಾವು(ಮುಸ್ಲೀಂ, ಕ್ರಿಶ್ಚಿಯನ್, ಸಿಖ್) ನಿರ್ಲಕ್ಷಿಸಲ್ಪಟ್ಟವರು. ತಾರತಮ್ಯಗಳಿಗೆ ಒಳಗಾದವರು, ಶೋಷಣೆಗಳಿಗೆ ಒಳಪಡುವವರು ಎಂಬ ಭಾವನೆ ಬೇರೂರಿದೆ. ಮುಸ್ಲೀಂರು, ಕ್ರಿಶ್ಚಿಯನ್ನರು ಹಾಗೂ ಮಿಕ್ಕ ಅಲ್ಪಸಂಖ್ಯಾತರು ಹಿಂದೂಗಳನ್ನು ಸಂಶಯಾಸ್ಪದವಾಗಿ ನೋಡುತ್ತಾರೆ. ಹಾಗೆಯೇ ಮುಸ್ಲೀಂ ಹಾಗೂ ಕ್ರಿಶ್ಚಿಯನ್ನರು ಹಿಂದೂಗಳನನ್ನು ಮತಾಂತರಕ್ಕೊಳಪಡಿಸುತ್ತಿದ್ದಾರೆ. ವಿದೇಶಿಗಳಿಗೆ ನಿಷ್ಠರಾಗಿದ್ದು ಭಾರತಕ್ಕೆ ದ್ರೋಹ ಬಗೆಯುತ್ತಿದ್ದಾರೆ. ಇತ್ಯಾದಿ ಸಂಶಯಗಳನ್ನು ಹಿಂದೂಗಳು ಅಲ್ಪಸಂಖ್ಯಾತರ ಬಗ್ಗೆ ಹೊಂದಿದ್ದಾರೆ. ಚರ್ಚು, ಮಸೀದಿ ಮತ್ತು ಗುರುದ್ವಾರಗಳ ಸಮೀಪ ಪೋಲೀಸರ ಆಗಮನವನ್ನು ಸಂಶಯಿಸುವ ಅಲ್ಪಸಂಖ್ಯಾತರು ಅವರ ಧರ್ಮಕ್ಕೆ, ಧಾರ್ಮಿಕ ಸ್ವಾತಂತ್ರ್ಯಕ್ಕೆ ಧಕ್ಕೆಯಾಗುತ್ತಿದೆ ಎಂದು ಸಿಡಿಮಿಡಿಗೊಳ್ಳುತ್ತಿದ್ದಾರೆ.

ಆಧುನಿಕ ಸಮಾಜದಲ್ಲಿ ರಾಜಕೀಯ ಪಕ್ಷಗಳು ಮತಬ್ಯಾಂಕು ಸೃಷ್ಟಿಸಲು ಪರಸ್ಪರ ಆರೋಪ ಪ್ರತ್ಯಾರೋಪ & ಒಬ್ಬರು ಇನ್ನೊಬ್ಬರ ಮೇಲೆ ಗೂಬೆ ಕೂರಿಸುವ ಕುತಂತ್ರದಿಂದಾಗಿ ಕೋಮುವಾದವನ್ನು ಪೋಷಿಸುವ ಕೆಲಸದಲ್ಲಿ ತೊಡಗಿವೆ. ಅಧಿಕಾರದ ಆಸೆಗಾಗಿ ಧರ್ಮದ ಹೆಸರಿನಲ್ಲಿ ರಾಜಕಾರಣ ಮಾಡುತ್ತಿರುವ ದುರಂತದ ಪರಿಣಾಮವೇ ಇಂದು ಯಾವ ಕ್ಷಣದಲ್ಲಿ ಎಲ್ಲಿ ಕೋಮು ಜ್ವಾಲೆ ಹೊತ್ತಿ ಉರಿಯುತ್ತದೆಯೋ ಎನ್ನುವ ಆತಂಕದಲ್ಲಿ ಕೆಲವರು ವಾಸಿಸುತ್ತಿದ್ದಾರೆ. ಸಾಮಾಜಿಕ ಮಾಧ್ಯಮಗಳಾದ ಫೇಸ್ ಬುಕ್, ವಾಟ್ಸ್ಅಪ್ ಬಳಕೆ ಮುಂಚೂಣಿಗೆ ಬಂದ ಮೇಲೆ ಒಂದು ಚಿಕ್ಕ ಕೋಮು ಸಂಘರ್ಷಕ್ಕೆ ಉಪ್ಪು ಖಾರ ಹಾಕಿದ ಸುಳ್ಳು ಸುದ್ದಿ ಕ್ಷಣಾರ್ಧದಲ್ಲೆ ಅದು ಹತ್ತು ಹಲವು ಕಡೆಗೆ ಹಬ್ಬುವಂತೆ ಮಾಡುತ್ತಿದೆ. ಇದು ಭಾರತದ ಪ್ರಜಾಪ್ರಭುತ್ವಕ್ಕೆ ಅತ್ಯಂತ ಅಪಾಯಕಾರಿಯಾಗಿದೆ.

**ಮತೀಯ ಗಲಭೆಗಳಿಗೆ ಕಾರಣಗಳು :**

- **ರಾಜಕೀಯ ಕಾರಣ :** ಬ್ರಿಟೀಷರಿಂದ ಸ್ವಾತಂತ್ರ್ಯವನ್ನು ಪಡೆದ ನಂತರ ಭಾರತ ದೇಶವನ್ನಾಳಿದ ರಾಜಕೀಯ ಪಕ್ಷಗಳು ಮತಗಳಿಕೆಗಾಗಿ ಒಂದೊಂದು ಧರ್ಮವನ್ನು ಅತಿಯಾಗಿ ಓಲೈಸುತ್ತಿರುವುದು ಕೋಮು ಸೌಹಾರ್ದತೆ ಹಾಳಾಗಲು ಕಾರಣವಾಗುತ್ತಿದೆ.
- **ಧಾರ್ಮಿಕ ಕಾರಣ :** ಧಾರ್ಮಿಕ ಆಚರಣೆಗಳು ಬೇರೆ ಬೇರೆಯಾಗಿದ್ದು ಒಂದು ಧರ್ಮದ ಆಚರಣೆಯು ಇನ್ನೊಂದು ಧರ್ಮದವರ ಭಾವನೆಗೆ ವಿರುದ್ಧವಾಗಿರುತ್ತದೆ. ಒಂದು ಧರ್ಮದ ಆಹಾರ ಪದ್ಧತಿಯು ಮತ್ತೊಂದು ಧರ್ಮದ ಭಾವನೆಗೆ ದಕ್ಕೆ ತರುತ್ತದೆ. ಇಂತಹ ಕೆಲವು ವಿಚಾರಗಳು ಒಮ್ಮೊಮ್ಮೆ ಸಂಘರ್ಷಗಳಿಗೆ ಎಡೆಮಾಡಿಕೊಡುತ್ತದೆ.
- **ಮಿತ್ಯ ಧಾರ್ಮಿಕ ಬೋಧನೆ :** ಮತಾಂಧರಾದ ಕೆಲವು ಧರ್ಮ ಗುರುಗಳು ನಮ್ಮ ಧರ್ಮವೇ ಶ್ರೇಷ್ಠ ಉಳಿದವು ಕನಿಷ್ಠವೆಂದು ಅಮಾಯಕ ಮುಗ್ಧರನ್ನು ನಂಬಿಸುತ್ತ, ಭಗವಂತನ ಕೃಪೆಗೆ ಪಾತ್ರರಾಗಲು ಅನ್ಯ ಧರ್ಮವನ್ನು ತೇಜೋವಧೆ ಮಾಡುವುದೇ ಮಾರ್ಗ ಎಂದು ಸುಳ್ಳು ಭೋಧನೆ ಮಾಡುತ್ತ ಪ್ರಚೋದನೆ ಮಾಡುತ್ತಿರುವುದು ಸಹ ಇತ್ತೀಚಿಗೆ ಕೋಮು ಗಲಭೆಗಳಿಗೆ ಕಾರಣವಾಗುತ್ತಿದೆ.



downloaded from: www.kpscvaani.com

- **ಆರ್ಥಿಕ ಕಾರಣ :** ಸ್ವಾತಂತ್ರ್ಯ ನಂತರ ಎಲ್ಲಾ ಧರ್ಮಗಳ ಮತ್ತು ಎಲ್ಲಾ ವರ್ಗಗದ ಜನರನ್ನು ಸಮಾನವಾಗಿ ಅಭಿವೃದ್ಧಿಪಡಿಸಲು ಸರ್ಕಾರ ಸಾಕಷ್ಟು ಯೋಜನೆಗಳು ಜಾರಿ ಮಾಡಲಾಗಿದೆ. ಸಂವಿಧಾನದಲ್ಲಿ ಸಹ ಹಿಂದುಳಿದ ವರ್ಗದ ಅಭಿವೃದ್ಧಿಗಾಗಿ ಸರ್ಕಾರ ಶ್ರಮಿಸಬೇಕಾದ ಅನಿವಾರ್ಯತೆಯ ಬಗ್ಗೆ ಉಲ್ಲೇಖಿಸಲಾಗಿದೆ. ಹಲವಾರು ಯೋಜನೆಗಳನ್ನು ರೂಪಿಸಿದ್ದರೂ ಸಹ ಅವುಗಳು ನಿರೀಕ್ಷಿತ ಮಟ್ಟದ ಫಲಿತಾಂಶ ನೀಡದ ಕಾರಣ ಕೆಲವು ಕೆಳ ಸಮುದಾಯಗಳ ಜನರು ಇಂದಿಗೂ ಮೂರು ಹೊತ್ತು ಊಟಕ್ಕಾಗಿ ಪರದಾಡುತ್ತಿದ್ದಾರೆ. ಇಂತಹ ಪರಿಸ್ಥಿತಿ ಸಹ ಕೋಮು ಸಂಘರ್ಷಗಳಿಗೆ ಕಾರಣವಾಗಿರುವ ಉದಾಹರಣೆಗಳಿವೆ.
- **ಸಾಂಸ್ಕೃತಿಕ ಅಂಶಗಳು** : ಭಾರತ ದೇಶವು ಹತ್ತು ಹಲವಾರು ಧರ್ಮಗಳನ್ನು ಒಳಗೊಂಡ ರಾಷ್ಟ್ರ. ಅದಕ್ಕಾಗಿಯೇ "ವಿವಿಧತೆಯಲ್ಲಿ ಏಕತೆ" ಎಂದು ಹೇಳುವುದುಂಟು. ಎಲ್ಲಾ ಧರ್ಮದವರು ಕೇವಲ ಅವರವರ ಧಾರ್ಮಿಕ ಆಚರಣೆ, ಸಂಸ್ಕೃತಿಗಳಿಗೆ ಬೆಲೆ ನೀಡುತ್ತಾರೆಯೆ ವಿನಹ ಇತರ ಧರ್ಮದ ಆಚರಣೆ ಮತ್ತು ಸಂಸ್ಕೃತಿಗಲ್ಲ. ವಿವಿಧತೆಯಲ್ಲಿ ಏಕತೆಯನ್ನು ಹೊಂದಿರುವ ದೇಶ ಎಂದು ಹೊರ ಜಗತ್ತಿಗೆ ತಿಳಿದಿದ್ದರೂ ಸಹ ಏಕತೆಯಲ್ಲಿ ವಿವಿಧತೆ ಮೂಡಿಸುವಂತ ಕೆಲವೊಂದು ಸಾಂಸ್ಕೃತಿಕ ಆಚರಣೆಗಳು ಕೋಮು ಸೌಹಾರ್ದಕ್ಕೆ ಮಾರಕವಾಗಿವೆ.
- ಕಾಯ್ದೆಗಳಲ್ಲಿ ಭಿನ್ನತೆ ಮತ್ತು ಮತೀಯ ಆಧಾರದ ಮೇಲೆ ಸಂಸ್ಥೆಗಳ ಮನ್ನಣೆ
- **ರಾಷ್ಟ್ರೀಯ ಮನೋಭಾವದ ಅಭಾವ :** ರಾಷ್ಟ್ರೀಯತೆಯ ಮನೋಭಾವದ ಅಭಾವದಿಂದಾಗಿ ಇಂದು ನಮ್ಮ ದೇಶದ ಗಡಿಯೊಳಗೆ ವಾಸಿಸುವ ಕೆಲವು ಮತಾಂದರು ಪಾಕಿಸ್ತಾನಕ್ಕೆ ಜೈಕಾರ ಹಾಕುತ್ತಾರೆ, ಭಾರತ ದೇಶಕ್ಕೆ ಧಿಕ್ಕಾರ ಕೂಗುತ್ತಾರೆ. ಪಾಕಿಸ್ತಾನ ಮತ್ತು ಭಾರತ , ಬಾಂಗ್ಲಾದೇಶ ಮತ್ತು ಭಾರತದ ನಡುವೆ ಕ್ರಿಕೇಟ್ ಮತ್ತು ಹಾಕಿ ಪಂದ್ಯಗಳು ನಡೆಯುವ ಸಂದರ್ಭಗಳಲ್ಲಿ ಕೆಲವು ಜನ ಭಾರತೀಯರು ಅದನ್ನು ಕ್ರೀಡಾ ಸ್ಪೂರ್ತಿಯಿಂದ ಸ್ವೀಕರಿಸದೆ ರಾಷ್ಟ್ರೀಯತೆಗೆ ಧಕ್ಕೆ ತರುವ ನಿಟ್ಟಿನಲ್ಲಿ ಪಾಕಿಸ್ತಾನ ಮತ್ತು ಬಾಂಗ್ಲಾ ದೇಶವನ್ನು ಅತಿಯಾಗಿ ಬೆಂಬಲಿಸುತ್ತಾರೆ ಇದು ಕೋಮು ಸಂಘರ್ಷಕ್ಕೆ ಎಡೆಮಾಡಿಕೊಡುತ್ತಿದೆ.
- **ಅಂತರಾಷ್ಟ್ರೀಯ ಕಾರಣಗಳು:** ಬೇರೆ ಬೇರೆ ದೇಶಗಲ್ಲಿ ನಡೆಯುವ ಕೆಲವು ವಿದ್ಯಮಾನಗಳು ನಮ್ಮ ದೇಶದಲ್ಲಿ ಕೋಮು ಗಲಭೆಗೆ ಕಾರಣವಾಗಿವೆ. ಉದಾಹರಣೆಗೆ ಮ್ಯಾನ್ಮಾರ್‌ದೇಶದಲ್ಲಿ ರೋಹಿಂಗ್ಯಾ ಮುಸ್ಲಿಂರ ಸಮಸ್ಯೆ, ಇಸ್ರೇಲ್ ಮತ್ತು ಪ್ಯಾಲೆಸ್ಥೇನ್ ನಡುವಿನ ಸಂಘರ್ಷ, ಬಾಂಗ್ಲಾ ಮತ್ತು ಪಾಕಿಸ್ತಾನದಲ್ಲಿ ಹಿಂದೂ ಕುಟುಂಬಗಳ ಮೇಲೆ ನಡೆಯುವ ದೌರ್ಜನ್ಯಗಳು ನಮ್ಮಲ್ಲಿ ಗಲಭೆ ಸೃಷ್ಟಿಯಾಗಲು ಕಾರಣವಾಗುತ್ತಿವೆ.

**ಕೋಮು ಗಲಭೆಯ ದುಷ್ಪರಿಣಾಮಗಳು–**

- ರಾಷ್ಟ್ರೀಯ ಆರ್ಥಿಕತೆಗೆ ಸಂಚಕಾರ ತರುತ್ತದೆ.
- ರಾಷ್ಟ್ರದ ವಿರೋಧಿ ಶಕ್ತಿಗಳು ಇಂತಹ ಸ್ಥಿತಿಯ ದುರುಪಯೋಗ ಪಡೆಯುತ್ತವೆ.
- ದೇಶದಲ್ಲಿ ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ ಉನ್ನತಿಗೆ ಮಾರಕವಗುತ್ತದೆ.
- ಸಮಾಜದಲ್ಲಿ ಅಶಾಂತಿ, ಹಿಂಸೆ, ಅಭದ್ರತೆಗೆ ಅವಕಾಶ ಮಾಡಿಕೊಡುತ್ತದೆ.
- ಕೋಮುಗಲಭೆಗಳಿಂದ ಸಾರ್ವಜನಿಕ ಆಸ್ತಿಪಾಸ್ತಿ ಹಾಳಾಗುತ್ತದೆ.


downloaded from: www.kpscvaani.com

- ಸಾಮಾಜಿಕ ಕೋಮು ಸೌಹಾರ್ದಕ್ಕೆ ದಕ್ಕೆ ಉಂಟಾಗುತ್ತದೆ.
- ಜನರಲ್ಲಿ ಕೆಟ್ಟ ಅಭಿಪ್ರಾಯ ಮೂಡಿ ಅನ್ಯಮತೀಯರ ಬಗ್ಗೆ ಭಯ, ಅಪನಂಬಿಕೆ ಮನೆ ಮಾಡುತ್ತದೆ.

**ಕೋಮುಗಲಭೆ ನಿರ್ಮೂಲನೆಗೆ ಕೈಗೊಂಡ ಕ್ರಮಗಳು :**

ಈ ಹಿಂದೆ ನಡೆದ ಕೋಮು ಗಲಭೆಗಳ ಬಗ್ಗೆ ತನಿಖೆ ನಡೆಸಲು ಮತ್ತು ಅವುಗಳನ್ನು ತಡೆಯಲು ಕೈಗೊಳ್ಳಬೇಕಾದ ಕ್ರಮಗಳನ್ನು ರಚಿಸುವ ಕುರಿತು ಕೇಂದ್ರ ಸರ್ಕಾರ ಹಲವು ಆಯೋಗಗಳನ್ನು ರಚಿಸಿತ್ತು ಅವುಗಳಲ್ಲಿ ಪ್ರಮುಖ ಆಯೋಗಗಳು :

- ಜಸ್ಟೀಸ್ ಶಿವ ದಯಾಳ್ ಶ್ರೀವತ್ಸವ ಆಯೋಗ– ಜಬಲಪುರ ಕೋಮು ಗಲಭೆ ಕುರಿತು
- ರಘುವೀರ ದಯಾಳು ಆಯೋಗ–ರಾಂಚಿ ಗಲಭೆ ಕುರಿತು
- ಜಗಮೋಹನ್ ರೆಡ್ಡಿ ಆಯೋಗ–ಅಹ್ಮದಾಬಾದ್ ಗಲಭೆ ಕುರಿತು
- ಡಿ.ಪಿ ಮದನ್ ಆಯೋಗ–ಭೀವಂಡಿ & ಮಾಲೆಗಾಂ ಗಲಭೆ ಕುರಿತು
- ಎಂ.ಪಿ ಸಕ್ಸೇನಾ ಆಯೋಗ– ಮೊರದಾಬಾದ್ ಗಲಭೆ ಕುರುತಿ
- ಜಸ್ಟೀಸ್ ಶ್ರೀ ಕೃಷ್ಣ ಆಯೋಗ–ಮುಂಬೈ ಗಲಭೆ
- ಜಸ್ಟೀಸ್ ನಾನಾವತಿ ಆಯೋಗ–ಅಹಮದಾಬಾದ್ ಗಲಭೆ
- ಜಗನ್ನಾಥ್ ಮಿಶ್ರ ಆಯೋಗ– ದೆಹಲಿ ಗಲಭೆ ಕುರಿತು
- ಸೋಮಶೇಖರ ಆಯೋಗ–ಚರ್ಚ್ ಮೇಲೆ ದಾಳಿ ಪ್ರಕರಣ
- ಟಿ.ಕೆ ವಿಶ್ವನಾಥ್ ಸಮಿತಿ: ಸಮಾಜಿಕ ಮಾದ್ಯಮಗಳಲ್ಲಿ ದ್ವೇಷಭಾಷಣ ಪ್ರಸಾರಣ ಹಾಗೂ ಕೋಮು ಸೌಹಾರ್ಧತೆಯನ್ನು ಕೆಡಿಸುವ ವಿಷಯ ಪ್ರಚಾರಕ್ಕೆ ಕಡಿವಾಣ ಹಾಕಲು ನೇಮಿಸಿರುವ ಸಮಿತಿ.

ಇತ್ತೀಚೆಗೆ ರಾಷ್ಟ್ರೀಯ ಭಾವೈಕ್ಯ ಮಂಡಳಿಯನ್ನು ಪುನರ್‌ರಚಿಸಿ, ಕೇಂದ್ರ ಸರ್ಕಾರವು ಮತೀಯ ಗಲಭೆಗಳನ್ನು ಅಡಗಿಸಲು 8 ಅಂಶಗಳನ್ನು ರೂಪಿಸಿದೆ.

ಈ ಎಲ್ಲಾ ಮತೀಯ ಸಂಸ್ಥೆಗಳಿಗೆ ಮನ್ನಣೆ ನೀಡಕೂಡದು. ಮತೀಯ ಗಲಭೆಗೆ ಕಾರಣರಾಗುವ ವ್ಯಕ್ತಿಗಳಿಗೆ ಅಧಿಕೃತ ವೇದಿಕೆ & ಸಂಸ್ಥೆಗಳಲ್ಲಿ ಸ್ಥಾನ ನೀಡಕೂಡದು.

ಸಂವಿಧಾನದನ್ವಯ ಪೊಲೀಸ್ ವ್ಯವಸ್ಥೆಯಲ್ಲಿ ಅಲ್ಪಸಂಖ್ಯಾತರಿಗೆ ಅಗತ್ಯವಾದ ಸ್ಥಾನ ದೊರೆಯುವಂತೆ ರಾಜ್ಯ ಸರ್ಕಾರಗಳು ಕ್ರಮ ಜರುಗಿಸಬೇಕು.

ಮತೀಯ ಗಲಭೆಗಳಾಗದಂತೆ ಸದಾ ನಿಗಾ ವಹಿಸಲು ಕೇಂದ್ರ ಗೃಹ ಖಾತೆಯಲ್ಲಿ ಮತೀಯ ಸೌಹಾರ್ದದ ಸೆಲ್ ಒಂದನ್ನು ಸ್ಥಾಪಿಸಲಾಗಿದೆ.

ಮತೀಯ ಹಿಂಸಾಚಾರದಲ್ಲಿ ನೊಂದವರಿಗೆ ಪುನರ್ವಸತಿ ಕಲ್ಪಿಸುವ ಯೋಜನೆ ಕೇಂದ್ರ ಸರ್ಕಾರದ ಮುಂದೆ ಪರಿಶೀಲನೆಯಲ್ಲಿದೆ.


downloaded from: www.kpscvaani.com

ಮತೀಯ ಗಲಭೆಗಳಿಗೆ ನಿಯಂತ್ರಣ ಒದಗಿಸಲು ಪ್ರದೇಶಗಳಲ್ಲಿ ಕಂಟ್ರೋಲ್ ರೂಮ್‌ಗಳನ್ನು ಸ್ಥಾಪಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ರಾಜ್ಯ ಸರ್ಕಾರಗಳೊಂದಿಗೆ ಪ್ರಸ್ತಾಪಿಸುತ್ತಿದೆ.

**ಉಪಸಂಹಾರ :**

ಪ್ರತಿಯೊಂದು ಪ್ರಜೆ ದೇಶದ ಪ್ರಗತಿಗಾಗಿ ಜಾತಿ, ಮತ, ಪಂಥಗಳೆಲ್ಲವನ್ನು ದೂರ ಸರಿಸಿ, ತಾವೆಲ್ಲ ಒಂದು ಎಂಬ ಭಾವನೆಯಿಂದ ದುಡಿಯಬೇಕಾಗಿದೆ. ನಾಡು, ನುಡಿ, ಪ್ರದೇಶಗಳೆನ್ನದೇ ವಿಶಾಲ ಮನೋಭಾವದಿಂದ ಪರಸ್ಪರರು ಭಾವನಾತ್ಮಕವಾಗಿ ಸ್ಪಂದಿಸಿದಾಗ ಎದುರಾಗಬಹುದಾದ ಸಂದಿಗ್ಧತೆಗಳನ್ನು ತಡೆಯಬಹುದಾಗಿದೆ. ಎಲ್ಲಾ ಧರ್ಮಗಳ ಅಂತಿಮ ತಿರುಳು ಮಾನವೀಯತೆಯೇ ಆಗಿದೆ ಎಂಬುದನ್ನು ಅರಿತು ರಾಷ್ಟ್ರಪ್ರೇಮವನ್ನು ಪ್ರತಿಯೊಬ್ಬರೂ ಬೆಳೆಸಿಕೊಳ್ಳಬೇಕಾಗಿದೆ.

# ಪ್ರಬಂಧ 13 : ಮಹಿಳಾ ಸಬಲೀಕರಣ

"ಭೂಮಿಯ ಮೇಲೆ ಮಾನವ ಸಂಕುಲ ಜನ್ಮ ತಾಳಿದಂದಿನಿಂದಲೂ ಪುರುಷ ಮತ್ತು ಮಹಿಳೆಯ ಸಮಾನ ಅಸ್ತಿತ್ವ, ಸಮಾಜದ ಅಭಿವೃದ್ಧಿಯಲ್ಲಿ ಸಮಾನ ಕೊಡುಗೆ ಇದ್ದಾಗ್ಯೂ ಇಂದಿಗೂ ಸಹ ಮಹಿಳೆಯನ್ನು ಎರಡನೇ ದರ್ಜೆಯ ಮಾನವನಾಗಿ ಕಾಣುತ್ತಿರುವದು ನಾಗರೀಕ ಸಮಾಜದ ದೊಡ್ಡ ದುರಂತ"

**–ಶ್ರೀಮತಿ ಹೆಚ್.ಜಿ ಶೋಭಾ**

**ಸಂಪಾದಕರು ಸ್ತ್ರೀ ಜಾಗೃತಿ**

ಮನುಷ್ಯನಿಗೆ ಎರಡು ಕಣ್ಣು, ಎರಡು ಕೈ, ಎರಡು ಕಾಲುಗಳಿವೆ ಇವುಗಳಲ್ಲಿ ಒಂದಿಲ್ಲದಿದ್ದರು ಮತ್ತೊಂದರ ಸಹಾಯದಿಂದ ಜೀವನ ಸಾಗಿಸಬಹುದು, ಆದರೆ ಸಮಾಜಕ್ಕಿರುವುದು ಹೆಣ್ಣು ಗಂಡೆಂಬ ಎರಡು ಅಂಗಗಳು ಮಾತ್ರ. ಅವುಗಳಲ್ಲಿ ಯಾವುದೊಂದು ಇಲ್ಲದಿದ್ದರು ಸಮಾಜ ಮುಂದೆ ಸಾಗದು. ಹೀಗಿದ್ದರೂ ಸಹ ಮಹಿಳೆಯನ್ನು ಎರಡನೇಯ ದರ್ಜೆಯ ಪ್ರಜೆಯಾಗಿ, ವ್ಯಕ್ತಿಘನತೆ ಇಲ್ಲದ ವ್ಯಕ್ತಿಯಾಗಿ, ಅವಕಾಶಗಳನ್ನು ಪಡೆಯಲು ಅನರ್ಹಳಾದ ವ್ಯಕ್ತಿಯಾಗಿ ಅನಾದಿಕಾಲದಿಂದಲೂ ನಡೆಸಿಕೊಂಡು ಬಂದಿರುವ ಇತಿಹಾಸ ಜಗತ್ತಿನ ಎಲ್ಲಾ ಕಡೆಗಳಲ್ಲೂ ಇದೆ.

ನಾಲ್ಕು ಕೋಣೆಯ ನಡುವೆ ಅಡುಗೆ ಮಾಡುವುದರಿಂದ ಹಿಡಿದು ಬಾಹ್ಯಾಕಾಶಯಾನ ಮಾಡುವವರೆಗೆ, ದ್ವಿಚಕ್ರ ವಾಹನ ಸವಾರಿಯಿಂದ ಹಿಡಿದು ಯುದ್ಧ ವಿಮಾನದ ಪೈಲೆಟ್, ಅಡುಗೆ ಮನೆಯಲ್ಲಿ ಸೌಟಿನಿಂದ ಹಿಡಿದು ಗಡಿಯಲ್ಲಿ ಬಂದೂಕು ಹಿಡಿಯುವ ಮಟ್ಟಕ್ಕೆ ಮಹಿಳೆ ಇಂದು ಪುರುಷರಿಗಿಂತ ಏನು ಕಡಿಮೆ ಇಲ್ಲ ಎಂಬುದು ಸಾಬೀತಾಗಿದ್ದರೂ ಸಹ ಇಂದಿಗೂ ಕೆಲವರು ಕೀಳು ದೃಷ್ಟಿಯಲ್ಲಿ ನೋಡುತ್ತಿದ್ದಾರೆ, ಸಮಾಜದಲ್ಲಿ ಇದು ಅತಿ ತುರ್ತಾಗಿ ಬದಲಾಗಬೇಕಾಗಿದೆ.

**ಮಹಿಳಾ ಸಬಲೀಕರಣದ ಅರ್ಥ :** (ನಿಘಂಟಿನ ಪ್ರಕಾರ)ಸಬಲೀಕರಣ ಎಂದರೆ "ಅಧಿಕಾರ ಕೊಡುವುದು" ಎಂದರ್ಥವಾಗುತ್ತದೆ. ಸಬಲೀಕರಣವು ಮಹಿಳೆಯರನ್ನು ಸಬಲಗೊಳಿಸಲು ಅಧಿಕಾರ ಕೊಡುವುದನ್ನು ಸೂಚಿಸುತ್ತದೆ.



downloaded from: www.kpscvaani.com

**ಚಾರಿತ್ರಿಕ ಹಿನ್ನೆಲೆ** : ಭಾರತದಲ್ಲಿ ಋಗ್ವೇದ ಕಾಲದಲ್ಲಿ ಮಹಿಳೆಯರಿಗೆ ಪುರುಷನಿಗೆ ಸರಿಸಮಾನ ಸ್ಥಾನಮಾನವಿತ್ತು. ಈ ಕಾಲದಲ್ಲಿ ಗಾರ್ಗಿ, ಮೈತ್ರೇಯಿ, ವಿಶ್ವವರಾಹ ದೇವಿಯಂತಹ ಪ್ರಮುಖ ಮಹಿಳಾ ವಿದ್ವಾಂಸರಿದ್ದರು. ಪುರುಷರಂತೆಯೇ ಮಹಿಳೆಯರಿಗೆ ಎಲ್ಲಾ ರೀತಿಯ ಸ್ಥಾನಮಾನ ದೊರೆತಿದ್ದವು ನಂತರ "ಉತ್ತರ ವೇದಗಳ" ಕಾಲದಲ್ಲಿ ಮಹಿಳೆಯರ ಸ್ಥಾನಮಾನಗಳ ಕುಸಿತ ಉಂಟಾಯಿತು. ಮಧ್ಯಕಾಲಿನ ಭಾರತದಲ್ಲಿ ಮಹಿಳೆಯರ ಸ್ಥಿತಿಗಳು ಇನ್ನಷ್ಟು ಶೋಚನೀಯವಾದವು. ಬಾಲ್ಯವಿವಾಹ, ಪರ್ದಾ ವಿವಾಹ, ಜೋಹಾರ್ ಪದ್ಧತಿ, ದೇವದಾಸಿ ಪದ್ಧತಿ, ವಿಧವಾ ಪುನರ್ ವಿವಾಹ ನಿಷೇಧ ಮುಂತಾದ ಅನಿಷ್ಟ ಪದ್ಧತಿಗಳು ಮಹಿಳೆಯರ ಘನತೆಯನ್ನು ಕುಗ್ಗಿಸಿದವು.

ಮಹಿಳಾ ಸುಧಾರಣೆಯ ಗಮನಾರ್ಹ ಪ್ರಯತ್ನಗಳು ಬ್ರಿಟಿಷರ ಆಡಳಿತ ಕಾಲದಲ್ಲಿ ಕಾಣಸಿಗುತ್ತದೆ. ರಾಜರಾಮ್ ಮೋಹನ್‌ರಾಯ್, ಈಶ್ವರಚಂದ್ರ ವಿದ್ಯಾಸಾಗರ್, ಜ್ಯೋತಿಬಾಪುಲೆ, ಪಂಡಿತ್ ರಮಾಬಾಯಿ, ಗಾಂಧಿ ಮುಂತಾದವರು ಮಹಿಳಾ ಸಬಲೀಕರಣ ತರುವುದರಲ್ಲಿ ಪ್ರಮುಖ ಪಾತ್ರವಹಿಸಿದ್ದಾರೆ. 1829ರಲ್ಲಿ "ವಿಲಿಯಂ ಬೆಂಟಿಂಕ್"ರು ಸತಿಪದ್ಧತಿ ನಿಷೇಧ ಕಾಯ್ದೆಯನ್ನು ಜಾರಿಗೆ ತಂದು ಮಹಿಳೆಯರ ಸಬಲೀಕರಣಕ್ಕೆ ಪ್ರಯತ್ನಿಸಿದರು. ಸ್ವಾತಂತ್ರ್ಯ ನಂತರ ರಚನೆಯಾದ ಸಂವಿಧಾನದಲ್ಲಿ ಮಹಿಳೆಯರನ್ನು ಪುರುಷರಿಗೆ ಸಮಾನವಾಗಿ ಕಾಣಲು ಸರ್ವ ಪ್ರಯತ್ನವನ್ನು ಮಾಡಲಾಗಿದೆ. ಮಹಿಳಾ ಸಬಲೀಕರಣಕ್ಕಾಗಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಹಲವಾರು ಕಾರ್ಯಕ್ರಮಗಳನ್ನು ಜಾರಿಗೆ ತರುವ ಮೂಲಕ ಶ್ರಮಿಸುತ್ತಿವೆ.

**ಮಹಿಳಾ ಸಬಲೀಕರಣದ ಕಾರ್ಯ ತಂತ್ರಗಳು** : ಮಹಿಳಾ ಸಬಲೀಕರಣದ ಕಾರ್ಯತಂತ್ರಗಳನ್ನು ಕಾನೂನಾತ್ಮಕ, ಸಾಮಾಜಿಕ ಮತ್ತು ಆರ್ಥಿಕ ಎಂದು ವರ್ಗೀಕರಿಸಲಾಗಿದೆ.

1. **ಕಾನೂನಾತ್ಮಕ ತಂತ್ರಗಳು** : ಭಾರತವು ಸ್ವಾತಂತ್ರ್ಯ ಪಡೆದ ನಂತರ ಮಹಿಳೆಯರಿಗೆ ಸಮಾನ ಸ್ಥಾನಮಾನ ನೀಡುವ ಉದ್ದೇಶದಿಂದ ಕೆಲವು ಶಾಸನಗಳನ್ನು ರೂಪಿಸಿದೆ.
   * **ಹಿಂದೂ ವಿವಾಹ ಕಾಯ್ದೆ(1955)** : ಭಾರತ ಸರ್ಕಾರವು 1955ರಲ್ಲಿ ಈ ಕಾಯ್ದೆ ಜಾರಿಗೆ ತಂದಿದ್ದು. ಈ ಕಾಯ್ದೆಯ ಅನ್ವಯ ಪುರುಷರ 2ನೇ ಮದುವೆಯನ್ನು ನಿಷೇಧಿಸಲಾಗಿದ್ದು, ಕೆಲವು ನಿರ್ದಿಷ್ಟ ಕಾರಣಗಳಿಗೆ ಮಾತ್ರ ವಿವಾಹ ವಿಚ್ಛೇದನಕ್ಕೆ ಅವಕಾಶ ಕಲ್ಪಿಸಲಾಗಿದೆ.
   * **ಹಿಂದೂ ಉತ್ತರಾಧಿಕಾರಿ ಕಾಯ್ದೆ(1956)** : ಈ ಕಾಯ್ದೆಯನ್ವಯ ಸ್ತ್ರೀಯರು ಸಹ ಪುರುಷನಂತೆಯೇ ಅನುವಂಶಿಯವಾಗಿ ಆಸ್ತಿಯಲ್ಲಿ ಪಾಲುದಾರಳಾಗಿರುತ್ತಾಳೆ.
   * **ವರದಕ್ಷಣಾ ನಿಷೇಧ ಕಾಯ್ದೆ(1961)** : ಈ ಕಾಯ್ದೆ ಅನ್ವಯ ವರದಕ್ಷಿಣೆ ಕೊಡುವುದು ಅಥವಾ ತೆಗೆದುಕೊಳ್ಳುವುದು ಜಾಮೀನು ರಹಿತ ಅಪರಾಧವಾಗಿದ್ದು 5 ವರ್ಷಕ್ಕಿಂತ ಕಡಿಮೆ ಇಲ್ಲದಂತೆ ಜೈಲು ಅಥವಾ ದಂಡ ವಿಧಿಸಬಹುದಾಗಿದೆ.
   * **ಕೌಟುಂಬಿಕ ದೌರ್ಜನ್ಯ ತಡೆ ಕಾಯ್ದೆ(2005)** : ಇದಕ್ಕೆ 2016ರ ಸೆಪ್ಟೆಂಬರ್‌ನಲ್ಲಿ ತಿದ್ದುಪಡಿ ತಂದು ಕುಟುಂಬದಲ್ಲಿ ನಡೆಯುವ ದೌರ್ಜನ್ಯದಲ್ಲಿ ಕೇವಲ ಪುರುಷ ಮಾತ್ರವಲ್ಲದೆ ಸ್ತ್ರೀಯರು ನೀಡುವ ದೌರ್ಜನ್ಯವನ್ನು ಸಹ ಸೇರಿಸಲಾಗಿದೆ.



downloaded from: www.kpscvaani.com

* **ಹಿಂದೂ ದತ್ತು ಜೀವನಾಂಶ ಕಾಯ್ದೆ(1956)** : ಅವಿವಾಹಿತ ಸ್ತ್ರೀ & ವಿಧವೆ ಅಥವಾ ವಿಚ್ಛೇದನೆ ಪಡೆದಿರುವ ಮಾನಸಿಕ ಆರೋಗ್ಯದಿಂದಿರುವ ಮಹಿಳೆಯರ ಮಗುವನ್ನು ದತ್ತು ತೆಗೆದುಕೊಳ್ಳಬಹುದು.
* **ಬಾಲ್ಯ ವಿವಾಹ ನಿಷೇಧ ಕಾಯ್ದೆ–2006(ಶಾರದಾ ಕಾಯ್ದೆ)** : ಈ ಕಾಯ್ದೆಯನ್ನು ಜಾರಿಗೆ ತಂದು 18 ವರ್ಷ ಮೇಲ್ಪಟ್ಟು ವಿವಾಹ ಮಾಡಲು ಅವಕಾಶ ನೀಡಲಾಗಿತ್ತು. 18 ವರ್ಷ ಕೆಳಗಿನ ಬಾಲಕಿಯರಿಗೆ 21 ವರ್ಷ ಕೆಳಗಿನ ಪುರುಷರಿಗೆ ವಿವಾಹ ಮಾಡಿದರೆ ಶಿಕ್ಷಾರ್ಹ ಅಪರಾಧವಾಗುತ್ತದೆ.
* **ಸ್ಥಳೀಯ ಸಂಸ್ಥೆಗಳಲ್ಲಿ ಮೀಸಲಾತಿ** : ಭಾರತ ಸಂವಿಧಾನದ 73 & 74ನೇ ವಿಧಿಗೆ ತಿದ್ದುಪಡಿ ತಂದು ಈ ಕಾಯ್ದೆ ಅನ್ವಯ ಮಹಿಳೆಯರಿಗೆ ಸ್ಥಳೀಯ ಸಂಸ್ಥೆಗಳಲ್ಲಿ 33% ಸ್ಥಾನಗಳ ಮೀಸಲಾತಿ ಕಲ್ಪಿಸಲಾಗಿದೆ. ಕರ್ನಾಟಕ ಸರ್ಕಾರವು ಸ್ಥಳೀಯ ಸಂಸ್ಥೆಗಳಲ್ಲಿ 50% ಮೀಸಲಾತಿ ಕಲ್ಪಿಸಿದೆ.

**ಮಹಿಳಾ ಸಬಲೀಕರಣಕ್ಕಾಗಿ ಸಂವಿಧಾನ ಕಲ್ಪಿಸಿರುವ ಅವಕಾಶಗಳು :**

* **ಸಂವಿಧಾನ್ಮಕ ಅವಕಾಶಗಳು**

ವಿಧಿ–14 : ಕಾನೂನಿನ ಮುಂದೆ ಎಲ್ಲರೂ ಸಮಾನರು.

ವಿಧಿ–15 : ಲಿಂಗದ ಆಧಾರದ ಮೇಲೆ ತಾರತಮ್ಯ ಮಾಡುವಂತಿಲ್ಲ.

ವಿಧಿ–16 : ಸಾರ್ವಜನಿಕ ಹುದ್ದೆ ಪಡೆಯುವರಲ್ಲಿ ಸಮಾನ ಅವಕಾಶ.

ವಿಧಿ–39B : ಸಮಾನ ಕೆಲಸಕ್ಕೆ ಸಮಾನ ವೇತನ.

ವಿಧಿ–42 : ಕೆಲಸ ನಿರ್ವಹಿಸಲು ಪೂರಕವಾದ, ನ್ಯಾಯಯುತವಾದ ಹಾಗೂ ಮಾನವೀಯ ಸ್ಥಿತಿಗಳನ್ನು ಉಂಟುಮಾಡುವುದು ಮತ್ತು ಹೆರಿಗೆ ಸೌಲಭ್ಯ ನೀಡುವುದು.

ವಿಧಿ–44 : ಸಮಾನ ನಾಗರೀಕ ಸಂಹಿತೆ ಜಾರಿಗೊಳಿಸುವುದು.

ವಿಧಿ–51A(E) : ಸ್ತ್ರೀಯರ ಗೌರವಕ್ಕೆ ಧಕ್ಕೆ ತರುವ ವಿಷಯಗಳನ್ನು ತಿರಸ್ಕರಿಸುವುದು.

**ಮಹಿಳಾ ಸಬಲೀಕರಣಕ್ಕಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ಯೋಜನೆಗಳು :**

* **ಮಹಿಳಾ ಸಮೃದ್ಧಿ ಯೋಜನೆ(1992)** : ಗ್ರಾಮೀಣ ಮಹಿಳೆಯರಲ್ಲಿ ಆರ್ಥಿಕ ಭದ್ರತೆ ಮತ್ತು ಉಳಿತಾಯದ ಮನೋಭಾವವನ್ನು ಉಂಟುಮಾಡಲು ಈ ಯೋಜನೆಯನ್ನು ಜಾರಿಗೆ ತರಲಾಯಿತು.
* **ರಾಷ್ಟ್ರೀಯ ಮಹಿಳಾ ಕೋಶ(1992)** : ಕೇಂದ್ರ ಸರ್ಕಾರವು ಈ ಯೋಜನೆಯನ್ನು ಜಾರಿಗೆ ತಂದಿದ್ದು. ಈ ಮೂಲಕ ಬಡತನ ರೇಖೆಗಿಂತ ಕೆಳಗಿರುವ ಮಹಿಳೆಯರ ಆರ್ಥಿಕ ಚಟುವಟಿಕೆಗಳನ್ನು ಕೈಗೊಳ್ಳಲು ಇದು ಸಾಲ ಸೌಲಭ್ಯವನ್ನು ಒದಗಿಸುತ್ತಿದೆ.


downloaded from: www.kpscvaani.com

* **ಇಂದಿರಾ ಮಹಿಳಾ ಯೋಜನೆ(1995)** : ಈ ಯೋಜನೆಯಡಿ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಮಹಿಳಾ ಗುಂಪುಗಳನ್ನು ಸ್ಥಾಪಿಸಿ ಪ್ರತಿ ಹಳ್ಳಿಯಲ್ಲೂ ಮಹಿಳೆಯರ ಆರ್ಥಿಕ ಸಂಪನ್ಮೂಲದ ಬಗ್ಗೆ ಅರಿವು ಮೂಡಿಸುವುದಾಗಿದೆ.
* **ಬೇಟಿ ಬಚಾವೋ ಬೇಟಿ ಪಢಾವೊ ಯೋಜನೆ** : 2015 ಜನವರಿ 22ರಂದು ಹರಿಯಾಣದ ಸೋನಿಪಾಟ್‌ನಲ್ಲಿ ಪ್ರಧಾನಿ ನರೇಂದ್ರ ಮೋದಿಯವರು ಚಾಲನೆ ನೀಡಿದರು. ಈ ಯೋಜನೆ ಮೂಲಕ ಹೆಣ್ಣು ಭ್ರೂಣ ಹತ್ಯೆಯನ್ನು ತಡೆಗಟ್ಟುವುದು ಹಾಗೂ ಹೆಣ್ಣು ಮಕ್ಕಳ ಶಿಕ್ಷಣವನ್ನು ಪ್ರೋತ್ಸಾಹಿಸುವ ಸಲುವಾಗಿ ಜಾರಿಗೆ ತರಲಾಗಿದೆ.
* **ರಾಷ್ಟ್ರೀಯ ಮಹಿಳಾ ಕೋಶ**
* **ಪ್ರಧಾನಮಂತ್ರಿ ಮಾತೃತ್ವ ವಂದನ ಯೋಜನಾ(ಇಂದಿರಾಗಾಂಧಿ ಮಾತೃತ್ವ ಸಹಯೋಗ್ ಯೋಜನಾ)**
* **ಸಬಲ ಯೋಜನೆ**
* **ಪ್ರಿಯ ದರ್ಶಿನಿ**
* **ಮಹಿಳಾ –ಎ– ಹಾಟ್**
* **ನಿರ್ಭಯ ನಿಧಿ**
* **ಸ್ವದಾರ್ ಗೃಹ್**
* **ಮಹಿಳಾ ಶಕ್ತಿ ಕೇಂದ್ರ**
* **ಮಹಿಳಾ ಸಮಖ್ಯಾ ಯೋಜನಾ**
* **ಜನನಿ ಶಿಶು ಸುರಕ್ಷಾ ಯೋಜನಾ**
* **ರಾಷ್ಟ್ರೀಯ ಕಿಶೋರ್ ಸ್ವಾಸ್ಥ್ ಕಾರ್ಯಕ್ರಮ**
* **ಆದಿವಾಸಿ ಮಹಿಳಾ ಸಶಕ್ತಿಕರಣ ಯೋಜನಾ**
* **ಮಹಿಳಾ ಕಿಸಾನ್ ಸಶಕ್ತಿಕರಣ್ ಯೋಜನಾ**
* **ಕಿಶೋರಿ ಶಕ್ತಿ ಯೋಜನಾ**
* **ಜನನಿ ಸುರಕ್ಷಾ ಯೋಜನಾ**
* **ಪ್ರಧಾನ ಮಂತ್ರಿ ಮಾತೃತ್ವ ಸುರಕ್ಷಿತ್ ಅಭಿಯಾನ್**

**ಕರ್ನಾಟಕ ಸರ್ಕಾರವು ಮಹಿಳಾ ಸಬಲೀಕರಣಕ್ಕಾಗಿ ಕೈಗೊಂಡಿರುವ ಕಾರ್ಯಕ್ರಮಗಳು :**


downloaded from: www.kpscvaani.com

* **ಉದ್ಯೋಗಿನಿ ನಿಯೋಜನೆ(2009–10)** : ಸ್ವಯಂ ಉದ್ಯೋಗದಲ್ಲಿ ತೊಡಗಿಕೊಳ್ಳಲು ವಿಶೇಷ ವರ್ಗದ ಮಹಿಳೆಯರಿಗೆ ಯೋಜನಾ ವೆಚ್ಚದ ಶೇ.30% ಹಾಗೂ ಇತರೆ ವರ್ಗದ ಮಹಿಳೆಯರಿಗೆ ಶೇ.20% ಸಹಾಯಧನ ನೀಡಲಾಗುತ್ತಿದೆ.
* **ಮಹಿಳಾ ತರಬೇತಿ ಯೋಜನೆ** : ಆರ್ಥಿಕವಾಗಿ ಹಿಂದುಳಿದ ಅಸಹಾಯಕ ಹಾಗೂ ಸಂಕಷ್ಟದಲ್ಲಿರುವ ಮಹಿಳೆಯರನ್ನು ಆರ್ಥಿಕ ಸ್ವಾವಲಂಭಿಗಳನ್ನಾಗಿ ಮಾಡುವುದು.
* **ದೇವದಾಸಿ ಪುನರ್ ವಸತಿ ಯೋಜನೆ** : ದೇವದಾಸಿ ವಿವಿಧ ಚಟುವಟಿಕೆಗಳಲ್ಲಿ ಸ್ವಂತ ಉದ್ಯೋಗ ಕಲ್ಪಿಸಿಕೊಳ್ಳಲು 20,000/– ಸಹಾಯಧನವನ್ನು ನೀಡುವುದು ಮತ್ತು 100ರೂ. ಮಾಸಾಶನ ನೀಡುವುದು.
* **ಮನಸ್ವಿನಿ ಯೋಜನೆ(2013)** : 40ವರ್ಷ ವಯೋಮಿತಿ ಮೀರಿದ ಅವಿವಾಹಿತ ಮತ್ತು ವಿಚ್ಛೇದಿತ ಮಹಿಳೆಯರಿಗೆ 500ರೂ. ಮಾಸಾಶನ ನೀಡಲಾಗುತ್ತದೆ.
* **ಮೈತ್ರಿ ಯೋಜನೆ** : 40 ವರ್ಷ ದಾಟಿದ ಬಡತನ ರೇಖೆಗಿಂತ ಕೆಳಗಿರುವ ಲೈಂಗಿಕ ಅಲ್ಪಸಂಖ್ಯಾತರಿಗೆ ಮಾಸಿಕ 500ರೂ. ಮಾಸಾಶನ ನೀಡಲಾಗುತ್ತಿದೆ.
* **ಬಿದಾಯಿ/ ಶಾದಿ ಭಾಗ್ಯ ಯೋಜನೆ(2013)** : ಆರ್ಥಿಕವಾಗಿ ಹಿಂದುಳಿದ ಮತ್ತು ಅಲ್ಪ ಸಂಖ್ಯಾತರ ವಿವಾಹಕ್ಕೆ 50,000/– ನಗದು ಸಹಾಯಧನ ನೀಡುವುದು ಈ ಯೋಜನೆಯ ಉದ್ದೇಶ.
* **ಭಾಗ್ಯಲಕ್ಷ್ಮೀ ಯೋಜನೆ(2006–07)** : ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳ ಮೊದಲ ಎರಡು ಹೆಣ್ಣು ಮಕ್ಕಳಿಗೆ ಪ್ರಾರಂಭಿಕ ಠೇವಣಿಯಾಗಿ 19,300ರೂ. ಮತ್ತು ಎರಡನೇ ಹೆಣ್ಣು ಮಗುವಿಗೆ 18,350ರೂ. ಠೇವಣಿ ಇಡಲಾಗುತ್ತಿದೆ.
* **ಸ್ತ್ರೀ ಶಕ್ತಿ ಯೋಜನೆ(2000–01)** : ಸ್ವ-ಸಹಾಯ ಗುಂಪುಗಳ ಮೂಲಕ ಗ್ರಾಮೀಣ ಮಹಿಳೆಯರಿಗೆ ಆರ್ಥಿಕ ಸಬಲೀಕರಣ ಮಾಡಲು ಹಣ ಒದಗಿಸುವುದು.
* **ಸಾಂತ್ವನ ಯೋಜನೆ(2000–01)** : ಅತ್ಯಾಚಾರ ಕೌಟುಂಬಿಕ ಹಿಂಸೆ ವರದಕ್ಷಿಣೆ, ಲೈಂಗಿಕ ಕಿರುಕುಳ ಮುಂತಾದ ದೌರ್ಜನ್ಯಕ್ಕೆ ಒಳಗಾದ ಮಹಿಳೆಯರಿಗೆ ಸಾಂತ್ವಾನ ಅಥವಾ ಪುನರ್ವಸತಿ ಒದಗಿಸುವುದು.
* **ಧನಶ್ರೀ ಯೋಜನೆ(2016–17)** : HIV ಪಿಡಿತ ಮಹಿಳೆಯರಿಗೆ 40,000 ಸಾಲ ಮತ್ತು 10,000 ಸಹಾಯಧನವನ್ನು ನೀಡುತ್ತಾರೆ.
* **ಚೇತನ ಯೋಜನೆ** : ಲೈಂಗಿಕ ಕಾರ್ಯಕರ್ತೆಯರ ಪುನರ್ವಸತಿಗೆ 20,000 ಪ್ರೋತ್ಸಾಹಧನ ನೀಡುವುದು.

**ಉಪಸಂಹಾರ** : ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಮಹಿಳಾ ಸಬಲೀಕರಣಕ್ಕಾಗಿ ಸಾಕಷ್ಟು ಯೋಜನೆಗಳು ಜಾರಿಗೆ ತಂದಿದ್ದರೂ ಸಹ, ಅವುಗಳು ಪರಿಣಾಮಕಾರಿಯಾಗಿ ಅನುಷ್ಠಾನಗೊಳ್ಳದ ಕಾರಣ, ಮಹಿಳೆಯರು ಇಂದಿಗೂ ಸಹ ಶಿಕ್ಷಣ ಮತ್ತು ಆರ್ಥಿಕ ವ್ಯವಹಾರದಿಂದ ವಂಚಿತರಾಗುತ್ತಿರುವ ಕಾರಣ, ಮೂಲಭೂತವಾದ ಕೆಲವು ಧಾರ್ಮಿಕ ಅಂಧಾಚರಣೆಗಳು ಇಂದಿಗೂ ಜೀವಂತವಾಗಿರುವ ಮಹಿಳಾ ಸಬಲೀಕರಣ ನಿರೀಕ್ಷಿಸಿದ ಮಟ್ಟಕ್ಕೆ ಸಾಧಿಸಲು ಸಾಧ್ಯವಾಗಿಲ್ಲ. "ತೊಟ್ಟಿಲನ್ನು ತೂಗುವ ಕೈಯೊಂದು ಜಗತ್ತನ್ನು ತೂಗಬಲ್ಲದು" ಎಂಬ ಗಾದೆ ಮಾತನ್ನು ಎಲ್ಲರೂ ಅರ್ಥೈಸಿಕೊಳ್ಳಬೇಕಾಗಿದೆ.


downloaded from: www.kpscvaani.com

ಕೇವಲ ಒಬ್ಬ ಸೋನಿಯಾ ಗಾಂಧಿ, ಸುಷ್ಮಾ ಸ್ವರಾಜ್, ನಿರ್ಮಲಾ ಸೀತರಾಮನ್, ಅರುಂಧತಿ ಬಟ್ಟಾಚಾರ್ಯ, ಕಿರಣ್ ಮಜೂಂದಾರ್, ಕಿರಣ್ ಬೇಡಿ ಮಾತ್ರವಲ್ಲದೆ ಪ್ರತಿ ಕುಟುಂಬದ ಹೆಣ್ಣು ಮಗು, ಇವರಂತೆ ಬೆಳೆಯಲು ಅವಕಾಶ ಸಿಗುವಂತಾಗಬೇಕು.

## ಪ್ರಬಂಧ 14 : ಅಂತರರಾಜ್ಯ ಜಲ ವಿವಾದಗಳು

ಜಲ ಸಂಪನ್ಮೂಲ ಜನರ ಜೀವ ಮೂಲ, ಆರೋಗ್ಯ, ಕೃಷಿ, ಕೈಗಾರಿಕೆಗಳ ಬೆಳವಣಿಗೆಗೆ ನೀರು ಅವಶ್ಯ ಹಾಗೂ ಅನಿವಾರ್ಯ. ಸರಾಗವಾಗಿ ಹರಿಯುವ ನದಿಗೆ ನಾವು ಗಡಿಯ ಚೌಕಟ್ಟು ಹಾಕಿದ್ದೇವೆ. ಒಂದು ರಾಜ್ಯದಲ್ಲಿ ಹರಿಯುತ್ತಿದ್ದ ನದಿ. ಕೆಲವೇ ಕಿ.ಮೀ.ಗಳ ನಂತರದಲ್ಲಿ ಮತ್ತೊಂದು ರಾಜ್ಯ ಪ್ರವೇಶಿಸಿರುತ್ತದೆ. ನಾಗರಿಕತೆಯ ಬೆಳವಣಿಗೆಗೆ ಅಗತ್ಯವಾಗಿರುವ ನೀರನ್ನು ಹಿಡಿದಿಡುವುದು ಸಮಸ್ತ ರಾಜ್ಯಗಳಿಗೂ ಅನಿವಾರ್ಯವಾಗಿದೆ. ಜಲವೇ ಜೀವನವಾಗಿರುವಾಗ ಪ್ರತಿ ರಾಜ್ಯದ ಪ್ರಮುಖ ಆದ್ಯತೆ ನೀರು ಸಂಗ್ರಹವೇ ಆಗಿದೆ. ನೀರು ಇಷ್ಟೊಂದು ಪ್ರಾಮುಖ್ಯತೆ ಹೊಂದಿರುವ ಪರಿಣಾಮವೇ ಜಲವಿವಾದ ಹೆಚ್ಚುತ್ತಿರುವುದಕ್ಕೆ ಕಾರಣ. ನದಿ ಹರಿವು ವಿಷಯವೇ ಈಗಿನ ಕಾನೂನು ಮತ್ತು ಸಂವಿಧಾನಾತ್ಮಕ ಚರ್ಚೆಗೆ ಹೆಚ್ಚಿನ ಆಹಾರ ಒದಗಿಸುತ್ತಿದೆ. ಈ ನಿಟ್ಟಿನಿಂದ ಪ್ರತಿ ಬಾರಿ ಚರ್ಚೆಗೆ ಬರುವ ರಾಜ್ಯ-ರಾಜ್ಯಗಳ ನಡುವಿನ ಜಲವಿವಾದಗಳನ್ನು ಒಮ್ಮೆ ಅವಲೋಕಿಸುವುದು ಸೂಕ್ತ.

### ಮಹಾದಾಯಿ ನದಿ ವಿವಾದ :

ಕರ್ನಾಟಕ ಮತ್ತು ಗೋವಾ ರಾಜ್ಯಗಳ ನಡುವೆ ಹರಿಯುತ್ತಿರುವ ಮಹಾದಾಯಿ ನದಿ ಸದ್ಯ ವಿವಾದದ ಮೂಲವಾಗಿದೆ. ಕರ್ನಾಟಕದಲ್ಲಿ ಹುಟ್ಟುವ ಈ ನದಿ 29ಕಿ.ಮೀ. ಕ್ರಮಿಸಿ, ಮಹಾರಾಷ್ಟ್ರ ಮತ್ತು ಗೋವಾದಲ್ಲಿ ಸುಮಾರು 52ಕಿ.ಮೀ. ಹರಿದು ಕೊನೆಗೆ ಅರಬ್ಬೀ ಸಮುದ್ರ ಸೇರುತ್ತದೆ. ಕರ್ನಾಟಕವು ಮಹಾದಾಯಿಯ ಉಪನದಿಗಳಾದ ಕಳಸಾ ಮತ್ತು ಬಂಡೂರಿ ನಾಲೆಗಳಿಂದ 76ಟಿ.ಎಮ್.ಸಿ ನೀರನ್ನು ಬಳಸಿಕೊಳ್ಳುವ ಯೋಜನೆಯನ್ನು ಹೊಂದಿದೆ. ಈ ನೀರನ್ನು ಹುಬ್ಬಳ್ಳಿ-ಧಾರವಾಡ ಸೇರಿದಂತೆ ಉತ್ತರ ಕರ್ನಾಟಕದ ಸುಮಾರು 100ಪ್ರದೇಶಗಳ ಕುಡಿಯುವ ನೀರಿನ ಸಮಸ್ಯೆ ನೀಗಿಸಲು ಬಳಸಿಕೊಳ್ಳಬೇಕೆಂಬುದು ಕರ್ನಾಟಕದ ಉದ್ದೇಶ. ಈ ಯೋಜನೆ ಮೂಲಕ ಬೆಳಗಾವಿ ಜಿಲ್ಲೆಯ ಸವದತ್ತಿ ಮತ್ತು ರಾಮದುರ್ಗ, ಧಾರವಾಡ ಜಿಲ್ಲೆಯ ನವಲಗುಂದ, ಗದಗ ಜಿಲ್ಲೆಯ ರೋಣ ಮತ್ತು ನರಗುಂದ ಹಾಗೂ ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲೂಕಿನ ಪ್ರದೇಶಗಳಿಗೆ ನೀರಾವರಿ ಮತ್ತು ಕುಡಿಯುವ ನೀರನ್ನು ಒದಗಿಸುವ ಉದ್ದೇಶ ಕರ್ನಾಟಕಕ್ಕಿದೆ. ಮಹಾದಾಯಿ ಒಟ್ಟು 200ಟಿ.ಎಂ.ಸಿ. ನೀರು ಹೊಂದಿದೆ. ಇದರಲ್ಲಿ ಕಳಸಾ ಬಂಡೂರಿ ನಾಲಾ ಯೋಜನೆಯನ್ನು ಅನುಷ್ಠಾನಗೊಳಿಸಲು 7.6ಟಿ.ಎಂ.ಸಿ. ನೀರನ್ನು ಮಲಪ್ರಭಾದತ್ತ ಹರಿಸುವ ಕ್ರಮವನ್ನು ಕರ್ನಾಟಕ ತೆಗೆದುಕೊಂಡಿದೆ. ಕರ್ನಾಟಕ ಈ ಕ್ರಮವನ್ನು ಗೋವಾ ವಿರೋಧಿಸುತ್ತಿದೆ. ಈ ಸಂಬಂಧ ಗೋವಾ ಜಲಸಂಪನ್ಮೂಲ ಸಚಿವಾಲಯಕ್ಕೆ ಮೇಲ್ಮನವಿ ಸಲ್ಲಿಸಿದೆ. ಮಾತುಕತೆಯಿಂದ ಈ ವಿವಾದ ಬಗೆಹರಿಯದು ಎಂಬುದನ್ನು ಮನದಂಡ ಸಚಿವಾಲಯ ನ್ಯಾಯಾಧೀಕರಣ ರಚಿಸಿದೆ. ಇದಲ್ಲದೆ ವಂಶಧಾರಾ ನದಿ ವಿವಾದಕ್ಕೆ ಸಂಬಂಧಿಸಿದಂತೆ ಗೋವಾ, ಆಂಧ್ರ



downloaded from: www.kpscvaani.com

ಮತ್ತು ಒರಿಸ್ಸಾಗಳು 2002ರ ಜುಲೈ ಮತ್ತು 2006ರ ಫ್ರೆಬವರಿನಲ್ಲಿ ಅರ್ಜಿ ಸಲ್ಲಿಸಿದ್ದು, ಈ ಬಗ್ಗೆಯೂ ನ್ಯಾಯಾಧೀಕರಣ ರಚನೆಯಾಗಿದೆ.

**ಕೃಷ್ಣ ಜಲವಿವಾದ :** ಕರ್ನಾಟಕ, ಆಂಧ್ರ ಪ್ರದೇಶ ಮತ್ತು ಮಹಾರಾಷ್ಟ್ರ ರಾಜ್ಯಗಳ ನಡುವೆ ಕೃಷ್ಣ ನದಿ ವಿವಾದವಿದೆ. ಈ ಸಂಬಂಧ ರಚನೆಯಾದ ಕೃಷ್ಣಾ ಜಲ ವಿವಾದ ನ್ಯಾಯಾಧಿಕರಣ(KWDT)ವು 2006 ಜೂನ್ 9ರಂದು ಕೆಲವು ಆದೇಶಗಳನ್ನು ಜಾರಿ ಮಾಡಿತು. ಈ ಮೂರು ರಾಜ್ಯಗಳು ಸಲ್ಲಿಸಿದ್ದ ಈ ಮಧ್ಯಂತರ ಪರಿಹಾರ ಅರ್ಜಿಗಳ ವಿಚಾರಣೆ ನಂತರ ಈ ಆದೇಶವನ್ನು KWDT ಜಾರಿ ಮಾಡಿತು. ಆದರೆ ಈ ಆದೇಶ ಕುರಿತಂತೆ ಆಂಧ್ರ ಪ್ರದೇಶ 1956ರ ISRWD ಕಾಯ್ದೆಯ ಸೆಕ್ಷನ್ 5(3)ರ ಅಡಿಯಲ್ಲಿ ವಿಚಾರಣಾವಧಿ ಅರ್ಜಿ ಸಲ್ಲಿಸಿ, ನ್ಯಾಯಾಧಿಕರಣದಿಂದ ಹೆಚ್ಚಿನ ವಿವರ ಮತ್ತು ಸಲಹೆಗಳನ್ನು ಅಪೇಕ್ಷಿಸಿತು. ನ್ಯಾಯಾಧಿಕರಣವು ಈ ಸಂಬಂಧ 2006ರ ಸೆಪ್ಟೆಂಬರ್ ಮತ್ತು ಅಕ್ಟೋಬರ್‌ನಲ್ಲಿ ವಿಚಾರಣೆ ನಡೆಸಿತು. ವಿವಾದ ಕುರಿತ 29ಅಂಶಗಳ ಬಗ್ಗೆ ವಿಚಾರಣೆ ಆರಂಭಿಸಿತು. ಈಗಲೂ ನ್ಯಾಯಾಧೀಕರನಾದ ವಿಚಾರಣೆ ಪ್ರಗತಿಯಲ್ಲಿದೆ.

**ಕಾವೇರಿ ಜಲವಿವಾದ :** ಈ ನದಿ ವಿವಾದವು ದಕ್ಷಿಣ ರಾಜ್ಯಗಳಾದ ಕೇರಳ, ಕರ್ನಾಟಕ, ತಮಿಳು ನಾಡು ಮತ್ತು ಪುದುಚೇರಿ ಕೇಂದ್ರಾಡಳಿತ ಪ್ರದೇಶಗಳ ನಡುವೆ ಇದೆ. ಈ ಸಂಬಂಧ ರಚಿತವಾಗಿದ್ದ ಕಾವೇರಿ ಜಲ ವಿವಾದ ನ್ಯಾಯಾಧೀಕರಣವು(CWDT) 1991ರ ಜೂನ್–25ರಂದು ಮಧ್ಯಂತರ ಆದೇಶ ನೀಡಿತು. ಮತ್ತೆ 1992ರ ಏಪ್ರಿಲ್‌ನಲ್ಲಿ ಹಾಗೂ 1995ರ ಡಿಸೆಂಬರ್‌ನಲ್ಲಿ ಸ್ಪಷ್ಟೀಕರಣ ಆದೇಶಗಳನ್ನು ನೀಡಿತು. 2007ರ ಫೆಬ್ರವರಿ 5ರಂದು ತನ್ನ ವರದಿ ನೀಡಿದೆ ನ್ಯಾಯಾಧೀಕರಣವು 1956ರ ಅಂತರರಾಜ್ಯ ನದಿ ನೀರು ವಿವಾದ ಕಾಯ್ದೆ(ISRWDA)ಯ ಸೆಕ್ಷನ್ 5(2)ರ ಅಡಿ ತನ್ನ ತೀರ್ಮಾನ ನೀಡಿತು. ಕೇಂದ್ರ ಸರ್ಕಾರ & ರಾಜ್ಯ ಸರ್ಕಾರಗಳು ನ್ಯಾಯಾಧೀಕರಣ ISRWD ದಿಂದ ಕಾಯ್ದೆಯ ಸೆಕ್ಷನ್ 5(3)ರ ಅಡಿಯಲ್ಲಿ ಹೆಚ್ಚಿನ ವಿವರಣೆ & ಮಾರ್ಗದರ್ಶನ ಬಯಸಿದವು. ಈ ಅಂಶವು ನ್ಯಾಯಾಧೀಕರಣದ ಗಮನದಲ್ಲಿದೆ.

2007ರ ಫೆಬವರಿ 5, ರಂದು ನ್ಯಾಯಾಧೀಕರಣ ತೀರ್ಪಿನ ವಿರುದ್ಧ ಕಾವೇರಿ ನದಿ ಅಂಚಿನ ಈ ರಾಜ್ಯಗಳು ಸುಪ್ರೀಂ ಕೋರ್ಟ್‌ಗೆ ವಿಶೇಷ ಮೇಲ್ಮನವಿ ಅರ್ಜಿ ಸಲ್ಲಿಸಿದ್ದವು. 2018ರ ಬೆಳವಣಿಗೆಯಂತೆ ವಿಶೇಷ ನ್ಯಾಯಾಧೀಕರಣ ರಚಿಸಲಾಗಿದೆ.

ಕರ್ನಾಟಕದಲ್ಲಷ್ಟೆ ಅಲ್ಲದೆ ಗೋದಾವರಿ ನದಿ ವಿವಾದ(ಬಬ್ಲಿಬ್ಯಾರೇಜ್) ಮಹಾರಾಷ್ಟ್ರ ಮತ್ತು ಆಂಧ್ರ ಪ್ರದೇಶ ನಡುವೆ, ರಾವಿ ಮತ್ತು ಬಿಯಾಸ್ ನದಿ ಹಾಗೂ ಸಟ್ಲೇಜ್ ಯಮುನಾ ನದಿ ನೀರು ಸಂಬಂಧವಾಗಿ ಪಂಜಾಬ್ ಮತ್ತು ಹರಿಯಾಣದ ನಡುವೆ ವಿವಾದವಿದೆ. ಈ ರೀತಿ ದೇಶದ ಬಹುತೇಕ ರಾಜ್ಯಗಳು ತಮ್ಮ ವ್ಯಾಪ್ತಿಯಲ್ಲಿ ಹರಿಯುವ ನದಿ ನೀರನ್ನು ಹೆಚ್ಚಿನ ಪ್ರಮಾಣದಲ್ಲಿ ಉಳಿಸಿಕೊಳ್ಳಲು ಮತ್ತು ಬಳಸಿಕೊಳ್ಳಲು ಪ್ರಯತ್ನಿಸುತ್ತಿವೆ. ನದಿಗಳು ರಾಜ್ಯದ ಗಡಿ ದಾಟಿತೆಂದರೆ, ಅಲ್ಲೊಂದು ನದಿ ವಿವಾದ


downloaded from: www.kpscvaani.com

ಹುಟ್ಟು ಪಡೆಯಿತೆಂದೇ ಅರ್ಥ. ಈ ನಿಟ್ಟಿನಿಂದ ಸಮಸ್ಯೆ ಪರಿಹಾರಕ್ಕೆಂದೇ 1956ರ ಅಂತರ ರಾಜ್ಯ ಜಲವಿವಾದ ಕಾಯ್ದೆ ಅಸ್ತಿತ್ವದಲ್ಲಿದೆ. ರಾಜ್ಯಗಳ ನಡುವಣ ಸಂಘರ್ಷ ಪರಿಹರಿಸಲು ಈ ಕಾಯ್ದೆ ರಚಿಸಲಾಗಿದೆ.

### ❖ ನದಿ ವಿವಾದ ಉದ್ಭವಿಸಲು ಕಾರಣ :

* ನದಿ ನೀರನ್ನು ಹಂಚಿಕೊಳ್ಳುವ ವಿಷಯದಲ್ಲಿ ರಾಜ್ಯಗಳ ನಡುವೆ ವಿವಾದ ಉದ್ಭವಿಸುತ್ತದೆ.
* ಒಂದಕ್ಕಿಂತ ಹೆಚ್ಚು ರಾಜ್ಯಗಳು ಸೇರಿ ಜಂಟಿಯಾಗಿ ನದಿ ಯೋಜನೆಯೊಂದನ್ನು ನಿರ್ಮಾಣ ಮಾಡಲು ಬಯಸಿದಾಗ ಆ ಯೋಜನೆಯ ನಿರ್ಮಾಣ ವೆಚ್ಚ ಮತ್ತು ಅದರಿಂದ ಪಡೆದುಕೊಳ್ಳುವ ಪ್ರಯೋಜನ ಪ್ರಮಾಣದ ಪ್ರಶ್ನೆ ಬಂದಾಗ ರಾಜ್ಯಗಳ ನಡುವೆ ಮನಸ್ತಾಪ ಏರ್ಪಡುತ್ತದೆ.
* ಒಂದು ರಾಜ್ಯದಲ್ಲಿ ಬೇರೊಂದು ರಾಜ್ಯವು ಯೋಜನೆಯೊಂದನ್ನು ಕೈಗೆತ್ತಿಕೊಳ್ಳಲು ಮುಂದಾದಾಗ ಬಳಸಿಕೊಳ್ಳುವ ಜಾಗಕ್ಕೆ ಪರ್ಯಾಯವಾಗಿ ಪರಿಹಾರ ನೀಡುವ ಪ್ರಶ್ನೆ ಇದ್ದಾಗ ರಾಜ್ಯಗಳ ನಡುವೆ ಭಿನ್ನಾಭಿಪ್ರಾಯ ತಲೆದೂರುತ್ತದೆ.
* ಏರ್ಪಟ್ಟ ಒಪ್ಪಂದಗಳ ಉಲ್ಲಂಘನೆಯಾದಾಗ ರಾಜ್ಯಗಳ ನಡುವೆ ಘರ್ಷಣೆ ಏರ್ಪಡುತ್ತದೆ.
* ಒಂದು ರಾಜ್ಯವು ಅಗತ್ಯಕ್ಕಿಂತ ಹೆಚ್ಚಿನ ನೀರನ್ನು ಬಳಸಿಕೊಂಡಾಗಲೂ ಮತ್ತೊಂದು ರಾಜ್ಯವು ತಗಾದೆ ತೆಗೆಯುತ್ತದೆ.
* ಹೀಗೆ ಉದ್ಭವವಾಗುವ ಜಲವಿವಾದಗಳನ್ನು ಪರಿಹರಿಸಿಕೊಳ್ಳಲು ಭಾರತ ಸಂವಿಧಾನ ಮತ್ತು ಸಂಸತ್ತು ಕಾಯ್ದೆಗಳು ಮತ್ತು ವಿಧಿಗಳ ಮೂಲಕ ಅನುವು ಮಾಡಿಕೊಟ್ಟಿದೆ.

### ❖ ಭಾರತ ಸಂವಿಧಾನ ಕಲ್ಪಿಸಿರುವ ಅವಕಾಶ :

* ರಾಜ್ಯಪಟ್ಟಿಯಲ್ಲಿನ 17ನೆ ಅಂಶ
* ಕೇಂದ್ರ ಪಟ್ಟಿಯಲ್ಲಿನ 56ನೇ ಅಂಶ
* ಸಂವಿಧಾನದ 262ನೇ ವಿಧಿ

### ❖ ರಾಜ್ಯದ ಶಾಸಕಾಂಗಗಳಿಗೆ ಸಂಬಂಧಿಸಿದಂತೆ ಪಾರ್ಲಿಮೆಂಟ್ ರೂಪಿಸಿರುವ ಕಾನೂನುಗಳು ಮತ್ತು ಅವಕಾಶಗಳು :

* 1956ರ ನದಿ ಮಂಡಳಿಗಳ ಕಾಯ್ದೆ .
* 2002ಎ ಅಂತರ–ರಾಜ್ಯ ಜಲವಿವಾದಗಳ ಕಾಯ್ದೆ.
* ಜಲ ಸಂಪನ್ಮೂಲಕ್ಕೆ ಸಂಬಂಧಿಸಿದಂತೆ ಅಂತರರಾಜ್ಯ ವಿವಾದಗಳ ಕುರಿತ ಸ್ಥಾಯಿ ಸಮಿತಿ ರಚನೆ.
* ಕೇಂದ್ರ–ರಾಜ್ಯ ಸಂಬಂಧಗಳ ಕುರಿತು ವರದಿ ನೀಡಲು ಸರ್ಕಾರಿಯಾ ಆಯೋಗ ರಚನೆ.
* 2002ರ ರಾಷ್ಟ್ರೀಯ ಜಲನೀತಿ ರಚನೆ.



downloaded from: www.kpscvaani.com

ರಾಜ್ಯ ಪಟ್ಟಿಯಲ್ಲಿ 17ನೇ ಅಂಶವು 'ಜಲ' ವಿಷಯ ರಾಜ್ಯಕ್ಕೆ ಸಂಬಂಧಿಸಿದ್ದು ಎಂದು ಹೇಳುತ್ತದೆಯಾದರೂ, ಕೇಂದ್ರ ಪಟ್ಟಿಯ 56ನೇ ಅಂಶದಲ್ಲಿ 'ನೀರು' ಕೇಂದ್ರ ಸರ್ಕಾರಕ್ಕೂ ಸಂಬಂಧಿಸಿದ ವಿಷಯವಾಗಿದೆ. ಸಾರ್ವಜನಿಕ ಹಿತಾಸಕ್ತಿಗೋಸ್ಕರ ಕೇಂದ್ರವು ಅಂತರರಾಜ್ಯ ನದಿಗಳು ಮತ್ತು ನದಿ ಕಣಿವೆಗಳ ಯೋಜನೆ ಕೈಗೊತ್ತಿಕೊಳ್ಳಲು, ಇವುಗಳನ್ನು ನಿಯಂತ್ರಣಕ್ಕೆ ತೆಗೆದುಕೊಳ್ಳಬಹುದಾಗಿದೆ. ಸಂಸತ್ತಿನಲ್ಲಿ ಕಾನೂನು ರೂಪಿಸುವ ಮೂಲಕ ಕೇಂದ್ರ ಈ ಕ್ರಮಕ್ಕೆ ಮುಂದಾಗಬಹುದಾಗಿದೆ. ಅಲ್ಲದೆ ಸಂವಿಧಾನದ 262ನೇ ವಿಧಿಯು ಕೇಂದ್ರ ಪಟ್ಟಿಯ 56ನೇ ಅಂಶಕ್ಕೆ ಸಂಬಂಧಿಸಿ ಕಾನೂನು ರೂಪಿಸಲು ಸಂಸತ್ತಿಗೆ ಅನುವು ಮಾಡಿಕೊಟ್ಟಿದೆ.

### ❖ ಸರ್ಕಾರಿಯಾ ಆಯೋಗದ ವರದಿ :

* ಅಂತರರಾಜ್ಯ ನದಿ ವಿವಾದ ಕಾಯ್ದೆ ಸೆಕ್ಷನ್ 3ರ ಅಡಿ(1956ರ ಕಾಯ್ದೆಯಲ್ಲಿ 33ನೇ ಸೆಕ್ಷನ್)ಯಲ್ಲಿ ರಾಜ್ಯವೊಂದರಿಂದ ಜಲ ವಿವಾದಕ್ಕೆ ಸಂಬಂಧಿಸಿದಂತೆ ಅರ್ಜಿ ಸ್ವೀಕರಿಸಿದ ಕೇಂದ್ರ ಸರ್ಕಾರವು, ಅರ್ಜಿ ಸ್ವೀಕರಿಸಿದ ದಿನದಿಂದ ವರ್ಷದೊಳಗೆ ನ್ಯಾಯಾಧೀಕರಣವೊಂದನ್ನು ರಚಿಸಬೇಕು.
* ನ್ಯಾಯಾಧೀಕರಣ ರಚನೆ ಪೂರ್ವದಲ್ಲಿಯೇ ದಾಖಲೆಗಳ ಸಂಗ್ರಹ(Data Bank) ವ್ಯವಸ್ಥೆ ಮತ್ತು ಮಾಹಿತಿ ವ್ಯವಸ್ಥೆ ಇರಬೇಕು. ರಚನೆಯಾದ ನ್ಯಾಯಾಧೀಕರಣವು ಬಯಸಿದಾಗ ಮನವಿ ಸಲ್ಲಿಸಿದ ರಾಜ್ಯವು ದಾಖಲೆಗಳನ್ನು ಒದಗಿಸಬೇಕು.
* ISRWD ಕಾಯ್ದೆಗೆ ತಿದ್ದುಪಡಿ ತರಲು ಕೇಂದ್ರ ಸರ್ಕಾರ ಅಥವಾ ಸಂಸತ್ತಿಗೆ ಅಧಿಕಾರವಿದೆ. ಅಲ್ಲದೆ ಮಾತುಕತೆಯ ಮೂಲಕ ಕೇಂದ್ರ ಸರ್ಕಾರ ವಿವಾದ ಬಗೆ ಹರಿಸಿದರೆ, ನ್ಯಾಯಾಧಿಕರಣ ರಚಿಸುವ ಅಗತ್ಯವಿಲ್ಲ.
* ರಚನೆಗೊಂಡ ನ್ಯಾಯಾಧೀಕರಣವು 5 ವರ್ಷದ ಒಳಗೆ ತನ್ನ ವರದಿ / ತೀರ್ಮಾನ ಸಲ್ಲಿಸಬೇಕು. ಒಂದು ವೇಳೆ ನ್ಯಾಯಾಧೀಕರಣವು ಇನ್ನು ಹೆಚ್ಚಿನ ಕಾಲಾವಕಾಶ ಬಯಸಿದರೆ. ಕೇಂದ್ರ ಸರ್ಕಾರವು ನ್ಯಾಯಾಧೀಕರಣದ ಅವಧಿಯನ್ನು ವಿಸ್ತರಿಸಬಹುದು.
* ನ್ಯಾಯಾಧೀಕರಣದ ವರದಿ / ತೀರ್ಪಿಗೆ ಸರ್ವೋಚ್ಚ ನ್ಯಾಯಾಲಯದ ತೀರ್ಪಿಗೆ ಕೊಟ್ಟಷ್ಟೇ ಪ್ರಾಮುಖ್ಯತೆಯನ್ನು ಕೊಡಬೇಕು ಮತ್ತು ನ್ಯಾಯಾಧೀಕರಣದ ತೀರ್ಪನ್ನು ಪಾಲಿಸಬೇಕು.

ಸರ್ಕಾರಿಯ ಆಯೋಗ ಮಾಡಿದ ಈ ಶಿಫಾರಸ್ಸಿನ ಕುರಿತಂತೆ ಅಂತರ ರಾಜ್ಯ ಮಂಡಳಿಯು, 1956ರ ಅಂತರರಾಜ್ಯ ಜಲವಿವಾದ ಕಾಯ್ದೆಗೆ ತಿದ್ದುಪಡಿ ತಂದ ಮಸೂದೆಯೊಂದನ್ನು 2001ರ ಮಾರ್ಚ್‌ನಲ್ಲಿ ಲೋಕಸಭೆಯಲ್ಲಿ ಮಂಡಿಸಿತು. 2001 ಆಗಸ್ಟ್‌ನಲ್ಲಿ ಪಾಸು ಮಾಡಿತು. 2002ರ ಮಾರ್ಚ್‌ನಲ್ಲಿ ರಾಜ್ಯಸಭೆಯೂ ಅನುಮೋದನೆ ನೀಡಿತು. ನಂತರ ರಾಷ್ಟ್ರಪತಿ ಅಂಕಿತದೊಂದಿದೆ 'ಅಂತರರಾಜ್ಯ ಜಲ ವಿವಾದಗಳ ಕಾಯ್ದೆ–2002' ಜಾರಿಗೆ ಬಂದಿತು.



downloaded from: www.kpscvaani.com

ಎಷ್ಟೇ ನ್ಯಾಯಾಧೀಕರಣ ರಚನೆಯಾದರೂ, ಕಾನೂನು ರೂಪಿಸಿದರೂ, ಅಂತರರಾಜ್ಯ ಜಲವಿವಾದಗಳನ್ನು ಎಲ್ಲರಿಗೂ ತೃಪ್ತಿಯಾಗುವಂತೆ ಪರಿಹರಿಸಲಾಗುತ್ತಿಲ್ಲ. ಕಳೆದೆರಡು ದಶಕಗಳಿಂದೀಚೆಗಂತೂ ಜಲವಿವಾದಗಳು ತೀವ್ರ ಸ್ವರೂಪ ಪಡೆಯುತ್ತಿವೆ. ನದಿ ನೀರನ್ನು ವಿಭಾಗಿಸುವುದಕ್ಕಿಂತ ನದಿ ನೀರನ್ನು ಸೇರಿಸುವ ಕೆಲಸವಾಗಬೇಕಿದೆ. ಇನ್ನೂ ಪರಿಣಾಮಕಾರಿಯಾದ ಕಾನೂನು ರಚನೆಯಾಗಬೇಕಿದೆ. ನದಿ ನೀರು ಜೋಡಣೆಯೇ ಈ ವಿವಾದಗಳಿಗೆ ಪ್ರಮುಖ ಪರಿಹಾರ.

## ಪ್ರಬಂಧ 15 : ಏಡ್ಸ್ – ಒಂದು ಮಾರಕ ಕಾಯಿಲೆ

**ಪ್ರಸ್ತಾವನೆ :** ಖಾಯಿಲೆ ಒಂದು ಆದರೆ ನೂರಾರು ಸರಕಾರಗಳು ಮತ್ತು ಸಾವಿರಾರು ಅರ್ಪಣಾ ಮನೋಭಾವ ಹೊಂದಿದ ಉದ್ಯೋಗಸ್ಥರು. ಇದರ ವಿರುದ್ಧ ಹೋರಾಡಿ ವಿಜಯ ಸಾಧಿಸಲು ಪ್ರಯತ್ನಿಸುತ್ತಿದ್ದಾರೆ. ಇಂದಿನ ಪ್ರಪಂಚದಲ್ಲಿ ಯಾವುದೇ ಖಾಯಿಲೆಯು ಏಡ್ಸ್‌ನಷ್ಟು ಪ್ರಚಾರವನ್ನು ಮತ್ತು ಕಾತುರವನ್ನು ಪಡೆದಿಲ್ಲ. ಏಡ್ಸ್ ಎಂಬ ಪದವು ನರನಾಡಿಗಳಲ್ಲಿ ಕಂಪನವನ್ನು ಹುಟ್ಟಿಸುತ್ತವೆ. ಈಗಾಗಲೇ ಅದು ಲಕ್ಷೋಪಲಕ್ಷ ಜನಗಳಿಗೆ ಅಂಟಿದ್ದು 55,000ಕ್ಕೂ ಹೆಚ್ಚು ಜನರನ್ನು ಆವೃತಗೊಂಡಿದೆ.

ಈ ಖಾಯಿಲೆ 1981ರ ಮಧ್ಯದಲ್ಲಿ ಪ್ರಾರಂಭವಾಗಿ ಅಂದಿನಿಂದ ಪತ್ರಿಕರಗಳ ಮುಖಪುಟಗಳನ್ನು ಅಲಂಕರಿಸಿದೆ. ಅದು ಮೊಟ್ಟಮೊದಲಿಗೆ ಅಮೇರಿಕಾದಲ್ಲಿನ ಒಂದು ವೈದ್ಯ ಸಮೂಹದಿಂದ ಹಲವು ಯುವಕ ಸಲಿಂಗರತಿಗಳಲ್ಲಿ  ಕಂಡು ಬಂದ ಅಪರೂಪ ವಿಧದ ನ್ಯುಮೋನಿಯದಿಂದ ತಿಳಿಸಲ್ಪಟ್ಟಿತು.

**ಏಡ್ಸ್‌ನ ಅರ್ಥೈಸುವಿಕೆ :**

**ಏಡ್ಸ್–ಅಕ್ವೈರ್ಡ್ ಇಮ್ಯುನೊ ಡಿಫಿಷಿಯೆನ್ಸಿ ಸಿಂಡ್ರೋಮ್**

**ಚಾರಿತ್ರಿಕ ಹಿನ್ನೆಲೆ :** ಏಡ್ಸ್ ರೋಗವು ಬಹಳ ಹಿಂದಿನಿಂದಲೂ ಇದ್ದು, ಕೇವಲ 80ರ ದಶಕದಲ್ಲಿ ಬೆಳಕಿಗೆ ಬಂದಿತು ಎಂಬುದೊಂದು ಸಾಮಾನ್ಯ ನಂಬಿಕೆ. ಏಡ್ಸ್ ಎನ್ನುವುದು ದೇಹದ ಸ್ವನಿರ್ಮಿತ, ರಕ್ಷಣಾ ವ್ಯವಸ್ಥೆಯು ಕ್ರಮೇಣ ನಾಶವಾಗುವ ಪರಿಸ್ಥಿತಿಯನ್ನು ಬಿಂಬಿಸುತ್ತದೆ. ಏಡ್ಸ್ ರೋಗಕ್ಕೆ ತುತ್ತಾದ ವ್ಯಕ್ತಿಯು ನ್ಯುಮೋನಿಯಾ ಆಮಶಂಕೆ, ಕ್ಷಯ ಮುಂತಾದ ರೋಗಗಳನ್ನು ಎದುರಿಸುವ ಶಕ್ತಿಯನ್ನು ಕಳೆದುಕೊಂಡು ಕೊನೆಗೆ ಇವುಗಳಲ್ಲಿ ಯಾವುದಾದರೊಂದು ಸೋಂಕಿನಿಂದಾಗಿ ಸಾವಿಗೆ ಈಡಾಗುತ್ತಾನೆ.

ಏಡ್ಸ್ ಎನ್ನುವುದು ಒಂದು ರೋಗ ಎನ್ನುವುದಕ್ಕಿಂತ, ರೊಗಗಲ ಒಂದು ಸರಮಾಲೆ ಎನ್ನಬಹುದು. ಏಡ್ಸ್ ರೋಗಗಳಲ್ಲಿ ಹತ್ತು ಹಲವು ರೋಗಗಳ ನಿರ್ದಿಷ್ಟ ಲಕ್ಷಣಗಳು ಒಮ್ಮೆಗೆ ಕಾಣಿಸಿಕೊಳ್ಳುತ್ತವೆ.

ಮೊಟ್ಟಮೊದಲ ಬಾರಿಗೆ ಏಡ್ಸ್ ಅನ್ನು ಅಮೇರಿಕಾದಲ್ಲಿ 1981ರಲ್ಲಿ ಗುರುತಿಸಲಾಯಿತು. ಪ್ರಮುಖವಾಗಿ ಇದನ್ನು ನ್ಯುಮೋನಿಯಾ ಮತ್ತು ಚರ್ಮದ ಕ್ಯಾನ್ಸರಿನ ಜೊತೆಗೆ ಗುರುತಿಸಲಾಗುತ್ತಿತ್ತು.


downloaded from: www.kpscvaani.com

ನಂತರ ಈ ರೋಗವನ್ನು ಚಿಕ್ಕ ವಯಸ್ಸಿನ ಸಲಿಂಗಿಗಳಲ್ಲಿ ಹಾಗೂ ಮಾದಕ ದ್ರವ್ಯ ವ್ಯಸನಿಗಳಲ್ಲಿ ಪತ್ತೆ ಹಚ್ಚಲಾಯಿತು. ಮುಂದೆ ಗುರುತಿಸಲಾದ ಏಡ್ಸ್ ರೋಗಿಗಳಲ್ಲಿ ಸೋಂಕು ತಗುಲಿದ್ದ ರಕ್ತವನ್ನು ದಾನ ಪಡೆದಿದ್ದ ಮಕ್ಕಳು ಮತ್ತು ಪ್ರೌಢರು ಸೇರಿದ್ದರು. ಇವರೆಲ್ಲ ಈ ಭಯಾನಕ ರೋಗದ ಬಲಿಪಶುಗಳಾಗಿದ್ದರು. ಸೋಂಕು ತಗುಲುವ ಸೂಕ್ಷ್ಮಾಣು ಜೀವಿಯೊಂದು ಈ ರೋಗಕ್ಕೆ ಕಾರಣ ಎಂಬ ಮಾಹಿತಿ ವಿಜ್ಞಾನಿಗಳಿಗೆ ದೊರಕಿತ್ತಾದರೂ, ಇದನ್ನು ನಿಯಂತ್ರಿಸುವ ಮಾರ್ಗೋಪಾಯಗಳು ಇನ್ನೂ ಪರಿಚಯವಿಲ್ಲದಿದ್ದ ಕಾರಣ ಏಡ್ಸ್ ರೋಗವು ಎಲ್ಲ ರಾಷ್ಟ್ರಗಳಲ್ಲಿ ತಳಮಳ ಉಂಟು ಮಾಡಲು ಕಾರಣವಾಯಿತು.

**ಏಡ್ಸ್ ವೈರಸ್‌ನ ಸಂಶೋಧನೆ :**

ಏಡ್ಸ್ ವೈರಸ್ ಅನ್ನು 1983ರಲ್ಲಿ ಮೊದಲಿಗೆ ಫ್ರೆಂಚ್ ವಿಜ್ಞಾನಿಗಳು ಪತ್ತೆ ಹಚ್ಚಿದರು. 1984ರಲ್ಲಿ ಅಮೇರಿಕಾದ ವಿಜ್ಞಾನಿಗಳು ಏಡ್ಸ್‌ಗೆ ಕಾರಣವಾಗುವ ವೈರಸ್ ಬಗ್ಗೆ ಸವಿವರ ಮಾಹಿತಿ ನೀಡಿದರು. ವೈರಸ್‌ಗಳನ್ನು ಹೆಸರಿಸುವ ಅಂತರರಾಷ್ಟ್ರೀಯ ಸಂಸ್ಥೆಯು, ಹೆಚ್‌ಐವಿ ಎಂಬ ಹೆಸರನ್ನು ಸೂಚಿಸಿತು.

ಏಡ್ಸ್ ಪತ್ತೆಯಾಗುವುದಕ್ಕೆ ಮುಂಚೆ, ಮಾನವರಲ್ಲಿ ಅಭಾದತೆಯು ಕುಂಠಿತಗೊಳ್ಳುವ ಮೂರು ಪರಿಸ್ಥಿತಿಗಳನ್ನು ಗುರುತಿಸಲಾಗಿತ್ತು. ಅವುಗಳೆಂದರೆ,

* ಅನುವಂಶೀಯತೆ ತಂದೆ, ತಾಯಿಯಿಂದ ಮಕ್ಕಳಿಗೆ
* ಪ್ರೇರೇಪಿತ ಕಸಿ ಮಾಡುವಿಕೆಯಿಂದ
* ಗಳಿಸಿದ ಲೈಂಗಿಕ ಸಂಪರ್ಕದ ಮೂಲಕ ಉಂಟಾಗುವ

ಕುಂಠಿತಗೊಂಡ ಅಭಾದತೆಯು ಆಫ್ರಿಕಾದ ದೇಶಗಳಲ್ಲಿ ಹಾಗೂ ಆರ್ಥಿಕವಾಗಿ ಅಭಿವೃದ್ಧಿ ಹೊಂದುತ್ತಿರುವ ಏಷಿಯಾದ ಭಾರತ ಮತ್ತು ಇತರ ದೇಶಗಳಲ್ಲಿ ಹೆಚ್ಚಾಗಿ ಪತ್ತೆಯಾಗುತ್ತಿತ್ತು. ಆದರೆ ಇದನ್ನು ಪರಾವಲಂಬಿ ಜೀವಿಗಳಿಂದ ಉಂಟಾದ ರೊಗಗಳೆಂದೂ ಜೊತೆಗೆ ಪೋಷಣೆಯ ಕೊರತೆಯಿಂದಾಗಿ ಇನ್ನಷ್ಟು ಸಂಕೀರ್ಣಗೊಂಡ ಕಾಯಿಲೆಗಳೆಂದು ಭಾವಿಸಲಾಗಿತ್ತು.

ಭಾರತದಲ್ಲಿ ಈ ರೋಗ ಮೊದಲಿಗೆ 1987ರಲ್ಲಿ ಚೆನ್ನೈನಲ್ಲಿ ಅಧಿಕೃತವಾಗಿ ಪತ್ತೆಯಾಯಿತು. ಈ ರೋಗವನ್ನುಂಟು ಮಾಡುವ ವೈರಸ್, ಪ್ರಾಣಿಗಳ ಅದರಲ್ಲಿಯೂ ಮಂಗಗಳ ಮೂಲಕ ಮಾನವನಿಗೆ ಹರಡುತ್ತವೆ ಎಂದು ಮೊದಲಿಗೆ ನಂಬಲಾಗಿತ್ತು.

**ಹೆಚ್‌ಐವಿಯ ರಚನೆ :**

ಹೆಚ್‌ಐವಿ ವೈರಸ್ ದುಂಡಾಕಾರವಾಗಿದ್ದು, ಆರ್‌ಎನ್‌ಎಯನ್ನು ಅನುವಂಶೀಯ ವಸ್ತುವಾಗಿ ಹೊಂದಿದೆ. ಕೊಬ್ಬಿನ ಪದಾರ್ಥದಿಂದಾದ ಇಪ್ಪದರದ ಪೊರೆಯಿಮದ ಇದು ಆವೃತವಾಗಿದೆ. ಈ


downloaded from: www.kpscvaani.com

ಪೊರೆಯ ಒಳಗೆ ಪ್ರೋಟೀನ್‌ನಿಂದ ಉಂಟಾದ ಕೋಶವೊಂದಿದೆ. ಇದರ ಮಧ್ಯೆ ವೈರಸ್‌ನ ಆರ್‌ಎನ್‌ಎ ಹಾಗೂ ರಿವರ್ಸ್ ಟ್ರಾನ್ಸ್‌ಕ್ರಿಪ್ಟೇಸ್ ಕಿಣ್ವಗಳು ಇವೆ. ಈ ಕಿಣ್ವವು ವೈರಸ್‌ನ ಆರ್‌ಎನ್‌ಎಯಿಂದ ಪೋಷಕ ಜೀವಕೋಶದಲ್ಲಿ ಡಿಎನ್‌ಎ ಸಂಶ್ಲೇಷಣೆ ಆಗುವುದಕ್ಕೆ ಸಹಾಯಕವಾಗಿದೆ.

ವೈರಸ್‌ಗಳಲ್ಲಿ ರೆಟ್ರೋ ವೈರಸ್ ಎಂಬ ಗುಂಪಿಗೆ ಸೇರುವ ಹೆಚ್‌ಐವಿ, ಡಿಎನ್‌ಎ ಅನ್ನು ಸಂಶ್ಲೇಷಿಸುವ ಶಕ್ತಿ ಹೊಂದಿದೆ. ಪೋಷಕ ಜೀವಕೋಶಗಳಲ್ಲಿ ಇದು ಡಿಎನ್‌ಎ ಸಂಶ್ಲೇಷಣೆಯಲ್ಲಿ ತೊಡಗಿದಂತೆಲ್ಲಾ ಈ ವೈರಾಣುವನ್ನು ನಿಯಂತ್ರಿಸುವ ಲಸಿಕೆಯನ್ನು ಅಭಿವೃದ್ಧಿಪಡಿಸುವುದು ದುಸ್ತರವಾಗುತ್ತಲೇ ಹೋಗುತ್ತದೆ.

ಸಾಮಾನ್ಯವಾಗಿ ದೇಹದ ಬಿಳಿರಕ್ತಕಣಗಳು ಅಪರಿಚಿತ ವಸ್ತುಗಳನ್ನು ಗುರುತಿಸಿ ನಾಶಪಡಿಸುತ್ತವೆ. ದೇಹದಲ್ಲಿ ವೈರಸ್‌ಗಳ ಪ್ರವೇಶವು ಲಿಂಫೋಸೈಟ್‌ಗಳೆಂಬ ಬಿಳಿ ರಕ್ತಕಣಗಳ ಉತ್ಪಾದನೆಗೆ ಕಾರಣವಾಗುತ್ತವೆ. 'ಬಿ' ಮತ್ತು 'ಟಿ' ಎಂಬ ಎರಡು ಬಗೆಯ ಲಿಂಫೋಸೈಟ್‌ಗಳು ಸೋಂಕಿನ ವಿರುದ್ಧ ದೇಹಕ್ಕೆ ರಕ್ಷಣೆಯನ್ನು ಒದಗಿಸುತ್ತವೆ. ಹೆಚ್‌ಐವಿ ದೇಹವನ್ನು ಪ್ರವೇಶಿಸಿದಾಗ, ದೇಹವು ಅದನ್ನು ಗುರುತಿಸಲು ಅಸಮರ್ಥವಾಗಿರುವುದರಿಂದ ವೈರಸ್‌ಗಳ ವಿರುದ್ಧ ಹೋರಾಡಬಲ್ಲ ಲಿಂಫೋಸೈಟ್‌ಗಳ ಉತ್ಪಾದನೆಗೆ ಅಗತ್ಯವಾದ ಪ್ರಚೋದನೆ ದೊರಕುವುದಿಲ್ಲ. ಜೊತೆಗೆ, ಪ್ರಾರಂಭದ ಹಂತದಲ್ಲಿ ಹೆಚ್‌ಐವಿಯು 'ಟಿ' ಲಿಂಫೋಸೈಟ್‌ಗಳನ್ನು ನಾಶಪಡಿಸುವುದರಿಂದ ದೇಹದ ರಕ್ಷಣಾವ್ಯವಸ್ಥೆ ಕುಸಿದು ಬೀಳುತ್ತದೆ. ರೋಗಿಯು ತನ್ನ ಸಾವು ಸಮೀಪಿಸುವವರೆಗೆ ಬೇರೆ ಬೇರೆ ರೀತಿಯ ಸೋಂಕುಗಳಿಗೆ ಒಳಗಾಗುತ್ತಲೇ ಇರುತ್ತಾನೆ.

**ಏಡ್ಸ್‌ನ ಲಕ್ಷಣಗಳು :**

ಹೆಚ್‌ಐವಿ ವೈರಾಣುಗಳು ವ್ಯಕ್ತಿಯ ರಕ್ತವನ್ನು ಪ್ರವೇಶಿಸಿದ ಎರಡು ಅಥವಾ ಮೂರು ವಾರಗಳ ನಂತರ ಆತನಲ್ಲಿ ಜ್ವರ, ತಲೆನೋವು, ಕೀಲುಗಳಲ್ಲಿ ನೋವು ಹಾಗೂ ಬಾಯಿ ಮತ್ತು ಗಂಟಲಿನಲ್ಲಿ ಹುಣ್ಣುಗಳು ಕಾಣಿಸಿಕೊಳ್ಳುತ್ತವೆ. ದುಗ್ಧಗ್ರಂಥಿಗಳು ಊದಿಕೊಳ್ಳುವ ಜೊತೆಗೆ ಚರ್ಮದ ತುರಿಕೆ ಪ್ರಾರಂಭವಾಗುತ್ತದೆ. ಕೆಲವೊಮ್ಮೆ ತುರಿಕೆ ನಂತರ ಕಡಿಮೆಯಾಗಬಹುದು.

**ಏಡ್ಸ್‌ನ ಅವಕಾಶವಾದಿ ಲಕ್ಷಣಗಳು :**

* ತಲೆ ಸುತ್ತುವುದು
* ತಲೆ ನೋವು
* ಆಮಶಂಕೆ
* ನಿರ್ನಾಳ ಗ್ರಂಥಿಗಳಲ್ಲಿ ಉರಿಯೂತ
* ಕ್ಷಯ



downloaded from: www.kpscvaani.com

* ನ್ಯುಮೋನಿಯಾ
* ಸರ್ಪಸುತ್ತು
* ಮಿದುಳು ಜ್ವರ
* ಚರ್ಮದ ಕ್ಯಾನ್ಸರ್

**ಸೋಂಕು ತಗಲುವ ರೀತಿ :**

❖ **ಸೋಂಕು ತಗುಲಿರುವ ವ್ಯಕ್ತಿಯ ಜೊತೆಗೆ ಲೈಂಗಿಕ ಸಂಪರ್ಕ :** ಬಹುತೇಕ ಏಡ್ಸ್ ರೋಗಿಗಳು. ಈಗಾಗಲೇ ಸೋಂಕು ತಗುಲಿರುವ ವ್ಯಕ್ತಿಗಳ ಜೊತೆಗೆ ಅಸುರಕ್ಷಿತ ಲೈಂಗಿಕ ಸಂಪರ್ಕ ಹೊಂದುವ ಮೂಲಕ ತಾವು ಸೋಂಕಿಗೆ ಒಳಗಾಗಿರಬಹುದು.

❖ **ಸೋಂಕು ತಗುಲಿದ ರಕ್ತವನ್ನು ದಾನ ಪಡೆಯುವ ಮೂಲಕ :** ವೈರಾಣು ಇರುವ ರಕ್ತವನ್ನು ವ್ಯಕ್ತಿಯೊಬ್ಬನಿಂದ ದಾನ ಪಡೆದ ವ್ಯಕ್ತಿಗೆ ಸೋಂಕು ತಗುಲಬಹುದು.

❖ **ಸೋಂಕು ತಗುಲಿದ ತಾಯಿಯಿಂದ ಮಗುವಿಗೆ :** ಹೆಚ್‌ಐವಿ ಸೋಂಕು ತಗುಲಿರುವ ತಾಯಿಯಿಂದ ಆಕೆಯ ಮಗುವಿಗೆ ಈ ಕೆಳಗಿನ ರೀತಿಗಳಲ್ಲಿ ವೈರಾಣುವಿನ ಸೋಂಕು ಉಂಟಾಗಬಹುದು.

* ಜರಾಯುವಿನ ಮೂಲಕ ಭ್ರೂಣಕ್ಕೆ
* ಹೆರಿಗೆಯಾಗುವ ಸಂದರ್ಭದಲ್ಲಿ
* ಮೊಲೆಯೂಣಿಸುವ ಮೂಲಕ

❖ **ಸೋಂಕು ತಗುಲಿದ ವ್ಯಕ್ತಿಗಳು ಬಳಸಿದ ಸಿರಿಂಜ್ ಹಾಗೂ ಸೂಜಿಗಳನ್ನು ಮತ್ತೆ ಬಳಸುವುದರಿಂದ :** ಹೆಚ್‌ಐವಿ ವೈರಾಣುವು ಒಬ್ಬ ವ್ಯಕ್ತಿಯ ದೇಹವನ್ನು ಪ್ರವೇಶಿಸಿದರೂ ದೀರ್ಘ ಸಮಯ ಯಾವುದೇ ರೋಗಲಕ್ಷಣವನ್ನು ಉಂಟು ಮಾಡದೇ ಇರಬಹುದು. ರೋಗವು ಪಕ್ವಗೊಳ್ಳುವ ಅವಧಿಯಲ್ಲಿ ಸೋಂಕು ತಗುಲಿದ ವ್ಯಕ್ತಿ ಸಾಮಾನ್ಯನಂತೆಯೇ ಇರುತ್ತಾನೆ. ಈ ಅವಧಿ ಮಕ್ಕಳಲ್ಲಿ 18ರಿಂದ 24ತಿಂಗಳಿದ್ದರೆ ಪ್ರೌಢವ್ಯಕ್ತಿಯಲ್ಲಿ 8 ರಿಂದ 10ವರ್ಷಗಳಷ್ಟಿರಬಹುದು. ಒಂದು ತಿಳುವಳಿಕೆಯ ಪ್ರಕಾರ ಸೋಂಕು ತಗುಲಿದ ವ್ಯಕ್ತಿಗಳಲ್ಲಿ ಪ್ರತಿಶತ ಸುಮಾರು 50 ಮಂದಿಯಲ್ಲಿ ಏಡ್ಸ್ ರೋಗ ಸುಮಾರು ಹತ್ತು ವರ್ಷಗಳಲ್ಲಿ ಕಾಣಿಸಿಕೊಳ್ಳುತ್ತದೆ.

**ಹೆಚ್‌ಐವಿಯು ಈ ಕೆಳಗಿನ ಯಾವುದೇ ಮಾರ್ಗದಲ್ಲಿ ಹರಡುವುದಿಲ್ಲ**

* ಏಡ್ಸ್ ರೋಗಿಯ ಜೊತೆಗೆ ಹಸ್ತಲಾಘವ ಮಾಡುವ ಮೂಲಕ.
* ಆಲಿಂಗನ ಮಾಡಿಕೊಳ್ಳುವ ಮೂಲಕ.


downloaded from: www.kpscvaani.com

* ಏಡ್ಸ್ ರೋಗಿ ಬಳಸಿದ ತಟ್ಟೆ, ಲೋಟ ಪಾತ್ರಗಳನ್ನು ಬಳಸುವುದರಿಂದ.
* ರೋಗಿಯ ಜೊತೆಗೆ ಆಹಾರ ಸೇವಿಸುವುದರಿಂದ.
* ಸಾರ್ವಜನಿಕ ಶೌಚಾಲಯಗಳನ್ನು, ಈಜುಕೊಳಗಳನ್ನು ಹಂಚಿಕೊಳ್ಳುವುದರಿಂದ.
* ಸೊಳ್ಳೆ ಅಥವಾ ಇತರ ಕೀಟಗಳ ಕಡಿತದಿಂದ.

**ಎಚ್ಚರಿಕೆಯ ಕ್ರಮಗಳು :**

* ಸೋಂಕು ತಗುಲಿದ ವ್ಯಕ್ತಿಯ ಜೊತೆಗೆ ಲೈಂಗಿಕ ಸಂಪರ್ಕ ಹೊಂದುವುದನ್ನು ಪೂರ್ಣವಾಗಿ ತಡೆಯುವುದು.
* ಏಡ್ಸ್ ರೋಗಿ ಬಳಸಿದ ಸೂಜಿ, ಸಿರಿಂಜ್‌ಗಳನ್ನು ಬೇರೆಯವರು ಬಳಸದೇ ಇರುವುದು.
* ರಕ್ತದಾನ ಮಾಡುವುದಕ್ಕೆ ಇಲ್ಲವೇ ಪಡೆಯುವುದಕ್ಕೆ ಮುಂಚೆ ಹೆಚ್‌ಐವಿ ಸೋಂಕು ಇಲ್ಲದಿರುವುದನ್ನು ಖಚಿತ ಪಡಿಸಿಕೊಳ್ಳುವುದು.
* ಹೆಚ್‌ಐವಿ ಸೋಂಕು ತಗುಲಿರುವ ತಾಯಿಯು ತನ್ನ ಮಗುವಿಗೆ ಮೊಲೆಹಾಲು ನೀಡುವುದನ್ನು ತಡೆಯುವುದು.
* ಮಾದಕ ದ್ರವ್ಯ ವ್ಯಸನಿಯಾಗದಂತೆ ವ್ಯಕ್ತಿಗಳನ್ನು ತಡೆಯುವುದು. ಅಂಥವರಿಗೆ ದ್ರವ್ಯಸೇವನೆಯ ಹಂತದಲ್ಲಿ ಸೋಂಕು ತಗಲುವ ಸಾಧ್ಯತೆ ಇದೆ.

**ಹೆಚ್‌ಐವಿ ಪತ್ತೆಗೆ ಪರೀಕ್ಷೆಗಳು :**

* ಎಲಿಸಾ (ELISA)-ಎಂಜೈಮ್ ಲಿಂಕ್ಡ್ ಇಮ್ಯುನೋ ಸಾರ್ಬೆಂಡ್ ಆ್ಯಸ್ಸೆ
* ಪಿಸಿಆರ್ ಪಾಲಿಮರೇಸ್ ಚೈನ್ ರಿಯಾಕ್ಷನ್
* ವೆಸ್ಟರ್ನ್ ಬ್ಲಾಟ್

ಡಬ್ಲ್ಯೂ.ಎ.ಎಫ್–ವರ್ಲ್ಡ್ ಏಡ್ಸ್ ಫೌಂಡೇಶನ್(ಸ್ವಿಟ್ಜರ್‌ಲೆಂಡ್) 1988ರಲ್ಲಿ ಸ್ಥಾಪಿತವಾದ ಈ ಸಂಸ್ಥೆ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಏಡ್ಸ್‌ಗೆ ಸಂಬಂಧಿಸಿದ ಶಿಕ್ಷಣ ಹಾಗೂ ಸಂಶೋಧನೆಗಳಿಗೆ ಅನುದಾನ ನೀಡುತ್ತದೆ.

ನಮ್ಮ ದೇಶದಲ್ಲಿ ರಾಷ್ಟ್ರೀಯ ಏಡ್ಸ್ ನಿಯಂತ್ರಣ ಸಂಸ್ಥೆ(ನ್ಯಾಕೋ) 1992ರಲ್ಲಿ ಸ್ಥಾಪಿತವಾಯಿತು. 1992ರಲ್ಲಿ ಪುಣೆಯಲ್ಲಿ ಇಂಡಿಯನ್ ಕೌನ್ಸಿಲ್ ಆಫ್ ಮೆಡಿಕಲ್ ರಿಸರ್ಚ್‌ನ ಆಶ್ರಯದಲ್ಲಿ ನ್ಯಾಷನಲ್ ಏಡ್ಸ್ ಸಂಶೋಧನಾ ಸಂಸ್ಥೆಯನ್ನು ಸ್ಥಾಪಿಸಲಾಗಿದೆ.



downloaded from: www.kpscvaani.com

**ಭಾರತದಲ್ಲಿ ಏಡ್ಸ್ :** ಭಾರತದಲ್ಲಿ ಏಡ್ಸ್ ಕಾಯಿಲೆ ಬಗ್ಗೆ ಪರಿಶೀಲನೆಗಾಗಿ ICMR(Indian Council of Medical Research)ಏಡ್ಸ್ ರೋಗಿಗಳ ಬಗ್ಗೆ ಮಾಹಿತಿಗಾಗಿ ಟಾಸ್ಕ್ ಫೋರ್ಸ್(Task Force)ಅನ್ನು ನೇಮಿಸಿದೆ. ಇದರ ಧ್ಯೇಯ ಈ ಕಾಯಿಲೆ ದೇಶದಲ್ಲಿ ಹರಡದಂತೆ ನೋಡಿಕೊಳ್ಳುವುದು. ನಾವು ಎಚ್ಚರಿಕೆಯಿಂದ ಹೆಚ್ಚು ತೊಂದರೆಗೊಳಗಾಗುವ ಗುಂಪು.

**ಉದಾ:** ಕೆಂಪು ದೀಪದ ಪ್ರದೇಶದಲ್ಲಿರುವವರು ಮತ್ತು ಸಲಿಂಗರತಿಗಳು ಮುಂತಾದವರು. ತಡ ಮಾಡದೆ ಹಲವು ಶಿಫಾರಸ್ಸು ಮಾಡಲಾಗಿರುವ ಮುನ್ಸೂಚನಾ ಕ್ರಮಗಳನ್ನು ಕೈಗೊಳ್ಳಬೇಕು. ಕಾರ್ಯನಿರತವಾಗದೆ, ವಿಳಂಬ ಮಾಡಿದಲ್ಲಿ ಸರ್ವನಾಶವಾಗುತ್ತದೆ. ರಕ್ತದಾನಿಗಳನ್ನು ಪರೀಕ್ಷೆಗೆ ಒಳಪಡಿಸಿ ಅವರ ರಕ್ತ ಕಲುಷಿತವಲ್ಲ ಸೋಂಕು ಹೊಂದಿಲ್ಲವೆಂಬುದನ್ನು ಖಾತ್ರಿ ಮಾಡಿಕೊಳ್ಳಬೇಕು.

**ಉಪಸಂಹಾರ :** ಪ್ರಪಂಚದಲ್ಲಿ ಏಡ್ಸ್ ಕಾಯಿಲೆ ಹೆಚ್ಚು ಹೆಚ್ಚಾಗಿ ಹರಡಬಹುದು. ಆದರೆ ಅದರ ಬಗ್ಗೆ ಶಿಫಾರಸ್ಸು ಮಾಡಿರುವ ಮುನ್ನೆಚ್ಚರಿಕೆ ಕ್ರಮಗಳನ್ನು ಅನುಸರಿಸುವುದರಿಂದ ಏಡ್ಸ್‌ನ ಹರಡುವಿಕೆಯನ್ನು ಬಹುಮಟ್ಟಿಗೆ ತಡೆಗಟ್ಟಬಹುದು. ಇದಕ್ಕೆ ಔಷಧಗಳನ್ನು ಮತ್ತು ಲಸಿಕೆಯನ್ನು ಕಂಡು ಹಿಡಿಯುವ ಪ್ರಯತ್ನ ಈ ಕಾಯಿಲೆ ಪೂರಾ ನಾಶವಾಗುವವರೆಗೆ ನಡೆಯುತ್ತಿರಲೇ ಬೇಕು.

## ಪ್ರಬಂಧ 16 : ಸಮಾಜದಲ್ಲಿ ಪೊಲೀಸರ ಪಾತ್ರ

ಮೂಲಭೂತವಾಗಿ ರಾಷ್ಟ್ರವನ್ನು ಸೈನಿಕರು ಕಾಯುತ್ತಾರೆ, ಸಮಾಜವನ್ನು ಪೊಲೀಸರು ಕಾಯುತ್ತಾರೆ ಎನ್ನುವ ಮಾತಿದೆ. ಇವರಿಬ್ಬರೂ ದಿನದ 24 ಗಂಟೆಗಳ ಕಾಲ ಕರ್ತವ್ಯನಿರತರೇ ಆಗಿರುತ್ತಾರೆ. ಯಾವುದೇ ಕ್ಷಣದಲ್ಲಿ ಆದರೂ ಕರ್ತವ್ಯದ ಕರೆಗೆ ಓಗೊಟ್ಟು ಇವರು ಹೊರಡಬೇಕಾಗುತ್ತದೆ. ಸದಾ ಕಾಲವೂ ಇವರು ಸನ್ನದ್ಧ ಸ್ಥಿತಿಯಲ್ಲಿಯೇ ಇರಬೇಕಾಗುತ್ತದೆ.

ಇಂದು ಬೆಳೆಯುತ್ತಿರುವ ಸಮಾಜದಲ್ಲಿ ಪೊಲೀಸರ ಜವಾಬ್ದಾರಿಗಳು ಕೂಡ ಹೆಚ್ಚಾಗುತ್ತಿವೆ. ಒಂದು ಸಮಾಜವು 3 ಹಂತಗಳಲ್ಲಿ ಬೆಳವಣಿಗೆ ಹೊಂದುತ್ತದೆ. ಪ್ರಾಥಮಿಕವಾಗಿ ಸಮಾಜದಲ್ಲಿ ಆರ್ಥಿಕ ಚಟುವಟಿಕೆಗಳು ಸೀಮಿತ ವ್ಯಾಪ್ತಿಯಲ್ಲಿರುತ್ತವೆ. ಸಂಪರ್ಕದ ಸಾಧ್ಯತೆಗಳು ಕಡಿಮೆ ಇರುತ್ತವೆ. ಅಂತಹ ಸಮಾಜದಲ್ಲಿ ಇರುವ ಸಂಪನ್ಮೂಲದಲ್ಲಿ ಬಹುಮಟ್ಟಿನ ತೃಪ್ತಿ ಇರುತ್ತದೆ. ತೃಪ್ತಿಗೆ ಸಿದ್ಧವಾದ ಸಮಾಜವು ಕೆಲವು ಮೌಲ್ಯಗಳಿಗೆ ಬದ್ಧವಾಗಿರುತ್ತದೆ. ಅದರ ಪರಿಣಾಮವಾಗಿ ಅವ್ಯವಹಾರಗಳು, ಅನೈತಿಕ ಚಟುವಟಿಕೆಗಳು, ಅಪರಾಧಿ ಮನೋಭಾವ ಮತ್ತು ಅಪರಾಧಿ ಪ್ರವೃತ್ತಿ ಕಡಿಮೆ ಪ್ರಮಾಣದಲ್ಲಿ ಇರುತ್ತವೆ. ಅಂತಹ ಸಮಾಜದಲ್ಲಿ ಪೊಲೀಸರ ಕಾರ್ಯನಿರ್ವಹಣೆ ತಕ್ಕ ಮಟ್ಟಿಗೆ ಇದ್ದರೆ ಸಾಕಾಗುತ್ತದೆ ಮತ್ತು ಮೌಲ್ಯಗಳು ಪೊಲೀಸರ ಕಾರ್ಯನಿರ್ವಹಣೆಗೆ ಸಾಕಷ್ಟು ಭದ್ರತೆಯನ್ನು ಒದಗಿಸುತ್ತವೆ.

ಈ ಹಂತವನ್ನು ದಾಟತೊಡಗಿದ ಸಮಾಜವು ಬೆಳವಣಿಗೆಯ ಪ್ರಕ್ರಿಯೆಗೆ ಹೆಚ್ಚು ಒಡ್ಡಿಕೊಳ್ಳುತ್ತಾ ಹೋಗುತ್ತದೆ. ಬೆಳೆಯತೊಡಗಿದ ಸಮಾಜದಲ್ಲಿ ಆರ್ಥಿಕ ಆಕಾಂಕ್ಷೆಗಳು ತೀವ್ರವಾಗಿರುತ್ತವೆ ಮತ್ತು ಅಂತಹ ಆರ್ಥಿಕ ಆಕಾಂಕ್ಷೆಗಳು ಸಾಮಾಜಿಕ ಮೌಲ್ಯಗಳನ್ನು ಮೀರಿ ಕಾರ್ಯನಿರ್ವಹಿಸತೊಡಗುತ್ತವೆ. ಸಂಪರ್ಕ ಜಾಲಗಳು ವ್ಯಾಪಕವಾಗಿ ಬಳಕೆಯಾಗುತ್ತವೆ. ಅಪರಾಧಿ ಮನೋಭಾವ ಮತ್ತು ಅಪರಾಧಿ ಪ್ರವೃತ್ತಿಯು


downloaded from: www.kpscvaani.com

ತೀವ್ರವಾಗಿದ್ದು ಸೂಕ್ಷ್ಮವೂ ಆಗಿರುತ್ತವೆ. ಇದನ್ನು ರೂಪಕಾತ್ಮಕವಾಗಿ ಹೇಳುವುದಾದರೆ ಬುದ್ದಿವಂತರು ಇರುತ್ತಾರೆ. ಆದರೆ, ಬುದ್ದಿವಂತಿಕೆಗಳು ಕೆಟ್ಟ ಕಾರ್ಯಗಳಿಗೆ ಬಳಕೆಯಾಗುವುದೂ ಹೆಚ್ಚಾಗಿರುತ್ತದೆ. ಇಂತಹ ಸಮಾಜದಲ್ಲಿ ಪೊಲೀಸರು ಬಲು ಕ್ರಿಯಾಶೀಲರೂ, ಸೂಕ್ಷ್ಮರೂ ಆಗಿದ್ದು ಸಮಾಜವು ಸಮರ್ಪಕವಾಗಿ ಕೆಲಸ ಕಾರ್ಯಗಳನ್ನು ನಿರ್ವಹಿಸಲ್ಪಡುವಂತೆ ನೋಡಿಕೊಳ್ಳಬೇಕಾಗುತ್ತದೆ.

ಬೆಳವಣಿಗೆ ಹಂತ ಕ್ರಮಿಸಿದ ಬಳಿಕ ಸಮಾಜವು ಬೆಳೆದ ರೂಪದಲ್ಲಿ ಪ್ರಕಟವಾಗುತ್ತದೆ. ಆರ್ಥಿಕ ಸುಸ್ಥಿರತೆ ಮತ್ತು ಭದ್ರತೆ ಆ ಸಮಾಜದ ಲಕ್ಷಣವಾಗಿರುತ್ತದೆ. ಆದರೆ ಸಮಾಜವು ಸಂಪರ್ಕ ಸಾಧನಗಳನ್ನು ವಿವೇಕಯುತವಾಗಿ ಬಳಸಿಕೊಳ್ಳುತ್ತದೆ. ಸಮಾಜದಲ್ಲಿನ ಸ್ವಯಂ ಶಿಸ್ತುಕಂಡು ಬರುತ್ತದೆ. ಅಪರಾಧಿ ಮನೋಧರ್ಮ ಮತ್ತು ಅಪರಾಧಿ ಪ್ರವೃತ್ತಿಯು ಕಡಿಮೆ ಪ್ರಮಾಣದಲ್ಲಿ ಇರುತ್ತದೆ. ಸಮಾಜವು ಬೆಳವಣಿಗೆ ಹೊಂದಿದಾಗ ಬುದ್ದಿವಂತಿಕೆಗಳು ಪಕ್ವತೆಯೊಂದಿಗೆ ವಿವೇಚನೆಯ ರೂಪದಲ್ಲಿ ಪ್ರಕಟವಾಗುತ್ತದೆ. ಪ್ರಸ್ತುತ ಭಾರತೀಯ ಸಮಾಜವು ಒಂದು ಬೆಳೆಯುತ್ತಿರುವ ಸಮಾಜವಾಗಿದೆ. ಬೆಳೆಯುತ್ತಿರುವ ಸಮಾಜದ ಅಪರಾಧಿ ಪ್ರವೃತ್ತಿಗಳು ಜಾಸ್ತಿ ಇರುತ್ತವೆ. ಈ ಅಪರಾಧಿ ಪ್ರವೃತ್ತಿಯನ್ನು ಪೊಲೀಸರು 2 ರೀತಿಯಲ್ಲಿ ನಿರ್ವಹಿಸಬೇಕಾಗುತ್ತದೆ.

**ಅಪರಾಧಿಗಳ ನಿರ್ವಹಣೆ :** ಪೊಲೀಸರ ವಿಚಾರಕ್ಕೆ ಸಂಬಂಧಿಸಿದಂತೆ ಅಪರಾಧಿಗಳ ನಿರ್ವಹಣೆ ಎಂದರೆ, ಅದು ಅಪರಾಧಿಗಳನ್ನು ಪತ್ತೆ ಮಾಡಿ ಬಂಧಿಸಿ ನ್ಯಾಯಾಂಗದ ಸಮ್ಮುಖದಲ್ಲಿ ಹಾಜರುಪಡಿಸುವ ಪೊಲೀಸರ ಪ್ರಾಥಮಿಕ ಕರ್ತವ್ಯವಾಗಿದೆ. ಪೊಲೀಸರು ಅಪರಾಧಿಗಳ ಕಾರ್ಯಚರಣೆಯಲ್ಲಿರುವಾಗ ಅಪರಾಧಿಗಳ ಪರವಾಗಿ ಬರುವ ನಾನಾ ರೀತಿಯ ಒತ್ತಡಗಳಿಗೆ ಪೊಲೀಸರು ಮಣಿಯುವುದು ಅದರಿಂದಾಗಿ ಕಾನೂನಿನ ಹೊರತಾಗಿಯೂ ಪೊಲೀಸರನ್ನು ಮಣಿಸುವ ಹಲವು ಸಾಧ್ಯತೆಗಳು ಪ್ರಬಲವಾಗುತ್ತವೆ. ಅಂತಹ ಸಂದರ್ಭದಲ್ಲಿ ಪೊಲೀಸರ ಮೂಲ ಕರ್ತವ್ಯವನ್ನೇ ನಿರ್ವಹಿಸಲು ಸಾಧ್ಯವಾಗದೆ, ಪೊಲೀಸರ ಮೇಲೆ ಸಮಾಜಕ್ಕಿರುವ ನಂಬಿಕೆಯು ಹೊರಟು ಹೋಗುತ್ತದೆ. ಇಂತಹ ಸ್ಥಿತಿಯಲ್ಲಿ ಪೊಲೀಸರ ಇಚ್ಛಾಶಕ್ತಿಯು ಬಹು ಪ್ರಧಾನವಾಗದೆ. ಒತ್ತಡಗಳಿಗೆ ಮಣಿಯದೆ ಇರುವ ಮನೋಧರ್ಮವನ್ನು ಪೊಲೀಸರು ಬೆಳೆಸಿಕೊಳ್ಳಬೇಕಾಗಿದೆ.

ಇನ್ನು ಕೆಲವು ಸಂದರ್ಭಗಳಲ್ಲಿ ಪೊಲೀಸರೇ ಅಪರಾಧಿಗಳಿಗೆ ಶಿಕ್ಷೆ ವಿಧಿಸಲು ಮುಂದಾಗುವುದು. ಇದು ಹಲವು ಅಚಾತುರ್ಯಗಳನ್ನು ಉಂಟು ಮಾಡುತ್ತದೆ. ವ್ಯಕ್ತಿಗೆ ಇರುವ ಸಂವಿಧಾನಿಕ ಹಕ್ಕನ್ನು ಹರಣ ಮಾಡಿಬಿಡುತ್ತದೆ. ಶಿಕ್ಷೆ ಕೊಡುವುದಕ್ಕಾಗಿಯೇ ಇರುವ ನ್ಯಾಯಾಂಗ ವ್ಯವಸ್ಥೆಯ ಮೇಲಿನ ನಂಬಿಕೆ ಹೊರಟು ಹೋಗುತ್ತದೆ. ಆದ್ದರಿಂದ ಪೊಲೀಸರು ಕಾನೂನಿನ ಚೌಕಟ್ಟಿನಿಂದ ಆಚೆಗೆ ಹೋಗಿ ಶಿಕ್ಷೆ ಕೊಡುವ ಪದ್ಧತಿಯನ್ನು ಕೈ ಬಿಡಬೇಕು. ಅಪರಾಧಿಗಳನ್ನು ಹಿಡಿಯುವ ತೀವ್ರತೆಯಲ್ಲಿ ಕೆಲವೊಂದು ಸಂದರ್ಭದಲ್ಲಿ ನಿರಪರಾಧಿಗಳಿಗೆ ತೊಂದರೆ ಕೊಡುತ್ತಾರೆ. ಈ ಸಮಸ್ಯೆಯು ಬಹಳ ಸಂಕೀರ್ಣವಾದದ್ದು. ಪೊಲೀಸರು ಆರೋಪಿಗಳನ್ನು ಪತ್ತೆ ಮಾಡುವವರಾಗಿರುತ್ತಾರೆಯೇ ಹೊರತು ಅಪರಾಧಿಗಳನ್ನಲ್ಲ. ನ್ಯಾಯಾಲಯವು ಆರೋಪಿಯನ್ನು ಅಪರಾಧಿಯೆಂದು ಘೋಷಿಸುವ ತನಕ ಆತ ಆರೋಪಿಯಷ್ಟೇ ಆಗಿರುತ್ತಾನೆ. ಆದ್ದರಿಂದ ಪೊಲೀಸರು ಆರೋಪಿಯನ್ನು ಗುರುತಿಸುವಾಗ ಆತ ಖಂಡಿತವಾಗಿಯೂ ಅಪರಾಧಿಯಾಗಿದ್ದಾನೆಯೇ ಎಂಬುದನ್ನು ಬಹುಮಟ್ಟಿಗೆ ಊಹಾತ್ಮಕ ವಿಶೇಷ ತಜ್ಞತೆಯು ಬೇಕಾಗುತ್ತದೆ. ಪೊಲೀಸರಲ್ಲಿ ಮಾನವನ ವರ್ತನೆಗಳನ್ನು ಸೂಕ್ಷ್ಮವಾಗಿ ಅಭ್ಯಾಸ ಮಾಡುವ ಸಾಮರ್ಥ್ಯವಿರಬೇಕು. ಯಾವ ನಿರಪರಾಧಿಗಳಿಗೂ ತೊಂದರೆಯಾಗದಂತೆ ನೋಡಿಕೊಳ್ಳಬೇಕು.



downloaded from: www.kpscvaani.com

ವ್ಯಕ್ತಿಗಳಲ್ಲಿ ಕಾಣಿಸುವ ಅಪರಾಧಿಕ ಮನೋಪ್ರವೃತ್ತಿಯೇ ಅವರನ್ನು ಅಪರಾಧಿ ಕಾರ್ಯಗಳಿಗೆ ಪ್ರಚೋದಿಸುತ್ತವೆ. ಆದ್ದರಿಂದ ಅಪರಾಧಿ ಮನೋಪ್ರವೃತ್ತಿಯನ್ನು ನಿವಾರಿಸಿದರೆ ಅಪರಾಧಗಳು ನಿಯಂತ್ರಣಕ್ಕೆ ಬರುತ್ತವೆ. ಅಪರಾಧಿ ಮನೋ ಪ್ರವೃತ್ತಿಯನ್ನು ನಿರ್ವಹಿಸುವ ಸಾಧನಗಳು ಕಾನೂನಿನ ಭಯ ಮತ್ತು ಕಾನೂನಿನ ಅರಿವು. ಕಾನೂನಿನ ಭಯವು ತನ್ನಲ್ಲಿ ಇರುವ ಅಪರಾಧಿ ಪ್ರವೃತ್ತಿ ಇದ್ದರೂ ಸಹ ಅಪರಾಧ ಮಾಡಲು ಮುನ್ನುಗ್ಗದಂತೆ ವ್ಯಕ್ತಿಯನ್ನು ತಡೆಯುತ್ತದೆ. ಕಾನೂನಿನ ಕುರಿತ ಭಯವು ಅಪರಾಧಿ ಮನೋಪ್ರವೃತ್ತಿಯವರು ಸಿಕ್ಕಿಬೀಳದಂತೆ ಹೆಚ್ಚು ಬುದ್ಧಿವಂತಿಕೆಯಿಂದ ಅಪರಾಧವನ್ನು ಮಾಡುವುದಕ್ಕೂ ಪ್ರೇರೇಪಿಸಬಹುದು. ಕಾನೂನಿನ ಅರಿವಿನಿಂದ ವ್ಯಕ್ತಿಯ ವ್ಯಕ್ತಿತ್ವವು ಉನ್ನತೀಕರಣಗೊಳ್ಳುತ್ತದೆ. ಉನ್ನತ ಮಟ್ಟದ ವ್ಯಕ್ತಿತ್ವವು ಅಪರಾಧವನ್ನು ಮಾಡಲು ಮನಸ್ಸು ಮಾಡುವುದಿಲ್ಲ. ಹೆಚ್ಚು ಕಡಿಮೆ ಇದು ಪೊಲೀಸರು ನಿರ್ವಹಿಸಬೇಕಾದ ಸಾಮಾಜಿಕ ಶಿಕ್ಷಣದ ಕಾರ್ಯವಾಗಿದೆ.

ಪೊಲೀಸರು ಜನರ ವಿಶ್ವಾಸ ಪಡೆಯಬೇಕಾದರೆ ಪೊಲೀಸರು ಜನರನ್ನು ನೋಡುವ ಕ್ರಮವನ್ನು ಬದಲಾಯಿಸಿಕೊಳ್ಳಬೇಕು. ಉದಾಹರಣೆ ತೆಗೆದುಕೊಂಡರೆ ಒಬ್ಬ ವಾಹನ ಸವಾರ ಲೈಸೆನ್ಸ್ ಇಲ್ಲದೆ ವಾಹನ ಚಲಾಯಿಸುತ್ತಿರುವಾಗ ಪೊಲೀಸರು ಅವನನ್ನು ತಪಾಸಣೆ ನಡೆಸಲು ಶುರು ಮಾಡಿದರೆ ಕಾಲುಗಂಟೆ, ಅರ್ಧಗಂಟೆ ಅವನೊಂದಿಗೆ ವಾದ–ವಿವಾದ ಮಾಡಿಕೊಂಡಿರುತ್ತಾರೆ. ಅದೇ ವೇಳೆ ಮತ್ತೊಬ್ಬ ವಾಹನ ಸವಾರ ಬಂದು ತನ್ನೆಲ್ಲ ದಾಖಲೆಗಳನ್ನು ಪೊಲೀಸರಿಗೆ ತೋರಿಸಿದರೆ, ಕಾನೂನನ್ನು ಪಾಲಿಸಿದ ವಾಹನ ಸವಾರನಿಗೆ ಕಿಂಚಿತ್ತೂ ಮಹತ್ವವನ್ನು ನೀಡದೆ ಕಳಿಸಿಬಿಡುತ್ತಾರೆ. ಅಂದರೆ, ಕಾನೂನನ್ನು ಪಾಲಿಸುವವರು ಪೊಲೀಸರ ದೃಷ್ಟಿಯಲ್ಲಿ ಮಹತ್ವವನ್ನು ಕಳೆದುಕೊಳ್ಳುತ್ತಾರೆ ಎಂಬುದಾಗಿದೆ. ಯಾರು ಕಾನೂನನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಾರೋ ಅವರನ್ನು ಕಾನೂನನ್ನು ಪಾಲಿಸದೆ ಇರುವವನ ಎದುರಿಗೇ ಮೆಚ್ಚಿಕೊಂಡು ಅಭಿನಂದಿಸಿ ಗೌರವಯುತವಾಗಿ ಮಾತನಾಡಿಸಿ ಕಳುಹಿಸಬೇಕು. ಆಗ ಕಾನೂನನ್ನು ಪಾಲಿಸುವವನಿಗೆ ತಾನು ಕಾನೂನಿಗೆ ಬದ್ಧನಾಗಿದ್ದರೆ ಅದಕ್ಕೆ ಮೆಚ್ಚುಗೆಗಳು ಸಿಗುತ್ತವೆ ಎಂಬ ಸಂದೇಶ ರವಾನೆಯಾಗುತ್ತದೆ. ಪೊಲೀಸರೊಂದಿದೆ ವಿಶ್ವಾಸದಿಂದ ನಡೆದುಕೊಳ್ಳುತ್ತಾನೆ.

ಪೊಲೀಸರು ಶಿಕ್ಷಣ ಸಂಸ್ಥೆಗಳು, ಸಾರ್ವಜನಿಕ ಸಂಘ–ಸಂಸ್ಥೆಗಳು ಮುಂತಾದ ವೇದಿಕೆಗಳನ್ನು ಗಮನಕ್ಕೆ ತಂದುಕೊಳ್ಳಬೇಕು. ಅವುಗಳ ಮೂಲಕ ಕಾನೂನಿನ ಅರಿವು ಮತ್ತು ಮೌಲ್ಯಗಳ ಬದ್ದತೆಯನ್ನು ಬೆಳೆಸುವ ತಿಳುವಳಿಕೆಗಳನ್ನು ನೀಡಬೇಕು. ಅಪರೂಪಕ್ಕೆ ಇಂತಹ ಕಾರ್ಯಗಳು ನಡೆಯುತ್ತವೆಯಾದರೂ ಅವು ಸಾಂಕೇತಿಕ ಉಪನ್ಯಾಸಕ್ಕೆ ಮುಕ್ತಾಯವಾಗುತ್ತವೆ. ವಾಸ್ತವಿಕವಾಗಿ ಅದು ಅನುಷ್ಠಾನಕ್ಕೆ ಬರುವಂತೆ ಶಿಕ್ಷಣ ಸಂಸ್ಥೆಗಳು, ಸಾರ್ವಜನಿಕ ಸಂಸ್ಥೆಗಳು ಮತ್ತು ಪೊಲೀಸ್ ಸ್ಟೇಷನ್‌ಗಳ ನಡುವಿನ ಬಾಂಧವ್ಯಗಳು ಸುಧಾರಿಸಬೇಕು.

ಒಟ್ಟಾರೆಯಾಗಿ ಹೇಳುವುದಾದರೆ ಬೆಳೆಯುತ್ತಿರುವ ಸಮಾಜದಲ್ಲಿ ಪೊಲೀಸರು ಕಾನೂನಿನ ಉಪಕರಣಗಳಾಗಿದ್ದರಷ್ಟೇ ಸಾಲದು, ವಿಶಾಲ ವ್ಯಾಪ್ತಿಯ ಸಾಮಾಜಿಕ ಹಿನ್ನೆಲೆಗಳನ್ನು ಅರ್ಥ ಮಾಡಿಕೊಂಡಿರುವ ಪ್ರಬುದ್ಧವಾಗಿ ಯೋಜನೆ ಮಾಡುವ ಕಾನೂನಿನ, ನ್ಯಾಯದ ಅರಿವು ಇರುವ ಸಂವೇದನಾಶೀಲ ವ್ಯಕ್ತಿಗಳಾಗಬೇಕು.

## ಪ್ರಬಂಧ 17: ಇ–ಆಡಳಿತ: ಸಮಯದ ಉಳಿತಾಯ


downloaded from: www.kpscvaani.com

# "ಸರ್ಕಾರದ ಕೆಲಸ ದೇವರ ಕೆಲಸ"

ಈ ಉಕ್ತಿಯಂತೆ ಸರ್ಕಾರದ ಕೆಲಸ ಮಾಡುವ ಪ್ರತಿಯೊಬ್ಬರೂ ಹೇಳುವ ಮಾತಾಗಿದೆ. ದೇವರ ಹೆಸರು ಹೇಳಿಕೊಂಡು ಕುರುಡು ಕಾಂಚಾಣವನ್ನು ಅದೆಷ್ಟೋ ಜನ ತಮ್ಮ ಮನೆಗೆ ಲಕ್ಷ್ಮಿ ದೇವಿಯ ರೂಪದಲ್ಲಿ ಕರೆದುಕೊಂಡು ಹೋಗುವರು, ಇನ್ನು ಕೆಲವರು ನಿಜವಾದ ದೇವರು ನಾವು ಮಾಡುವ ಕರ್ತವ್ಯದಲ್ಲಿಯೇ ಅಡಗಿದೆ ಎಂದು ಹೇಳಿ ತಾವು ಮಾಡುವ ಕೆಲಸ ನಿಷ್ಠೆಯಿಂದ ಮಾಡುವವರು ಇದ್ದಾರೆ. ಹೀಗಿರುವಾಗ ಸಾರ್ವಜನಿಕರು ತಮ್ಮ ಕೆಲಸಗಳು ಮಾಡಿಕೊಳ್ಳಲು ಹೋದಾಗ ಯಾವುದೋ ಒಂದು ನೆಪ ಹೇಳಿ ಕೆಲಸವನ್ನು ಮುಂದೆ ಹಾಕುತ್ತಿದ್ದರು. ಹೀಗೆ ನಡೆಯುತ್ತಿರುವ ಸರ್ಕಾರದ ಕೆಲಸವನ್ನು ಸಾರ್ವಜನಿಕರ ಬಳಿ ಕೊಂಡ್ಯೊಯಲು ಇ–ಆಡಳಿತವನ್ನು ಜಾರಿಗೆ ತಂದಿತು. ಕಳೆದ ಶತಮಾನದ ತೊಂಭತ್ತರ ದಶಕದಲ್ಲಿ ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಆಗಿರುವ ಆವಿಷ್ಕಾರಗಳು ಅಗಣಿತ. ಸಂಪರ್ಕ ಉಪಗ್ರಹ ತಂತ್ರಜ್ಞಾನದ ಪರಿಣಾಮ ಮಾಹಿತಿಗಳ ಕ್ಷಿಪ್ರ ರವಾನೆ ಜಗತ್ತಿನ ಎಲ್ಲಾ ವ್ಯವಹಾರಗಳ ಮೇಲೆ ಪರಿಣಾಮ ಬೀರಿದೆ. ನಿಸ್ತಂತು ಸಂಪರ್ಕ ಮಾಧ್ಯಮವನ್ನು ಎಷ್ಟರಮಟ್ಟಿಗೆ ವ್ಯಾಪಿಸಿದೆ ಎಂದರೆ ಕಛೇರಿ ವ್ಯವಹಾರಗಳು ಕಾಗದರಹಿತ ಸ್ವರೂಪವನ್ನು ಪಡೆಯುವ ಸಾಧ್ಯತೆ ಸೃಷ್ಟಿಯಾಗಿದೆ.

ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗ ಕರ್ನಾಟಕದಲ್ಲಿ ಆಡಳಿತ ವ್ಯವಸ್ಥೆಯ ಆಧಾರ ಸ್ಥಂಭಗಳಾಗಿವೆ. ಆಡಳಿತದ ಒಟ್ಟಾರೆ ನಿರ್ವಹಣೆ ಕಾರ್ಯಾಂಗದ ಹೊಣೆಗಾರಿಕೆಯಾಗಿದ್ದು, ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು ತಮ್ಮ ಹೊಣೆಗಾರಿಕೆಯನ್ನು ಕಾಲಕಾಲಕ್ಕೆ ನಿರ್ವಹಿಸುತ್ತ ವ್ಯವಸ್ಥೆಯನ್ನು ಶಿಸ್ತಿನಿಂದ ಕಾರ್ಯ ನಡೆಸುವ ಪ್ರವೃತ್ತಿ ಸ್ವಾತಂತ್ರ್ಯ ಪೂರ್ವದಿಂದಲೂ ಕರ್ನಾಟಕದಲ್ಲಿ ನಡೆದುಬಂದಿದೆ. ಸರ್ಕಾರದ ಸಿಬ್ಬಂದಿಯಾಗಿ ನೇಮಕವಾಗುವವರು ಅರ್ಹತೆ ಮತ್ತು ಪ್ರಾಮಾಣಿಕತೆಯಲ್ಲಿ ದಕ್ಷರಾಗಿರಬೇಕು ಎಂದು ಮೈಸೂರು ಸಂಸ್ಥಾನದ ಹೆಮ್ಮೆಯ ದಿವಾನರಾಗಿದ್ದ ಸರ್.ಎಂ.ವಿಶ್ವೇಶ್ವರಯ್ಯ ಅವರು ಪ್ರತಿಪಾದಿಸುತ್ತ ಬಂದಿದ್ದರು. ಸರ್ಕಾರದ ಸೇವೆಯಲ್ಲಿ ಗುಣಮಟ್ಟಕ್ಕೆ ಆದ್ಯತೆ ನೀಡುವ ವಿಷಯದಲ್ಲಿ ರಾಜಿಯಾಗುವುದಕ್ಕೆ ಸಾಧ್ಯವಿಲ್ಲವೆಂದು ದಿವಾನ ಹುದ್ದೆಯನ್ನು ತ್ಯಜಿಸಲು ಅವರು ಮುಂದಾಗಿದ್ದ ಐತಿಹಾಸಿಕ ಘಟನೆ ಆಡಳಿತ ವ್ಯವಸ್ಥೆಯನ್ನು ಗುಣಾತ್ಮಕವಾಗಿ ಇಟ್ಟುಕೊಳ್ಳಬೇಕು ಎಂದು ಹಿಂದಿನ ತಲೆಮಾರಿನ ಆಡಳಿತಗಾರರ ಕರ್ತವ್ಯಬದ್ಧತೆಗೆ ನಿದರ್ಶನವಾಗಿದೆ. ಇವರ ನಂತರ ವಿವಿಧ ರಾಜಕೀಯ ಪಕ್ಷಗಳು ರಾಜ್ಯದ ಅಧಿಕಾರ ಚುಕ್ಕಾಣಿಯನ್ನು ಹಿಡಿದಿವೆ. ಯಾವುದೇ ಪಕ್ಷ ಅಧಿಕಾರ ನಡೆಸಿದರೂ ಸಂವಿಧಾನದ ಆಶಯಕ್ಕೆ ಅನುಗುಣವಾಗಿ ಆಡಳಿತ ನಡೆಯುವಂತೆ ಕಾರ್ಯಾಂಗ ಎಚ್ಚರ ವಹಿಸಿದೆ.

ಸರ್ಕಾರದ ಪ್ರತಿಯೊಂದು ನಿರ್ಧಾರಗಳು, ಯೋಜನೆಗಳು ಜನತೆಗೆ ಕ್ಷಿಪ್ರವಾಗಿ ತಲುಪಬೇಕು ಮತ್ತು ಅದು ಪಾರದರ್ಶಕವಾಗಿರಬೇಕು ಎಂಬು ಇ–ಆಡಳಿತದ ಉದ್ದೇಶ. ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಆಡಳಿತ ಸುಧಾರಣಾ ವಿಭಾಗದಲ್ಲಿ ಕಾರ್ಯದರ್ಶಿ ಹುದ್ದೆಯನ್ನು ರೂಪಿಸುವ ಮೂಲಕ ಇ–ಆಡಳಿತ ಸಚಿವಾಲಯವನ್ನು ಸ್ಥಾಪಿಸಿದೆ. ಇ–ಆಡಳಿತದ ವ್ಯವಹಾರಗಳಿಗೆ ಸಂಬಂಧಿಸಿದಂತೆ ಒಂದಕ್ಕಿಂತ ಹೆಚ್ಚಿನ ಇಲಾಖೆಗಳನ್ನು ಸೇರಿಸಿ ಸಾರ್ವಜನಿಕರ ಎಲ್ಲಾ ಮಾಹಿತಿಗಳನ್ನು ಸಂಗ್ರಹಿಸುವುದು ಮತ್ತು ಜನ ಸಾಮಾನ್ಯರಿಗೆ ಕ್ಲಿಷ್ಟಕರವಾಗಿರದೆ ಸುಲಭವಾಗಿ ಕೈಗೆಟುವುದು ಇ–ಆಡಳಿತದ ಇನ್ನೊಂದು ಉದ್ದೇಶ.


downloaded from: www.kpscvaani.com

ಕಂದಾಯ ಭೂಮಿ, ಖಜಾನೆ, ಇ–ಸಂಗ್ರಹಣೆ, ಮಾನವ ಸಂಪನ್ಮೂಲದ ವ್ಯವಸ್ಥಿತ ಬಳಕೆ, ನ್ಯಾಯಾಂಗ, ಕೃಷಿ, ಸಾರಿಗೆ, ನಗರಾಭಿವೃದ್ಧಿ, ಆಹಾರ ಮತ್ತು ನಾಗರಿಕ ಸರಬರಾಜು ಇತ್ಯಾದಿ ಇಲಾಖೆಗಳಿಗೆ ಸಂಬಂಧಿಸಿ ತ್ವರಿತ ಸೇವೆಗೆ ಬೃಹತ್ ಸಂಪರ್ಕ ಜಾಲವಾಗಿದೆ. ಧ್ವನಿ ಮತ್ತು ದೃಶ್ಯ ಸಂವಹನದ ತಾಂತ್ರಿಕತೆ (ವಿಡಿಯೋ ಕಾನ್ಫರೆನ್ಸ್) ಒಳಗೊಂಡಿರುವ ಕಾರಣ ರಾಜ್ಯದ ಯಾವುದೇ ಭಾಗದ ಮಾಹಿತಿಯನ್ನು ಕ್ಷಣದಲ್ಲಿಯೇ ಪಡೆದುಕೊಳ್ಳಬಹುದಾಗಿದೆ.

**ಮಾನವ ಸಂಪನ್ಮೂಲ ವ್ಯವಸ್ಥೆ ಪದ್ಧತಿ :** ಇ–ಆಡಳಿತ ಬರುವ ಮುಂಚೆ ಎಲ್ಲಾ ಕ್ಷೇತ್ರಗಳಲ್ಲಿ ವೇತನ ಬಟವಾಡೆ ಮತ್ತು ನೌಕರರ ಪಿಂಚಣಿಯನ್ನು ಪಡೆದುಕೊಳ್ಳು ಹರಸಾಹಸ ಮಾಡಬೇಕಾಗುತ್ತಿತ್ತು. ಇ–ಆಡಳಿತ ವ್ಯವಸ್ಥೆ ಬಂದ ಮೇಲೆ ಎಲ್ಲಾ ಸರ್ಕಾರಿ ನೌಕರರಿಗೆ ವಿದ್ಯುನ್ಮಾನ ಜಾಲದ ಮುಖಾಂತರ ವೇತನ ಬಟವಾಡೆ ಮಾಡುತ್ತಿದ್ದಾರೆ. ಅಲ್ಲದೆ ಎಲ್ಲಾ ಸರ್ಕಾರಿ ನೌಕರರ ಸೇವಾ ಪುಸ್ತಕಗಳಲ್ಲಿನ ಮಾಹಿತಿ ವಿವರಗಳನ್ನು ಗಣಕೀಕರಣ ಮಾಡಲಾಗಿದೆ. ಇದರಿಂದಾಗಿ ಮುಂಬರುವ ದಿನಗಳಲ್ಲಿ ಸರ್ಕಾರಿ ನೌಕರರ ಪಿಂಚಣಿಯು ಅವರ ನಿವೃತ್ತಿಯಾದ ದಿನವೇ ವಿತರಣೆಯಾಗದು.

**ಆಧಾರ್ ಯೋಜನೆ :** ದೇಶದ ಬಹು ಮಹತ್ವಾಕಾಂಕ್ಷೆಯ ಯೋಜನೆಯಾದ ಆಧಾರ್ ಯೋಜನೆಯನ್ನು 2010ರಿಂದ ಆರಂಭಿಸಲಾಗಿದೆ. ರಾಜ್ಯದ ಎಲ್ಲಾ ನಿವಾಸಿಗಳಿಗೆ ವಿಶಿಷ್ಟ ಗುರುತಿನ ಸಂಖ್ಯೆಯನ್ನು ನೀಡುವ ಸರ್ಕಾರದ ಯೋಜನೆ. ಈ ಯೋಜನೆ ಪ್ರತಿನಿತ್ಯ ಜನಿಸುವ ಪ್ರತಿ ಮಗುವಿಗೂ ಅನ್ವಯಿಸುವುದರಿಂದ ನಿರಂತರವಾಗಿ ನಡೆಯುವ ಕಾರ್ಯವಾಗಿದೆ. ಸರ್ಕಾರದ ವಿವಿಧ ಸೌಲಭ್ಯಗಳನ್ನು ಪಡೆಯುವುದಕ್ಕೆ ಆಧಾರ್ ಗುರುತಿನ ಚೀಟಿ ಹೊಂದುವುದು ಕಡ್ಡಾಯಗೊಳಿಸಲಾಗಿದೆ. ಈ ಯೋಜನೆಯಿಂದಾಗಿ ನಾಗರಿಕ ಸೇವೆಗಳು ಯಾರಿಗೆ ತಲುಪಬೇಕಾಗಿದೆಯೋ, ಅವರಿಗೆ ನೇರವಾಗಿ ತಲುಪಿಸುವ ಕೆಲಸ ಅತ್ಯಂತ ಪರಿಣಾಮಕಾರಿ ಮತ್ತು ವ್ಯವಸ್ಥಿತವಾಗಿ ಜರುಗುತ್ತಿದೆ.

ಉದಾ : ಬ್ಯಾಂಕ್ ಖಾತೆಗೆ ಆಧಾರ್ ನೊಂದಣಿ ಮಾಡಿಸುವುದು ಕಡ್ಡಾಯವಾಗಿದೆ.

**ಇ–ಫಾರ್ಮ್ :** ವಿದ್ಯುನ್ಮಾನ ನಮೂನೆಗಳ ಯೋಜನೆಯಡಿಯಲ್ಲಿ ವಿವಿಧ ಸರ್ಕಾರಿ ಇಲಾಖೆಗಳು ಸಾರ್ವಜನಿಕರಿಗೆ ನೀಡುವ ಸೌಲಭ್ಯ ಮತ್ತು ಸೇವೆಗಳಿಗೆ ಸಂಬಂಧಿಸಿದಂತೆ ಇ–ಫಾರ್ಮ್ ಮೂಲಕ ನಮೂನೆಗಳನ್ನು ಸಲ್ಲಿಸಲು ಅನುವು ಮಾಡಿಕೊಡಲಾಗಿದೆ. ಈ ಯೋಜನೆಯಿಂದ ಸಾರ್ವಜನಿಕರು ಯಾವ ಸಮಯದಲ್ಲಾದರೂ ಎಲ್ಲಿಂದಾದರೂ ಸರ್ಕಾರಿ ಸೇವೆಗಳನ್ನು ಪಡೆಯಬಹುದಾಗಿದೆ.

ವಿವಿಧ ಇಲಾಖೆಗಳ ಇ–ಆಡಳಿತ ಯೋಜನೆಗಳ ಸಮರ್ಪಕ ರಚನೆ, ಅನುಮೋದನೆ ಮತ್ತು ಅನುಷ್ಠಾನಗಳ ಬಗ್ಗೆ ಕಾರ್ಯ ವಿಧಾನವನ್ನು ನಿಗದಿಪಡಿಸಲಾಗಿದೆ. ಈ ಕಾರ್ಯ ವಿಧಾನದನ್ವಯ ಪ್ರತಿ ಇಲಾಖೆಯು ಆಯಾ ವರ್ಷದಲ್ಲಿ ಕೈಗೊಳ್ಳುವ ಘನಕೀಕರಣ ಯೋಜನೆಗಳನ್ನು ಒಳಗೊಂಡ ಇ–ಆಡಳಿತ ವಾರ್ಷಿಕ ಕ್ರಿಯಾ ಯೋಜನೆಯನ್ನು ತಯಾರಿಸಬೇಕಾಗಿರುತ್ತದೆ.

ಮಾಹಿತಿ ತಂತ್ರಜ್ಞಾನದ ಮೂಲಭೂತ ಸೌಲಭ್ಯಗಳನ್ನು ಸೃಜಿಸುವುದರಲ್ಲಿ ಆಗಬಹುದಾದ ನಕಲನ್ನು ತಡೆಗಟ್ಟಲು ಮತ್ತು ರಾಜ್ಯ ಮಾಹಿತಿ ಕೇಂದ್ರದಂತಹ ಈಗಾಗಲೇ ಸ್ಥಾಪಿಸಲ್ಪಟ್ಟ ಮಾಹಿತಿ ತಂತ್ರಜ್ಞಾನ ಸೌಲಭ್ಯಗಳಿಂದ ಹೆಚ್ಚಿನ ಉಪಯುಕ್ತತೆಗೆ ಅನುಕೂಲವಾಗುತ್ತದೆ. ಆನ್‌ಲೈನ್‌ನಲ್ಲಿ ಅರ್ಜಿಗಳನ್ನು ಸಲ್ಲಿಸಲು ಕಲ್ಪಿಸಿದ ವ್ಯವಸ್ಥೆ ತುಂಬಾ ಅನುಕೂಲವಾಗಿದೆ. ವಿವಿಧ ಸೇವೆಗಳ ಶುಲ್ಕಗಳನ್ನು ಯಾವುದೇ ಹೊತ್ತಿನಲ್ಲಿ ಪಾವತಿಸುವಂತಹ ವ್ಯವಸ್ಥೆ ತುಂಬಾ ಜನಪರವಾದ ಉಪಕ್ರಮವಾಗಿದೆ. ರೈತರ ಜಮೀನಿಗೆ ಸಂಬಂಧಿಸಿದ


downloaded from: www.kpscvaani.com

ಪಹಣಿ ಪಡೆಯಲು, ನಿವೇಶನ ನೊಂದಣಿ ಪ್ರಕ್ರಿಯೆಗಳನ್ನು ಸುಗಮಗೊಳಿಸುವುದು ಇ–ಆಡಳಿತದ ಹೆಗ್ಗಳಿಕೆ.

ಮಾಹಿತಿ ತಂತ್ರಜ್ಞಾನದ ಕ್ಷೇತ್ರದಲ್ಲಿ ಆಗಿರುವ ಆವಿಷ್ಕಾರಗಳನ್ನು ಆಡಳಿತದ ವಿವಿಧ ಹಂತಗಳಲ್ಲಿ ಅಳವಡಿಸಿಕೊಂಡಿರುವ ಕರ್ನಾಟಕದ ಆಡಳಿತ ವ್ಯವಸ್ಥೆಯಿಂದ ಅಧಿಕಾರಿಗಳು ಮತ್ತು ಸಿಬ್ಬಂದಿಯ ಕೆಲಸವು ಹಗುರವಾಗಿದೆ. ಪ್ರವಾಸ ಮಾಡದೆಯೇ ರಾಜ್ಯದ ಯಾವುದೇ ಮೂಲೆಯ ಪ್ರದೇಶ ಸಾಕ್ಷಾತ್ ಪರಿಸ್ಥಿತಿಯನ್ನು ಗಮನಿಸಬಹುದಾಗಿದೆ ಮತ್ತು ಅಲ್ಲಿನ ವ್ಯಕ್ತಿಗಳೊಂದಿಗೆ ನೇರವಾಗಿ ಸಂವಾದ ಮಾಡಬಹುದಾಗಿದೆ. ಗ್ರಾಮಪಂಚಾಯತ್ ವ್ಯಾಪ್ತಿಯ ವಿವಿಧ ಯೋಜನೆಗಳ ಫಲಾನುಭವಿಗಳ ಮಾಹಿತಿಯನ್ನು ದಾಖಲಿಸಿಕೊಳ್ಳಬಹುದಾಗಿದೆ. ಪ್ರತಿ ಫಲಾನುಭವಿಯ ಮಾಹಿತಿ ಗಣಕ ಯಂತ್ರದ ಜಾಲದಲ್ಲಿದ್ದರೆ, ಒಬ್ಬರ ಹೆಸರಿನಲ್ಲಿ ಇನ್ನೊಬ್ಬರು ಸರ್ಕಾರಿ ಸೌಲಭ್ಯಗಳನ್ನು ಪಡೆಯುವುದನ್ನು ತಪ್ಪಿಸಬಹುದಾಗಿದೆ. ಪಡಿತರ ಚೀಟಿ, ಮತದಾರರ ಚೀಟಿ, ಇತ್ಯಾದಿ ಗುರುತು ಪತ್ರಗಳನ್ನು ವಿತರಿಸುವುದು ಸುಲಭವಾಗಿದೆ.

ಒಟ್ಟಾರೆಯಾಗಿ ಕರ್ನಾಟಕದಲ್ಲಿ ಇ–ಆಡಳಿತ ವ್ಯವಸ್ಥೆ ಜಾರಿಗೆ ಬಂದಿದ್ದರಿಂದ ಭ್ರಷ್ಟಾಚಾರ ಸ್ವಲ್ಪ ಮಟ್ಟಿಗಾದರೂ ಕಡಿಮೆ ಮಾಡಿದೆ. ಜನ ಸ್ನೇಹಿಯಾದ ಆಡಳಿತ ಅನುಷ್ಠಾನದಲ್ಲಿದ್ದರೂ ಅಕ್ರಮ ವ್ಯವಹಾರಗಳು, ಕಾನೂನು ಉಲ್ಲಂಘನೆಗಳು, ಸ್ವಜನ ಪಕ್ಷಪಾತ, ಅಧಿಕಾರ ದುರುಪಯೋಗದಂತಹ ಪ್ರಕರಣಗಳು ಇನ್ನೂ ಕೆಲ ಹಂತಗಳಲ್ಲಿ ಕಂಡುಬರುತ್ತಿದೆ. ಆಡಳಿತ ಯಂತ್ರವನ್ನು ಆಧುನಿಕರಣಗೊಳಿಸಿದರಷ್ಟೇ ಸಾಲದು, ಅದನ್ನು ನಿರ್ವಹಿಸುವವರು ಕೂಡ ಮಾಹಿತಿ ತಂತ್ರಜ್ಞಾನ ಕ್ಷೇತ್ರದ ನಿಖರತೆಗೆ ಅನುಗುಣವಾದ ಕಾನೂನಿನ ಗೌರವ, ನಿಯಮಗಳ ಪಾಲನೆ ಮತ್ತು ಪ್ರಾಮಾಣಿಕತೆಯಂಥ ನಡವಳಿಕೆಗಳನ್ನು ವೃತ್ತಿ ಬದುಕಿನಲ್ಲಿ ಅನುಸರಿಸಿದರೆ 'ಇ–ಆಡಳಿತ' ನಿಜಕ್ಕೂ ಜನ ಸ್ನೇಹಿಯಾಗುತ್ತದೆ.

## ಪ್ರಬಂಧ 18 : ಪ್ಲಾಸ್ಟಿಕ್ ತ್ಯಾಜ್ಯ

**ಮಾನವನ ವೈಜ್ಞಾನಿಕ ಸಾಧನೆಯು,**

**ತಾಯಿಯ ಎದೆ ಹಾಲಿನಂತಿರಬೇಕೇ ವಿನಃ**

**ವಿಷದಂತಲ್ಲ.**

**ಪ್ರಸ್ತಾವನೆ :** ಆಧುನಿಕ ಸಮಾಜದಲ್ಲಿ ತ್ಯಾಜ್ಯ ನಿರ್ವಹಣೆ ಪರಿಸರದ ಒಂದು ಪ್ರಮುಖ ಸವಾಲೆನಿಸಿದೆ. ಅದಕ್ಕಾಗಿಯೇ ಸುಸ್ಥಿರ ಅಭಿವೃದ್ಧಿ ಸಾಧಿಸುವ ನಿಟ್ಟಿನಲ್ಲಿ ತ್ಯಾಜ್ಯ ನಿರ್ವಹಣೆಗೆ ಸಮನ್ವಯುಕ್ತ ಪ್ರಯತ್ನದ ಅಗತ್ಯವಿದೆ. 'ಅವಶ್ಯಕತೆಯೇ ಅನ್ವೇಷಣೆಯ ಮಾತೆ' ಎಂಬ ನಾಣ್ಣುಡಿಯಂತೆ ಹೊಸ ಹೊಸ ಅವಶ್ಯಕ ವಸ್ತುಗಳನ್ನು ಅನ್ವೇಷಣೆ ಮಾಡುವುದು ಸಹಜ ಗುಣ ಆದರೆ ಮಾನವನ ಹೊಸ ಆವಿಷ್ಕಾರದ ದಾಹ



downloaded from: www.kpscvaani.com

ದಿನೇ ದಿನೇ ಹೆಚ್ಚಾದಂತೆ, ಹೊಸ ಹೊಸ ಸಮಸ್ಯೆಗಳಿಗೆ ಹೆಬ್ಬಾಗಿಲನ್ನು ತೆರೆದು ಹಾದಿ ಮಾಡಿಕೊಡುತ್ತಿರುವುದು ಶೋಚನೀಯ ಸಂಗತಿ.

ಪ್ರಕ್ರಿಯಾ ಹಂತಗಳಲ್ಲಿ ಮೃದುತ್ವವನ್ನು ಹೊಂದುವ ಪಾಲಿಮರ್‌ಗಳನ್ನು ಪ್ಲಾಸ್ಟಿಕ್‌ಗಳೆನ್ನುತ್ತೇವೆ. ಪ್ಲಾಸ್ಟಿಕ್ ಸಾವಯವ ವಸ್ತುಗಳ ಪಾಲಿಮರೀಕರಣದ ಉತ್ಪಾದಿಸಿದ ಸಿಂಥೆಟಿಕ್ ವಸ್ತುವಾಗಿದ್ದು ಬಿಸಿಯಾಗಿದ್ದಾಗ ನಿಶ್ಚಿತ ಆಕಾರಕ್ಕೆ ಎರಕ ಒಯ್ಯಬಹುದು.

❖ **ಪ್ಲಾಸ್ಟಿಕ್‌ಗಳಲ್ಲಿ ಎರಡು ವಿಧ :**

1. **ಥರ್ಮೋಪ್ಲಾಸ್ಟಿಕ್ :** ಕೆಲವು ಪ್ಲಾಸ್ಟಿಕ್‌ಗಳು ಕಾಯಿಸಿದಾಗ ಮೆದುವಾಗುತ್ತವೆ ಮತ್ತು ತಣಿಸಿದಾಗ ಗಡುಸಾಗುತ್ತವೆ. ಅವುಗಳನ್ನು ಕಾಯಿಸಿ ಪುನಃ ಪುನಃ ಎರಕ ಹೊಯ್ಯಬಹುದು. ಈ ರೀತಿ ಕಾಯಿಸಿದಾಗ ಮೆದುವಾಗಿ ಆಕಾರವನ್ನು ಕಳೆದುಕೊಳ್ಳುವ ಪ್ಲಾಸ್ಟಿಕ್‌ಗಳನ್ನು ಥರ್ಮೋಪ್ಲಾಸ್ಟಿಕ್‌ಗಳೆನ್ನುತ್ತೇವೆ.

   **ಉದಾ :** ಪಾಲಿ ವಿನೈಲ್ ಕ್ಲೋರೈಡ್(PVC), ಪಾಲಿಸ್ಟರೀನ್

2. **ಥರ್ಮೋಸೆಟಿಂಗ್ ಪ್ಲಾಸ್ಟಿಕ್ :** ಕಾಯಿಸಿದಾಗ ನಿಶ್ಚಿತ ಆಕಾರವನ್ನು ಪಡೆದು ತಣಿಸಿದಾಗ ಶಾಶ್ವತ ಗಡುಸುತನ ಹೊಂದುವ ಪ್ಲಾಸ್ಟಿಕ್‌ಗಳನ್ನು ಥರ್ಮೋಸೆಟಿಂಗ್ ಪ್ಲಾಸ್ಟಿಕ್‌ಗಳೆನ್ನುತ್ತೇವೆ.

   **ಉದಾ :** ಬೆಕಲೈಟ್, ಸಿಲಿಕೋನ್‌ಗಳು, ಎಪಾಕ್ಸಿ ರಾಳಗಳು.

❖ **ನಾವು ಬೇರೆ ಬೇರೆ ಸಂದರ್ಭಗಳಲ್ಲಿ ಬೇರೆ ಬೇರೆ ಪ್ಲಾಸ್ಟಿಕ್‌ಗಳನ್ನು ಬಳಸುತ್ತೇವೆ. ಅವುಗಳು ನಮ್ಮ ನಿತ್ಯಜೀವನದಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತವೆ :**

* ಥರ್ಮೋಪ್ಲಾಸ್ಟಿಕ್‌ಗಳು ಬಿಸಿಯಾಗಿದ್ದಾಗ ಬೇಕಾದ ಆಕಾರಕ್ಕೆ ಮತ್ತು ಗಾತ್ರಕ್ಕೆ ಎರಕ ಹಾಕಬಹುದು.
* ಹೆಚ್ಚಿನ ಖರ್ಚಿಲ್ಲದೆ ಹಗುರ ಹಾಗೂ ಬೇರೆ ಬೇರೆ ಬಣ್ಣಗಳಲ್ಲಿ ದೊರೆಯುತ್ತವೆ.
* ಅವುಗಳ ಬೆಲೆ ಲೋಹಗಳಿಗಿಂತ ಕಡಿಮೆ.
* ಅವುಗಳು ಗಟ್ಟಿಯಾಗಿರುತ್ತವೆ, ಬಾಳಿಕೆ ಬರುತ್ತವೆ, ತುಕ್ಕು ಹಿಡಿಯುವುದಿಲ್ಲ.
* ಅವುಗಳು ಅವಾಹಕ ವಸ್ತುಗಳು ಅಂದರೆ ಶಾಖ ಮತ್ತು ವಿದ್ಯುತ್ ವಾಹಕಗಳಲ್ಲ.
* ಅವು ಸುಲಭವಾಗಿ ಉಷ್ಣದ ಪ್ರಭಾವಕ್ಕೊಳಗಾಗುತ್ತವೆ. ಅವುಗಳ ದ್ರವನ ಬಿಂದು ಬಹಳ ಕಡಿಮೆ.
* ಪಾರದರ್ಶಕ ಪ್ಲಾಸ್ಟಿಕ್ ಲಭ್ಯ.
* ಅವುಗಳ ನಶಿಸಿಕೆ ಕಡಿಮೆ.
* ಅವುಗಳ ಭೌತಿಕ ಲಕ್ಷಣಗಳನ್ನು ಬದಲಿಸಿ ಅಗತ್ಯಕ್ಕೆ ತಕ್ಕಂತೆ ರೂಪಿಸಬಹುದು.

❖ **ಪ್ಲಾಸ್ಟಿಕ್ ಖಚಿತವಾಗಿ ನಮ್ಮ ಸ್ನೇಹಿತ, ಆದರೆ ಅವಶ್ಯಕ ಕೆಡಕು ಏಕೆಂದರೆ,**


downloaded from: www.kpscvaani.com

* ಪ್ಲಾಸ್ಟಿಕ್‌ಗಳನ್ನು ಉರಿಸುವುದರಿಂದ ವಾತಾವರಣಕ್ಕೆ ವಿಷಾನಿಲಗಳು ಸೇರ್ಪಡೆಯಾಗಿ ವಾಯು ಮಾಲಿನ್ಯ ಉಂಟಾಗುತ್ತದೆ.
* ಪರಿಸರವನ್ನು ಸಂರಕ್ಷಿಸಲು 'ಪ್ಲಾಸ್ಟಿಕ್' ಅನ್ನು ಬೇಡ ಎನ್ನಿರಿ.
* ಜೈವಿಕ ವಿಘಟನೆ ಹೊಂದಿದ ಪ್ಲಾಸ್ಟಿಕ್‌ಗಿಂತ, ಜೈವಿಕ ವಿಘಟನೆಗೆ ಒಳಪಡುವ ಪ್ಲಾಸ್ಟಿಕ್ ಬಳಸುವುದು ಉತ್ತಮ.
* ಪ್ಲಾಸ್ಟಿಕ್ ಬ್ಯಾಗ್‌ಗಳನ್ನು ಪುನರ್ ಬಳಕೆಗಾಗಿ ಶುಷ್ಕವಾಗಿ ಮತ್ತು ಸ್ವಚ್ಛವಾಗಿರಿಸಿರಿ.
* ಪ್ಲಾಸ್ಟಿಕ್‌ನಿಂದುಂಟಾಗುವ ಪರಿಸರ ಮಾಲಿನ್ಯತೆಯನ್ನು ಕಡಿಮೆ ಮಾಡಲು ಈ ಕೆಳಗಿನ ನಾಲ್ಕು ತತ್ವಗಳನ್ನು ಅನುಸರಿಸಿ ಅಲ್ಲದೆ ಅನುಷ್ಠಾನಕ್ಕೆ ತನ್ನಿ, ಕಡಿಮೆ ಮಾಡಿ(Reduce), ಪುನರ್ ಬಳಕೆ ಮಾಡಿ (Reuse), ಮರುಚಕ್ರೀಕರಣ(Recycle) & ಪುನಶ್ಚೇತನ(Recover).

## ❖ ಪ್ಲಾಸ್ಟಿಕ್ ತ್ಯಾಜ್ಯ(ಕೈ ಬಳಕೆ ಮತ್ತು ನಿರ್ವಹಣೆ) ನಿಯಮಗಳು–2011 :

ಪರಿಸರ ಮತ್ತು ಅರಣ್ಯ ಮಂತ್ರಾಲಯ, ಪುನರುತ್ಪಾದಿಸಿದ ಪ್ಲಾಸ್ಟಿಕ್(ಉತ್ಪಾದನೆ ಹಾಗೂ ಬಳಕೆ) ನಿಯಮಗಳು–1999ರ ಬದಲಾಗಿ ಪ್ಲಾಸ್ಟಿಕ್ ತ್ಯಾಜ್ಯ(ಕೈ ಬಳಕೆ ಮತ್ತು ನಿರ್ವಹಣೆ)ನಿಯಮಗಳು, 2011ನ್ನು ಜಾರಿಗೆ ತಂದಿತು. ಈ ನಿಯಮಗಳು ನಾಗರಿಕ ಸಮಾಜ, ಕೈಗಾರಿಕೆಗಳು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳನ್ನೊಳಗೊಂಡು, ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣೆಗೆ ಒಂದು ವಿಸ್ತೃತವಾದ ತಳಹದಿಯನ್ನು ಹಾಕಿಕೊಟ್ಟಿತು.

* ಪುನರುತ್ಪಾದಿಸಿದ ಪ್ಲಾಸ್ಟಿಕ್‌ನಿಂದ ತಯಾರಿಸಿದ ಪ್ಲಾಸ್ಟಿಕ್ ಕೈ ಚೀಲ, ಪಾತ್ರೆಗಳನ್ನು ದಾಸ್ತಾನು ಮಾಡಲು, ಸಾಗಿಸಲು, ಚಿಕಿತ್ಸೆಗೆ ಬಳಸಲು ಅಥವಾ ಆಹಾರದ ವಸ್ತುಗಳನ್ನು ಕಟ್ಟಿಡಲು ಬಳಸುವುದನ್ನು ನಿಷೇಧಿಸಲಾಗಿದೆ.
* ಪುನರುತ್ಪಾದಿಸಿದ ಪ್ಲಾಸ್ಟಿಕ್‌ನಿಂದ ತಯಾರಿಸಿದ ಕೈಚೀಲಗಳ ದಪ್ಪವು 40ಮೈಕ್ರಾನಗಳಿಗಿಂತ ಕಡಿಮೆಯಿರಬಾರದು.
* ಪ್ಲಾಸ್ಟಿಕ್ ಬ್ಯಾಗ್ ಮತ್ತು ಕ್ಯಾನ್‌ಗಳಲ್ಲಿ ಆಹಾರ ಸಂಗ್ರಹಿಸುವುದು ಅಪಾಯಕಾರಿ.
* ಬೇಡವಾದ ಪ್ಲಾಸ್ಟಿಕ್ ಪದಾರ್ಥಗಳ ಸಂಗ್ರಹಣೆಯು ರೋಗ ಕಾರಕಗಳ ಬೆಳವಣಿಗೆಯನ್ನು ಹೆಚ್ಚಿಸುವುದು.
* ಪ್ಲಾಸ್ಟಿಕ್‌ಗಳು ಮಣ್ಣಿನಲ್ಲಿ ನೀರಿನ ಒಸರುವಿಕೆ(ಸ್ರವಿಸುವಿಕೆ)ಯನ್ನು ಕಡಿಮೆ ಮಾಡುತ್ತದೆ ಅಲ್ಲದೆ ಅಂತರ್‌ಜಲ ಹರಿಯುವಿಕೆಗೆ ಅಡ್ಡಿಯುಂಟು ಮಾಡುತ್ತದೆ.
* ಪ್ಲಾಸ್ಟಿಕ್‌ಗಳು ಮಣ್ಣಿನಲ್ಲಿ ವಿಭಜಿಸಲು ಹೆಚ್ಚು ಕಾಲವನ್ನು ತೆಗೆದುಕೊಳ್ಳುತ್ತವೆ. ಅಲ್ಲದೆ ಇವು ಪರಿಸರ ಮಾಲಿನ್ಯವನ್ನು ಉಂಟುಮಾಡುತ್ತವೆ. ಇದು ಪರಿಸರ ಸ್ನೇಹಿಯಲ್ಲ.



downloaded from: www.kpscvaani.com

* ಅಲೆದಾಡುವ ಪ್ರಾಣಿಗಳು ಪ್ಲಾಸ್ಟಿಕ್ ಬ್ಯಾಗ್‌ನಲ್ಲಿ ಎಸೆದ ಆಹಾರಗಳನ್ನು ಸೇವಿಸುತ್ತವೆ. ಇದರಿಂದ ಅವುಗಳು ಸಾಯುವ ಸಂಭವ ಹೆಚ್ಚು.

❖ **ಪ್ಲಾಸ್ಟಿಕ್ ಬಳಕೆಯಿಂದ ಅನಾನುಕೂಲಗಳಿರುವುದರಿಂದ, ನಾವು ಪ್ಲಾಸ್ಟಿಕ್ ಬಳಸುವಾಗ ಕೆಲವು ಎಚ್ಚರಿಕೆಗಳನ್ನು ತೆಗೆದುಕೊಳ್ಳುವ ಅವಶ್ಯಕತೆ ಇದೆ. ಅವುಗಳಲ್ಲಿ ಕೆಲವು**

* ಇತ್ತೀಚಿನ ದಿನಗಳಲ್ಲಿ ಪ್ಲಾಸ್ಟಿಕ್‌ನಿಂದುಂಟಾಗುವ ಮಾಲಿನ್ಯತೆಯು ಭೂಮಂಡಲದ ಸಮಸ್ಯೆಯಾಗಿದೆ.
* ಅದಕ್ಕಾಗಿ ಕೆಲವು NGOಗಳು ಖಾಸಗಿ ಸಂಸ್ಥೆಗಳು, ಪರಿಸರವಾದಿಗಳು, ಜನರಲ್ಲಿ ಪ್ಲಾಸ್ಟಿಕ್ ಬಗ್ಗೆ ಅರಿವನ್ನುಂಟು ಮಾಡಲು ಪ್ರಯತ್ತಿಸುತ್ತಿವೆ.
* ಪ್ಲಾಸ್ಟಿಕ್ ವಸ್ತುಗಳನ್ನು ಉಪಯೋಗಿಸಿದ ನಂತರ ಎಲ್ಲೆಂದರಲ್ಲಿ ಎಸೆಯಬೇಡಿ.
* ಪ್ಲಾಸ್ಟಿಕ್ ವಸ್ತುಗಳನ್ನು ಸುಡಬೇಡಿ.
* ಶಾಪಿಂಗ್ ಸಮಯದಲ್ಲಿ ಬಟ್ಟೆ ಚೀಲ ಅಥವಾ ಗೋಣಿಚೀಲಗಳನ್ನು ಬಳಸಿ.
* ಕೈ ಚೀಲಗಳು ಸಹಜವಾದ ರೂಪ ಅಥವಾ ಬಿಳಿಯ ಬಣ್ಣದಲ್ಲಿರಬೇಕೆಂದು ಪ್ಲಾಸ್ಟಿಕ್ ಕೈಚೀಲದ ಉತ್ಪಾದಕರಿಗೆ ನಿರ್ದೇಶನ ನೀಡುವುದು.
* ಭಾರತೀಯ ಗುಣಮಟ್ಟ ಸಂಸ್ಥೆಯು ನಿರ್ಧರಿಸುವ ಮಾರ್ಗ ಸೂಚಿಗೆ ಅನುಸಾರವಾಗಿ ಮಾತ್ರ ಪ್ಲಾಸ್ಟಿಕ್ ಪುನರುತ್ಪಾದನೆ ಮಾಡಬೇಕು. ಪುನರುತ್ಪಾದಿಸಿ ಪ್ಲಾಸ್ಟಿಕ್ ಕೈ ಚೀಲಗಳ ಮೇಲೆ ಪುನರುತ್ಪಾದಿಸಿದೆ ಎಂದು ನಮೂದಿಸಬೇಕು.
* ತ್ಯಾಜ್ಯ ಆಯುವವರನ್ನು ಮೊದಲ ಬಾರಿಗೆ ಈ ನಿಯಮ ಅಂಗೀಕರಿಸಿತು. ನಗರಸಭೆಗೆ ತ್ಯಾಜ್ಯ ನಿರ್ವಹಣೆಯಲ್ಲಿ ತೊಡಗಿರುವ ಸಂಸ್ಥೆ, ತ್ಯಾಜ್ಯ ಆಯುವವರನ್ನು ನಿಭಾಯಿಸುವ ಜವಾಬ್ದಾರಿಯನ್ನು ನೀಡಿದೆ.
* ತೆರೆದ ಸ್ಥಳದಲ್ಲಿ ಮುಕ್ತವಾಗಿ ಪ್ಲಾಸ್ಟಿಕ್‌ಗಳ ದಹನವನ್ನು ನಿರ್ಬಂಧಿಸುತ್ತದೆ.

ಪ್ಲಾಸ್ಟಿಕ್ ಉತ್ಪಾದಿಸುವವರ ಸಂಘವು ತನ್ನ ಸದಸ್ಯರಲ್ಲಿ ಚರ್ಚಿಸಿ ಸ್ವಯಂ ನಿಯಂತ್ರಣಾ ಶಿಸ್ತನ್ನು ಪಾಲಿಸಲು ಪ್ರೋತ್ಸಾಹಿಸಬೇಕೆಂದು ಈ ಕಾಯ್ದೆಯ ಗೊತ್ತುವಳಿ ತಿಳಿಯಪಡಿಸುತ್ತದೆ. ರಾಜ್ಯ ಮಾಲಿನ್ಯ ನಿಯಂತ್ರಣಾ ಮಂಡಳಿಯು ಮೇಲಿನ ಕಾನೂನುಗಳನ್ನು ಅನ್ವಯಿಸುವ ಹಾಗೂ ನಿಯಂತ್ರಿಸುವ ಅಧಿಕಾರವನ್ನು ಹೊಂದಿದೆ.

❖ **ಬೆಂಗಳೂರಿನ ತ್ಯಾಜ್ಯ ನಿರ್ವಹಣೆಗೆ ಉಚ್ಚ ನ್ಯಾಯಾಲಯದ ನಿರ್ದೇಶನ :**


downloaded from: www.kpscvaani.com

ಬೆಂಗಳೂರಿನ ತ್ಯಾಜ್ಯ ನಿರ್ವಹಣೆಗೆ ಸಂಬಂಧಿಸಿದಂತೆ ಕರ್ನಾಟಕ ಉಚ್ಚ ನ್ಯಾಯಾಲಯ ಒಡೆದು ಗೆಲ್ಲುವ(Divide & Conquer) ನೀತಿಯನ್ನು ಉಪಯೋಗಿಸಲು ಸಲಹೆ ನೀಡಿದೆ. ಭಾರತದಲ್ಲಿ 3 ಹಂತಗಳ ವೈಜ್ಞಾನಿಕ ತ್ಯಾಜ್ಯ ಸಂಗ್ರಹಣೆಯಲ್ಲಿ ಬೆಂಗಳೂರು ಪ್ರಥಮ ನಗರವಾಗಿ ಹೊರಹೊಮ್ಮಿದೆ.

ತ್ಯಾಜ್ಯಗಳು ಉಂಟಾಗುವ ಮೂಲಗಳಲ್ಲಿಯೇ ಅವುಗಳನ್ನು ಸಂಗ್ರಹಿಸಲು 2 ಕಸ ಬುಟ್ಟಿ 1ಚೀಲ(2 Bin and 1Bag) ಮಾದರಿಯನ್ನು ತ್ಯಾಜ್ಯಗಳ ಪರಿಣಾಮಕಾರಿ ನಿರ್ವಹಣೆಯಲ್ಲಿ ಅಳವಡಿಸಲು ಸರ್ಕಾರಕ್ಕೆ ನಿರ್ದೇಶನ ನೀಡಿದೆ.

ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ 1976ರ ಅಡಿಯಲ್ಲಿ ತ್ಯಾಜ್ಯ ನಿರ್ವಹಣಾ ನೀತಿ ನಿಯಮಗಳನ್ನು ಪಾಲಿಸದಿದ್ದಲ್ಲಿ ದಂಡ ವಿಧಿಸುವ ನಿರ್ದೇಶನವನ್ನು ಉಚ್ಚ ನ್ಯಾಯಾಲಯ ಎತ್ತಿ ಹಿಡಿದಿದೆ. ಉಚ್ಚ ನ್ಯಾಯಾಲಯದ ಈ ತೀರ್ಪು ಘನತ್ಯಾಜ್ಯ ನಿರ್ವಹಣಾ ನಿಯಮಗಳು–2000. ಅನುಸರಣೆಯಾಗಿದ್ದು, ಕರ್ನಾಟಕ ನಗರಸಭೆ ಕಾಯ್ದೆ–1976ರ ಸೆಕ್ಷನ್ 431(ಎ)ರ ಅಡಿಯಲ್ಲಿ ನಿಯಮ ಉಲ್ಲಂಘನೆಗೆ 100 ರಿಂದ 5000ರೂ.ಗಳವರೆಗೂ ದಂಡ ತೆರಬೇಕಾಗುತ್ತದೆ.

### ❖ ಪ್ಲಾಸ್ಟಿಕ್ ಅತಿ ಬಳಕೆ ಮನುಕುಲಕ್ಕೆ ತಂದಿಟ್ಟ ಅಪಾಯ :

ಪ್ಲಾಸ್ಟಿಕ್ ಅತಿಯಾದ ಬಳಕೆ ಮಾನವನ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ. ಎಂಬುದನ್ನು ಅನೇಕ ಸಂಶೋಧನೆಗಳು ಒತ್ತಿ ಹೇಳಿವೆ. ಇದೀಗ ಬೆಂಗಳೂರು ಮೂಲದ ಕೂದಲು ಮತ್ತು ಚರ್ಮದ ಕ್ಲಿನಿಕ್ ಹೇರ್‌ಲೈನ್ ಇಂಟರ್‌ನ್ಯಾಷನಲ್ ಸಂಸ್ಥೆ ಅದಕ್ಕೆ ಮತ್ತಷ್ಟು ಪುರಾವೆಗಳನ್ನು ಒದಗಿಸಿದೆ ಪ್ಲಾಸ್ಟಿಕ್ ಕೇವಲ ಪರಿಸರಕ್ಕಷ್ಟೇ ಹಾನಿಕಾರಕವಾಗಿಲ್ಲ, ಆರೋಗ್ಯ ಸಮಸ್ಯೆಗಳನ್ನು ಸೃಷ್ಟಿಸುತ್ತದೆ ಎಂಬ ಕುರಿತು ಅರಿವು ಮೂಡಿಸಲು ಹೇರ್‌ಲೈನ್ ಇಂಟರ್‌ನ್ಯಾಷನಲ್, ಮೆರಿಸಿಸ್ ಥೆರಪಿಯಾಟಿಕ್ಸ್ ಜೊತೆ ಸೇರಿಕೊಂಡು ಪ್ಲಾಸ್ಟಿಕ್‌ನ ಹಾನಿಕಾರಕ ಅಂಶಗಳನ್ನು ಒಂದೊಂದಾಗಿ ಮುಂದಿಟ್ಟಿದೆ.

ಸಂಶೋಧನಾ ವರದಿಯನ್ನು ಹೇರ್‌ಲೈನ್ ಇಂಟರ್‌ನ್ಯಾಷನಲ್ ರಿಸರ್ಚ್ ಆಂಡ್ ಟ್ರೀಟ್‌ಮೆಂಟ್ ಸೆಂಟರ್ ನಿರ್ದೇಶಕ ಬಾಣಿ ಆನಂದ್ ಬಿಡುಗಡೆ ಮಾಡಿದರು. ಕೂದಲು ಉದುರುವ ಸಮಸ್ಯೆ ಹೊಂದಿರುವ 100 ರೋಗಿಗಳ ಮೇಲೆ 8ತಿಂಗಳ ಕಾಲ ನಡೆಸಿದ ಸಂಶೋಧನೆಯ ಫಲಿತಾಂಶ ಪ್ಲಾಸ್ಟಿಕ್‌ನ ಕರಾಳ ಮುಖವನ್ನು ತೆರೆದಿರಿಸಿತ್ತು ಎಂದು ತಿಳಿಸಿದರು. ಪ್ಲಾಸ್ಟಿಕ್ ಬಳಕೆ ತರುವ ಅಪಾಯಗಳನ್ನು ಒಂದೊಂದಾಗಿ ನೋಡಿ.......

* **ಕ್ಯಾನ್ಸರ್‌ಕಾರಕ :** ಕ್ಯಾನ್ಸರ್‌ನಂಥ ಸಮಸ್ಯೆಗೆ ಮೂಲ ಕಾರಣವೇ ಪ್ಲಾಸ್ಟಿಕ್. ಪ್ಲಾಸ್ಟಿಕ್‌ನಲ್ಲಿರುವ **'ಬಿಪಿಎ ಅಥವಾ ಬಿಸ್ಫಿನಾಲ್ ಎ'** ಮಾನವರ ದೇಹಕ್ಕೆ ವಿವಿಧ ಆಯಾಮದಲ್ಲಿ ಸೇರಿ ಮಾರಕ ರೋಗಗಳಿಗೆ ಕಾರಣವಾಗುತ್ತದೆ.



downloaded from: www.kpscvaani.com

* **ಕಾಯಿಲೆಗಳ ಕಾರ್ಖಾನೆ :** ನರ ಸಂಬಂಧಿ ಸಮಸ್ಯೆ ಥೈರಾಯ್ಡ್ ತೊಂದರೆ, ಹೆಚ್ಚಿದ ಕ್ಯಾನ್ಸರ್ ಹಾಗೂ ಟ್ಯೂಮರ್‌ನ ಅಪಾಯ, ಅಸ್ತಮಾ ಹಾಗೂ ಹೃದಯದ ಕಾಯಿಲೆಗಳು, ಲೈಂಗಿಕ ದೌರ್ಬಲ್ಯ, ಜತೆಗೆ ಕೂದಲು ಮತ್ತು ಚರ್ಮದ ಸಮಸ್ಯೆಗಳಿಗೆ ಮೂಲವೇ ಪ್ಲಾಸ್ಟಿಕ್ ಎಂದು ಮೆರಿಸಿಸ್ ಥೆರಪಿಯಾಟಿಕ್ಸ್ ನಿರ್ದೇಶಕ ಡಾ||ಕೌಶಿಕ್.ಡಿ. ದೇಬ್ ತಿಳಿಸಿದರು.
* **ಪಶುಗಳ ಪ್ರಾಣಕ್ಕೆ ಮಾರಕ :** ಎಲ್ಲೆಂದರಲ್ಲಿ ಬಿಸಾಡುವ ಆಹಾರಯುಕ್ತ ಪ್ಲಾಸ್ಟಿಕ್ ವಸ್ತುಗಳನ್ನು ಪಶುಗಳು ಭಕ್ಷಿಸುತ್ತವೆ. ಆದರೆ ಪಶುಗಳ ಹೊಟ್ಟೆ ಸೇರಿದ ಪ್ಲಾಸ್ಟಿಕ್ ಅವುಗಳ ಪ್ರಾಣವನ್ನೇ ಬಲಿ ತೆಗೆದುಕೊಂಡ ಉದಾಹರಣೆಗಳು ಇವೆ.

**ಉಪಸಂಹಾರ :** ನಾವು ಪ್ಲಾಸ್ಟಿಕ್ ಬಳಕೆಯನ್ನು ನಿಲ್ಲಿಸಲು ಪಣ ತೊಡಬೇಕಾಗಿದೆ. ಅಡುಗೆ ಮನೆಯ ಸಾಮಗ್ರಿಗಳು ಪ್ಲಾಸ್ಟಿಕ್‌ಮಯವಾಗುತ್ತಿವೆ. ಮಾರುಕಟ್ಟೆಗೆ ತೆರಳಿದಾಗಲೂ ಪ್ಲಾಸ್ಟಿಕ್ ಕವರ್‌ನ್ನೇ ನೆಚ್ಚಿಕೊಂಡಿದ್ದೇವೆ. ಇದೆಲ್ಲದರ ಬದಲಾಗಿ ಪರ್ಯಾಯ ಮಾರ್ಗ ಅನುಸರಿಸಿದರೆ ಪರಿಸರ ಸಂರಕ್ಷಣೆ ಮತ್ತು ಉತ್ತಮ ಆರೋಗ್ಯ ಕಾಪಾಡಿಕೊಳ್ಳಲು ಸಾಧ್ಯ.

**"ಜನರೇ ಪ್ಲಾಸ್ಟಿಕ್ ತ್ಯಜಿಸದ ಹೊರತು ಬಳಕೆ ನಿಲ್ಲಿಸಲು ಸಾಧ್ಯವಿಲ್ಲ"**

## ಪ್ರಬಂಧ 19 : 2017ರ 4 ಮಹತ್ತರ ಸಂಶೋಧನೆಗಳು

ಪ್ರತಿ ವರ್ಷ ಹೊಸ ಪ್ರಯೋಗಗಳು ಸಂಶೋಧನೆಗಳು ನಡೆಯುತ್ತಿರುತ್ತವೆ, ಆದರೆ, ಅವುಗಳಲ್ಲಿ ಅನೇಕ ಪ್ರಯತ್ನಗಳು ಯಶಸ್ವಿಯಾಗುವುದಿಲ್ಲ. ವಿಜ್ಞಾನ–ತಂತ್ರಜ್ಞಾನ ಲೋಕಕ್ಕೆ ಹೊಸ ಆಯಾಮ ನೀಡುವ ಪ್ರಯೋಗಗಳು ಯಶಸ್ವಿಯಾಗಿ ನಡೆಯುತ್ತಿವೆ. 2017ರಲ್ಲಿ ನಡೆದ ಈ ನಾಲ್ಕು ಪ್ರಯೋಗಗಳು ಅಂತವು. ಭವಿಷ್ಯರ ಜನಾಂಗಕ್ಕೆ ನೆರವಾಗುವಂತಹ ಈ ಮಹತ್ತರ ಸಂಶೋಧನೆಗಳ ಮಾಹಿತಿ ಇಲ್ಲಿದೆ.

**ಕ್ವಾಂಟಂ ಜಾಲ :** ಪ್ರಸ್ತುತ ನಾವು ಬಳಸುತ್ತಿರುವ ಅಂತರ್ಜಾಲ ಸೇವೆಗಳು ರೇಡಿಯೊ ತರಂಗಗಳ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿವೆ. ಈ ತರಂಗಗಳು ವಿಶ್ವದ ಮೂಲೆ ಮೂಲೆಯಲ್ಲಿ ನಡೆಯುವ ಘಟನೆಗಳು, ಮಾಹಿತಿಯನ್ನು ವಿವಿಧ ಮಾಧ್ಯಮಗಳ ಮೂಲಕ ನಮಗೆ ತಿಳಿಸುತ್ತವೆ.

ರೇಡಿಯೊ ತರಂಗಳ ಬದಲಿಗೆ, ಕ್ವಾಂಟಂ ತರಂಗಗಳ ಮೂಲಕ ಮಾಹಿತಿಯನ್ನು ರಾವಾನಿಸಿದರೆ, ಯಾವ ರೀತಿ ಉಪಯೋಗ ಆಗಬಹುದು ಎಂಬ ಆಲೋಚನೆ ಚೀನಾದ ಸಂಶೋಧಕರಿಗೆ ಬಂತು. ಈ ದಿಸೆಯಲ್ಲಿ ಮಾಡಿದ ಪ್ರಯೋಗಗಳೂ ಯಶಸ್ವಿಯಾದವು. ಉಪಗ್ರಹ ಸಹಾಯದಿಂದ ಕ್ವಾಂಟಂ ಕಮ್ಯೂನಿಕೇಷನ್ ಮೂಲಕ ವೀಡಿಯೊ ಕರೆಗಳನ್ನು ಮಾಡುವ ಸೌಲಭ್ಯ ಸಿಗುತ್ತದೆ.

ಈ ಕ್ವಾಂಟಂ ತಂತ್ರಜ್ಞಾನವನ್ನು ಅಂತರ್ಜಾಲದಲ್ಲಿ ಬಳಸಿದ್ದು, ತಂತ್ರಜ್ಞಾನ ಕ್ಷೇತ್ರದಲ್ಲಿ ಹೊಸ ಮೈಲುಗಳು ಆಗಿದೆ. ರೇಡಿಯೊ ತರಂಗ ತಂತ್ರಜ್ಞಾನಕ್ಕೂ ಕ್ವಾಂಟಂ ತಂತ್ರಜ್ಞಾನಕ್ಕೂ ದೊಡ್ಡ ವ್ಯತ್ಯಾಸಗಳೇನೂ


downloaded from: www.kpscvaani.com

ಇರುವುದಿಲ್ಲ, ಆದರೆ ವೇಗ ಹೆಚ್ಚು. ಕ್ವಾಂಟಂ ತಂತ್ರಜ್ಞಾನದ ಮೂಲಕ ಅಂತರ್ಜಾಲ ಬಳಸಿದರೆ ಕನ್ನ ಹಾಕುವ ಸಾಧ್ಯತೆ ತೀರಾ ಕಡಿಮೆ ಎಂದು ಸಂಶೋಧಕರ ತಂಡ ತಿಳಿಸಿತ್ತು.

ಈ ಕ್ವಾಂಟಂ ಅಂತರ್ಜಾಲದಲ್ಲಿ ವಿನಿಮಯವಾಗುವ ಯಾವುದೇ ಮಾಹಿತಿ ಮೂರನೇ ಕಣ್ಣಿಗೆ ಬೀಳುವುದು ತುಂಬಾ ಕಷ್ಟ ಎಂದು ಹೇಳಿತ್ತು. ಒಂದು ವೇಳೆ, ಶತ ಪ್ರಯತ್ನ ಮಾಡಿ ಕನ್ನ ಹಾಕಿದರೂ ಕಂಪ್ಯೂಟರ್ ಸ್ಥಗಿತಗೊಳ್ಳುತ್ತದೆ(ಕ್ರಾಷ್). ಕನ್ನ ಹಾಕುವವರನ್ನು ಪತ್ತೆ ಹಚ್ಚುವುದು ಸುಲಭ.

**ರಾಕೆಟ್ ಪುನರ್ ಬಳಕೆ :** ಕಕ್ಷೆಗೆ ಉಪಗ್ರಹಗಳನ್ನು, ಬಾಹ್ಯಾಕಾಶ ನೌಕೆಗಳನ್ನು ತೇಲಿಬಿಡುವ ರಾಕೆಟ್‌ಗಳು ಕೆಲಸ ಮುಗಿದ ನಂತರ ತುಂಡು ತುಂಡಾಗಿ ಬೇರ್ಪಟ್ಟು ಅಂತರಿಕ್ಷದಲ್ಲಿ ಕಸದಂತೆ ಹರಡಿಕೊಳ್ಳುತ್ತವೆ. ಅಲ್ಲೇ ಸುತ್ತುತ್ತಿರುತ್ತವೆ. ಈ ರೀತಿ ಆಗದಂತೆ, ಅಂತರಿಕ್ಷದಲ್ಲಿ ತ್ಯಾಜ್ಯ ಉಳಿಯದಂತೆ ನೋಡಿಕೊಳ್ಳಬೇಕು. ಪುನರ್ ಬಳಕೆ ಮಾಡಬಹುದಾದ ರಾಕೆಟ್‌ಗಳನ್ನು ತಯಾರಿಸುವುದು ಅನಿವಾರ್ಯ ಇದರಿಂದ ಶೇ.30ರಷ್ಟು ಹಣ ಉಳಿತಾಯವೂ ಆಗುತ್ತದೆ. ಅತಿ ಕಡಿಮೆ ಖರ್ಚಿನಲ್ಲಿ ಅಂತರಿಕ್ಷ ಪ್ರಯೋಗಗಳನ್ನು ನಡೆಸುವ ಭಾರತದಂತಹ ರಾಷ್ಟ್ರಗಳಿಗೆ ಇದು ಹೆಚ್ಚು ನೆರವಾಗಲಿದೆ. ಇದಷ್ಟೇ ಅಲ್ಲ, ಕಡಿಮೆ ಖರ್ಚಿನಲ್ಲಿ ಮಾನವರೂ ಚಂದ್ರಗ್ರಹಕ್ಕೆ, ಅಂತರಿಕ್ಷಕ್ಕೆ ಹೋಗಿ ಬರಬಹುದು.

ಅಂತರಿಕ್ಷ ಪ್ರಯೋಗಗಳಲ್ಲಿ ಹೊಸ ಆಲೋಚನೆಗಳನ್ನು ವಿಶ್ವದ ಮುಂದೆ ಇಡುತ್ತಿರುವ 'ಸ್ಪೇಸ್ ಎಕ್ಸ್' ಸಂಸ್ಥೆ ಈ ಪ್ರಯೋಗಗಳನ್ನು ಮಾಡುತ್ತಿದೆ. ಈ ಹಿಂದೆ ಪ್ರಯೋಗಕ್ಕೆ ಬಳಸಿದ್ದ 'ಫಾಲ್ಕನ್-9' ರಾಕೆಟ್ ಬೂಸ್ಟರ್ ಅನ್ನು ಮತ್ತೆ 2017ರಲ್ಲಿ ಬಳಸಿತ್ತು. ಒಮ್ಮೆ ಬಳಸಿದ ರಾಕೆಟ್ ಅನ್ನು ಮತ್ತೇ ನಭಕ್ಕೆ ಹಾರಿಸಿದ್ದು ಇದೇ ಮೊದಲ ಬಾರಿ ಎಂದು ಸಂಸ್ಥೆಯ ವ್ಯವಸ್ಥಾಪಕ ಎಲನ್ ಮಸ್ಕನ್ ತಿಳಿಸಿದ್ದರು.

**ಕೃತಕ ಗರ್ಭಚೀಲ :** ಒಂಬತ್ತು ತಿಂಗಳು ತುಂಬುವುದಕ್ಕೂ ಮೊದಲೇ ಮಗು ಹುಟ್ಟಿದರೆ ಇನ್‌ಕ್ಯೂಬೇಟರ್‌ನಲ್ಲಿ ಇಟ್ಟು ಬದುಕಿಸುತ್ತಿದ್ದೇವೆ. ಅದರಲ್ಲೂ ಆರು ಅಥವಾ ಏಳು ತಿಂಗಳಲ್ಲಿ ಹುಟ್ಟಿದ ಮಗು ಬದುಕಬೇಕಾದರೆ ಸಾಕಷ್ಟು ಪ್ರತಿಕೂಲತೆಗಳನ್ನು ಎದುರಿಸಬೇಕಾಗುತ್ತದೆ. ಹೆಚ್ಚು ಶಿಶುಮರಣ ಪ್ರಮಾಣವೂ ಈ ಹಂತದಲ್ಲೇ ಆಗುತ್ತದೆ. ಈ ಸಮಸ್ಯೆಗೆ ಸೂಕ್ತ ಪರಿಹಾರವೆಂಬಂತೆ ತಾಯಿ ಗರ್ಭಚೀಲದಂತೆ ಕೃತಕ ಗರ್ಭಚೀಲವನ್ನು ಅಮೇರಿಕದ ಫಿಲಿಡೆಲ್ಫಿಯಾದಲ್ಲಿರುವ ಮಕ್ಕಳ ಆಸ್ಪತ್ರೆಯೊಂದರ ವೈದ್ಯರು ತಯಾರಿಸಿ ವೈದ್ಯಕೀಯ ವಿಜ್ಞಾನಕ್ಕೆ ಹೊಸ ಆಯಾಮ ನೀಡಿದ್ದಾರೆ.

ಜೀವಚೀಲ(ಬಯೋಬ್ಯಾಗ್) ಎಂದು ಕರೆಯುವ ಈ ಚೀಲದಲ್ಲಿ ಮಕ್ಕಳು ತಾಯಿ ಹೊಟ್ಟೆಯಲ್ಲಿ ಇರುವ ರೀತಿಯಲ್ಲೇ ಸುರಕ್ಷಿತವಾಗಿ ಇರಲು ವಿಶೇಷ ದ್ರಾವಣವೊಂದನ್ನು ಇಡಲಾಗಿರುತ್ತದೆ.

ಪ್ರಯೋಗಾರ್ಥವಾಗಿ 105 ದಿನ ಬೆಳವಣಿಗೆ ಆಗಿರುವ ಕುರಿಮರಿಯನ್ನು ಇಡಲಾಗಿತ್ತು. ದರ ಬೆಳವಣಿಗೆಯೂ ಆರೋಗ್ಯಕರವಾಗಿತ್ತು. 105 ದಿನದ ಕುರಿಮರಿ ಎಂದರೆ, 22ವಾರದ ಮಾನವ ಶಿಶುಗೆ ಸಮಾನ. ಈ ಪ್ರಯೋಗವನ್ನು ಮಾನವ ಶಿಶುಗಳ ಮೇಲೂ ನಡೆಸಲು ಪ್ರಯತ್ನಿಸಲಾಗುತ್ತಿದೆ. ಈ ಪ್ರಯೋಗ ಯಶಸ್ವಿಯಾದರೆ ಆರು-ಏಳು ತಿಂಗಳಿಗಿಂತ ಮುಂಚೆ ಹುಟ್ಟುವ ಮಗುವನ್ನು ಸುರಕ್ಷಿತವಾಗಿ ಬೆಳಸಬಹುದು.

**ಕ್ಯಾನ್ಸರ್‌ಗೆ ಕತ್ತರಿ ಹಾಕಿ :** ಮಧುಮೇಹ, ರಕ್ತದೊತ್ತಡ ಹಾಗೂ ಕೆಲವು ರೀತಿಯ 'ಕ್ಯಾನ್ಸರ್‌ಗಳು ಅನುವಂಶಿಕವಾಗಿ ಬರುತ್ತವೆ ಎಂಬುದು ಪ್ರಯೋಗಗಳ ಮೂಲಕ ಸಾಬೀತಾಗಿದೆ. ಅವು ಒಂದು



downloaded from: www.kpscvaani.com

ತಲೆಮಾರಿನಿಂದ ಮತ್ತೊಂದು ತಲೆಮಾರಿಗೆ ಹರಡದಂತೆ ನೋಡಿಕೊಳ್ಳಬೇಕು ಎಂದರೆ ತಾಯಿಯ ಅಂಡಾಶಯದಲ್ಲೇ(ಭ್ರೂಣ) ಗುರುತಿಸಬೇಕು. ದೋಷಪೂರಿತ ಜೀವಕಣಗಳನ್ನು(ಡಿಎನ್ಎ) ಗುರುತಿಸಿ, ತೊಲಗಿಸಿದರೆ ಸಂಪೂರ್ಣ ಆರೋಗ್ಯವಂತ ವ್ಯಕ್ತಿಗೆ ಜನ್ಮ ನೀಡಬಹುದು.

ಅಮೇರಿಕಾದ ಅರೆಗಾನ್ ಹೆಲ್ತ್ ಸೆಂಟರ್ ವಿಶ್ವವಿದ್ಯಾಲಯ ಸಂಶೋಧಕರು ಈ ದಿಸೆಯಲ್ಲಿ ಪ್ರಯೋಗಗಳನ್ನು ನಡೆಸಿದರು. ಒಂದು ಕಣ ಏರ್ಪ ನಡೆಸಿದರು. ಒಂದು ಕಣ ಜೀವ ಕಣವನ್ನು(ದೋಷಪೂರಿತ ಡಿಎನ್ಎ) ಎಡಿಟ್(ಸಂಕಲನ) ಮಾಡಿದ್ದಾರೆ. ಅದರಲ್ಲಿರುವ ದೋಷಗಳನ್ನು, ರೋಗಗಳನ್ನು ನಿವಾರಿಸುವಲ್ಲಿ ಯಶಸ್ವಿಯಾಗಿದ್ದರು.

ಅಂಡಾಶಯದಲ್ಲಿರುವ ಜೀವಕಣ ಒಂದು ದೊಡ್ಡ ಕಲ್ಲು ಬಂಡೆ ಎಂದುಕೊಂಡರೆ, ಅನಗತ್ಯ ಭಾಗಗಳನ್ನು ತೊಲಗಿಸಿ ಸುಂದರವಾದ ಶಿಲ್ಪವನ್ನು ಕೆತ್ತಿದಂತೆ, ಜೀವ ಕಣಗಳ ಸಂಕಲನ ಮಾಡಿದ್ದಾರೆ. ಈ ಕಾರ್ಯಕ್ಕೆ ಹೊಸ ರೀತಿಯ ಉಳಿಯೊಂದು ನೆರವಾಗಿದೆ. ಅದರ ಹೆಸರು 'ಕ್ರಿಸ್ಪರ್' ಇದನ್ನು 2014ರಲ್ಲಿ ತಯಾರಿಸಿದರೂ 2017ರಲ್ಲಿ ಮಾನವ ಶರೀರದ ಮೇಲೆ ಯಶಸ್ವಿಯಾಗಿ ಪ್ರಯೋಗ ಮಾಡಲಾಗಿದೆ.

## ಪ್ರಬಂಧ 20 : ಕರ್ನಾಟಕಕ್ಕೊಂದು ಪ್ರತ್ಯೇಕ ನಾಡ ಧ್ವಜ

**"ಏರಿಸು ಹಾರಿಸು ಕನ್ನಡದ ಬಾವುಟ"**

**- ಬಿ. ಎಮ್. ಶ್ರೀಕಂಠಯ್ಯ**

ಧ್ವಜ ಎಂದಾಗ ಎಂತಹ ವ್ಯಕ್ತಿಗಾದರೂ ಹೃದಯದಲ್ಲಿ ಪ್ರೇಮಾಂಕುರವಾಗುತ್ತದೆ. ಅದು ರಾಷ್ಟ್ರ ಪ್ರೇಮವಾಗಿರಬಹುದು ಅಥವಾ ನಾಡ ಪ್ರೇಮವಾಗಿರಬಹುದು. ಧ್ವಜದ ಅಸ್ತಿತ್ವ ಇಂದು ನೆನ್ನೆಯದಲ್ಲ, ಮಹಾಭಾರತದ ಪುರಾಣದಲ್ಲಿ ನಾವು ಧ್ವಜದ ಬಗ್ಗೆ ಕೇಳಿದ್ದೇವೆ, ಇತಿಹಾಸದಲ್ಲಿ ಧ್ವಜವು ರಾಜ ಮನೆತನದ ಪ್ರತಿಷ್ಠೆಯಾಗಿತ್ತು ಎಂಬುವುದನ್ನು ಓದಿದ್ದೇವೆ. ಇಂದು ರಾಜಕೀಯ ಪಕ್ಷದ ಧ್ವಜಕ್ಕಾಗಿ ರಕ್ತ ಚೆಲ್ಲಿರುವುದನ್ನು ನೋಡಿದ್ದೇವೆ. ಆದರೆ ಒಂದಂತೂ ಸತ್ಯ, ಅಭಿಮಾನ ಮತ್ತು ಪ್ರೀತಿ ಎರಡನ್ನೂ ಕಂಡುಕೊಳ್ಳುವ ಶಕ್ತಿ ಈ ಧ್ವಜಕ್ಕಿದೆ. "ಏರಿಸು ಹಾರಿಸು ಕನ್ನಡದ ಬಾವುಟ" ವೆಂಬ ಬಿ. ಎಮ್. ಶ್ರೀಕಂಠಯ್ಯನವರು ಬರೆದ ಹಾಡು ಕರ್ನಾಟಕ ಏಕೀಕರಣದ ಸಂದರ್ಭದಲ್ಲಿ ಕನ್ನಡಿಗರ ಭಾವನಾತ್ಮಕ ಐಕ್ಯತೆಗೆ ಹಾಗೂ ಭಾಷಾಭಿಮಾನ ಮೂಡಿಸಿ ಏಕೀಕರಣಕ್ಕೆ ಅಣಿಗೊಳ್ಳಲು ಸಹಕಾರಿಯಾಗಿತ್ತು.

ಸಂವಿಧಾನಾತ್ಮಕವಾಗಿ ನಮಗೆ ಯಾವುದೇ ಅಧಿಕೃತ ನಾಡಧ್ವಜವಿಲ್ಲದಿದ್ದರೂ ಸಹ, ಕೆಂಪು ಮತ್ತು ಹಳದಿ ಬಣ್ಣದ ಧ್ವಜವು ಹಲವು ದಶಕಗಳಿಂದಲೂ ಕನ್ನಡಿಗರ ರಕ್ತ ಕಣ ಕಣದಲ್ಲೂ ಕನ್ನಡನಾಡಿನ ಸ್ವಾಭಿಮಾನದ ಸಂಕೇತವಾಗಿ ಅಧಿಕೃತ ಸ್ಥಾನವನ್ನು ಪಡೆದಿತ್ತು. ಈ ರೀತಿಯಾಗಿ ಕನ್ನಡಿಗರ ಹೃದಯದಲ್ಲಿ ಗಟ್ಟಿಯಾಗಿ ಬೇರು ಬಿಟ್ಟಿರುವ ಕೆಂಪು ಮತ್ತು ಹಳದಿ ಬಣ್ಣದ ಬಾವುಟಕ್ಕೆ ರಾಜ್ಯದ ಅಧಿಕೃತ ಬಾವುಟದ ಸ್ಥಾನಮಾನ ನೀಡಲು ಕೆಲವು ಕನ್ನಡಪರ ಒಕ್ಕೂಟಗಳು 2009ರಲ್ಲಿ ಒತ್ತಾಯಿಸಿದ್ದರು. ಆದರೆ ಅಂದಿನ ಮುಖ್ಯಮಂತ್ರಿಯಾಗಿದ್ದ ಯಡಿಯೂರಪ್ಪನವರು ಇದು ರಾಷ್ಟ್ರದ ಏಕತೆಗೆ ಧಕ್ಕೆ ತರುತ್ತದೆ ಎನ್ನುವ ನೆಪ



downloaded from: www.kpscvaani.com

ಹೇಳಿ ಆ ಪ್ರಸ್ತಾವನೆಯನ್ನು ತಿರಸ್ಕರಿಸಿದ್ದರು. ಅಲ್ಲಿಂದ ಶುರುವಾಗಿದ್ದ ಪ್ರತ್ಯೇಕ ನಾಡ ಧ್ವಜದ ಬೇಡಿಕೆಗೆ ನಂತರ ಸದಾನಂದ ಗೌಡರು ಸ್ಪಂದಿಸಿದ್ದರೂ ಸಹ ಸಂವಿಧಾನತ್ಮಕವಾಗಿ ಅದನ್ನು ಅಧಿಕೃತಗೊಳಿಸಲು ಪ್ರಯತ್ನ ಪಡಲಿಲ್ಲ. ನಂತರ ಸಿದ್ದರಾಮಯ್ಯನವರ ನೇತೃತ್ವದ ಸರ್ಕಾರ ಪ್ರತ್ಯೇಕ ನಾಡಧ್ವಜ ಹೊಂದಲು ಇರುವ ಸಾಂವಿಧಾನಿಕ ಅಡೆತಡೆಗಳನ್ನು ಮತ್ತು ಅವಕಾಶಗಳನ್ನು ಅಧ್ಯಯನ ಮಾಡಿ ಪ್ರತ್ಯೇಕ ನಾಡಧ್ವಜ ಶಿಪಾರಸ್ಸು ಮಾಡಲು 9 ಜನರ ಸಮಿತಿಯನ್ನು ರಚಿಸಿತ್ತು. ಸಮಿತಿ ನೀಡಿದ ವರದಿ ಮತ್ತು ಶಿಪಾರಸ್ಸು ಮಾಡಿರುವ ಧ್ವಜವನ್ನು ರಾಜ್ಯ ಸರ್ಕಾರ ಒಪ್ಪಿಕೊಂಡಿದ್ದು ಇದನ್ನು ಕೇಂದ್ರ ಗೃಹ ಇಲಾಖೆಗೆ ಕಳುಹಿಸಿದೆ. ಪ್ರಸ್ತುತ ನಾಡಧ್ವಜದ ಚೆಂಡು ಕೇಂದ್ರ ಗೃಹ ಇಲಾಖೆಯ ಅಂಗಳದಲ್ಲಿದೆ.

**ಕನ್ನಡ ಬಾವುಟದ ಹುಟ್ಟು :** 1966 ರ ವರೆಗೂ ಕನ್ನಡಕ್ಕೆ ಯಾವುದೇ ಬಾವುಟವಿರಲಿಲ್ಲ. ಇಂದು ಕನ್ನಡಿಗರ ಸ್ಫೂರ್ತಿಯಾಗಿರುವ ಈ ಬಾವುಟದ ಕೀರ್ತಿ " ರಾಮಮೂರ್ತಿ"ರವರಿಗೆ ಸಲ್ಲುತ್ತದೆ. ಸ್ವಾತಂತ್ರ್ಯ ಹೋರಾಟಗಾರ ಮತ್ತು ಸಾಹಿತಿಯಾಗಿದ್ದಂತಹ "ಶ್ರೀ ವೀರಕೇಸರಿ ಸೀತಾರಾಮಾಶಾಸ್ತ್ರಿ" ರವರ ಮಗ ಪತ್ರಕರ್ತ ಆಗಿನ "ಯುವಜನ" ಪತ್ರಿಕೆಯ ಸಂಪಾದಕರಾಗಿದ್ದ ರಾಮಮೂರ್ತಿಯವರು [ನಂಜನಗೂಡಿನವರು] 1965 ರಲ್ಲಿ ಪ್ರಾರಂಭಿಸಿದ ರಾಜಕೀಯ ಪಕ್ಷವಾದ "ಕನ್ನಡ ಪಕ್ಷ"ಕ್ಕಾಗಿ ವಿನ್ಯಾಸ ಮಾಡಿದ ಹಳದಿ ಮತ್ತು ಕೆಂಪು ಬಣ್ಣದ ಧ್ವಜವು ನಂತರ ಕನ್ನಡಿಗರ ರಕ್ತದ ಕಣ ಕಣದಲ್ಲೂ ಸ್ವಾಭಿಮಾನದ ಸಂಕೇತವಾಗಿ ಭದ್ರವಾಗಿ ನೆಲೆಯೂರಿತು.

ಹೀಗೆ ಹಲವು ದಶಕಗಳ ಕಾಲ ಕನ್ನಡಿಗರ ಆತ್ಮಾಭಿಮಾದ ಸಂಕೇತವಾಗಿದ್ದ ಹಳದಿ ಕೆಂಪು ಬಣ್ಣದ ಧ್ವಜಕ್ಕೆ ಶಾಸನಾತ್ಮಕ ಸ್ಥಾನಮಾನ ಬೇಡಿಕೆ ಆರಂಭವಾಗಿದ್ದು ಮೊದಲು 2006 ರಲ್ಲಿ. 2006ರಲ್ಲಿ ಬೆಳಗಾವಿ ಪಾಲಿಕೆಯ ಮೇಲೆ ಎಮ್.ಇ.ಎಸ್‌ನವರು ಕೇಸರಿ ಧ್ವಜ ಹಾರಿಸಿದ್ದರ ಪರಿಣಾಮ, ಉಂಟಾಗಿದ್ದ ಗಲಾಟೆ ಪ್ರತ್ಯೇಕ ನಾಡಧ್ವಜ ಬೇಡಿಕೆಗೆ ಬೀಜಾಂಕುರವಾಯಿತು. ಅಲ್ಲಿಂದ ಪ್ರಾರಂಭವಾಗಿದ್ದ ಬೇಡಿಕೆಗೆ 2012 ರಲ್ಲಿ ಸಕಾರಾತ್ಮಕವಾಗಿ ಸ್ಪಂದಿಸಿದ್ದ ಅಂದಿನ ಮುಖ್ಯಮಂತ್ರಿ ಸದಾನಂದ ಗೌಡರು ಬಜೆಟ್ ಅಧಿವೇಶನದಲ್ಲಿ ರಾಜ್ಯೋತ್ಸವದ ದಿನದಂದು ಎಲ್ಲಾ ಸರ್ಕಾರಿ ಕಛೇರಿ ಮತ್ತು ಶಾಲಾ ಕಾಲೇಜುಗಳಲ್ಲಿ ನಾಡಧ್ವಜ ಹಾರಿಸುವುದನ್ನು ಕಡ್ಡಾಯ ಮಾಡುವುದಾಗಿ ಹೇಳಿದ್ದರು. ಈ ಪ್ರಕರಣ ಹೈಕೋರ್ಟ್ ಮೆಟ್ಟಿಲೇರಿತು. ಪ್ರತ್ಯೇಕ ನಾಡಧ್ವಜ ಹೊಂದಲು ಕಾನೂನಿನಲ್ಲಿ ಅವಕಾಶವಿಲ್ಲ ಎಂದು ಹೈಕೋರ್ಟ್ ರಾಜ್ಯ ಸರ್ಕಾರದ ವಾದವನ್ನು ತಳ್ಳಿಹಾಕಿತ್ತು.

2014 ರಲ್ಲಿ ಸಾಹಿತಿ ಮತ್ತು ಹಿರಿಯ ಪತ್ರಕರ್ತರು, ಕನ್ನಡ ಪರ ಹೋರಾಟಗಾರರೂ ಆಗಿದ್ದ, ಪಾಟೀಲ್ ಪುಟ್ಟಪ್ಪನವರು ಕರ್ನಾಟಕ ರಾಜ್ಯಕ್ಕೆ ಪ್ರತ್ಯೇಕ ನಾಡಧ್ವಜಕ್ಕೆ ಶಾಸನಬದ್ದ ಬೇಡಿಕೆಗಾಗಿ ಹೋರಾಟ ನಡೆಸಿದರು. ಸರ್ಕಾರಕ್ಕೆ ಲಿಖಿತ ಮನವಿ ಮಾಡಿಕೊಂಡಿದ್ದರು. ಮನವಿಯನ್ನು ಪುರಷ್ಕರಿಸಿದ ಅಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಪ್ರಧಾನ ಕಾರ್ಯದರ್ಶಿ ನೇತೃತ್ವದಲ್ಲಿ ಧ್ವಜ ಪರಿಶೀಲನೆಯ ಸಮಿತಿಯು ನೇಮಕಮಾಡಿದರು.



downloaded from: www.kpscvaani.com

**ಹೊಸ ನಾಡಧ್ವಜ** : ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರಧಾನ ಕಾರ್ಯದರ್ಶಿ ಸುಭಾಷ್‌ಚಂದ್ರ ಕುಂತಿಯಾ ನೇತೃತ್ವದಲ್ಲಿ ರಚಿಸಿದ್ದ ಧ್ವಜ ಪರಿಶೀಲನ ಸಮಿತಿಯು ಹೊಸ ನಾಡಧ್ವಜವನ್ನು ವಿನ್ಯಾಸಗೊಳಿಸಿದೆ. ಇದನ್ನು ರಾಜ್ಯ ಸರ್ಕಾರ ಒಪ್ಪಿಕೊಂಡಿದೆ. ಆದರೆ ಅದನ್ನು ಶಾಸನಬದ್ಧಗೊಳಿಸುವ ಅಧಿಕಾರ ರಾಜ್ಯ ಸರ್ಕಾರಕ್ಕೆ ಇಲ್ಲದ ಕಾರಣ ಅದನ್ನು ಕೇಂದ್ರ ಗೃಹ ಇಲಾಖೆಗೆ ಪತ್ರ ಬರೆದಿದೆ. ಹೊಸ ನಾಡಧ್ವಜವು ಹಳದಿ, ಬಿಳಿ ಮತ್ತು ಕೆಂಪು ಬಣ್ಣದಿಂದ ಕೂಡಿದ್ದು ಮಧ್ಯದಲ್ಲಿ ರಾಜ್ಯದ ಲಾಂಛನ ಗಂಡಬೇರುಂಡವನ್ನು ಒಳಗೊಂಡಿದೆ.

**ಸಂವಿಧಾನವು ಏನು ಹೇಳುತ್ತದೆ** : ರಾಷ್ಟ್ರ ಧ್ವಜಕ್ಕೆ ಪ್ರತ್ಯೇಕ ಧ್ವಜ ಸಂಹಿತೆ ಇದೆ. ರಾಷ್ಟ್ರೀಯ ಧ್ವಜ ಸಂಹಿತೆ 2002ರಲ್ಲಿ ರಾಷ್ಟ್ರಧ್ವಜವನ್ನು ಹೇಗೆ ಆರೋಹಣ ಮಾಡಬೇಕೆಂದು ಸೂಚಿಸಲಾಗಿದೆ. ರಾಜ್ಯ ಧ್ವಜ ಮತ್ತು ನಾಡ ಧ್ವಜಗಳ ಬಗ್ಗೆ ಇದರಲ್ಲಿ ಉಲ್ಲೇಖವಿಲ್ಲ. ಆದರೆ ರಾಷ್ಟ್ರ ಧ್ವಜ ದೇಶದ ಸಾರ್ವಭೌಮಕ್ಕೆ ಮತ್ತೊಂದು ಪರ್ಯಾಯ ಸಾರ್ವಭೌಮ ಇರಬಾರದು ಎನ್ನುವ ಕಾರಣಕ್ಕೆ ರಾಷ್ಟ್ರಧ್ವಜಕ್ಕೆ ಸರಿಸಮಾನವಾಗಿ ಅಥವಾ ಅದಕ್ಕಿಂತ ಮೇಲೆ ಮತ್ತೊಂದು ಧ್ವಜ ಹಾರಿಸಬಾರದು.

ಆದರೆ ರಾಷ್ಟ್ರ ಧ್ವಜದ ಕೆಳಗೆ ನಾಡಧ್ವಜ ಹಾರಿಸಲು ಯಾವುದೇ ಅಡ್ಡಿ ಇರುವುದಿಲ್ಲ. ಆದರೆ ನಾಡಧ್ವಜವನ್ನು ಕೇಂದ್ರ ಸರ್ಕಾರದ ಕಟ್ಟಡಗಳ ಮೇಲೆ ಹಾರಿಸಲು ಒತ್ತಾಯಿಸುವಂತಿಲ್ಲ.

1. ಪ್ರತ್ಯೇಕ ನಾಡಧ್ವಜ ಬಳಕೆ ಮಾಡದಂತೆ ಯಾವುದೇ ಅಂಶಗಳು ಸಂವಿಧಾನದಲ್ಲಿ ಕಾಣಸಿಗುವುದಿಲ್ಲ.
2. ಇಂತಹ ವಿಚಾರದಲ್ಲಿ ರಾಜ್ಯವನ್ನು ನಿರ್ಬಂಧಿಸುವಂತಹ ಅಂಶವು ಸಂವಿಧಾನದಲ್ಲಿ ಇಲ್ಲ.
3. ಪ್ರತ್ಯೇಕ ನಾಡಧ್ವಜವನ್ನು ಹೊಂದಲು ರಾಜ್ಯಗಳನ್ನು ನಿರ್ಬಂಧಿಸಿಲ್ಲ.

**ಪರ ವಾದ :**

1. ವಿವಿಧತೆಯಲ್ಲಿ ಏಕತೆಯನ್ನು ಹೊಂದಿರುವ ರಾಷ್ಟ್ರ ನಮ್ಮದು ಹಾಗಾಗಿ ಪ್ರತ್ಯೇಕ ನಾಡಧ್ವಜ ರಾಷ್ಟ್ರದ ಏಕತೆ ಮತ್ತು ಸಮಗ್ರತೆಗೆ ಧಕ್ಕೆಯಾಗುವುದಿಲ್ಲ.
2. ಇತಿಹಾಸದ ಪುಟಗಳನ್ನು ತೆಗೆದು ನೋಡಿದಾಗ ಕನ್ನಡಿಗರ ದೇಶಾಭಿಮಾನ, ಸಾಹಸ, ತ್ಯಾಗ ತಿಳಿಯುತ್ತದೆ.
3. ಒಕ್ಕೂಟ ವ್ಯವಸ್ಥೆಯನ್ನು ಹೊಂದಿರುವ ಅಮೇರಿಕಾ, ಆಸ್ಟ್ರೇಲಿಯಾ, ಮ್ಯಾನ್ಮಾರ್ ಮತ್ತು ಜರ್ಮನಿ ದೇಶಗಳಲ್ಲಿ ರಾಜ್ಯಗಳು ಪ್ರತ್ಯೇಕ ನಾಡಧ್ವಜ ಹೊಂದಲು ಅವಕಾಶವಿದೆ ಹಾಗಾಗಿ ಅದನ್ನು ನಮ್ಮಲ್ಲೂ ಅಳವಡಿಸಿಕೊಂಡರೆ ತಪ್ಪೇನು ಅಲ್ಲ
4. ನಾಡ ಧ್ವಜ ನಾಡಧ್ವಜವೇ ವಿನಃ ರಾಷ್ಟ್ರಧ್ವಜವಲ್ಲ. ಒಂದು ವೇಳೆ ರಾಜ್ಯಕ್ಕೆ ರಚಿಸಲು ಅವಕಾಶ ನೀಡಿದರೆ ಅದು ರಾಷ್ಟ್ರಧ್ವಜದ ಕೆಳಗೆ ಹಾರಾಡಲಿದೆ.



downloaded from: www.kpscvaani.com

5. ರಾಜಕೀಯ ಪಕ್ಷಗಳು, ಐ.ಪಿ.ಎಲ್ ತಂಡಗಳು ಫುಟ್‌ಬಾಲ್ ತಂಡಗಳು ಕಬಡ್ಡಿ ತಂಡಗಳೆ ಪ್ರತ್ಯೇಕ ಧ್ವಜವನ್ನು ಹೊಂದಿರಬೇಕಾದರೆ ಒಂದು ರಾಜ್ಯ ಪ್ರತ್ಯೇಕ ನಾಡಧ್ವಜ ಹೊಂದಿದರೆ ತಪ್ಪೇನು ಎಂಬುದು ಕೆಲವರವಾದ.
6. ಒಂದೇ ಭಾವದಡಿ ಕೆಲಸ ಮಾಡಿ ಸಮಸ್ಯೆಗಳ ವಿರುದ್ಧ ಧ್ವನಿ ಎತ್ತಲು ಅವಶ್ಯಕವಾಗಿದೆ.

ಪ್ರಾಂತೀಯತೆ ಸರ್ವತೋಮುಖವಾಗಿ ಪ್ರಬಲವಾಗಿದ್ದರೆ ಗಣರಾಜ್ಯವು ಪ್ರಬಲವಾಗಿರುತ್ತದೆ. ನಾಡಧ್ವಜ ವಿರೋಧಿಸುವರು ಸಂವಿಧಾನದ ಒಕ್ಕೂಟದ ಸೂಕ್ಷ್ಮ ಆಶಯಗಳನ್ನು ಅರ್ಥ ಮಾಡಿಕೊಳ್ಳಬೇಕು. ಏಕೆಂದರೆ ಅದು ಸಮಸ್ತ 6 ಕೋಟಿ ಕನ್ನಡಿಗರ ಭಾವನಾತ್ಮಕ ವಿಚಾರವಾಗಿದೆ. ನಾಡಧ್ವಜ ವಿವಾದಕ್ಕೆ ಎಡೆ ಮಾಡದಂತಿರಲಿ. ಸರ್ಕಾರ ಎಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಅಧಿಕೃತ "ನಾಡಧ್ವಜ"ವನ್ನು ಬಿ.ಎಮ್.ಶ್ರೀ ರವರ ಬಾವುಟ ಕವನದ ಸಂಕಲ್ಪದಂತೆ ಜಾರಿಗೆ ತರಲಿ.

ಬುದ್ದಿ ಜೀವಿಗಳು, ಸಾಹಿತಿಗಳು, ಚಿಂತಕರು, ಸಲಹೆ ಮೇರೆಗೆ ತೀರ್ಮಾನಕ್ಕೆ ಬರುವುದು ಸೂಕ್ತ.

## ಪ್ರಬಂಧ 21 : ಡಿಜಿಟಲ್ ಇಂಡಿಯಾ(POWER TO EMPOWER)

ಇಂದು ನಾವು ಅಂಗೈಯಲ್ಲಿ ಜಗತ್ತನ್ನು ಕಾಣುತಿದ್ದೇವೆ. ಇಡೀ ಜಗತ್ತೆ ಒಂದು ಚಿಕ್ಕ ಕುಟುಂಬ ಎನ್ನುವ ಮಟ್ಟಕ್ಕೆ ಮಾಹಿತಿ ತಂತ್ರಜ್ಞಾನ ತಂದು ನಿಲ್ಲಿಸಿದೆ. ಕ್ಷಣ ಮಾತ್ರದಲ್ಲೆ ಇಡೀ ಜಗತ್ತಿನ ಆಗು ಹೋಗುಗಳ ಮೇಲೆ ಒಮ್ಮೆ ಕಣ್ಣಾಯಿಸುವ ಮಟ್ಟಕ್ಕೆ ಬೆಳೆದಿದ್ದೇವೆ. ಇದಕ್ಕೆ ಕಾರಣ ಡಿಜಿಟಲ್ ವಿದ್ಯುನ್ಮಾನ ಕ್ಷೇತ್ರದಲ್ಲಿ ಉಂಟಾಗಿರುವ ಕ್ರಾಂತಿ.

ಯಾವುದೇ ಒಂದು ದೇಶದ ಸರ್ಕಾರವು ಹೊಸ ಯೋಜನೆಗಳನ್ನು ರೂಪಿಸುವಾಗ ಆಯಾ ಕಾಲಕ್ಕೆ ತಕ್ಕಂತೆ, ಅಂದಿನ ಅವಶ್ಯಕತೆಗೆ ಅನುಗುಣವಾಗಿ ಕಾರ್ಯಕ್ರಮಗಳನ್ನು ರೂಪಿಸಿತ್ತದೆ. ಇದೇ ನಿಟ್ಟಿನಲ್ಲಿ ಭಾರತ ಸರ್ಕಾರವು ಜಾರಿಗೆ ತಂದಿರುವ ಸಾಮಾಜಿಕ, ಆರ್ಥಿಕ ಅಭಿವೃದ್ಧಿ ಮತ್ತು ಸಾರ್ವಜನಿಕ ಆಡಳಿತ ಸುಧಾರಣೆಯಲ್ಲಿ ಗಮನಾರ್ಹ ಮತ್ತು ಗುಣಾತ್ಮಕ ಪರಿಣಾಮ ಬೀರಬಲ್ಲ ಯೋಜನೆ ಎಂದರೆ ಅದು ಡಿಜಿಟಲ್ ಇಂಡಿಯಾ ಆಗಿದೆ.

ಡಿಜಿಟಲ್ ಇಂಡಿಯಾ ಕಾರ್ಯಕ್ರಮವು ಭಾರತವನ್ನು ಶಕ್ತ ಹಾಗೂ ಸಶಕ್ತ ಮಾಹಿತಿ ಸಮಾಜ ಮತ್ತು ಜ್ಞಾನಾಧಾರಿತ ಆರ್ಥಿಕ ವ್ಯವಸ್ಥೆಯಾಗಿ ಪರಿವರ್ತಿಸುವ ಗುರಿಯುಳ್ಳ ಅಂತರ್ ಸಚಿವಾಲಯದ ಪ್ರಯತ್ನವಾಗಿದೆ. ಈ ಕಾರ್ಯಕ್ರಮವು ಭಾರತ ಸರ್ಕಾರದ ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ಇಲಾಖೆ ಅನುಷ್ಠಾನಗೊಳಿಸಿದೆ. ಇದನ್ನು ಯಶಸ್ವಿಗೊಳಿಸಲು ಕೇಂದ್ರ ಸರ್ಕಾರ ಒಂದು ಲಕ್ಷಕೋಟಿ ರೂ.ಗಳನ್ನು ಮೀಸಲಿಟ್ಟಿದೆ. 20 ಆಗಸ್ಟ್ 2014 ರಂದು ಸಚಿವ ಸಂಪುಟ ಡಿಜಿಟಲ್ ಇಂಡಿಯಾ ಯೋಜನೆಗೆ ಅನುಮೋದನೆ ಸೂಚಿಸಿತ್ತು. 01 ಜುಲೈ 2015ರಂದು ಇಂದೋರ್‌ನ ಇಂದಿರಾ ಗಾಂಧಿ ಕ್ರೀಡಾಂಗಣದಲ್ಲಿ ಪ್ರಧಾನಿ ನರೇಂದ್ರ ಮೋದಿಯವರು ಚಾಲನೆ ನೀಡಿದರು. ಆಡಳಿತ ಪ್ರಕ್ರಿಯೆಯನ್ನು ಕ್ರಾಂತಿಕಾರಕವಾಗಿ ಮರು ವಿನ್ಯಾಸಗೊಳಿಸುವುದು ಹಾಗೂ ಡಿಜಿಟಲೈಸ್ ಮಾಡುವುದು, ವಿದ್ಯುನ್ಮಾನ


downloaded from: www.kpscvaani.com

ಮಾಧ್ಯಮದ ಮೂಲಕ ಸರ್ಕಾರಿ ಸೇವೆ ಲಭಿಸುವಂತೆ ಹಾಗೂ ಎಲ್ಲರಿಗೂ ಕ್ಷಿಪ್ರವಾಗಿ ತಲುಪುವಂತೆ ಮಾಡುವುದು, ಅಂತೆಯೇ ಹೊಸ ಔದ್ಯೋಗಿಕ ಪೀಳಿಗೆಯನ್ನು ರೂಪಿಸುವುದು ಮತ್ತು ಆಡಳಿತ ಯಂತ್ರದಲ್ಲಿ ಡಿಜಿಟಲ್ ಮಾಧ್ಯಮದ ಮೂಲಕ ಅಮೂಲಾಗ್ರ ಬದಲಾವಣೆ ತರುವುದು ಈ ಡಿಜಿಟಲ್ ಇಂಡಿಯಾದ ಪ್ರಮುಖ ಗುರಿಯಾಗಿದೆ.

**ಡಿಜಿಟಲ್ ಇಂಡಿಯಾವು ಮೂರು ಮುಖ್ಯ ಕ್ಷೇತ್ರಗಳ ಸುತ್ತ ಕೇಂದ್ರಿತವಾಗಿದೆ.**

1. ಪ್ರತಿಯೊಬ್ಬ ನಾಗರೀಕನಿಗೂ ಉಪಯುಕ್ತವಾಗುವ ಮೂಲ ಸೌಕರ್ಯ ಒದಗಿಸುವುದು.
2. ಕೇಳಿದ ಕೂಡಲೇ ಆಡಳಿತ ಹಾಗೂ ಸೇವೆ ದೊರಕಿಸುವುದು.
3. ಸಶಕ್ತ ಡಿಜಿಟಲ್ ನಾಗರಿಕರನ್ನು ರೂಪಿಸುವುದು.

ಡಿಜಿಟಲ್ ಸಶಕ್ತ ನಾಗರಿಕರನ್ನು ಸಿದ್ದಗೊಳಿಸುವ ದೃಷ್ಟಿಯಿಂದಎಲ್ಲಾ ಗ್ರಾಮ ಪಂಚಾಯತಿ ಮಟ್ಟದಲ್ಲೂ ಅತಿ ವೇಗದ ಅಂತರ್ಜಾಲ ಸಂಪರ್ಕ ಒದಗಿಸುವುದು, ಎಲ್ಲಾ ನಾಗರಿಕರಿಗೂ ಮಹತ್ವದ ಡಿಜಿಟಲ್ ಗುರುತನ್ನು (ಅನನ್ಯ, ಜೀವನ ಪರ್ಯಂತ, ಆನ್‌ಲೈನ್ ಹಾಗೂ ಅಧಿಕೃತವಾಗಿ) ನೀಡುವುದು. ಸಮಾಜದಲ್ಲಿ ಆರ್ಥಿಕ ಸಬಲೀಕರಣಕ್ಕಾಗಿ ಮೊಬೈಲ್ ಹಾಗೂ ಬ್ಯಾಂಕ್ ಖಾತೆಗಳ ಮೂಲಕ ಡಿಜಿಟಲ್ ಹಾಗೂ ಆರ್ಥಿಕ ಅವಕಾಶದಲ್ಲಿ ಎಲ್ಲರೂ ಪಾಲ್ಗೊಳ್ಳುವಂತೆ ಮಾಡುವುದು. ಸಾರ್ವಜನಿಕ ಸೇವಾ ಜಾಲದಲ್ಲಿ ಮಾಹಿತಿ ಹಂಚಿಕೊಳ್ಳುವಂತೆ ಅವಕಾಶ ದೊರಕಿಸುವುದು. ವಿದ್ಯುನ್ಮಾನ ಸೇವೆಗಳ ವ್ಯಾಪಕ ಬಳಕೆ ಮತ್ತು ಅಳವಡಿಕೆಗೆ ಅನುವು ಮಾಡಿಕೊಡುವ ಸುರಕ್ಷಿತ ಮತ್ತು ಸುಭದ್ರ ಸೈಬರ್ ವ್ಯವಸ್ಥೆ ಸ್ಥಾಪಿಸುವುದು. ಇವೆಲ್ಲಾ ಪ್ರತಿಯೊಬ್ಬ ನಾಗರೀಕನಿಗೂ ಉಪಯುಕ್ತವಾಗುವ ಮೂಲ ಸೌಕರ್ಯ ನೀಡುವ ಮೊದಲನೆಯ ಪ್ರಮುಖ ಕ್ಷೇತ್ರವಾಗಿದೆ.

ವಿವಿಧ ಭಾಗೀದಾರರಿಗೆ ವಿವಿಧ ಸರ್ಕಾರಿ ಸೇವೆಗಳನ್ನು ಸುಲಭವಾದ ಏಕಗವಾಕ್ಷಿ ವಿಧಾನದ ಮೂಲಕ ಒದಗಿಸಲು ಇಲಾಖೆ ಅಥವಾ ವ್ಯಾಪ್ತಿಗಳ ನಡುವೆ ಯಾವುದೇ ಅಡ್ಡಿ ಇಲ್ಲದ ಸಮನ್ವಯತೆ ತರಬೇಕು, ಆನ್‌ಲೈನ್ ಮತ್ತು ಮೊಬೈಲ್ ಸಾಧನಗಳನ್ನು ಬಳಸುವ ಮೂಲಕ ವಾಸ್ತವದ ಕಾಲಾವಧಿಯಲ್ಲೇ ಸರ್ಕಾರಿ ಸೇವೆ ದೊರಕುವಂತೆ ಮಾಡಬೇಕು. ಸುಲಭವಾಗಿ ಮಾಹಿತಿ ದೊರೆಯುವಂತೆ ಮಾಡುವ ದೃಷ್ಟಿಯಿಂದ ಪ್ರತಿಯೊಬ್ಬ ನಾಗರಿಕನ ವಿವಿಧ ಹಕ್ಕುದಾರಿಕೆಗಳು ಸಾರ್ವಜನಿಕ ಸೇವಾ ಜಾಲದಲ್ಲಿ ದೊರೆಯಬೇಕು. ಅಲ್ಲದೆ ವ್ಯಾಪಾರ ನಿರ್ವಹಣೆಯ ಸುಲಭ ಸಾಧ್ಯತೆಯನ್ನು ಖಚಿತ ಪಡಿಸಬೇಕಲ್ಲದೇ ನಗದು ಹಣಕಾಸು ವ್ಯವಹಾರದ ಬದಲಾಗಿ ವಿದ್ಯುನ್ಮಾನ ವ್ಯವಸ್ಥೆಗೆ ಅನುವು ಮಾಡಿಕೊಡುವ ಸರ್ಕಾರಿ ಸೇವೆಗಳನ್ನು ಡಿಜಿಟಲೀಕರಣಗೊಳಿಸುವ ಮೂಲಕ ವ್ಯಾಪಾರ ವಹಿವಾಟಿಗೆ ಅನುಕೂಲ ಮಾಡಿಕೊಡಬೇಕು. ಇವೆಲ್ಲವೂ ಕೇಳಿದ ಕೂಡಲೇ ಆಡಳಿತ ಹಾಗೂ ಸೇವೆ ದೊರಕಿಸುವುದು ಎಂಬುದರ ಅರ್ಥವಾಗಿದೆ.



downloaded from: www.kpscvaani.com

ದೇಶದ ನಾಗರಿಕರಲ್ಲಿ ಡಿಜಿಟಲ್ ಸಾಕ್ಷರತೆಯನ್ನು ತರುವುದು. ಸುಲಭವಾಗಿ ಎಲ್ಲೆಡೆಯೂ ಲಭಿಸಲು ಸೇವಾ ಜಾಲದಲ್ಲಿ ಎಲ್ಲಾ ಸರ್ಕಾರಿ ದಾಖಲೆಗಳು ಮತ್ತು ಪ್ರಮಾಣ ಪತ್ರಗಳು ದೊರೆಯುವಂತೆ ಮಾಡಬೇಕು. ಡಿಜಿಟಲ್ ಸಂಪನ್ಮೂಲಗಳು ವ್ಯಾಪಕವಾಗಿ ಲಭಿಸುವಂತೆ ಮಾಡುವುದು.

**ಪ್ರಮುಖ ಕ್ಷೇತ್ರಗಳಲ್ಲಿ ಯಶಸ್ಸು ಸಾಧಿಸಲು ಅಗತ್ಯವಾದ ಸ್ತಂಭಗಳು:**

1. **ಬ್ರಾಡ್ ಬ್ಯಾಂಡ್ ಹೈವೇಗಳು :** ಬ್ರಾಡ್‌ಬ್ಯಾಂಡ್ ಹೈವೇಗಳು ಎಲ್ಲಾ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಎಲ್ಲರಿಗೂ ಬ್ರಾಡ್‌ಬ್ಯಾಂಡ್ ಅನುಕೂಲ ಒದಗಿಸುತ್ತದೆ ಹಾಗೂ ರಾಷ್ಟ್ರೀಯ ಮಾಹಿತಿ ಮೂಲ ಸೌಕರ್ಯದ ಸಮನ್ವಯ ಸಾಧಿಸುತ್ತದೆ.
2. **ಮೊಬೈಲ್ ಸಂಪರ್ಕಕ್ಕೆ ಸರ್ವತ್ರ ಲಭ್ಯತೆ :** ಅಡ್ಡಿಯಿಲ್ಲದ ಮೊಬೈಲ್ ಸಂಪರ್ಕ ಮೂಲ ಸೌಕರ್ಯ ಸೃಷ್ಟಿಸುವಿಕೆಯತ್ತ ಗಮನ ಹರಿಸುತ್ತದೆ.
3. **ಸಾರ್ವಜನಿಕ ಅಂತರ್ಜಾಲದ ಲಭ್ಯತೆ :** ಸ್ಥಳೀಯ ಸಿಎಸ್‌ಸಿಗಳ ಸ್ಥಾಪನೆಯ ಜೊತೆಗೆ ಮುಂದಿನ ದಿನಗಳಲ್ಲಿ ಅಂಚೆ ಕಛೇರಿಗಳು ಬಹು ಸೇವಾ ಕೇಂದ್ರಗಳಾಗುವಂತೆ ನೋಡಿಕೊಳ್ಳಲಿದೆ.
4. **ಇ–ಆಡಳಿತ: ತಂತ್ರಜ್ಞಾನದ ಮೂಲಕ ಆಡಳಿತದ ಸುಧಾರಣೆ :** ವ್ಯಾಪಾರ ಪ್ರಕ್ರಿಯೆ ಮರು ವಿನ್ಯಾಸದೊಂದಿಗೆ ಒಡಗೂಡಿದ ತಂತ್ರಜ್ಞಾನವನ್ನು ಸುಧಾರಿಸುವುದು ಸರ್ಕಾರದ ಯೋಜನೆಯಾಗಿದೆ. ಇದರಲ್ಲಿ ಅರ್ಜಿಗಳ ಸರಳೀಕರಣ, ಆನ್‌ಲೈನ್‌ಅರ್ಜಿ ಹಾಗೂ ಶೋಧನೆ, ಕಾರ್ಯ ಪ್ರವಾಹದ ಸ್ವಯಂಚಾಲನೆ, ಮತ್ತು ನಾಗರಿಕರ ಸಮಸ್ಯಗಳ ಪರಿಹಾರಕ್ಕೆ ಸ್ವಯಂಚಾಲಿತ ಸಾರ್ವಜನಿಕ ಸಮಸ್ಯ ನಿವಾರಣಾ ವ್ಯವಸ್ಥೆಗಳು ಸೇರುತ್ತವೆ.
5. **ಎಲ್ಲರಿಗೂ ಮಾಹಿತಿಯ ಲಭ್ಯತೆ :** ಇದರಲ್ಲಿ ಸರ್ಕಾರ ಮಾಹಿತಿ ಮತ್ತು ದಾಖಲೆಗಳನ್ನು ಆನ್‌ಲೈನ್‌ನಲ್ಲಿ ಲಭ್ಯವಾಗುವಂತೆ ಮಾಡುತ್ತದೆ. ವಿವಿಧ ಮಹತ್ವದ ಮಾಹಿತಿಯನ್ನು ನಾಗರಿಕರಿಗೆ ಕಾಲ ಕಾಲಕ್ಕೆ ತಿಳಿಯುವಂತೆ ಮಾಡುವುದಕ್ಕಾಗಿ ಸಕಾರ ಸ್ವತಃ ಸಾಮಾಜಿಕ ಮಾಧ್ಯಮಗಳಲ್ಲಿ ಪಾಲ್ಗೊಳ್ಳುತ್ತದೆ ಹಾಗೂ ವಿಶೇಷ ಸಂದರ್ಭಗಳಲ್ಲಿ ನಾಗರಿಕರಿಗೆ ಆನ್‌ಲೈನ್ ಸಂದೇಶಗಳನ್ನು ಕಳುಹಿಸಲಾಗುತ್ತದೆ.
6. **ಉದ್ಯೋಗಕ್ಕಾಗಿ ಮಾಹಿತಿ ತಂತ್ರಜ್ಞಾನ :** ಈ ಗುರಿ ಸಾಧಿಸಲು ಸಣ್ಣ ಪಟ್ಟಣ ಮತ್ತು ಹಳ್ಳಿಗಳಲ್ಲಿ ಮಾಹಿತಿ ತಂತ್ರಜ್ಞಾನ ಉದ್ಯೋಗ ತರಬೇತಿ ನೀಡುವುದು, ಸುಸ್ಥಿರ ವಾಣಿಜ್ಯ ನಿರ್ವಹಣೆಯ ಮಾಹಿತಿ ತಂತ್ರಜ್ಞಾನ ಸೇವೆ ಒದಗಿಸುವುದು.
7. **ಶೀಘ್ರ ಫಲ ನೀಡುವ ಕಾರ್ಯಕ್ರಮಗಳು :** ಸಂದೇಶಗಳಿಗೆ ಮಾಹಿತಿ ತಂತ್ರಜ್ಞಾನ ವೇದಿಕೆ ಹೊಂದುವುದು. ಸರ್ಕಾರಿ ಕಛೇರಿಗಳಲ್ಲಿ ಬಯೋಮೆಟ್ರಿಕ್ ಹಾಜರಾತಿಗೆ ಅವಕಾಶ ಕಲ್ಪಿಸುವ ಉದ್ದೇಶದಿಂದ ಈಗಾಗಲೇ ಇದು ಆರಂಭವಾಗಿದೆ.

**ಭಾರತ ಸರ್ಕಾರವು ಡಿಜಿಟಲ್ ಇಂಡಿಯಾದ ಅಡಿಯಲ್ಲಿ ರೂಪಿಸಿರುವ ಯೋಜನೆಗಳು**


downloaded from: www.kpscvaani.com

1. **ಭಾರತ್ ನೆಟ್‌ಯೋಜನೆ:** 2018ರ ವೇಳೆಗೆ 6,25,000 ಹಳ್ಳಿಗಳಲ್ಲಿಯೂ ಅಂತರ್ಜಾಲವನ್ನು ಹೊಂದುವಂತೆ ಮಾಡುವುದು ಈ ಯೋಜನೆಯ ಗುರಿಯಾಗಿದೆ.
2. **ಮೈ ಗೊವ್.ಇನ್(mygov.in):** ಇದು ಸರ್ಕಾರದ ನಿಯಮಗಳು, ಮತ್ತು ಸಾರ್ವಜನಿಕರು ತಮ್ಮ ಆಲೋಚನೆಗಳನ್ನು ಸರ್ಕಾರದೊಂದಿಗೆ ಹಂಚಿಕೊಳ್ಳುವಂತಹದ್ದಾಗಿದೆ. ಇದರಿಂದ ಸರ್ಕಾರ ಮತ್ತು ಜನ ಸಾಮಾನ್ಯರು ಒಮ್ಮತದಿಂದ ದೇಶದ ಅಭಿವೃದ್ಧಿಗೆ ಕೈ ಜೋಡಿಸಬಹುದಾಗಿದೆ.
3. **ಉಮಂಗ್ (UMANG :Unified Mobile Application For New Aged Governance )** : ಮೊಬೈಲ್‌ನಲ್ಲಿ ಕ್ಷಣ ಮಾತ್ರದಲ್ಲಿ ಬಹು ಭಾಷೆಯಲ್ಲಿ 1200 ಕೇಂದ್ರ ಮತ್ತು ರಾಜ್ಯ ಸರ್ಕಾರಿ ಸೇವೆಗಳನ್ನು ಪಡೆಯಬಹುದಾಗಿದೆ. ಇದರಲ್ಲಿನ ಪ್ರಮುಖ ಸೇವೆಗಳೆಂದರೆ, ಆಧಾರ, ಭಾರತ ಬಿಲ್ ಪಾವತಿ, ಪ್ಯಾನ್, ಶಿಕ್ಷಣ, ಉದ್ಯೋಗ, ಆರೋಗ್ಯ, ಕೃಷಿ, ಪ್ರಯಾಣ, ಭಾರತೀಯ ರೈಲ್ವೆ ಮುಂಗಡ ಟಿಕೆಟ್ ಖರೀದಿ, ಜನನ ಪ್ರಮಾಣ ಪತ್ರ, ಇ–ಜಿಲ್ಲೆ, ಇ–ಪಂಚಾಯತ್, ಪಾಸ್‌ಪೋರ್ಟ್, ಇತ್ಯಾದಿ.
4. **ಇ–ಹಾಸ್ಪಿಟಲ್ ಅಪ್ಲಿಕೇಷನ್:** ಇದು ಒಂದು ಮೊಬೈಲ್ ಆ್ಯಪ್ ಆಗಿದ್ದು, ಇದರಲ್ಲಿ ರೋಗಿಯ ರೋಗದ ಆನ್‌ಲೈನ್ ರೋಗ ನಿರ್ಣಯ ವರದಿಗಳು ಪಡೆಯಬಹುದು. ಬ್ಲಡ್ ಬ್ಯಾಂಕ್‌ಗಳಲ್ಲಿ ರಕ್ತದ ಅಭಾವ ಮತ್ತು ಇರುವಿಕೆಯನ್ನು ತಿಳಿಯಲು, ಮತ್ತು ಆನ್‌ಲೈನ್ ಹಣ ಪಾವತಿ, ನೊಂದಣಿ, ವೈದ್ಯರ ಅಪಾಯಂಟ್‌ಮೆಂಟ್ ದಿನಾಂಕ ಮತ್ತು ಸಮಯವನ್ನು ತಿಳಿದುಕೊಳ್ಳಬಹುದಾಗಿದೆ.
5. **ಡಿಜಿಟಲ್‌ಅಟೆಂಡೆನ್ಸ್:** ಇದು ಸರ್ಕಾರಿ ನೌಕರರ ನೈಜ ಹಾಜರಾತಿಯನ್ನು ತಿಳಿಯಲು ಸಹಾಯವಾಗಿದೆ. ಇದನ್ನು ಭಾರತದ ಪ್ರಧಾನಿ ನರೇಂದ್ರ ಮೋದಿಯವರು 01 ಜುಲೈ 2015ರಂದು ಪ್ರಾರಂಭಿಸಿದರು.

ಪ್ರಧಾನ ಮಂತ್ರಿಗಳ ಮಹತ್ವಾಕಾಂಕ್ಷೆಯ ಡಿಜಿಟಲ್ ಇಂಡಿಯಾ ಯೋಜನೆಗೆ ಜಗತ್ತಿನ ಎಲ್ಲಾ ಪ್ರತಿಷ್ಠಿತ ಐಟಿ ಕಂಪನಿಗಳ ಸಿ.ಇ.ಓಗಳು ಬೆಂಬಲ ಸೂಚಿಸಿದ್ದಾರೆ. ಸುಮಾರು 2ಲಕ್ಷ ಕೋಟಿಗೂ ಅಧಿಕ ಮೊತ್ತದ ಹೂಡಿಕೆ ಹರಿದು ಬಂದಿದೆ. ಅಮೇರಿಕಾ ಮೂಲದ ಕ್ವಾಲಕಮ್ ಚಿಪ್ ತಯಾರಕ ಕಂಪನಿ 150 ಮಿಲಿಯನ್ ಅಮೇರಿಕನ್ ಡಾಲರ್ ಹಣವನ್ನು ಹೂಡಿಕೆ ಮಾಡಿದೆ. ಗೂಗಲ್ ಕಂಪನಿಯಿಂದ ಭಾರತದ 500 ರೈಲ್ವೆ ಸ್ಟೇಷನ್‌ಗಳಲ್ಲಿ ಉಚಿತವಾಗಿ ವೈ–ಫೈ ಕಲ್ಪಿಸಲಾಗುವುದು ಇಲಿಯಾನ್ಸ್ ಕಂಪನಿ ಈ ಕ್ಷೇತ್ರದಲ್ಲಿ ಸಾವಿರಾರು ಕೋಟಿ ಹೂಡಿಕೆ ಮಾಡುತ್ತಿದೆ.

ಭಾರತವನ್ನು ಡಿಜಿಟಲ್ ಭಾರತವಾಗಿ ಪರಿವರ್ತಿಸುವಲ್ಲಿ ಮೂಲ ಸೌಕರ್ಯ ಹಾಗೂ ವ್ಯವಸ್ಥಿತ ವಿದ್ಯುನ್ಮಾನ ಸೇವೆಗಳೆರಡೂ ಬಹಳ ಮುಖ್ಯ ಮತ್ತು ನಾಗರಿಕರು ಡಿಜಿಟಲ್ ಸಶಕ್ತರು ಎಂಬುದನ್ನು ವಾಸ್ತವಗೊಳಿಸಲು ಈ ಎರಡು ಅಗತ್ಯ. ಯಾವ ಸೇವೆ ಲಭ್ಯವಿದೆ ಎಂಬುದು ಬಳಕೆದಾರರಿಗೆ ಅರಿವಿಲ್ಲದಿದ್ದರೆ ಅಂತೆಯೇ ಅಗತ್ಯ ಕೌಶಲ್ಯ ಮತ್ತು ಐಸಿಟಿ ಆಧಾರಿತ ವ್ಯವಸ್ಥೆಗಳನ್ನು ಬಳಸುವ ಆತ್ಮವಿಶ್ವಾಸ ಇಲ್ಲದಿದ್ದಲ್ಲಿ ಮೂಲ ಸೌಕರ್ಯ ಹಾಗೂ ವ್ಯವಸ್ಥಿತ ವಿದ್ಯುನ್ಮಾನ ಸೇವೆಗಳೆರಡೂ ಅರ್ಥ ಕಳೆದುಕೊಳ್ಳುತ್ತದೆ.



downloaded from: www.kpscvaani.com

# ಪ್ರಬಂಧ 22 : ಸೈಬರ್ ಅಪರಾಧಗಳು

ತೊಂಬತ್ತರ ದಶಕದಲ್ಲಿ ಆರಂಭವಾದ ಮಾಹಿತಿ ತಂತ್ರಜ್ಞಾನ ಕ್ರಾಂತಿ, ಇಡೀ ಮನುಕುಲದ ಜೀವನ ಶೈಲಿಯನ್ನೆ ಬದಲಾಯಿಸಿತು. ಅದು ಎಷ್ಟರ ಮಟ್ಟಿಗೆ ಎಂದರೆ ಅಂಗೈಯಲ್ಲೆ ಜಗತ್ತು ಎನ್ನುವಷ್ಟರ ಮಟ್ಟಿಗೆ. ಈ ಕ್ರಾಂತಿಯ ಫಲವಾಗಿ ಬಂದ ಕಂಪ್ಯೂಟರ್, ಸ್ಮಾರ್ಟ್ ಫೋನ್, ಇಂಟರ್‌ನೆಟ್‌ಗಳ ಜೋಡಿ ಆಧುನಿಕ ಜಗತ್ತಿನಲ್ಲಿ ಒಂದು ಅವಕಾಶಗಳ ಲೋಕವನ್ನೇ ಸೃಷ್ಟಿಸಿದೆ, ಶಿಕ್ಷಣ, ಉದ್ಯೋಗ, ಮನೋರಂಜನೆ ಹಣಕಾಸು ವಹಿವಾಟು ಸೇರಿದಂತೆ ಹತ್ತಾರು ಕ್ಷೇತ್ರಗಳು ಕಂಪ್ಯೂಟರ್ ಹಾಗೂ ಇಂಟರ್‌ನೆಟ್ ಆಧಾರಿತವಾಗಿ ನಡೆಸಲಾಗುತ್ತದೆ.

ಜಾಗತೀಕರಣದಿಂದಾಗಿ ಹಲವು ದೇಶಗಳು ತಮ್ಮ ಆರ್ಥಿಕತೆ ಸುಧಾರಣೆಯತ್ತ ಗಮನ ಹರಿಸಿದವು. ಇದೇ ಸಂದರ್ಭದಲ್ಲಿ ಜಗತ್ತಿನ ಅತಿ ಹೆಚ್ಚು ಯುವ ಸಂಪನ್ಮೂಲವನ್ನು ಹೊಂದಿದ್ದ ನಾವು ಮಾತ್ರ ಅಭಿವೃದ್ಧಿಶೀಲ ರಾಷ್ಟ್ರಗಳ ಪಟ್ಟಿಯಲ್ಲೆ ಕುಂಟುತಿದ್ದೆವು. ಆದರೆ ಇಂದು ರಾಷ್ಟ್ರದ ಆರ್ಥಿಕತೆ ಜಗತ್ತಿನ 6ನೇ ಅತಿದೊಡ್ಡ ಆರ್ಥಿಕತೆಯಾಗಿ ಹೊರಹೊಮ್ಮುವಲ್ಲಿ ಮಾಹಿತಿ ತಂತ್ರಜ್ಞಾನದ ಕೊಡುಗೆ ಅತಿ ಹೆಚ್ಚಿದೆ. ದೀಪದ ಕೆಳಗೆ ಕತ್ತಲು ಎಂಬಂತೆ ತಂತ್ರಜ್ಞಾನದ ಜೊತೆಯಲ್ಲಿ ಅಪಾಯವೂ ಸಹ ಇದೆ. ಮಾಹಿತಿ ತಂತ್ರಜ್ಞಾನ ಸಾಧಿಸಿರುವ ಅಭಿವೃದ್ಧಿಗಿಂತ ಅದರ ಜೊತೆಯಲ್ಲಿಯೇ ಸೃಷ್ಟಿಯಾಗಿರುವ ಸೈಬರ್ ಕ್ರೈಮ್ ಎನ್ನುವ ಹೊಸ ರೂಪದ ಅಪರಾಧ ಇಡೀ ಮನುಕುಲವನ್ನೆ ಬೆಚ್ಚಿ ಬೀಳಿಸಿದೆ.

**ಅರ್ಥ :** ಕಂಪ್ಯೂಟರ್ ಅನ್ನು ಗುರಿಯಾಗಿಟ್ಟುಕೊಂಡು ಅಥವಾ ಕಂಪ್ಯೂಟರ್, ಮೊಬೈಲ್ ಮತ್ತು ಅಂತರ್ಜಾಲವನ್ನು ಆಯುಧವಾಗಿ ಬಳಸಿಕೊಂಡು ನಡೆಸುವ ಕಾನೂನು ವಿರೋಧಿ ಚಟುವಟಿಕೆಗಳನ್ನು ಸೈಬರ್ ಅಪರಾಧ ಎಂದು ಕರೆಯಲಾಗುತ್ತದೆ.

## ❖ ಸೈಬರ್ ಅಪರಾಧದ ವಿಧಗಳು

- **ಸೈಬರ್ ವಂಚನೆ:** ಕಂಪ್ಯೂಟರ್ ಮತ್ತು ಅಂತರ್ಜಾಲವನ್ನು ಬಳಸಿಕೊಂಡು ವಿವಿಧ ರೀತಿಯಲ್ಲಿ ಮೋಸ ಮಾಡುವ ಕೃತ್ಯಕ್ಕೆ ಸೈಬರ್ ವಂಚನೆ ಎನ್ನಲಾಗುತ್ತದೆ.
- **ಸೈಬರ್ ಸ್ಟಾಲ್ಕಿಂಗ್:** ಇಂಟರ್‌ನೆಟ್ ಅನ್ನು ಬಳಸಿಕೊಂಡು ಒಬ್ಬ ವ್ಯಕ್ತಿ ಮತ್ತೊಬ್ಬರಿಗೆ ನಿರಂತರವಾಗಿ ಕಿರುಕುಳ ನೀಡುವುದಕ್ಕೆ ಸೈಬರ್ ಸ್ಟಾಲ್ಕಿಂಗ್ ಎನ್ನುತ್ತಾರೆ.
- **ಪೋರ್ನೋಗ್ರಾಫಿ:** ಅಶ್ಲೀಲ(ಬೆತ್ತಲೆ ಅಥವಾ ರತಿಕ್ರಿಯೆ) ದೃಶ್ಯಗಳನ್ನು ವೆಬ್‌ಸೈಟ್‌ಗಳಲ್ಲಿ ಲಭ್ಯವಿರುವಂತೆ ಮಾಡುವುದು ಅಥವಾ ಕಾಮ ಪ್ರಚೋದನೆ ಮಾಡುವ ದೃಶ್ಯಗಳನ್ನು ಮತ್ತು ಕಥೆಗಳನ್ನು ಪ್ರಸಾರ ಮಾಡುವುದಕ್ಕೆ ಪೋರ್ನೋಗ್ರಾಫಿ ಎಂದು ಕರೆಯುತ್ತಾರೆ. ಇದು ಸಾಮಾಜಿಕ ಸ್ವಾಸ್ಥ್ಯದ ಮೇಲೆ ಪರಿಣಾಮ ಬೀರುತ್ತದೆ.
- **ವೆಬ್ ಹೈಜಾಕಿಂಗ್:** ಮತ್ತೊಬ್ಬ ವ್ಯಕ್ತಿಗೆ ಅಥವಾ ಸಂಸ್ಥೆಗೆ ಸೇರಿದ ವೆಬ್ ಸೈಟ್‌ಅನ್ನು ಅಕ್ರಮವಾಗಿ ನಿಯಂತ್ರಣಕ್ಕೆ ಪಡೆಯುವುದನ್ನು ವೆಬ್ ಹೈಜಾಕಿಂಗ್ ಎಂದು ಕರೆಯಲಾಗುತ್ತದೆ.
- **ವೈರಸ್ ಅಟ್ಯಾಕ್:** ವೈರಸ್ ಎಂಬುದು ಒಂದು ದುಷ್ಕಾರ್ಯ ತಂತ್ರಾಂಶವಾಗಿದ್ದು, ಇದು ಕಂಪ್ಯೂಟರ್ ಒಳಪ್ರವೇಶಿಸಿ ಒಂದು ಫೈಲ್ಗೆ ಸೋಂಕಿದರೆ ನಂತರ ಅದು ಕ್ರಮೇಣ ಇಡೀ ಸ್ಮರಣಿಕೆಯಲ್ಲಿನ ಎಲ್ಲಾ ದಾಖಲೆಗಳನ್ನು ನಾಶಮಾಡುತ್ತದೆ ಇದಕ್ಕೆ ವೈರಸ್ ಅಟ್ಯಾಕ್ ಎನ್ನುತ್ತಾರೆ.



downloaded from: www.kpscvaani.com

- **ಫಿಶಿಂಗ್:** ಬ್ಯಾಂಕ್ ಖಾತೆ ಸಂಖ್ಯೆ ಮತ್ತಿತರ ಖಾಸಗಿ ಮಾಹಿತಿಯನ್ನು ಪಡೆಯುವ ಸಲುವಾಗಿ ಆಮೀಶ ಒಡ್ಡುವ ರೀತಿಯಲ್ಲಿ ಇ-ಮೇಲ್ ಮಾಡುವುದಕ್ಕೆ
- **ಸಲಾಮಿ ಅಟ್ಯಾಕ್:** ಇದೊಂದು ಆರ್ಥಿಕ ಅಪರಾಧ. ಉದಾಹರಣೆಗೆ ಬ್ಯಾಂಕ್ ಉದ್ಯೋಗಿಯೊಬ್ಬ ಎಲ್ಲರ ಖಾತೆಯಿಂದ ತಲಾ 1 ರೂಪಾಯಿ ತನ್ನ ಖಾತೆಗೆ ವರ್ಗಾವಣೆಯಾಗುವುಂತೆ ಪ್ರೋಗ್ರಾಮ್ ಬರೆದು ಅಳವಡಿಸುವುದು. ಇದು ಯಾರಿಗೂ ಗೊತ್ತಾಗುವುದಿಲ್ಲ, ಆದರೆ ಆತನ ಖಾತೆಗೆ ದೊಡ್ಡ ಮಟ್ಟದ ಹಣ ಸೇರುತ್ತೆ.
- **ಆನ್ ಲೈನ್ ಜೂಜು ಮತ್ತು ಅಕ್ರಮ ಹಣ ವರ್ಗಾವಣೆ:** ರಮ್ಮಿ ಜೂಜು ಆಡುವುದನ್ನು ಸರ್ಕಾರ ನಿಷೇಧಿಸಿದೆ ಆದರೆ ಇತ್ತೀಚೆಗೆ ಇದನ್ನು ಆನ್‌ಲೈನ್‌ನಲ್ಲಿ ನಡೆಸಲಾಗುತ್ತಿದೆ. ಹಾಗೂ ತೆರಿಗೆ ವಂಚನೆಗಾಗಿ ಅಕ್ರಮವಾಗಿ ಹಣ ವರ್ಗಾವಣೆ ಮಾಡಲು(ಮನಿ ಲಾಂಡರಿಂಗ್) ಇಂಟರ್‌ನೆಟ್ ಅನ್ನು ಬಳಸಲಾಗುತ್ತಿದೆ. ಅದರಲ್ಲೂ ವಿಶೇಷವಾಗಿ ಬಿಟ್‌ಕಾಯಿನ್‌ನಂತಹ ತಂತ್ರಜ್ಞಾನ ಬಳಸಲಾಗುತ್ತದೆ.
- **ಸೈಬರ್ ಮಾನನಷ್ಟ:** ಎದುರಾಳಿಗಳನ್ನು ಮಣಿಸಲು ಅವರ ಚಾರಿತ್ರ್ಯ ಹರಣ ಮಾಡಲಾಗುತ್ತದೆ, ಸಾಮಾಜಿಕ ಜಾಲತಾಣಗಳನ್ನು ಬಳಸಿಕೊಂಡು ಸಮಾಜದ ಪ್ರತಿಷ್ಠಿತ ವ್ಯಕ್ತಿಗಳ ಮಾನ ಹರಾಜು ಮಾಡುವ ಕಾರ್ಯಕ್ಕೆ ಸೈಬರ್ ಮಾನನಷ್ಟ ಎನ್ನಲಾಗುತ್ತದೆ.
- **ಹ್ಯಾಕಿಂಗ್:** ಮತ್ತೊಬ್ಬರ ಕಂಪ್ಯೂಟರ್, ಇ-ಮೇಲ್, ಸಾಮಾಜಿಕ ಜಾಲತಾಣಗಳ ಖಾತೆಗೆ ಅನಧಿಕೃತವಾಗಿ ಪ್ರವೇಶ ಮಾಡಿ ಅವರ ಮುಖ್ಯವಾದ ಮಾಹಿತಿಗಳನ್ನು ಕದಿಯುವುದು ಮತ್ತು ಆ ಖಾತೆಗಳ ಮೂಲಕ ವ್ಯವಹಾರ ನಡೆಸುವುದಕ್ಕೆ ಹ್ಯಾಕಿಂಗ್ ಎನ್ನಲಾಗುತ್ತದೆ.
- **ರ್‍ಯಾನ್‌ಸಮ್‌ವೇರ್ ದಾಳಿ:** ಮತ್ತೊಬ್ಬರ ಕಂಪ್ಯೂಟರ್‌ಗೆ ಪ್ರೋಗ್ರಾಂ ಮೂಲಕ ದಾಳಿ ಮಾಡಿ ಅದರಲ್ಲಿನ ಮಾಹಿತಿಗಳನ್ನು ಎನ್ಕ್ರಿಪ್ಟ್ ಮಾಡಿ ನಂತರ ಅದನ್ನು ಡೀಕ್ರಿಪ್ಟ್ ಮಾಡಲು ಹಣಕ್ಕಾಗಿ ಒತ್ತಾಯ ಮಾಡುವುದಕ್ಕೆ ರ್‍ಯಾನ್‌ಸಮ್‌ವೇರ್ ದಾಳಿ ಎಂದು ಕರೆಯುತ್ತಾರೆ.
- **ಪೈರೇಸಿ(ಕೃತಿಚೌರ್ಯ, ಸ್ವಾಮ್ಯಚೌರ):** ಇದು ಸಿನಿಮಾ ಲೋಕಕ್ಕೆ ಗಂಡಾಂತರವಾಗಿದೆ. ನೂರಾರು ಕೋಟಿ ಖರ್ಚುಮಾಡಿ ತೆಗೆದ ಸಿನಿಮಾ ಬಿಡುಗಡೆಯಾದ ಮಾರನೆ ದಿನವೆ 10-20 ರೂಪಾಯಿಗಳಿಗೆ ಇದರ ಸಿ.ಡಿಗಳು ಮಾರಾಟವಾಗುತ್ತಿವೆ. ಇದರ ಪರಿಣಾಮ ಸಿನಿಮಾ ರಂಗಕ್ಕೆ ಬಹಳ ದೊಡ್ಡ ನಷ್ಟವಾಗುತ್ತಿದೆ. ಸಿನಿಮಾವಲ್ಲದೆ ಪುಸ್ತಕಗಳು ಸಹ ಇಂದು ಕೃತಿಚೌರ್ಯಕ್ಕೆ ಒಳಗಾಗುತ್ತಿವೆ.
- **ಇ-ಕಾಮರ್ಸ್ ವಂಚನೆ:** ಇತ್ತೀಚೆಗೆ ವಸ್ತ್ರ, ವಿದ್ಯುನ್ಮಾನ ಉಪಕರಣಗಳಾದ ಮೊಬೈಲ್ ಹೆಡ್‌ಸೆಟ್, ಟ್ರಿಮ್ಮರ್ ಮಹಿಳೆಯರ ಸೌಂದರ್ಯ ವರ್ಧಕಗಳಿಂದ ಹಿಡಿದು ಎಲ್ಲ ವಸ್ತು ಮಾರಾಟ ಆನ್‌ಲೈನ್ ಮೂಲಕ ನಡೆಯುತ್ತಿದೆ. ಇದನ್ನೇ ಬಂಡವಾಳ ಮಾಡಿಕೊಂಡಿರುವ ಕೆಲವರು ಸುಲಭವಾಗಿ ಹಣಗಳಿಸಲು ಮೋಸ ಮಾಡುತ್ತಿದಾರೆ.
- **ಇ-ಮೇಲ್ ಬಾಂಬಿಂಗ್**
- **ಮಾಹಿತಿ ನಾಶ**
- **ಅಕ್ರಮ ಬಳಕೆ**



downloaded from: www.kpscvaani.com

❖ **ಸೈಬರ್ ಅಪರಾಧದ ಪರಿಣಾಮಗಳು ಪ್ರಮುಖವಾಗಿ ಈ 3 ಅಂಶಗಳ ಮೇಲೆ ಬೀಳುತ್ತದೆ.**

**1. ವೈಯಕ್ತಿಕ ಅಂಶಗಳ ಮೇಲೆ:** ಇ–ಮೇಲ್, ಸಾಮಾಜಿಕ ಜಾಲತಾಣಗಳ ಖಾತೆಗಳನ್ನು ಮತ್ತು ವೈಯಕ್ತಿಕ ಕಂಪ್ಯೂಟರ್ ಮತ್ತು ಲ್ಯಾಪ್‌ಟ್ಯಾಪ್‌ಗಳನ್ನು ಹ್ಯಾಕ್‌ಮಾಡಿ ಮಾಹಿತಿಗಳ ದುರುಪಯೋಗ ಮಾಡುವುದು, ಖಾಸಗಿ ವಿಚಾರಗಳನ್ನು ಬಹಿರಂಗ ಪಡಿಸುವುದಾಗಿ ಬೆದರಿಕೆ ಒಡ್ಡುವುದು ಇತ್ಯಾದಿ..

**2. ಸಂಪತ್ತಿನ ಮೇಲೆ:** ಒಬ್ಬ ವ್ಯಕ್ತಿ ಅಥವಾ ಒಂದು ಕುಟುಂಬಕ್ಕೆ ಸಂಬಂಧಿಸಿದ ಬ್ಯಾಂಕ್ ಖಾತೆಗಳನ್ನು ಹ್ಯಾಕ್ ಮಾಡುವುದು, ಕ್ರೆಡಿಟ್‌ಕಾರ್ಡ್ ಮತ್ತು ಡೆಬಿಟ್ ಕಾರ್ಡ್‌ಗಳಿಗೆ ಸಂಬಂಧಿಸಿದ ಮಾಹಿತಿಗಳನ್ನು ಪಡೆದು ಹಣ ಕದಿಯುವುದು ಮತ್ತು ಇತ್ಯಾದಿ..

**3. ಸರ್ಕಾರದ ಮಾಹಿತಿಗಳ ಮೇಲೆ:** ಒಂದು ರಾಜ್ಯ ಅಥವಾ ದೇಶದ ಆಂತರಿಕ ರಕ್ಷಣೆಗೆ ಸಂಬಂಧ ಪಟ್ಟ ಗುಪ್ತ ವಿಚಾರಗಳನ್ನು ಅಂತರ್ಜಾಲದ ಮೂಲಕ ಕದ್ದು ಮಾಹಿತಿಯನ್ನು ಸೋರಿಕೆ ಮಾಡುವುದು, ಮಾಹಿತಿಗಳನ್ನು ಮಾರಾಟಮಾಡಿ ಹಣಸಂಪಾದನೆ ಮಾಡುವುದು. ಇತ್ಯಾದಿ ಉದಾಹರಣೆಗೆ ಇತ್ತೀಚೆಗೆ ಕೇಳಿಬಂದ ಆಧಾರ್ ಮಾಹಿತಿ ಸೋರಿಕೆ, ಸ್ಕಾರ್ಪಿಯನ್ ಸಬ್‌ಮೆರಿನ್ ಸಂಬಂಧಪಟ್ಟ ಮಾಹಿತಿ ಸೋರಿಕೆ, ವೀಕಿಲೀಕ್ಸ್..

**ಸೈಬರ್ ಕ್ರೈಂ ನಡೆಯುವ ಕ್ಷೇತ್ರಗಳು :** ಐಟಿ(ಮಾಹಿತಿ ತಂತ್ರಜ್ಞಾನ)ಕಂಪನಿಗಳು, ಈ ಆಡಳಿತ, ಆನ್‌ಲೈನ್ ವ್ಯವಹಾರಗಳಲ್ಲಿ, ಬ್ಯಾಂಕಿಂಗ್ ಕ್ಷೇತ್ರದಲ್ಲಿ. ಮಿಲಿಟರಿ ವೆಬ್‌ಸೈಟ್‌ಗಳು, ಎಲೆಕ್ಟ್ರಾನಿಕ್ ವರ್ಗಾವಣೆಗಳಲ್ಲಿ ಮೊಬೈಲ್ ಸಂಭಾಷಣೆ ಉಪಕರಣಗಳಲ್ಲಿ

- **ಜಗತ್ತಿನಲ್ಲೆ 5 ಅತಿ ಹೆಚ್ಚು ಸೈಬರ್ ಪ್ರಕರಣಗಳು ನಡೆದ ದೇಶಗಳು**
  1) ಚೀನಾ
  2) ಅಮೇರಿಕಾ
  3) ಭಾರತ
  4) ನೆದರ್‌ಲ್ಯಾಂಡ್
  5) ಥೈವಾನ್

**ಭಾರತದಲ್ಲಿ 2016ರಲ್ಲಿ ಅತಿ ಹೆಚ್ಚು ಸೈಬರ್ ಅಪರಾಧ ಪ್ರಕರಣಗಳು ದಾಖಲಾದ ರಾಜ್ಯಗಳು**

1)ಉತ್ತರ ಪ್ರದೇಶ

2)ಮಹಾರಾಷ್ಟ್ರ

3)ಕರ್ನಾಟಕ

- **ಸೈಬರ್ ಪ್ರಕರಣಗಳು ಅತಿಹೆಚ್ಚು ದಾಖಲಾಗಿರುವ ಭಾರತದ ನಗರ**



downloaded from: www.kpscvaani.com

1)ಮುಂಬೈ

2)ಬೆಂಗಳೂರು

3)ಜೈಪುರ

- **ಭಾರತದಲ್ಲಿ ಸೈಬರ್ ಪ್ರಕರಣಗಳನ್ನು ಬಹಳ ಮುಖ್ಯವಾಗಿ ಈ ಕೆಳಗಿನ ಕಾಯ್ದೆಯಡಿಯಲ್ಲಿ ದಾಖಲಿಸಲಾಗುತ್ತದೆ.**

  1) ಮಾಹಿತಿ ತಂತ್ರಜ್ಞಾನ ಕಾಯ್ದೆ–2003

  2) ಭಾರತೀಯ ದಂಡ ಸಂಹಿತೆ(ಐಕಅ)

  3) ಆಯಾ ರಾಜ್ಯ ಶಾಸಕಾಂಗ ಜಾರಿಗೆ ತಂದಿರುವ ವಿಶೇಷ ಕಾಯ್ದೆಗಳು

❖ **ಸೈಬರ್ ಅಪರಾಧಕ್ಕೆ ಸಂಬಂಧಪಟ್ಟ ಪ್ರಕರಣಗಳನ್ನು ಮಾಹಿತಿ ತಂತ್ರಜ್ಞಾನ ಕಾಯ್ದೆ–2003ರ ಈ ಕೆಳಗಿನ ವಿಭಾಗದಡಿಯಲ್ಲಿ ದಾಖಲಿಸಲಾಗುತ್ತದೆ.**

- ಸೆಕ್ಷನ್ 65: ಕಂಪ್ಯೂಟರ್ ಮಾಹಿತಿಯನ್ನು ಮಾರ್ಪಾಡು ಮಾಡಿದರೆ
- ಸೆಕ್ಷನ್ 66: ಹ್ಯಾಕಿಂಗ್
- ಸೆಕ್ಷನ್ 70: ಸಂರಕ್ಷಿತ ಕಂಪ್ಯೂಟರ್‌ಗೆ ಅನಧಿಕೃತ ಒಳನುಸುಳುವಿಕೆ
- ಸೆಕ್ಷನ್ 72: ಗೌಪ್ಯ ಮತ್ತು ಖಾಸಗಿ ಮಾಹಿತಿಗಳನ್ನು ಕದ್ದಾಗ

❖ **ಸೈಬರ್ ಅಪರಾಧಕ್ಕೆ ಸಂಬಂಧಪಟ್ಟ ಪ್ರಕರಣಗಳನ್ನು ಭಾರತೀಯ ದಂಡ ಸಂಹಿತೆ(ಐಕಅ) ಈ ಕೆಳಗಿನ ವಿಭಾಗದಡಿಯಲ್ಲಿ ದಾಖಲಿಸಲಾಗುತ್ತದೆ.**

- IPC 420: ಮೋಸದ ವೆಬ್‌ಸೈಟ್ ಮತ್ತು ಸೈಬರ್ ವಂಚನೆ
- IPC 463: ವೆಬ್ ಹೈಜಾಕಿಂಗ್
- IPC 499:ಮಾನ ನಷ್ಟ ಉಂಟುಮಾಡುವ ಸಂದೇಶ ರವಾನೆಗೆ
- IPC 505: ಇ–ಮೇಲ್ ಮೂಲಕ ಬೆದರಿಕೆ ಒಡ್ಡಿದರೆ

2011 ರಿಂದ 2016ರ ತನಕ ಮಾಹಿತಿ ತಂತ್ರಜ್ಞಾನ ಕಾಯ್ದೆ–2003 ಮತ್ತು ಭಾರತೀಯ ದಂಡ ಸಂಹಿತೆ (IPC) ಅಡಿಯಲ್ಲಿ ಭಾರತದಲ್ಲಿ ದಾಖಲಾಗಿರುವ ಸೈಬರ್ ಅಪರಾಧ ಪ್ರಕರಣಗಳ ಅಂಕಿ ಅಂಶಗಳು

| **ವರ್ಷ** | **ಮಾಹಿತಿ ತಂತ್ರಜ್ಞಾನ ಕಾಯ್ದೆ–2003** | **ಭಾರತೀಯ ದಂಡ ಸಂಹಿತೆ(IPC)** |
|---|---|---|



downloaded from: www.kpscvaani.com

| | | |
|---|---|---|
| 2011 | 1791 | 446 |
| 2012 | 2276 | 601 |
| 2013 | 4356 | 1337 |
| 2014 | 7201 | 2272 |
| 2015 | 8045 | 3412 |
| 2016 | 8705 | 3817 |

ಇನ್ನು ಜಾಗತಿಕ ಮಟ್ಟದಲ್ಲಿ ಇದರ ಪ್ರಮಾಣ ಬಹಳ ತೀವ್ರವಾಗಿದ್ದು ಸೈಬರ್ ಅಪರಾಧಗಳ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಇದೆ. ಕ್ಯಾಸ್ಪರ್‌ಸ್ಕೈ ಲ್ಯಾಬ್ ಪ್ರಕಾರ 2016ರಲ್ಲಿ 758 ಮಿಲಿಯನ್ ವೈರಸ್ ದಾಳಿಗಳು ನಡೆದಿವೆ. ಅಂದರೆ ಪ್ರತಿ 40 ಸೆಕೆಂಡ್‌ಗೆ ಒಂದು ದಾಳಿ ನಡೆಯುತ್ತಿದೆ.

**ಅತಿ ಹೆಚ್ಚು ದುಷ್ಪರಿಣಾಮ ಬೀರಿದ ಜಗತ್ತಿನ ಅತಿ ದೊಡ್ಡ ಸೈಬರ್ ಆಕ್ರಮಣಗಳ ಪಟ್ಟಿ:**

- **ವನ್ನಾ ಕ್ರೈ ಮತ್ತು ಪೆಟ್ಯಾ ರ್‍ಯಾನ್ಸಮವೇರ್ ದಾಳಿ:** ಇದು 2017ರಲ್ಲಿ ಅಮೇರಿಕಾ, ಭಾರತ ಮತ್ತು ಚೀನಾ ಸೇರಿದಂತೆ ಸುಮಾರು 150 ದೇಶಗಳ 2 ಮಿಲಿಯನ್‌ಗೂ ಅಧಿಕ ಕಂಪ್ಯೂಟರ್‌ಗಳ ಮೇಲೆ ದಾಳಿ ನಡೆಸಲಾಗಿತ್ತು, ಇದರಿಂದ ಉಂಟಾದ ನಷ್ಟ ನೂರಾರು ಬಿಲಿಯನ್‌ಗಳಿದ್ದು, ಇದು ಜಗತ್ತಿನ ಅತಿ ದೊಡ್ಡ ಸೈಬರ್ ದಾಳಿ.
- **ಯಾಹೂ ಮಾಹಿತಿಗಳ ಕನ್ನ:** 2014 ರಲ್ಲಿ ಯಾಹೂ ಮೇಲ್ ಕಂಪನಿಯ ಸರ್ವರ್ ಹ್ಯಾಕ್ ಮಾಡಿದ್ದ ದುಷ್ಕರ್ಮಿಗಳು 500 ಮಿಲಿಯನ್ ಯಾಹೂ ಬಳಕೆದಾರರ ಮಾಹಿತಿಯನ್ನು ಕದ್ದಿದ್ದರು.
- **ಅಡಲ್ಟ್ ಫ್ರೆಂಡ್ ಫೈಂಡರ್ ವೆಬಸೈಟ್ ದಾಳಿ:** 2015 ಅಡಲ್ಟ್ ಫ್ರೆಂಡ್ ಫೈಂಡರ್ ಎನ್ನುವ ಡೇಟಿಂಗ್ ವೆಬ್‌ಸೈಟ್ ಮೇಲೆ ದಾಳಿ ಮಾಡಿ ಸುಮಾರು 4 ಮಿಲಿಯನ್ ಖಾತೆದಾರರ ಖಾಸಗಿ ಮಾಹಿತಿಯನ್ನು ಸಾರ್ವಜನಿಕವಾಗಿ ಲಭ್ಯವಿರುವಂತೆ ಮಾಡಲಾಗಿತ್ತು.
- **ದಕ್ಷಿಣ ಕೋರಿಯಾ ಬ್ಯಾಂಕ್ ಖಾತೆಗಳ ಹ್ಯಾಕ್:** 2014ರಲ್ಲಿ 100ಮಿಲಿಯನ್ ಕ್ರೆಡಿಟ್ ಕಾರ್ಡಗಳ ಮಾಹಿತಿಯನ್ನು ಕದಿಯಲಾಗಿತ್ತು, ಜೊತೆಗೆ 20 ಮಿಲಿಯನ್ ಬ್ಯಾಂಕ್ ಖಾತೆಗಳ ಹ್ಯಾಕ್‌ಗೆ ಒಳಪಟ್ಟಿದ್ದವು.
- **ಇಕ್ವಿಫ್ಯಾಕ್ಸ್ ಕಂಪನಿ ಮಾಹಿತಿ ಕಳವು:** ಅಮೇರಿಕಾ ಮೂಲದ ಸಾಲ ಸಂಸ್ಥೆಯಾದ ಇಕ್ವಿಫ್ಯಾಕ್ಸ್ ಕಂಪನಿಯ ವೆಬ್ ಸೈಟ್ ಹ್ಯಾಕ್‌ಗೆ ಒಳಪಟ್ಟಿದ್ದು ಸುಮಾರು 143 ಮಿಲಿಯನ್ ಅಮೇರಿಕನ್ ಕೆನೆಡಿಯನ್ ಮತ್ತು ಬ್ರಿಟೀಷರ ಮಾಹಿತಿಯನ್ನು ಕದಿಯಲಾಗಿತ್ತು. ಸೋನಿ ಕಂಪನಿ, ಅಡೋಬ್


downloaded from: www.kpscvaani.com

ಕಂಪನಿ, ಆ್ಯಶ್ಲಿ ಮ್ಯಾಡಿಸನ್, ಇನ್ಸ್ಟಾಗ್ರಾಮ್ ಹೀಗೆ ಇನ್ನು ಹಲವು ಕಂಪನಿಗಳು ಸೈಬರ್ ದಾಳಿಗೆ ಒಳಪಟ್ಟಿದ್ದವು.

❖ **ಸೈಬರ್ ಕ್ರೈಂಗಳನ್ನು ತಡೆಗಟ್ಟಲು ಕೇಂದ್ರ ಸರ್ಕಾರ ಸಾಕಷ್ಟು ವಿಧದಲ್ಲಿ ಶ್ರಮಿಸುತ್ತಿದೆ. ಅವುಗಳಲ್ಲಿ ಪ್ರಮುಖವಾಗಿ**

1) ಮಾಹಿತಿ ತಂತ್ರಜ್ಞಾನ ಕಾಯ್ದೆ2003
2) ಇಂಡಿಯನ್ ಸೈಬರ್ ಕೋ–ಆರ್ಡಿನೇಷನ್ ಸೆಂಟರ್ ಸ್ಥಾಪನೆ
3) ಕ್ರೈಮ್ ಅಂಡ್ ಕ್ರಿಮಿನಲ್ ಟ್ರಾಕಿಂಗ್ ನೆಟ್‌ವರ್ಕ್ ಅಂಡ್ ಸಿಸ್ಟಮ್‌ನ ಸ್ಥಾಪನೆ
4) ಡೆಟಾ ಸೆಕ್ಯೂರಿಟಿಯ ಕೌನ್ಸಿಲ್ ಆಫ್ ಇಂಡಿಯಾ ಸ್ಥಾಪನೆ
5) ಇಂಡಿಯನ್ ಕಂಪ್ಯೂಟರ್ ಎಮರ್ಜೆನ್ಸಿ ರೆಸ್ಪಾನ್ಸ್ ಟೀಮ್ (CERT-In)
6) ಸೆಂಟರ್ ಫಾರ್ ಡೆವಲೆಪ್‌ಮೆಂಟ್ ಅಡ್ವಾನ್ಸ್ಡ್ ಕಂಪ್ಯೂಟಿಂಗ್

❖ **ಅಂತರರಾಷ್ಟ್ರೀಯ ಮಟ್ಟದಲ್ಲಿ ಸೈಬರ್ ಅಪರಾಧಗಳನ್ನು ತಡೆಗಟ್ಟಲು ನಡೆದ ಪ್ರಯತ್ನಗಳು**

- 2000ದಲ್ಲಿ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯು ಸೈಬರ್ ಕ್ರೈಮ್ ವಿರುದ್ಧ ಹೋರಾಟ ಮಾಡಲು ನಿರ್ಣಯವನ್ನು ಮೊದಲು ಅಂಗೀಕರಿಸಿತು.
- ಇಂಟರ್‌ನ್ಯಾಶನಲ್ ಟೆಲಿಕಮ್ಯುನಿಕೇಶನ್ ಯುನಿಯನ್ ಸ್ಥಾಪಿಸಲಾಗಿದೆ, ಇದು ಸೈಬರ್ ಭದ್ರತೆಯ ಅಂತರಾಷ್ಟ್ರೀಯ ಸಮಸ್ಯೆಗಳ ಪರಿಹಾರಕ್ಕೆ ಶ್ರಮಿಸುತ್ತಿದೆ.
- ಜಿನಿವಾ ಡಿಕ್ಲರೇಷನ್–2003
- ಟ್ಯುನಿಶ್ ಕಮಿಟ್‌ಮೆಂಟ್–2005
- ಸೈಬರ್ ಅಪರಾಧವನ್ನು ತಡೆಗಟ್ಟಲು ವಿಶ್ವ ಆರ್ಥಿಕ ವೇದಿಕೆ ಜಾಗತಿಕ ಸೈಬರ್ ಭದ್ರತಾ ಕೇಂದ್ರವನ್ನು ಜಿನೆವಾದಲ್ಲಿ ಪ್ರಾರಂಭಿಸಿದೆ.

❖ **ಸೈಬರ್ ಅಪರಾಧಗಳನ್ನು ತಪ್ಪಿಸಲು ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆಯ ಕ್ರಮಗಳು**

1. ನಮ್ಮ ಖಾತೆಯ ಪಿನ್ ನಂಬರ್ ಅನ್ನು ಬೇರೆಯವರಿಗೆ ಹಸ್ತಾಂತರಿಸದಿರುವುದು.
2. ಆನ್‌ಲೈನ್ ಬ್ಯಾಂಕಿಂಗ್ ಶಾಪಿಂಗ್ ಮಾಡುವಲ್ಲಿ ಅತ್ಯಂತ ಜಾಗರೂಕತೆಯಿಂದ ಇರುವುದು.
3. ಸಂಕೀರ್ಣ PASS WORD ಬಳಸುವುದು.
4. ಸ್ಪಾಮ್ E-MAILE ಗಳನ್ನು ಅಳಿಸಿಹಾಕುವುದು.
5. PASS WORDಗಳನ್ನು ಆಗಾಗ ಬದಲಾಯಿಸುತ್ತಿರುವುದು.
6. FACEBOOK, TWITTER ಮುಂತಾದ ಖಾತೆಯ ಬಗ್ಗೆ ಜಾಗೃತಿ ವಹಿಸುವುದು.
7. ಆಶ್ಲೀಲ ಸಂದೇಶ, ಚಿತ್ರವನ್ನು ಕಳುಹಿಸಿ ಕೊಡುವವರ ವಿರುದ್ಧ ಪೋಲೀಸರಿಗೆ ಮಾಹಿತಿ ನೀಡುವುದು.
8. ಸೈಬರ್ ಅಪರಾಧಗಳ ಬಗ್ಗೆ ಭಾರತದಲ್ಲಿ ವ್ಯಕ್ತಿಗತವಾಗಿ & ಸಂಸ್ಥೆಗಳ ಮಟ್ಟದಲ್ಲಿ ತಿಳುವಳಿಕೆ ಕಡಿಮೆ, ಅದನ್ನು ಹೆಚ್ಚಿಸಲು ಪ್ರಯತ್ನಿಸುವುದು.
9. ಭದ್ರತಾ ಸಂಸ್ಥೆಗಳಿಗೆ ಪೂರಕವಾದ ಸಂಪನ್ಮೂಲಗಳನ್ನು ಒದಗಿಸುವುದು.



downloaded from: www.kpscvaani.com

**ಉಪಸಂಹಾರ** : ತಂತ್ರಜ್ಞಾನವನ್ನು ಅಭಿವೃದ್ಧಿ ಪಡಿಸುವಾಗ ಕೇವಲ ಅದರ ಉಪಯೋಗಗಳನ್ನು ಮಾತ್ರ ಗಮನದಲ್ಲಿಡದೆ ಅದರಿಂದಾಗುವ ದುರುಪಯೋಗವನ್ನು ಮೊದಲೇ ಊಹಿಸಿ ಅದಕ್ಕೆ ಮುಂಜಾಗೃತ ಕ್ರಮಗಳನ್ನು ತೆಗೆದುಕೊಂಡಲ್ಲಿ ಮಾತ್ರ ಉಂಟಾಗ ಬಹುದಾದ ಅಪಾಯವನ್ನು ತಡೆಗಟ್ಟಬಹುದು. ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಸೈಬರ್ ಅಪರಾಧಗಳಿಗೆ ಪರಿಹಾರ ಎಂದರೆ ಎಚ್ಚರಿಕೆ ವಹಿಸುವುದು ಮತ್ತು ಸೈಬರ್ ದಾಳಿ ಸವಾಲುಗಳನ್ನು ಸಮರ್ಥವಾಗಿ ಎದುರಿಸಲು ಭದ್ರತಾ ಸ್ವರೂಪವನ್ನು ಅತ್ಯಾಧುನಿಕ ರೀತಿಯಲ್ಲಿ ಅಭಿವೃದ್ಧಿ ಪಡಿಸಬೇಕು. ಸೈಬರ್ ಅಪರಾಧಗಳ ನಿಯಂತ್ರಣಕ್ಕೆ ಪ್ರಬಲ ಸೈಬರ್ ಕಾಯ್ದೆಯನ್ನು ರೂಪಿಸಬೇಕಾಗಿದೆ. ಆಗ ಮಾತ್ರ ಇದನ್ನು ಗಣನೀಯವಾಗಿ ನಿಯಂತ್ರಣದಲ್ಲಿಡಬಹುದು.

## ಪ್ರಬಂಧ 23 : ಅಣುಶಕ್ತಿ – ದೇಶದ ಅಭಿವೃದ್ಧಿಗೆ ಪೂರಕವೋ ಇಲ್ಲ ಮಾರಕವೋ

**"ಅಣುಶಕ್ತಿಯನ್ನು ಮಾನವನ ಕಲ್ಯಾಣಕ್ಕಾಗಿ ಬಳಸಬೇಕೇ ವಿನಃ ಮನುಕುಲದ ವಿನಾಶಕ್ಕಾಗಿ ಅಲ್ಲ"**

**– ಹೋಮಿ ಜಹಾಂಗೀರ್ ಬಾಬ (ಖ್ಯಾತ ಅಣು ವಿಜ್ಞಾನಿ)**

ಮನುಕುಲದ ಉನ್ನತಿಗೆ ಉಪಯೋಗವಾಗಲಿ ಎನ್ನುವ ಆಶಯದೊಂದಿಗೆ ಸಾವಿರಾರು ವಿಜ್ಞಾನಿಗಳು ತಮ್ಮ ಜೀವನ ಪೂರ್ತಿ ಹಗಲಿರುಳು ಪ್ರಯೋಗಾಲಯಕ್ಕೆ ಸೀಮಿತಗೊಳಿಸಿ ಅವಿಷ್ಕಾರ ಮಾಡಿದ ತಂತ್ರಜ್ಞಾನವನ್ನು ಮನುಕುಲದ ವಿನಾಶಕ್ಕಾಗಿ ಬಳುಸುತ್ತಿರುವುದು ಅವಿಷ್ಕಾರ ಮಾಡಿದವರಿಗೆ ಮಾಡುತ್ತಿರುವ ಘೋರ ಅಪಮಾನ. ಅದೊಂದು ದಿನ ಬೆಳಿಗ್ಗೆ ಜಪಾನ ದೇಶದ ಹಿರೋಷಿಮಾ ನಗರದ ಸಹಸ್ರಾರು ಜನ ರಾತ್ರಿ ಕಂಡ ಕನಸುಗಳ ನನಸು ಮಾಡಲು ಹೊರಟು ನಿಂತಿದ್ದರು, ಆದರೆ ಅವರ ಮೇಲೆ ಬಂದೆರಗಿದ ಅಮೇರಿಕಾದ ಯಮಸ್ವರೂಪಿ ಅಣುಬಾಂಬ್ ಮತ್ತೆಂದೂ ಹಿಂತಿರುಗಿ ಬಾರದ ಲೋಕಕ್ಕೆ ಅವರನ್ನು ತಳ್ಳಿತು. ಬದುಕುಳಿದವರಿಗೆ ಭೂಮಿಯ ಮೇಲೆ ನರಕವನ್ನೆ ಸೃಷ್ಟಿ ಮಾಡಿತು. ಅಂದು "ಆಗಸ್ಟ 6 1945" ರಲ್ಲಿ ನಡೆದ ಆ ಕರಾಳ ಘಟನೆಯನ್ನು ಇಂದಿಗೂ ಜಗತ್ತಿನ ಯಾವ ದೇಶಗಳಿಗೂ ಮರೆಯಲು ಸಾಧ್ಯವಾಗುತ್ತಿಲ್ಲ. ಈ ಘಟನೆಯಿಂದ ನೊಂದಿರುವ ತಂತ್ರಜ್ಞಾನ ಅವಿಷ್ಕಾರ ಮಾಡಿದವರ ಆತ್ಮಗಳೂ ಇಂದಿಗೂ ಸಹ ಮುಮ್ಮಲ ಮರುಗುತ್ತಿವೆ.

1945 ಜುಲೈ 16ರ ದಿನ ಇಡೀ ಮನುಕುಲಕ್ಕೇ ಮಾರಕವಾಗಿ ಪರಿಣಮಿಸಿದ ದಿನ. ಅಂದು ಜಗತ್ತಿನ ಪ್ರಪ್ರಥಮ ಅಣುಬಾಂಬ್ ಪರೀಕ್ಷೆಯನ್ನು ಅಮೇರಿಕಾವು "ಆಲ್ಮಗಾರ್ಡೊ ನ್ಯೂ ಮೆಕ್ಸಿಕನ್" ಎನ್ನುವ ಮರುಳುಗಾಡಿನಲ್ಲಿ ಯಶಸ್ವಿಗೊಳಿಸಿತು. 1945 ಆಗಸ್ಟ್ 6ರಂದು ಬೆಳಗಿನಜಾವ 2.45ಕ್ಕೆ ಅಮೇರಿಕಾದ ಟಿನಿಯಾನ್ ಮಿಲಿಟರಿ ಕೇಂದ್ರದಿಂದ ಹೊರಟ ಜನರಲ್ ಟಿಬೆಟ್ಸ್ ಸವಾರಿಯ ಬಿ–29– ಅನೊಲಾ ಗೇ ಎಂಬ ಯುದ್ಧ ವಿಮಾನ ಮುಂಜಾನೆ 8.15ಕ್ಕೆ ಹಿರೋಷಿಮಾ ನಗರದ ಮೇಲೆ ಅಣುಬಾಂಬ್ ಪ್ರಯೋಗಮಾಡಿತು. ಹೃದಯ ಛಿದ್ರ ಘಟನೆಯನ್ನು ಕಂಡ ಸಹ ಪೈಲೆಟಾದ ರಾಬರ್ಟ್ ಎ. ಲೂಯಿಸ್ "My god, what have we done" ಎಂದು ಉದ್ಗಾರ ತೆಗೆದ. 1945ರ ನಂತರವೇ ಅಣುಬಾಂಬ್ ಅಥವಾ ಅಣುಶಕ್ತಿಯ ಕರಾಳ ಮುಖ ಜಗತ್ತಿಗೆ ಗೊತ್ತಾಗಿದ್ದು.



downloaded from: www.kpscvaani.com

ಇಂದು ಎಲ್ಲಾ ದೇಶಗಳಲ್ಲಿಯೂ ಇಂಥ ಮಾರಕಗಳ ಉತ್ಪನ್ನ ಮಾಡುತ್ತಲೇ ಇವೆ. ಸಾವಿರಾರು ಕಿಲೋ ಮೀಟರ್‌ಗಳ ದೂರದಲ್ಲಿರುವ ಗುರಿಯನ್ನು ತಲುಪಬಲ್ಲ ಅಸಾಧಾರಣ ಸಾಮರ್ಥ್ಯದ ಕ್ಷಿಪಣಿಗಳಿವೆ. ಒಂದು ಮೆಗಾಟನ್ ಬಾಂಬ್ ಬೆಂಗಳೂರಿನಂಥ ನಗರದ ಮೇಲೆ ಬಿದ್ದರೆ ಕ್ಷಣಾರ್ಧದಲ್ಲಿ ನಾಶವಾಗುವುದು. 1940 ರಲ್ಲಿ ಬೆರಳೆಣಿಕೆಯಷ್ಟು ಅಣುಬಾಂಬ್‌ಗಳಿದ್ದವು. ಇಂದು ಲಕ್ಷಾನುಗಟ್ಟಲೆ ಬಾಂಬುಗಳನ್ನು ಪ್ರತಿ ದೇಶಗಳು ಹೊಂದಿವೆ ಅವುಗಳಲ್ಲಿನ 100ರಷ್ಟು ಮಾತ್ರ ಸಿಡಿದರೂ ಇಡೀ ಜೀವ ಸಂಕುಲವೇ ಸರ್ವನಾಶವಾಗಲಿದೆ. ಭೂಮಂಡಲವೇ ನರಕ ಸದೃಶವಾಗಲಿದೆ.

ಅಣುಶಕ್ತಿ ಎಂದರೆ, ಒಂದು ಪರಮಾಣುವಿನ ಬೀಜವು ಪ್ರೋಟಾನ್ ಮತ್ತು ನ್ಯೂಟ್ರಾನ್‌ಗಳನ್ನು ಒಳಗೊಂಡಿದೆ. ಇವು ಪರಮಾಣು ಬೀಜದಲ್ಲಿ ಬಿಗಿಯಾಗಿ ಬಂಧಿಸಲ್ಪಟ್ಟಿರುತ್ತವೆ. ಬಂಧಿಸಲ್ಪಟ್ಟಿರುವ ಬೀಜಗಳನ್ನು ಬೇರ್ಪಡಿಸಿದಾಗ ಬಿಡುಗಡೆಯಾಗುವ ಶಕ್ತಿಯನ್ನು "ಅಣುಶಕ್ತಿ" ಎನ್ನುವರು. ಇದು ನಿಸರ್ಗದಲ್ಲಿರುವ ಅತ್ಯಂತ ಪ್ರಬಲ ಶಕ್ತಿಯ ರೂಪವಾಗಿದೆ. ಪರಮಾಣು ಬೀಜಗಳಲ್ಲಿ ಅಡಗಿರುವ ಬೈಜಿಕ ಶಕ್ತಿಯನ್ನು ಉಪಯೋಗಕ್ಕಿಳಿಸಿದ್ದು ಮನುಷ್ಯನ ಅತ್ಯಂತ ದೊಡ್ಡ ವೈಜ್ಞಾನಿಕ ಸಾಧನೆಗಳಲ್ಲಿ ಒಂದು.

### ದೇಶದ ಅಭಿವೃದ್ಧಿಗೆ ಪೂರಕವಾದ ಅಣುಶಕ್ತಿ :

- ಅಣುಶಕ್ತಿಯನ್ನು ಅದರ ಶಕ್ತಿ–ಸಾಮರ್ಥ್ಯ ಮತ್ತು ಬಳಕೆಯ ನಂತರದ ಪರಿಣಾಮಗಳನ್ನು ಗಮನದಲ್ಲಿಟ್ಟುಕೊಂಡು ಬಳಸಿದರೆ ಅದರಿಂದ ಮಾನವನ ಕಲ್ಯಾಣವಾಗುತ್ತದೆ.
- ಪರಮಾಣು ಸ್ಥಾವರಗಳನ್ನು ಸ್ಥಾಪಿಸಿ ಅವುಗಳ ಮೂಲಕ ಅಣುಶಕ್ತಿಯನ್ನು ವಿದ್ಯುಚ್ಛಕ್ತಿಯನ್ನಾಗಿ ಪರಿವರ್ತನೆ ಮಾಡಲಾಗುತ್ತಿದ್ದು, ಇದರ ಮೂಲಕ ಮಾನವ ತನ್ನ ಮೂಲ ಅವಶ್ಯಕತೆಗಳನ್ನು ಈಡೇರಿಸಿಕೊಳ್ಳುತ್ತಿದ್ದಾನೆ. (ಅಣುಶಕ್ತಿಯಿಂದ ವಿದ್ಯುತ್ ತಯಾರಿಸಿದರೆ ಒಂದು ಕಿಲೋ ವ್ಯಾಟ್‌ಗೆ, ಒಂದು ಪೈಸೆಗಿಂತ ಕಡಿಮೆ ವೆಚ್ಚ ತಗಲುತ್ತದೆ)
- ಅಣುಸ್ಫೋಟದಿಂದ ಭೂ ಉಷ್ಣ ಶಕ್ತಿ ಮೂಲಗಳನ್ನು ತೋಡಿ, ಅಲ್ಲಿ ನೀರು ಹಾಯಿಸಿದಾಗ ಉಂಟಾಗುವ ಅತ್ಯಂತ ಶಾಖದ ಆವಿಯನ್ನು ವಿದ್ಯುಚ್ಛಕ್ತಿಯ ಉತ್ಪಾದನೆಗೆ ಬಳಸಬಹುದು.
- ಅಣುಸ್ಫೋಟವನ್ನು ಮುಖ್ಯವಾಗಿ ಅನಿಲ, ತೈಲ ಉದ್ದೀಪನಗಳ ಪ್ರಯೋಗಗಳಲ್ಲಿ ಬಳಸಬಹುದು.
- ಕೆಳ ದರ್ಜೆಯ ಅದಿರನ್ನು ಪ್ರತ್ಯೇಕಿಸಲು ಸಹಾಯಕವಾಗಿದೆ.
- ಗಣಿಗಾರಿಕೆಯಲ್ಲಿ ಬರುವ ದೊಡ್ಡ ದೊಡ್ಡ ಬಂಡೆಗಳನ್ನು ಒಡೆಯಲು ಸಹಾಯಕವಾಗಿದೆ.
- ಹೊಸದಾಗಿ ರೈಲು ಮಾರ್ಗಗಳನ್ನು ನಿರ್ಮಿಸುವಾಗ ಅಡ್ಡಿಯಾಗುವ ಗುಡ್ಡ ಮತ್ತು ಪರ್ವತಗಳನ್ನು ನೆಲ ಸಮ ಮಾಡಲು ಮತ್ತು ಸುರಂಗ ಮಾರ್ಗ ನಿರ್ಮಿಸಲು ಬಳಸಬಹುದು.
- ಹಳೆಯ ಕಟ್ಟಡಗಳನ್ನು ನೆಲ ಸಮ ಮಾಡಲು ಬಳಸಬಹುದು.

### ದೇಶದ ಅಭಿವೃದ್ಧಿಗೆ ಮಾರಕವಾದ ಅಣುಶಕ್ತಿ :

- ಅಣು ಸ್ಫೋಟದಿಂದ ಭೂಮಿಯನ್ನು ಜೀವರಹಿತ ಮರುಭೂಮಿಯಾಗಿಸಿ, ವಾತಾವರಣವನ್ನು ಕಲುಷಿತಗೊಳಿಸುತ್ತದೆ.
- ಅಣುಸ್ಥಾವರಗಳು ಹೊರ ಬಿಡುವ ವಿಷಕಾರಿ ವಿಕಿರಣ ಅದೆಷ್ಟೋ ಜನರನ್ನು ಬಲಿ ತೆಗೆದುಕೊಳ್ಳುತ್ತಿದೆ. (ಅಣು ಸ್ಥಾವರಗಳು ಕೊಲೆಯ ತಾಣಗಳು)



downloaded from: www.kpscvaani.com

- ❋ ವಿಶ್ವವು ಸಮರಕ್ಕೆಂದು ಮುಂದಾದರೆ ಅದರಲ್ಲಿ ಈ ಅಣು ಶಕ್ತಿಯನ್ನು ಬಳಸಿದರೆ, ಪ್ರಪಂಚದಾದ್ಯಂತ ಮುಂದಿನ ಎಷ್ಟೋ ವರ್ಷಗಳವರೆಗೆ ಹವಾಮಾನ, ಮಳೆ ಕಲುಷಿತಗೊಂಡಿರುತ್ತದೆ ಮತ್ತು ಜೀವಜಂತುಗಳು ಬದುಕುಳಿಯುವುದೇ ಕಷ್ಟಕರವಾಗಿಬಿಡುತ್ತದೆ.
- ❋ 1 ಸಾವಿರ ಮೆಗಾಟನ್ ಸಾಮರ್ಥ್ಯದ ಬಾಂಬೊಂದು ಭೂಮಿಯ ಮೇಲೆ ಸ್ಫೋಟಗೊಂಡರೆ ಸೂರ್ಯನ ಕಿರಣಗಳು ಕೇವಲ 1% ಮಾತ್ರ ಭೂಮಿ ತಲುಪುವುದರೊಂದಿಗೆ, ನೀರು ಹೆಪ್ಪುಗಟ್ಟಿ, ಭೂ ಖಂಡಗಳು ತಂಪಾಗಿ, ಮೋಡಗಳು ಮೂಡದೆ ಮಳೆಯೇ ಬರದಂತೆ ಆಗುತ್ತದೆ.
- ❋ ವಿಕಿರಣಗಳ ಮಾಲಿನ್ಯದಿಂದ ಗರ್ಭಸ್ಥ ಶಿಶು ಅಣು ವಿಕಿರಣತೆಗೆ ಅತೀವ ಸಂವೇದಿಯಾಗಿರುತ್ತದೆ.
- ❋ ಅಣುಸ್ಫೋಟದಿಂದ ವಾತಾವರಣದ ರಕ್ಷಾ ಕವಚ ಭಗ್ನವಾಗಿ ಆಘಾತಕಾರಿಯಾದ ಅತಿ ನೇರಳೆ ಕಿರಣಗಳು ಭೂಮಿಗೆ ಹಾನಿಯುಂಟು ಮಾಡುತ್ತವೆ.
- ❋ ಕ್ಯಾನ್ಸರ್, ಲ್ಯುಕೇಮಿಯಾ, ಪಾರ್ಶ್ವವಾಯು, ದುರ್ಮಾಂಸ, ಹೀಗೆ ಭಯಂಕರ ರೋಗಗಳು ಹರಡುತ್ತವೆ.
- ❋ ಜನರಿಗೆ ಶಿಕ್ಷಣ, ಮೂಲಭೂತ ಸೌಕರ್ಯಗಳನ್ನು ಒದಗಿಸುವ ಬದಲು, ಶಸ್ತ್ರಾಸ್ತ್ರಗಳನ್ನು ಬಳಸುವುದು ಜಾಸ್ತಿಯಾಗಿದೆ.

ಒಟ್ಟಾರೆಯಾಗಿ ಅಣುಶಕ್ತಿ ವಿಜ್ಞಾನದ ಒಂದು ಮಹತ್ವದ ಶೋಧನೆ. ಇದನ್ನು ಮನುಷ್ಯ ತನ್ನ ಕಲ್ಯಾಣಕ್ಕಾಗಿ ಬಳಸಬೇಕೆ ವಿನಹ ವಿನಾಶಕ್ಕಲ್ಲ. ಒಂದು ವಸ್ತು ಕಂಡು ಹಿಡಿದ ವಿಜ್ಞಾನಿ ಅದರಿಂದ ಆಗುವ ಲಾಭ ಮತ್ತು ನಷ್ಟ ಎರಡನ್ನೂ ಯೋಚಿಸಿರುತ್ತಾನೆ. ಆದರೆ ಅದನ್ನು ಜನ ಯಾವ ರೀತಿ ಉಪಯೋಗಿಸುತ್ತಾರೆ ಎನ್ನುವುದು ಅವರವರ ಭಾವಕ್ಕೆ ಬಿಟ್ಟಿದ್ದು. ಭಗವದ್ಗೀತೆಯಲ್ಲಿ ಶ್ರೀ ಕೃಷ್ಣನು ಅರ್ಜುನನಿಗೆ ಹೇಳಿದ ವಾಕ್ಯವೇನೆಂದರೆ "ಅಮೃತಂ ಚೈವ ಮೃತ್ಯುಶ್ಚಸತ್ ಅಸತ್ ಚಾಹಂ ಅರ್ಜುನ" ಅಂದರೆ ಅನ್ನವು ಹಸಿದವನಿಗೆ ಜೀವ ನೀಡುವ ಅಮೃತದಂತೆ, ಅಜೀರ್ಣವಾಗಿ ಹೆಚ್ಚಾದರೆ ಮೃತ್ಯುವಾಗುವುದಂತೆ. ಇದರ ತಾತ್ಪರ್ಯ ಇಷ್ಟೆ; ತಂತ್ರಜ್ಞಾನ ಎನ್ನುವುದು ತಂತ್ರಜ್ಞಾನದಂತೆಯೇ ಬಳಸಬೇಕು, ಅದರಿಂದ ಉಪಯೋಗ ಪಡೆದುಕೊಳ್ಳಬೇಕೆ ವಿನಃ ಅತಿ ಆಸೆಪಟ್ಟು ದುರಾಸೆಯಿಂದ ತನ್ನ ಸಾವಿಗೆ ತಾನೇ ಆಹ್ವಾನವಿಟ್ಟುಕೊಳ್ಳಬಾರದು.

ಇವೆಲ್ಲವನ್ನೂ ಅವಲೋಕಿಸಿದರೆ ಅಣುಶಕ್ತಿಯನ್ನು ಸಮರ್ಥವಾಗಿ ಬಳಸಿಕೊಳ್ಳುವುದು ಮನುಷ್ಯನ ಕೈಯಲ್ಲೇ ಇದೆ. ಅದನ್ನು ಜನ ಹಿತಕ್ಕಾಗಿಯೂ ಬಳಿಕೊಳ್ಳಬಹುದು; ಇಲ್ಲವೇ ವಿದ್ವಂಸಕ ಕೃತ್ಯಗಳಿಗೆ ಬಳಸಿಕೊಳ್ಳಬಹುದು. ಯಾವುದನ್ನು ಆರಿಸಿಕೊಳ್ಳುವಿರಿ ಎಂಬುದು ಎಲ್ಲಾ ಬುದ್ಧಿ ಜೀವಿಗಳ ಮುಂದಿರುವ ಪ್ರಶ್ನೆ ?

## ಪ್ರಬಂಧ 24 : ಜಾಗತಿಕ ತಾಪದ ಏರಿಕೆ

**ಪ್ರಸ್ತಾವನೆ** : ಭೂಮಿಯ ಮತ್ತು ಸಾಗರಗಳ ಸರಾಸರಿ ತಾಪದಲ್ಲಿ ಕಳೆದ 200ವರ್ಷಗಳಲ್ಲಿ ಉಂಟಾಗಿರುವ ಏರಿಕೆಯನ್ನು ಜಾಗತಿಕ ತಾಪದ ಏರಿಕೆ ಎಂದು ಕರೆಯಲಾಗುತ್ತದೆ. ಈ ಶತಮಾನದ ಪ್ರಾರಂಭದಿಂದೀಚೆಗೆ ಭೂಮಿಯ ತಾಪಮಾನದಲ್ಲಿ ಸುಮಾರು $0.8^0$C ನಷ್ಟು ಏರಿಕೆಯಾಗಿದೆ ಎಂದು ಹೇಳಲಾಗುತ್ತದೆ. ಶಕ್ತಿಯ ಬೇರಾವುದೇ ಆಕಾರ ಅಥವಾ ಸಂಗ್ರಹಗಳಿಗಿಂತ ತಾಪದ ಏರಿಕೆ



downloaded from: www.kpscvaani.com

ಸಾಗರಗಳಲ್ಲಿಯೇ ಅತಿ ಹೆಚ್ಚು ಭೂವ್ಯವಸ್ಥೆಯಲ್ಲಿ ಉಂಟಾಗಿರುವ ತಾಪದ ಹೆಚ್ಚಳದ 90ರಷ್ಟನ್ನು ಇದು ಪ್ರತಿನಿಧಿಸುತ್ತದೆ. ಈ ಏರಿಕೆಗೆ ಕಾರಣ, ನಿಸರ್ಗದಲ್ಲಿರುವ ಹಸಿರುಮನೆ ಪರಿಣಾಮ ಎಂಬ ವಿದ್ಯಮಾನ.

ಸೂರ್ಯನ ಕಿರಣಗಳು ಭೂಮಿಯನ್ನು ಬಿಸಿ ಮಾಡಿದ ಪರಿಣಾಮವಾಗಿ ಬಿಡುಗಡೆಯಾಗುವ ಅವಕೆಂಪು ಕಿರಣಗಳನ್ನು ಕೆಲವು ಅನಿಲಗಳು ಸೆರೆಹಿಡಿದ ಕಾರಣ ವಾಯುಮಂಡಲದ ತಾಪ ಏರಿಕೆ ಆಗುತ್ತದೆ. ಈ ಏರಿಕೆಯನ್ನು ಹಸಿರುಮನೆ ಪರಿಣಾಮ ಎಂದೂ ಈ ಏರಿಕೆಗೆ ಕಾರಣವಾದ ಅನಿಲಗಳನ್ನು ಹಸಿರುಮನೆ ಅನಿಲಗಳೆಂದೂ ಕರೆಯಲಾಗುತ್ತದೆ. ಭೂಮಿಯಲ್ಲಿರುವ ನೈಸರ್ಗಿಕ ಹಸಿರು ಮನೆಯ ಜೀವಿಗಳ ಉಳಿವಿಗೆ ಕಾರಣವಾಗಿದೆ. ಆದರೆ, ಇಂಧನಗಳ ದಹನ ಹಾಗೂ ತೀವ್ರ ಅರಣ್ಯ ನಾಶದಂಥ ಮಾನವನ ಚಟುವಟಿಕೆಗಳಿಂದಾಗಿ ಈ ಪರಿಣಾಮ ಅತಿಯಾಗಿ ಹೆಚ್ಚಿದೆ. ಇದನ್ನೇ ಜಾಗತಿಕ ತಾಪದ ಏರಿಕೆ ಎಂದು ವರ್ಣಿಸಲಾಗಿದೆ.

ಕಾರ್ಬನ್ ಡೈ ಆಕ್ಸೈಡ್, ನೈಟ್ರೋಜನ್ ಆಕ್ಸೈಡ್‌ಗಳು, ಮೀಥೇನ್ ಹಾಗೂ ಕೆಲಮಟ್ಟಿಗೆ ಓಝೋನ್ ಇವು ವಾತಾವರಣದಲ್ಲಿರುವ ಹಸಿರು ಮನೆ ಅನಿಲಗಳು. ಜಾಗತಿಕ ತಾಪದ ಏರಿಕೆಯಿಂದಾಗಿ ಮಂಜಿನ ಗಡ್ಡೆಗಳು ಕರಗುತ್ತಿವೆ. ಇದರಿಂದ ಸಮುದ್ರದ ಮಧ್ಯದಲ್ಲಿ ಏರಿಕೆಯಾಗುತ್ತಿದೆ. ಸಮುದ್ರದಿಂದ ಪ್ರವಾಹ ಉಂಟಾಗುತ್ತಿದೆ. ಇದರಿಂದಾಗಿ ತೀರ ಪ್ರದೇಶಗಳು ಮುಳುಗಡೆಯಾಗುವ ಸಾಧ್ಯತೆಗಳಿವೆ. ಹೀಗಾಗಿ, ಇದು ಜಲ ಹಾಗೂ ನೆಲವಾಸಿ ಜೀವಿಗಳಿಗೆ ಹಾನಿಕಾರಕ.

1940ರಿಂದೀಚೆಗೆ ಪ್ರಪಂಚದ ವಾರ್ಷಿಕ ಸರಾಸರಿ ಖರತ್ವ 1/3ರಿಂದ 1/20 ಫ್ಯಾರನ್‌ಹೀಟ್‌ನಷ್ಟು ಕಡಿಮೆಯಾಗಿದೆ. ಇದೊಂದು ಉಪೇಕ್ಷೆ ಮಾಡುವಂತಹ ವಿಷಯವಲ್ಲ. ಏಕೆಂದರೆ 4–5$^0$F ನಷ್ಟು ಖತರ್ವ ಕಡಿಮೆಯಾದಾಗ ಕಳೆದ ಹಿಮ ಯುಗ ಸಂಭವಿಸಿತ್ತ 1880ರಿಂದ ಇಲ್ಲಿಯವರೆಗೂ ಸೂರ್ಯ ಕಲೆಗಳ ಚಟುವಟಿಕೆಗಳು ಅವ್ಯಾಹಕತವಾಗಿ ನಡೆಯುತ್ತಲೇ ಇವೆ. ಇವುಗಳಿಂದಾಗಿ ಸೌರಶಕ್ತಿಯ ಉತ್ಪನ್ನ ಹೆಚ್ಚಾಗಿರುವುದು ನಿಸ್ಸಂದೇಹವಾದ ವಿಷಯ ಹೀಗಿದ್ದರೂ ಪ್ರಪಂಚದ ಖರತ್ವ ಕಡಿಮೆಯಾಗುತ್ತಾ ಹೋಗುತ್ತಿರುವುದು ಯಾವುದೋ ಬೇರೊಂದು ಅಂಶದ ಪ್ರಭಾವವಿರುವುದನ್ನು ತೋರಿಸುತ್ತದೆ.

### ಜಾಗತಿಕ ತಾಪಮಾನ ಏರಿಕೆಯ ದುಷ್ಪರಿಣಾಮಗಳು

* **ಹವಾಮಾನ ಬದಲಾವಣೆ:** ಭೂ ವಾತಾವರಣದ ತಾಪಮಾನವು ಏರಿಕೆಯಾಗುವುದರಿಂದ ಋತುಮಾನಗಳಲ್ಲಿ ಬದಲಾವಣೆ ಉಂಟಾಗುತ್ತಿದೆ. ಬೇಸಿಗೆಯ ಕಾಲ ಅತಿ ಬಿಸಿಲಿನಿಂದ, ಚಳಿಗಾಲವು ಅತಿಯಾದ ಚಳಿಯಿಂದ ಹಾಗೂ ಅಕಾಲಿಕ ಮಳೆಯ ಪ್ರಮಾಣ ಮುಂತಾದ ಬದಲಾವಣೆಗಳನ್ನುಂಟು ಮಾಡಿವೆ.
* **ಸಮುದ್ರ ಮಟ್ಟ ಏರಿಕೆ** : ಪೃಥ್ವಿಯ ವಾಯುಮಂಡಲದಲ್ಲಿ ಬಿಸಿ ಹೆಚ್ಚಿದಾಗ ಹಿಮಾಲಯ ಹಾಗೂ ಧ್ರುವ ಪ್ರದೇಶಗಳಲ್ಲಿರುವ ಹಿಮ ಬಂಡೆಗಳು ಕರಗಿ ಸಮುದ್ರದ ನೀರಿನ ಮಟ್ಟ 1.3ಮೀಟರ್‌ನಷ್ಟು ಪ್ರತಿ ವರ್ಷ ಹೆಚ್ಚಾಗುತ್ತಿದೆ.
* ವಾತಾವರಣದಲ್ಲಿ ಏರುಪೇರಾಗಿ ಭೂಮಿಯಲ್ಲಿ ಬರಗಾಲ, ಪ್ರವಾಹ ಹೆಚ್ಚಾಗಿದೆ. ಒಂದೆಡೆ ಅತಿವೃಷ್ಟಿ ಉಂಟಾದರೆ ಇನ್ನೊಂದೆಡೆ ಅನಾವೃಷ್ಟಿ ಹೀಗೆ ವ್ಯತಿರಿಕ್ತವಾದ ಹವಮಾನ ಬದಲಾವಣೆ ಉಂಟಾಗಿ ಪ್ರಾಕೃತಿಕ ವಿಪತ್ತುಗಳಾದ ಬರಗಾಲ, ಚಂಡಮಾರುತ, ಸುನಾಮಿಗಳಂತಹ ಅವಘಡಗಳು ಹೆಚ್ಚುತ್ತಿವೆ.
* ಇದರಿಂದಾಗಿ ನೀರಿನ ಸುರಕ್ಷತೆ ಹಾಗೂ ಲಭ್ಯತೆಯ ಮೇಲೆ ದುಷ್ಪರಿಣಾಮ ಉಂಟಾಗಿದೆ.


downloaded from: www.kpscvaani.com

* ಜಾಗತಿಕ ತಾಪಮಾನ ಏರಿಕೆಯು ಪರಿಸರ ಜೀವಿ ವ್ಯವಸ್ಥೆಯ ಸಮತೋಲನವನ್ನು ಅಸ್ಥಿರಗೊಳಿಸಿ ಜೀವಿ ವೈವಿಧ್ಯತೆಯ ನಾಶಕ್ಕೆ ಕಾರಣವಾಗುತ್ತದೆ. ಉದಾ : ಸಮುದ್ರದ ಹವಳದ ಜೀವಿಗಳು ಕೇವಲ $18^0$ ಯಿಂದ $22^0$ ಡಿಗ್ರಿ ಸೆ. ಉಷ್ಣಾಂಶದಲ್ಲಿ ಮಾತ್ರ ಬದುಕಲು ಸಾಧ್ಯ. ತಾಪಮಾನ ಹೆಚ್ಚಾದಾಗ ಇವುಗಳು ತಮ್ಮ ಅಸ್ಥಿತ್ವವನ್ನು ಕಳೆದುಕೊಂಡು ಸಾಗರೀಕ ಜೀವಿ ಪರಿಸರ ವ್ಯವಸ್ಥೆಯ ಇಡೀ ಆಹಾರ ಸರಪಣಿಯನ್ನು ಅಸಮತೋಲನಗೊಳಿಸುತ್ತವೆ.
* ಭಾರತದಂತಹ ಕೃಷಿ ಪ್ರಧಾನವಾದ ದೇಶದಲ್ಲಿ ವಾತಾವರಣದ ಬದಲಾವಣೆಯಿಂದ ತೀವ್ರವಾದ ದುಷ್ಪರಿಣಾಮ ಉಂಟಾಗುತ್ತಿದೆ. ಇಡೀ ಕೃಷಿ ಪದ್ಧತಿಯೇ ಬದಲಾಗುತ್ತಿದೆ. ಮುಂಗಾರಿನಲ್ಲಿ ಮಳೆಯ ಕೊರತೆ, ಹಿಂಗಾರಿನಲ್ಲಿ ಮಳೆಯ ನರ್ತನ ಇವೆಲ್ಲವೂ ಕೃಷಿಕನ ಜೀವನಕ್ಕೆ ಹಾನಿಯನ್ನಷ್ಟೆ ಉಂಟುಮಾಡದೇ ಇವುಗಳನ್ನು ಅವಲಂಬಿಸಿರುವ ಕೈಗಾರಿಕೆ ಹಾಗೂ ಇತರೆ ಆರ್ಥಿಕ ಚಟುವಟಿಕೆಗಳ ಮೇಲೆಯೂ ಕೆಟ್ಟ ಪರಿಣಾಮವನ್ನು ಉಂಟುಮಾಡಿದೆ.
* ಜಾಗತಿಕ ತಾಪಮಾನ ಏರಿಕೆಯು ಮಾನವನ ಆರೋಗ್ಯದ ಮೇಲೆಯೂ ಭೀಕರ ಪರಿಣಾಮವನ್ನುಂಟು ಮಾಡುತ್ತದೆ. ಜಗತ್ತಿನಾದ್ಯಂತ ಅದೇಷ್ಟೋ ಜನರು ಕಾವು ಹೊಡೆತ(Heat Stroke)ದಿಂದಾಗಿ ಪ್ರಾಣವನ್ನು ಕಳೆದುಕೊಂಡಿದ್ದಾರೆ. ಮಲೇರಿಯಾ ಕಾಲರಾ ಮುಂತಾದ ಕಾಯಿಲೆಗಳನ್ನು ತರುವ ರೋಗಾಣುಗಳ ಬೆಳವಣಿಗೆಯನ್ನು ತಾಪಮಾನ ಏರಿಕೆ ವರ್ಧಿಸುತ್ತದೆ.

**ಜಾಗತಿಕ ತಾಪದ ಏರಿಕೆಗೆ ಸಂಬಂಧಿಸಿದಂತೆ ಪ್ರಮುಖ ಘೋಷಣೆಗಳು**

ನಾಸಾದ ಗೋಡಾರ್ಡ್ ಇನ್‌ಸ್ಟಿಟ್ಯೂಟ್ ಫಾರ್ ಸ್ಪೇಸ್ ಸ್ಟಡೀಸ್‌ನ ನಿರ್ದೇಶಕರಾದ ಡಾ॥ಜೇಮ್ಸ್ ಹೆನ್ಸನ್‌ರವರು, ಜಾಗತಿಕ ಉಷ್ಣಾಂಶ ಏರಿಕೆ ಆಗುತ್ತಿರುವುದು ಈಗ ನಿಜವಾದ ಸಂಗತಿ ಎಂದು 1988ರಲ್ಲಿ ಘೋಷಿಸಿದ್ದರು.

ವಿಶ್ವ ಸಂಸ್ಥೆ ಸ್ಥಾಪಿಸಿದ ಐಪಿಸಿಸಿ[ಇಂಟರ್ ಗವರ್ನಮೆಂಟ್ ಪೆನಲ್ ಫಾರ್ ಕ್ಲೈಮೆಟ್ ಚೇಂಜ್)ಈ ಐಪಿಸಿಸಿ, ಹೇಳಿಕೆ ಪ್ರಕಾರ ಇಲ್ಲಿಯವರೆಗೆ ಜಾಗತಿಕ ಉಷ್ಣಾಂಶ ಏರಿಕೆಯ ಬಗ್ಗೆ ಸರಿಯಾದ ಸ್ಪಷ್ಟವಾದ ಮಾಹಿತಿ ಇಲ್ಲವೆಂದು ಹೇಳುತ್ತಿದ್ದರು. ಈಗ ನಮ್ಮ ವಿಜ್ಞಾನಿಗಳು ಸಂಗ್ರಹಿಸಿರುವ ಮಾಹಿತಿಗಳ ಪ್ರಕಾರ ಜಾಗತಿಕ ಉಷ್ಣಾಂತರ ಹೆಚ್ಚಾಗುತ್ತಿರುವುದರಲ್ಲಿ ಯಾವ ಸಂದೇಹವೂ ಇಲ್ಲ ಹಾಗೂ ಇದಕ್ಕೆ ಕಾರಣ ಮಾನವನ ಅಪರಿಮಿತಿ ಚಟುವಟಿಕೆಗಳು ಎಂದು ಹೇಳಿದೆ. ಹವಾಮಾನದಲ್ಲಿ ವೈಪರೀತ್ಯಗಳು ತೀವ್ರವಾಗುತ್ತವೆ. ಇದರಿಂದಾಗಿ ಜನಜೀವನದ ಮೇಲೆ, ವಿಶ್ವ ವಾಣಿಜ್ಯದ ಮೇಲೆ ಹಾಗೂ ಪರಿಸರದ ಮೇಲೆ ಭೀಕರ ಪರಿಣಾಮವಾಗುತ್ತಿದೆ ಎಂದಿದೆ.

ಪ್ರಿನ್ಸ್‌ಟನ್ ವಿಶ್ವವಿದ್ಯಾಲಯದ ನ್ಯಾಷನಲ್ ಓಷಿಮಾನಿಕಾ ಮತ್ತು ಅಟ್‌ಮಾಸ್ ಫರಿಕ್ ಆಡ್‌ಮಿನಿಸ್ಟ್ರೇಷನ್‌ನ ಜೆರಿ ಮಹ್ಲಮೆನ್‌ರವರು ಹೇಳುವುದೇನೆಂದರೆ ಜಾಗತಿಕ ಉಷ್ಣಾಂಶವು ಕಳೆದ 1000ವರ್ಷಗಳಲ್ಲಿ ಅತಿ ಹೆಚ್ಚಿನದಾಗಿ. ಇದಕ್ಕೆ ಕಾರಣ ಅಪರಿಮಿತವಾಗಿ ಬೆಳೆಯುತ್ತಿರುವ ಕೈಗಾರಿಕಾ ಉದ್ದಿಮೆಗಳು ಇವು ಹೊರಸೂಸುವ ಗ್ರೀನ್ ಹೌಸ್ ಅನಿಲಗಳಾದ ಕಾರ್ಬನ್ ಡೈ ಆಕ್ಸೈಡ್, ಮೀಥೇನ್, ನೈಟ್ರಸ್ ಆಕ್ಸೈಡ್, ಓಜೋನ್, ಕ್ಲೋರೋಫ್ಲೋರೊ ಕಾರ್ಬನ್ ಮುಂತಾದವುಗಳು. ಈ ಉಷ್ಣಾಂಶವು ಹೆಚ್ಚುತ್ತಿರುವುದನ್ನು ಅಲ್ಲಗಳೆಯುವವರೆಗೆ ಇದರ ಬಗ್ಗೆ ಪಂದ್ಯ ಕಟ್ಟಲು ಸಿದ್ಧರಿದ್ದಾರೆ. ಇವರು 1ಕ್ಕೆ


downloaded from: www.kpscvaani.com

10ಕೊಡಲು ಸಿದ್ಧರಾಗಿದ್ದಾರೆ ಹಾಗೂ ಯಾರು ಎಷ್ಟು ಹಣ ಕಟ್ಟಲು ಸಿದ್ಧವಾಗಿದ್ದರೂ ಅದಕ್ಕೆ ನಾನು ತಯಾರಿದ್ದೇನೆ ಎಂದಿದ್ದಾರೆ.

**ನಿವಾರಣೆ :** ಜಾಗತಿಕ ತಾಪಮಾನ ಏರಿಕೆಯ ನಿವಾರಣೆಯನ್ನು ಮಾನವ ಜನ್ಯ ಹಸಿರು ಮನೆ ಅನಿಲ ಬಿಡುಗಡೆಯ ದರವನ್ನು ಕಡಿಮೆಗೊಳಿಸುವುದರ ಮೂಲಕ ಸಾಧಿಸಬಹುದು. ಮಾದರಿಗಳ ಪ್ರಕಾರ ನಿವಾರಣೋಪಾಯಗಳು ಆದಷ್ಟು ಬೇಗ ಜಾಗತಿಕ ತಾಪಮಾನ ಏರಿಕೆಯನ್ನು ಕಡಿಮೆಗೊಳಿಸಿದರೂ, ಗಮನಾರ್ಹ ಪ್ರಮಾಣದಲ್ಲಿ ತಾಪಮಾನ ಕಡಿಮೆಯಾಗಲು ಅನೇಕ ಶತಮಾನಗಳೇಬೇಕು.

ಹಸಿರುಮನೆ ಅನಿಲ ಹೊರಸೂಸುವಿಕೆಯನ್ನು ಕಡಿಮೆ ಮಾಡುವುದರ ಮೇಲಿನ ವಿಶ್ವದ ಪ್ರಮುಖ ಅಂತರರಾಷ್ಟ್ರೀಯ ಒಪ್ಪಂದ ಮತ್ತು ಕೈಗೊಂಡ ತೀರ್ಮಾನಕ್ಕೆ 1997ರಲ್ಲಿ ಸಂದಾನದ ಮೂಲಕ UNFCCC ಮಾಡಿದ ತಿದ್ದುಪಡಿಯೇ ಕ್ಯೋಟೋ ನಿಯಾಮಾಳಿಗಳು. ಈ ನಿಯಮಾವಳಿಗಳನ್ನು ಈಗ 160ಕ್ಕೂ ಹೆಚ್ಚಿನ ಸಂಖ್ಯೆಯ ರಾಷ್ಟ್ರಗಳು ಪಾಲಿಸುತ್ತವೆಯಲ್ಲದೇ, ಇದು ಪ್ರತಿಶತ 55ಕ್ಕೂ ಹೆಚ್ಚಿನ ಜಾಗತಿಕ ಹಸಿರುಮನೆ ಅನಿಲ ಹೊರಸೂಸುವಿಕೆಯನ್ನು ತಡೆಹಿಡಿದಿದೆ.

ಅನೇಕ ಪರಿಸರ ಸಂಬಂಧಿ ಗುಂಪುಗಳು ಜಾಗತಿಕ ತಾಪಮಾನ ಏರಿಕೆಯ ವಿರುದ್ಧ ವೈಯಕ್ತಿಕ ಚಟುವಟಿಕೆ ಹಾಗೂ ಸಾಮುದಾಯಿಕ ಮತ್ತು ಪ್ರಾದೇಶಿಕ ಚಟುವಟಿಕೆಗಳನ್ನು ಬೆಂಬಲಿಸುತ್ತವೆ. ಇನ್ನಿತರ ಸಂಸ್ಥೆಗಳು $CO_2$ ಹೊರಸೂಸುವಿಕೆ ಮತ್ತು ಅಗೆದು ತೆಗೆದ ಇಂಧನ ಉತ್ಪಾದನೆಗೆ ನೇರ ಸಂಬಂಧ ಕಲ್ಪಿಸಿ ವಿಶ್ವಾದ್ಯಂತದ ಅಗೆದು ತೆಗೆದ ಇಂಧನ ಉತ್ಪಾದನೆಯ ಪ್ರಮಾಣವನ್ನು ನಿಯಂತ್ರಿಸುವಂತೆ ಸಲಹೆ ನೀಡಿವೆ.

ಆಸ್ಟ್ರೇಲಿಯಾ ತನ್ನ ಇಂಗಾಲ ಮಾಲಿನ್ಯ ನಿಯಂತ್ರಣ ವ್ಯವಸ್ಥೆಯನ್ನು 2008ರಲ್ಲಿ ಘೋಷಿಸಿತು. ಯುನೈಟೆಡ್ ಸ್ಟೇಟ್ಸ್ ಅಧ್ಯಕ್ಷ ಬರಾಕ್ ಒಬಾಮರವರು ಮಿತವ್ಯಯ ವ್ಯಾಪಿ ನಿಯಂತ್ರನ ಮತ್ತು ವ್ಯಾಪಾರ ವ್ಯವಸ್ಥೆಯನ್ನು ಆರಂಭಿಸುವ ಯೋಜನೆಯನ್ನು ಘೋಷಿಸಿದ್ದಾರೆ.

**ಹೊಂದಾಣಿಕೆ :** ಜಾಗತಿಕ ತಾಪಮಾನ ಏರಿಕೆಯೊಂದಿಗೆ ಹೊಂದಿಕೊಳ್ಳಲು ಅನೇಕ ವ್ಯಾಪಕ ಕ್ರಮಗಳನ್ನು ಸೂಚಿಸಲಾಗಿದೆ. ಈ ಕ್ರಮಗಳು ವಾತಾನುಕೂಲಿ ಉಪಕರಣಗಳನ್ನು ಸ್ಥಾಪಿಸುವಂತಹಾ ಅಲ್ಪ ಕ್ರಮದಿಂದ ಹಿಡಿದು ಸಮುದ್ರ ಮಟ್ಟದ ಏರಿಕೆಯಿಂದ ತೊಂದರೆಯಾಗಬಲ್ಲ ನಿರ್ಮಾಣಗಳನ್ನು ಸ್ಥಗಿತ ಇಲ್ಲವೇ ಸ್ಥಳಾಂತರಿಸುವಂತಹ ಪ್ರಮುಖ ಆಧಾರ ರಚನೆ ಯೋಜನೆಗಳವರೆಗೆ ವ್ಯಾಪಿಸಿದೆ.

ನೀರಿನ ಸಂರಕ್ಷಣೆ, ನೀರಿನ ಪಡಿತರ ವ್ಯವಸ್ಥೆ, ಹೊಂದಾಣಿಸಿದ ಕೃಷಿ ವಿಧಾನಗಳು, ಪ್ರವಾಹ ನಿರೋಧಕ ನಿರ್ಮಾಣಗಳು ಮಂಗಳದ ಮೇಲೆ ವಸಾಹತು ಸ್ಥಾಪಿಸುವಿಕೆ, ಆರೋಗ್ಯ ವ್ಯವಸ್ಥೆಯಲ್ಲಿನ ಬದಲಾವಣೆಗಳು ಮತ್ತು ಅಳಿವಿನಂಚಿನಲ್ಲಿರುವ ಪ್ರಭೇದಗಳನ್ನು ಉಳಿಸಲು ಹಸ್ತಕ್ಷೇಪ ಮಾಡುವಂತಹ ವಿವಿಧ ಕ್ರಮಗಳನ್ನು ಸೂಚಿಸಲಾಗಿದೆ.

## ಪ್ರಬಂಧ 25 : ಜೈವಿಕ ತಂತ್ರಜ್ಞಾನ ವರವೂ ಹೌದು, ಶಾಪವೂ ಹೌದು

**ಪ್ರಸ್ತಾವನೆ :** ಮಾನವ 21ನೇ ಶತಮಾನದಲ್ಲಿ ವಾಸಿಸುತ್ತಿದ್ದು, ಅವನ ಸಾಧನೆಗಳು ಎಲ್ಲಾ ಕ್ಷೇತ್ರದಲ್ಲೂ ಪ್ರಸರಿಸಿ ಜೈವಿಕ ತಂತ್ರಜ್ಞಾನಕ್ಕೂ ಕಾಲಿಟ್ಟು ಮಹತ್ತರವಾದ ಸಾಧನೆಗಳನ್ನು ಮಾಡುತ್ತಿದ್ದಾನೆ. ಪ್ರಗತಿಶೀಲ ರಾಷ್ಟ್ರಗಳಲ್ಲಿ ಒಂದಾದ ಭಾರತದಲ್ಲೂ ಜೈವಿಕ ತಂತ್ರಜ್ಞಾನಕ್ಕೆ ಉತ್ತಮ ಪ್ರೋತ್ಸಾಹ ದೊರಕುತ್ತಿದೆ. ಕರ್ನಾಟಕ ರಾಜ್ಯದಲ್ಲಿ ಜೈವಿಕ ತಂತ್ರಜ್ಞಾನದ ಅಭಿವೃದ್ಧಿಗೆ ಉಜ್ವಲ ಭವಿಷ್ಯ ಕಂಡುಬರುತ್ತಿದೆ.



downloaded from: www.kpscvaani.com

**ಜೈವಿಕ ತಂತ್ರಜ್ಞಾನದ ಅರ್ಥ :** ಜೀವಿಗಳ ಗುಣಲಕ್ಷಣಗಳನ್ನು ಬಳಸಿಕೊಂಡು ಉಪಯುಕ್ತ ಉತ್ಪನ್ನಗಳನ್ನು ಪಡೆಯುವ ತಂತ್ರಜ್ಞಾನವೇ ಜೈವಿಕ ತಂತ್ರಜ್ಞಾನ.

ಜೈವಿಕ ಕಾರ್ಯ ವಿಧಾನಗಳನ್ನು ಬಳಸಿಕೊಳ್ಳುವ ವಿಜ್ಞಾನವೇ ಜೈವಿಕ ತಂತ್ರಜ್ಞಾನ. ಜೀವಿಗಳು, ಜೈವಿಕ ಕ್ರಿಯೆಗಳು ಅಥವಾ ಜೈವಿಕ ಸಂಘಟನೆಗಳನ್ನು ತಯಾರಿಕಾ ಘಟಕ ಮತ್ತು ಸೇವೆಗಾಗಿ ಅನ್ವಯಿಸುವುದೇ ಜೈವಿಕ ತಂತ್ರಜ್ಞಾನ. ಜೈವಿಕ ತಂತ್ರಜ್ಞಾನ ಎಂಬ ಪದ ಮೊಟ್ಟ ಮೊದಲು 1920ರಲ್ಲಿ ಬ್ರಿಟನ್ ದೇಶದ ಲೀಟ್ಸ್‌ನಲ್ಲಿ ಬಳಕೆ ಬಂದಿತು.

**ಜೈವಿಕ ತಂತ್ರಜ್ಞಾನದ ಚಾರಿತ್ರಿಕ ಹಿನ್ನೆಲೆ :**

- ಜೈವಿಕ ತಂತ್ರಜ್ಞಾನವು ಒಂದು ವಿಶಿಷ್ಟ ವಿಜ್ಞಾನ ಶಾಖೆಯಾಗಿ ಇತ್ತೀಚಿನ ಶಥಮಾನಗಳಲ್ಲಿ ರೂಪುಗೊಂಡಿದೆಯಾದರೂ, ಇದರ ಅನ್ವಯ ರೂಪದಲ್ಲಿ ಪರಿಜ್ಞಾನವೂ ಕ್ರಿ.ಪೂ.600ಕ್ಕೂ ಹಿಮದೆಯೇ ಮನುಷ್ಯರಿಗೆ ತಿಳಿದಿತ್ತು. ಉದಾಹರಣೆಗೆ ಸುಮೇರಿಯನ್ನರು ವಿವಿಧ ರೀತಿಯ ವೈನ್ ಪಾನೀಯವನ್ನು ಭಟ್ಟಿ ಇಳಿಸುವುದನ್ನು ಕರಗತ ಮಾಡಿಕೊಂಡಿದ್ದರು.
- ಕ್ರಿ.ಶ.3ನೇ ಶತಮಾನದಲ್ಲಿ ಬ್ಯಾಬಿಲೋನ್ ಮತ್ತು ಈಜಿಪ್ಟ್‌ನಲ್ಲಿ ಭಟ್ಟಿ ಇಳಿಸುವ ಕೇಂದ್ರಗಳು ಇದ್ದದ್ದಕ್ಕೆ ಸ್ಪಷ್ಟ ದಾಖಲೆಗಳಿವೆ.
- ಕ್ರಿ.ಶ.1150ರ ಸಮಯಕ್ಕೆ ಭಟ್ಟಿ ಇಳಿಸುವಿಕೆಯಿಂದ ಈಥೈಲ್ ಆಲ್ಕೋಹಾಲ್‌ನ್ನು ತಯಾರಿಸುವ ವಿಧಾನ ಬಳಕೆಗೆ ಬಂದು, ಈಗಲೂ ಕೂಡ ಇದನ್ನು ದೊಡ್ಡ ಪ್ರಮಾಣದಲ್ಲಿ ಉತ್ಪಾದನೆ ಮಾಡಲಾಗುತ್ತಿದೆ.
- ಬ್ರೆಡ್ ತಯಾರಿಸಲು ಹಿಟ್ಟನ್ನು ಹುಳಿ ಬರಿಸುವ ವಿಧಾನ ಸಾವಿರಾರು ವರ್ಷಗಳಿಂದ ಮಾನವನಿಗೆ ತಿಳಿದಿದೆ. ಈ ಕ್ರಮ ಇಂದಿಗೂ ಬಳಕೆಯಲ್ಲಿದೆ.
- 1650ರಲ್ಲಿ ಫ್ರಾನ್ಸ್‌ನಲ್ಲಿ ಅಣಬೆಗಳನ್ನು ಕೃತಕವಾಗಿ ಬೆಳೆಸುವ ವಿಧಾನ ಬಳಕೆಗೆ ಬಂದಿತು.
- 1857ರಲ್ಲಿ ಲೂಯಿ ಪ್ಯಾಶ್ಚರ್ ಲ್ಯಾಕ್ಟಿಕ್ ಆಮ್ಲದ ಹುದುಗುವಿಕೆಯನ್ನು ವಿವರಿಸಿದನು.
- 1897ರಲ್ಲಿ ಯೀಸ್ಟ್ ಕೋಶಗಳಿಲ್ಲದೆ ಆಲ್ಕೋಹಾಲ್ ಹುದುಗುವಿಕೆಯನ್ನು ಉಂಟು ಮಾಡಬಹುದೆಂದು ಎಡೋರ್ಡ್ ಬುಬ್ನರ್ ಪತ್ತೆ ಮಾಡಿದರು.
- 1915ರಲ್ಲಿ ಬೇಕರಿಗಳಿಗೆ ಅವಶ್ಯವಾದ ಯೀಸ್ಟ್‌ನ್ನು ಭಾರಿ ಪ್ರಮಾಣದಲ್ಲಿ ತಯಾರಿಸಲು ಹೊಸ ವಿಧಾನವನ್ನು ಜರ್ಮನ್ ದೇಶದಲ್ಲಿ ಅಳವಡಿಸಲಾಯಿತು.
- 1920ರ ನಂತರ ವಿಶ್ವದ ಅನೇಕ ಕಡೆ ಜೈವಿಕ ತಂತ್ರಜ್ಞಾನಕ್ಕೆ ಆಧಾರವಾಗುವ ನೂರಾರು ಸಂಶೋಧನೆಗಳನ್ನು ನಡೆಸಲಾಗಿದೆ.

**ತಂತ್ರಜ್ಞಾನದ ಬೆಳವಣಿಗೆ :**

**ತಳಿ ತಂತ್ರಜ್ಞಾನ –**ವಂಶವಾಹಿಗಳಲ್ಲಿ ಅಗತ್ಯವಾದ ಬದಲಾವಣೆಗಳನ್ನು ಉಂಟುಮಾಡುವ ತಂತ್ರಜ್ಞಾನವೇ ತಳಿ ತಂತ್ರಜ್ಞಾನ (ಜೆನಿಟಿಕ್ ಇಂಜಿನಿಯರಿಂಗ್) ಪ್ರಯೋಗ ಶಾಲೆಯಲ್ಲಿ ವಂಶವಾಹಿಗಲನ್ನು



downloaded from: www.kpscvaani.com

ಬದಲಾಯಿಸಲು ಬಳಸಲಾಗುತ್ತಿರುವ ಕಾರ್ಯ ತಂತ್ರಕ್ಕೆ ಪುನರ್ ಸಂಯೋಜಿತ ಡಿ.ಎನ್.ಎ ತಂತ್ರಜ್ಞಾನ(ರಿಕಾಂಬಿಟೆಂಟ್ ಡಿ.ಎನ್.ಎ.ಟೆಕ್ನಾಲಜಿ) ಎಂದು ಹೆಸರು. ಅಪೇಕ್ಷಿತ ಅಥವಾ ಉಪಯುಕ್ತ ವಂಶವಾಹಿಯೊಂದನ್ನು(ಜೀನ್) ಬೇರ್ಪಡಿಸಿ ಅದನ್ನು ಇನ್ನೊಂದು ಕೋಶದಲ್ಲಿ ಬೆಳಸಿ ಅದು ಅಲ್ಲಿ ಪುನರುತ್ಪತ್ತಿಗೊಳ್ಳುವಂತೆ ಮಾಡುವುದು ಈಗ ಸಾಧ್ಯವಾಗಿದೆ.

ಪುನರ್ ಸಂಯೋಜಿತ (ಡಿ.ಎನ್.ಎ) ತಂತ್ರಜ್ಞಾನವು ಪ್ರಯೋಗಾಲಯದಲ್ಲಿ ಜೀವಿಯೊಂದರ ಅನುವಂಶೀಯ ವಸ್ತುವನ್ನು ಬದಲಾಯಿಸುವ ಪ್ರಕ್ರಿಯೆಗಳನ್ನು ಒಳಗೊಂಡಿದೆ. ಈ ತಂತ್ರಜ್ಞಾನದಲ್ಲಿ ಒಂದು ಅಪೇಕ್ಷಿತ ವಂಶವಾಹಿಗಳಿರುವ ಡಿ.ಎನ್.ಎ.ಯನ್ನು ಅದು ಇರುವ ಜೀವಕೋಶದಿಂದ ಹೊರತೆಗೆಯಲಾಗುತ್ತದೆ. ನಂತರ ಅದನ್ನು ವಾಹಕ ಡಿ.ಎನ್.ಎ ಒಂದರ ಸಹಾಯದಿಂದ ಇನ್ನೊಂದು ಅತಿಥೇಯ ಜೀವಕೋಶಕ್ಕೆ ವರ್ಗಾಯಿಸಲಾಗುತ್ತದೆ.

ವಂಶವಾಹಿಗಳ ಮಾರ್ಪಾಟು ಸಸ್ಯತಳೀಕರಣದ ಅತಿ ಮುಖ್ಯ ಬೆಳವಣಿಗೆ, ಗೊತ್ತು ಗುರಿಯಿಲ್ಲದೆ, ವಂಶವಾಹಿಗಳನ್ನು ಸಕಾರ ಮಾಡುವ ಸಾಂಪ್ರದಾಯಿಕ ಪದ್ಧತಿಯ ಬದಲಿಗೆ ಅಪೇಕ್ಷಿತ ಗುಣಕ್ಕೆ ಕಾರವಾಗುವ ವಂಶವಾಹಿಯನ್ನು ಆಯ್ಕೆ ಮಾಡಿ ಅದನ್ನು ನೇರವಾಗಿ ಅತಿಥೇಯ ಜೀವಕೋಶಕ್ಕೆ ವರ್ಗವಣೆ ಮಾಡಲಾಗುತ್ತದೆ. ಇದಕ್ಕೆ ಕುಲಾಂತರೀಕರಣ(ಜೆನಿಟಿಕ್ ಮೋಡಿಫಿಕೇಶನ್)ಎಂದು ಹೆಸರು. ಅಂಥ ಸಸ್ಯಗಳಿಗೆ ಕುಲಾಂತರಿ ಸಸ್ಯಗಳು ಎಂದು ಹೆಸರು. ವಂಶವಾಹಿ ವೈವಿಧ್ಯದ ವಿಶಾಲ ಆಯ್ಕೆಯ ಸಲುವಾಗಿ ಸಂಬಂಧಿಸಿದ ಸಸ್ಯಗಳಿಂದ ಅಥವಾ ಬೇರೆ ಜೀವಿಗಳಿಂದ ವಂಶವಾಹಿಗಳನ್ನು ಪಡೆಯಬಹುದು. ಇದನ್ನು ಸಂಯೋಜಿತ ಡಿ.ಎನ್.ಎ.ತಂತ್ರಜ್ಞಾನ()ದ ಮೂಲಕ ಮಾಡಲಾಗುತ್ತದೆ.

ಎಲ್ಲಾ ಕೃತಕ ಆಹಾರ ಮಿಶ್ರಕಗಳನ್ನು ಈಗ ಪುನರ್ ಸಂಯೋಜಿತ(ಡಿ.ಎನ್.ಎ) ತಂತ್ರಜ್ಞಾನ ಬಳಸಿ ಉತ್ಪಾದಿಸಲಾಗುತ್ತಿದೆ.

**ಆಹಾರ ಉದ್ಯಮದಲ್ಲಿ ಜೈವಿಕ ತಂತ್ರಜ್ಞಾನದ ಪಾತ್ರ :**

ಜೈವಿಕ ತಂತ್ರಜ್ಞಾನದ ಮತ್ತೊಂದು ಪ್ರಮುಖ ಕೊಡುಗೆಯನ್ನು ಆಹಾರ ತಂತ್ರಜ್ಞಾನ ಕ್ಷೇತ್ರದಲ್ಲಿ ಗಮನಿಸಬಹುದು. ಇತ್ತೀಚಿನ ವರ್ಷಗಳಲ್ಲಿ ಆಹಾರದ ಸಂರಕ್ಷಣೆ ಹಾಗೂ ಸಂಯೋಜನೆಗೆ ಸಂಬಂಧಿಸಿದಂತೆ ಆಹಾರೋದ್ಯಮದಲ್ಲಿ ಪ್ರಮುಖ ಬದಲಾವಣೆಗಳನ್ನು ಗಮನಿಸುತ್ತಿದ್ದೇವೆ. ಈ ಉದ್ದೇಶಕ್ಕಾಗಿ ಅನೇಕ ರೀತಿಯ ವಸ್ತುಗಳನ್ನು ಬಳಸುತ್ತಿದ್ದು, ಅವುಗಳಿಗೆ ಮಿಶ್ರಕಗಳು() ಎಂದು ಹೆಸರು. ಈಗ ಸುಮಾರು ಮೂರು ಸಾವಿರದಷ್ಟು ಬಗೆಯ ಆಹಾರ ಮಿಶ್ರಕಗಳನ್ನು ಬಳಸಲಾಗುತ್ತಿದೆ. ಇವುಗಳನ್ನು ಮೂರು ಬಗೆಯಲ್ಲಿ ಗುರುತಿಸಲಾಗಿದೆ.

* **ನೈಸರ್ಗಿಕ ಮಿಶ್ರಕಗಳು :** ಬೀಟ್‌ರೂಟ್, ಕೇಸರಿ ಮತ್ತು ಅರಿಶಿಣ ಮೊದಲಾದ ಸಸ್ಯೋತ್ಪನ್ನ ಘಟಕಗಳನ್ನು ವರ್ಣಕಾರಕವಾಗಿ ಬಳಸಲಾಗುತ್ತಿದೆ.
* **ಮಾನವ ನಿರ್ಮಿತ ಮಿಶ್ರಕಗಳು :** ಇವು ಪ್ರಕೃತಿಯಲ್ಲಿ ದೊರಕುವ ನೈಸರ್ಗಿಕ ವಸ್ತುಗಳ ನಕಲುಗಳಾಗಿವೆ. ಉದಾ : ಸಕ್ಕರೆ ಬದಲು ಬಳಸುವ ಸ್ಯಾಕರಿನ್
* **ಕೃತಕ ಮಿಶ್ರಕಗಳು :** ನಿಸರ್ಗದಲ್ಲಿ ದೊರಕಲಾರದ, ಕೃತಕವಾಗಿ ಸೃಷ್ಟಿಸಲಾದ ವಸ್ತುಗಳು. ಅತ್ಯಂತ ಹೆಚ್ಚು ಪ್ರಮಾಣದಲ್ಲಿ ಬಳಸಲಾಗುತ್ತಿರುವ ಆಹಾರ ಮಿಶ್ರಕಗಳೆಂದರೆ ಸಂರಕ್ಷಗಳು(Preservatives) ಇವು ಸೂಕ್ಷ್ಮ ಜೀವಿಗಳ ಬೆಳವಣಿಗೆ ತಡೆದು, ಆಹಾರ ಕೆಡದಂತೆ ಸಂರಕ್ಷಿಸುತ್ತವೆ ಮತ್ತು ಆಹಾರದ ಜೀವಿತಾವಧಿಯನ್ನು ಹೆಚ್ಚಿಸುತ್ತದೆ.

ಆಹಾರ ಪದಾರ್ಥದಲ್ಲಿರವ ಕೊಬ್ಬು ಅಥವಾ ತೈಲದ ಅಂಶ ಕೆಟ್ಟ ವಾಸನೆಯನ್ನು ಪಡೆಯುವುದನ್ನು ತಡೆಯಲು ಬಳಸಲಾಗುವ ಪ್ರತಿ ಉತ್ಕರ್ಷಕ()ಗಳು.



downloaded from: www.kpscvaani.com

ಆಹಾರವನ್ನು ಸಂಸ್ಕರಿಸುವಾಗ ನಾಶವಾಗುವ ಬಣ್ಣಗಳನ್ನು ಮತ್ತೆ ಒದಗಿಸಲು ಬಳಸುವ ವರ್ಣಕರಕಗಳು ನಿರ್ದಿಷ್ಟ ರುಚಿಯನ್ನು ಒದಗಿಸಲು ಬಳಸುವ ರುಚಿಕಾರಕಗಳು.

ಆಹಾರದಲ್ಲಿರುವ ಸಿಹಿಯ ಪ್ರಮಾಣವನ್ನು ಹೆಚ್ಚಿಸಲು ಬಳಸುವ ಸಿಹಿಕಾರಕಗಳು.

ಉದಾ : ಕುಲಾಂತರಿ ಸಸ್ಯಗಳಿಗೆ ಒಂದು ಜ್ವಲಂತ ಉದಾಹರಣೆ ಎಂದರೆ ಬಿ.ಟಿ.ಹತ್ತಿ. ಈ ಹತ್ತಿಯ ಬಗೆಯಲ್ಲಿ ಬ್ಯಾಸಿಲ್ಲಸ್ ಥುರಿಂಜಿಯೆನ್ಸಿಸ್() ಎಂಬ ಬ್ಯಾಕ್ಟೀರಿಯಾದಿಂದ ಪಡೆದ ವಂಶವಾಹಿಯನ್ನು ಅಳವಡಿಸಲಾಗಿದೆ. ಹತ್ತಿ ಗಿಡಕ್ಕೆ ತಗುಲುವ ಬೋಲ್() ಕೀಟಗಳನ್ನು ನಾಶಪಡಿಸುವ ವಿಷವಸ್ತುವೊಂದನ್ನು ಉತ್ಪಾದಿಸುವ ಸಾಮರ್ಥ್ಯ ಈ ವಂಶವಾಹಿಗಿದೆ. ಹೀಗಾಗಿ, ಬಿ.ಟಿ. ಹತ್ತಿಯು, ಬೋಲ್ ಕೀಟಗಳ ಹಾವಳಿಯಿಂದ ಮುಕ್ತವಾಗಿದೆ.

**ಡಿ.ಎನ್.ಎ. ಬೆರಳಚ್ಚು ತಂತ್ರಜ್ಞಾನ :**

ಇದು ಜೈವಿಕ ತಂತ್ರಜ್ಞಾನದ ಮತ್ತೊಂದು ಪ್ರಮುಖ ಕಾರ್ಯತಂತ್ರ. ಒಂದು ಪ್ರಭೇದದ ಜೀವಿಗಳ ನಡುವೆ ಇರುವ ತಳಿ ಸಂಬಂಧ ಸಾಮ್ಯತೆಗಳನ್ನು ಮತ್ತು ಜೀವಿಗಳನ್ನೂ ಗುರ್ತಿಸಲು ಇದು ಸಹಕಾರಿಯಾಗಿದೆ. ಈ ತಂತ್ರಜ್ಞಾನದಲ್ಲಿ ಒಬ್ಬ ವ್ಯಕ್ತಿಯ ಜೀವಕೋಶದಲ್ಲಿರುವ ಡಿ.ಎನ್.ಎ. ಅಣುವನ್ನು ಸಣ್ಣ ತುಣುಕುಗಳನ್ನಾಗಿ ವಿಭಜಿಸಿ, ಜೆಲ್ ಇಲೆಕ್ಟ್ರೋಫೋರೋಸಿಸ್ ಸಹಾಯದಿಂದ ಅವುಗಳ ಗಾತ್ರ ಹಾಗೂ ವಿದ್ಯುದಾವೇಶದ ಆಧಾರದ ಮೇಲೆ ಬೇರ್ಪಡಿಸಲಾಗುವುದು. ದೊಡ್ಡ ತುಣುಕುಗಳು ಸಣ್ಣ ತುಣುಕುಗಳಿಗಿಂತ ನಿಧಾನವಾಗಿ ಚಲಿಸುವುದರ ಪರಿಣಾಮವಾಗಿ ಬೆರಳಚ್ಚುಗಳಂತಹ ಅನೇಕ ರೇಖೆಗಳು ಉಂಟಾಗುವುವು. ಇದನ್ನು ಬೆರಳಚ್ಚು ತಂತ್ರಜ್ಞಾನ ಎನ್ನುವರು. ಡಿ.ಎನ್.ಎ. ಬೆರಳಚ್ಚುಗಳು ವ್ಯಕ್ತಿಯಿಂದ ವ್ಯಕ್ತಿಗೆ ವ್ಯತ್ಯಾಸವಿರುವುದರಿಂದ ಅಪರಾಧ ತನಿಖೆ ವಿಭಾಗದಲ್ಲಿ ಈ ತಂತ್ರಜ್ಞಾನ ಅತ್ಯಂತ ಸಹಕಾರಿಯಾಗಿದೆ.

**ಅಂಗಾಂಶ ಕೃಷಿ :**

ಸಸ್ಯದ ಕತ್ತರಿಸಿದ ಅಂಗ, ಅಂಗಾಂಶ ಅಥವಾ ಜೀವಕೋಶಗಳನ್ನು ಸೂಕ್ತ ಪೋಷಕ ಮಾಧ್ಯಮ ಸಹಾಯದಿಂದ ನಿಯಂತ್ರಿತ ಸನ್ನಿವೇಶದಲ್ಲಿ ಸಸ್ಯಗಳನ್ನು ಸೃಷ್ಟಿಸುವ ವಿಧಾನಕ್ಕೆ ಅಂಗಾಂಶ ಕೃಷಿ ತಂತ್ರಜ್ಞಾನವೆಂದು ಹೆಸರು.

ಅಂಗಾಂಶ ಕೃಷಿ ತಂತ್ರಜ್ಞಾನವನ್ನು ಬಳಸಲು ವಿಶಿಷ್ಟವಾದ ಪ್ರಯೋಗಾಲಯ ಅವಶ್ಯ. ಮುಖ್ಯವಾದ ಪೋಷಕ ಮಾಧ್ಯಮವನ್ನು ಸಿದ್ದಪಡಿಸುವ ಕೊಠಡಿ, ಕೃಷಿ ಕೊಠಡಿ ಮತ್ತು ಸೋಂಕಿಸುವ ಕೊಠಡಿಗಳು ಪ್ರತ್ಯೇಕವಾಗಿದ್ದು, ಪ್ರತಿಯೊಂದರಲ್ಲೂ ವಿಶಿಷ್ಟ ಉಪಕರಣಗಳು, ಹವಾನಿಯಂತ್ರಣ, ನಿಷ್ಕ್ರಿಮಿ ವಾತಾವರಣ ಮುಂತಾದ ವ್ಯವಸ್ಥೆ ಇರುತ್ತದೆ. ಅಂಗಾಂಶ ಕೃಷಿಯ ಮೂಲತತ್ವ ಜೀವಕೋಶದ ಟೋಟಿಪೋಟೆನ್ಸಿ ಗುಣ. ಒಮದು ಜೀವಕೋಶವು ಸಂಪೂರ್ಣ ಹೊಸ ಜೀವಿಯಾಗಿ ಬೆಳವಣಿಗೆ ಹಾಗೂ ವಿಕಾಸವಾಗುವ ಸಾಮರ್ಥ್ಯಕ್ಕೆ ಟೋಟಿಪೋಟೆನ್ಸಿ ಎಂದು ನಿರೂಪಿಸಲಾಗಿದೆ.

**ಅಂಗಾಂಶ ಕೃಷಿಯಿಂದ ಆಗುವ ಪ್ರಯೋಜನಗಳು**

- ಔಷಧೀಯ ಹಾಗೂ ಅಲಂಕಾರಿಕ ಸಸ್ಯಗಳ ದೊಡ್ಡ ಮಟ್ಟದ ಪ್ರಜನನಕ್ಕಾಗಿ ಅಂಗಾಂಶ ಕೃಷಿಯನ್ನು ಉಪಯೋಗಿಸಲಾಗುತ್ತದೆ.
- ಅದು ಆಹಾರ ಬೆಳೆಗಳ ಹಾಗೂ ತೋಟದ ಬೆಳೆಗಳ ಪ್ರಜನನಕ್ಕಾಗಿಯೂ ಉಪಯೋಗವಾಗುತ್ತದೆ.
- ರೋಗಮುಕ್ತ ಸಸ್ಯಗಳನ್ನು ಅಭಿವೃದ್ಧಿಪಡಿಸಲು ಅಂಗಾಂಶ ಕೃಷಿಯು ಸಹಕಾರಿಯಾಗಿದೆ.
- ಬಹುಮೂಲ್ಯ ಉಪಯುಕ್ತ ಉಪಾಪಚಯಕಗಳನ್ನು ಪ್ರತ್ಯೇಕಿಸಲು ಈ ತಂತ್ರಜ್ಞಾನ ಸಹಕಾರಿ.



downloaded from: www.kpscvaani.com

- ಈ ಆಧುನಿಕ ತಂತ್ರಜ್ಞಾನದಿಂದ ರೋಗ ನಿರೋಧಕ ಮತ್ತು ಹೆಚ್ಚು ಇಳುವರಿ ನೀಡುವ ಸಸ್ಯಗಳನ್ನು ಪಡೆಯಬಹುದು.
- ಅನೇಕ ಸಸ್ಯಗಳ ಜೀವನ ಚಕ್ರದ ಅವಧಿಯನ್ನು ಕಡಿಮೆ ಮಾಡಬಹುದು. ವರ್ಷಕ್ಕೊಮ್ಮೆ ಹೂ ಬಿಡುವ ಗುಲಾಬಿ ಗಿಡ ಮುಂತಾದವು ಈ ವಿಧಾನದಿಂದ ವರ್ಷಕ್ಕೆ ಎರಡು ಬಾರಿ ಹೂ ಬಿಡುವಂತೆ ಮಾಡಬಹುದು.
- ಜೀವದ್ರವ್ಯ ಸಂಕರಣದ ಮೂಲಕ ವಿವಿಧ ಜಾತಿಯ ಸಸ್ಯ ಜೀವಕೋಶಗಳನ್ನು ಬೆಸೆದು ಹೊಸ ಜಾತಿಯ ಸಸ್ಯಗಳನ್ನು ಸೃಷ್ಟಿಸಬಹುದಾಗಿದೆ. ಉದಾ: ಪೊಮ್ಯಾಟೋ
- ಅತಿ ಕಡಿಮೆ ಸ್ಥಳದಲ್ಲಿ ಮತ್ತು ಕಡಿಮೆ ಅವಧಿಯಲ್ಲಿ ಲಕ್ಷಾಂತರ ಸಸ್ಯಗಳನ್ನು ವೃದ್ಧಿಗೊಳಿಸಬಹುದು.
- ಅನೇಕ ಅಪೇಕ್ಷಿತ ಶುದ್ಧ ಗುಣಗಳನ್ನು ಪರಾಗರೇಣು ಮತ್ತು ಗರ್ಭಾಂಕುರವಾಗಿರದ ಕೃಷಿ ವಿಧಾನದ ಮೂಲಕ ರಕ್ಷಿಸಿಕೊಳ್ಳಬಹುದು.
- ಸಾರಜನಕ ಸ್ಥಿರೀಕರಣ ಹೊಂದಿರುವ ವಂಶವಾಹಿನಿಯನ್ನು ಬ್ಯಾಕ್ಟೀರಿಯಾಗಳಿಂದ ಪಡೆದು ಅನೇಕ ಮೇಲ್ವರ್ಗದ ಸಸ್ಯಗಳಿಗೆ ವರ್ಗಾಯಿಸಿ, ಆ ಸಸ್ಯಗಳು ಸಾರಜನಕದ ಅವಶ್ಯಕತೆಯನ್ನು ಪೂರೈಸಿಕೊಳ್ಳುವಂತೆ ಮಾಡಬಹುದು.

**ತದ್ರೂಪಿ ಸೃಷ್ಟಿ**

ಒಂದೇ ಮಾತೃ ಜೀವಕೋಶದಿಂದ ಅಲೈಂಗಿಕ ರೀತಿಯಲ್ಲಿ ಉತ್ಪತ್ತಿಯಾಗಿರುವ ಅಣುಗಳ (ಜೀನ್‌ಗಳ) ಅಥವಾ ಜೀವಕೋಶಗಳ ಅಥವಾ ಜೀವಿಗಳ ಒಂದು ಇಡೀ ಸಮೂಹಕ್ಕೆ ತದ್ರೂಪಿ ಅಥವಾ ಕ್ಲೋನ್ ಎಂದು ಹೆಸರು.

- ಕ್ರಿ.ಶ 1997 ರಲ್ಲಿ ಡಾ॥ ವಿಲಿಯಂ ವಿಲ್ಮಟ್ ಎಂಬ ಇಂಗ್ಲೇಂಡ್‌ನ ವಿಜ್ಞಾನಿ ಮೊಟ್ಟ ಮೊದಲಿಗೆ ತದ್ರೂಪಿ ಸೃಷ್ಟಿಸಿದರು.
- ಮೊಟ್ಟ ಮೊದಲ ತದ್ರೂಪಿ ಸೃಷ್ಟಿಸಿದ ಪ್ರಾಣಿ – ಕುರಿ (ಡಾಲಿ)
- ಮಾನವ ತದ್ರೂಪಿ ಸೃಷ್ಟಿಗೆ ಅವಕಾಶವನ್ನು ನೀಡಿರುವ ದೇಶ – ಆಸ್ಟ್ರೇಲಿಯಾ
- ಮೊಟ್ಟ ಮೊದಲ ಪ್ರನಾಳ ಶಿಶು – ಲೂಯಿಸ್ ಬ್ರೌನ್
- ಇತ್ತೀಚೆಗೆ ತದ್ರೂಪಿ ಸೃಷ್ಟಿಸಿದ ಪ್ರಾಣಿ – ಒಂಟೆ
- ಭಾರತದಲ್ಲಿ ವಿರೋಧಿಸಿದ ಎರಡು ಬಿ.ಟಿ. ತಳಿಗಳು ಹತ್ತಿ ಮತ್ತು ಬದನೆ.
- ಬಿ.ಟಿ ಎಂದರೆ ಬ್ಯಾಸಿಲಸ್ ತುರಾಂಜಿಸಿಸ್.
- ಬೆಂಗಳೂರಿನ ಬನ್ನೇರುಘಟ್ಟದಲ್ಲಿ ಬಯೋ ಟೆಕ್ನಾಲಜಿ ಪಾರ್ಕ್ ನಿರ್ಮಿಸಲಾಗಿದೆ.

**ಜೈವಿಕ ತಂತ್ರಜ್ಞಾನ (ಜೀವ ತಂತ್ರಜ್ಞಾನ)ದ ಅನ್ವಯಗಳು**

ಜೀವ ತಂತ್ರಜ್ಞಾನವು ಅದರಲ್ಲಿಯೂ ತಳಿ ತಂತ್ರಜ್ಞಾನವನ್ನು ಇಂದು ಅನೇಕ ಉತ್ಪಾದಕ ಹಾಗೂ ಸೇವಾ ಕೈಗಾರಿಕೆಗಳಲ್ಲಿ ಹಲವು ಬಗೆಗಳಲ್ಲಿ ಬಳಕೆಯಾಗುತ್ತಿದೆ.


downloaded from: www.kpscvaani.com

- ಕೃಷಿ ಕ್ಷೇತ್ರದಲ್ಲಿ ಜೀವ ತಂತ್ರಜ್ಞಾನದ ಕೊಡುಗೆ ಮಹತ್ತರವಾದುದು. ಸಸ್ಯ ಮತ್ತು ಪ್ರಾಣಿ ಸಂಕುಲಗಳ ಅಭಿವೃದ್ಧಿಯಿಂದ ಪ್ರಾರಂಭಿಸಿ ಉಪದ್ರವಕಾರಿ ಹಾಗೂ ರೋಗಕಾರಕ ಜೀವಿಗಳ ನಿಯಂತ್ರಣದವರೆಗೆ ಜೀವ ತಂತ್ರಜ್ಞಾನದ ವ್ಯಾಪ್ತಿ ಹರಡಿದೆ.
- ಆಹಾರ ಸಂಸ್ಕರಣಾ ಘಟಕಗಳಲ್ಲಿ ಅಂಗೀಕಾರಾರ್ಹವಾದ ಅಡಿಟಿವ್‌ಗಳ ತಯಾರಿಕೆಯಲ್ಲಿ ಜೈವಿಕ ತಂತ್ರಜ್ಞಾನ ಬಳಕೆಯಾಗುತ್ತಿದೆ.
- ಜೈವಿಕ ವೇಗ ವರ್ಧಕಗಳ ಹಾಗೂ ಜೈವಿಕ ಪಾಲಿಮರ್‌ಗಳ ಉತ್ಪಾದನೆಯಲ್ಲಿ ಜೈವಿಕ ತಂತ್ರಜ್ಞಾನದ ಹಲವು ಪ್ರಕ್ರಿಯೆಗಳು ಬಳಕೆಯಾಗುತ್ತವೆ.
- ಮಾಲಿನ್ಯ ನಿಯಂತ್ರಣ ಹಾಗೂ ಮಾಲಿನ್ಯಗೊಂಡ ನೀರಿನ ಶುದ್ದೀಕರಣ ಕ್ರಿಯೆಯಲ್ಲಿ ಜೈವಿಕ ತಂತ್ರಜ್ಞಾನದ ಹಲವು ಪ್ರಕ್ರಿಯೆಗಳನ್ನು ಬಳಸಲಾಗುತ್ತಿದೆ.
- ಜೈವಿಕ ತಂತ್ರಜ್ಞಾನದ ಅತ್ಯಂತ ಮಹತ್ತರ ಕೊಡುಗೆ ಇಂದಿನ ವೈದ್ಯಕೀಯ ಕ್ಷೇತ್ರದಲ್ಲಿ ಕಂಡು ಬರುತ್ತದೆ. ಮಾನವ ಆರೋಗ್ಯ ಸಂರಕ್ಷಣೆಗೆ ಸಂಬಂಧಿಸಿದಂತೆ ಹಲವಾರು ವ್ಯಾಕ್ಸಿನ್‌ಗಳು, ಇನ್ಸುಲಿನ್ ಮುಂತಾದ ಚೋದನಿಗಳು ಹಾಗೂ ಅನೇಕ ಔಷಧಗಳನ್ನು ಇಂದು ತಳಿ ತಂತ್ರಜ್ಞಾನವನ್ನು ಬಳಸಿಕೊಂಡು ಹೆಚ್ಚಿನ ಪ್ರಮಾಣದಲ್ಲಿ ಉತ್ಪಾದಿಸಲಾಗುತ್ತಿದೆ.

**ಜೈವಿಕ ತಂತ್ರಜ್ಞಾನದ ಇತಿ ಮಿತಿಗಳು**

- ಜೀವಿಗಳಲ್ಲಿ ಬಂಜೆತನವನ್ನು ಉಂಟು ಮಾಡುತ್ತದೆ.
- ಸಾಮಾಜಿಕ ನ್ಯಾಯ
- ಮೂಲ ಪ್ರಾಣಿಯ ಜೀವಿತಾವಧಿಯಷ್ಟೇ ಇರುತ್ತದೆ.
- ಕೈಗಾರಿಕೆ, ಆಹಾರ ತಂತ್ರಜ್ಞಾನ, ಆರೋಗ್ಯ ಪರಿಸರ ಸಂರಕ್ಷಣೆ, ಇದನ್ನು ಬಳಸುವುದು ಹೊರೆ ಎಂದು ಪರಿಗಣಿಸಬಹುದು.

ಈ ಎಲ್ಲಾ ವಿಷಯಗಳನ್ನು ಗಮನದಲ್ಲಿಸಿಕೊಂಡು ಇಂದು ನಾವು ಜೈವಿಕ ತಂತ್ರಜ್ಞಾನವನ್ನು ಹಾನಿಕಾರಕ ವಿಷಯಗಳಿಗೆ ಬಳಸದೆ ಕೇವಲ ಉಪಯುಕ್ತ ಕ್ಷೇತ್ರಗಳಲ್ಲಿ ಮಾತ್ರ ಸೂಕ್ತವಾಗಿ ಬಳಸಿಕೊಳ್ಳುವ ವಿವೇಚನೆಯನ್ನು ಬೆಳೆಸಿಕೊಳ್ಳಬೇಕಾಗಿದೆ.


downloaded from: www.kpscvaani.com